ಲಾಂಗೂಲಾಚಾರ್ಯ

# ಲೋಕದ ಡೊಂಕು

ಹರಟೆ ಲೇಖನಗಳು



ಹರಟೆ ಲೇಖನಗಳು

ಡಿ. ವಿ. ಕೆ. ಮೂರ್ತಿ : : ಮೈಸೂರು-೪ ರೂ. 5.00

# ಲೋಕದ ಡೊಂಕು

ಲಾಂಗೂಲಾಚಾರ್ಯ

ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ: ಮೈಸೂರು ೪

*LOKADA DUNKU* by Langoolacharya (P. V. Acharya) Published by D. V. K. Murthy, Krishnamurthipuram Mysore-4. First Edition : 1976.

© ಪಾಡಿಗಾರು ವೆಂಕಟರಮಣಾಚಾರ್ಯ

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

# ಎರಡೇ ಮಾತು

ಇದು ನನ್ನ ನಗೆಬರಹಗಳ ಎರಡನೇ ಸಂಗ್ರಹ. 'ಕರ್ಮವೀರ', 'ಕಸ್ತೂರಿ', 'ತುಷಾರ' ಮೊದಲಾದ ಪತ್ರಿಕೆಗಳಲ್ಲಿ ಕಾಲಕಾಲಕ್ಕೆ ಬಂದವುಗಳಲ್ಲಿ ಕೆಲವನ್ನು ಆಯ್ದು, ಕೆಲವನ್ನು ಸ್ವಲ್ಪ ತಿದ್ದಿ ಇಲ್ಲಿ ಕೊಡಲಾಗಿದೆ. ಇವುಗಳನ್ನು ಹರಟೆ ಗಳೆಂದು ಮುದ್ರೆಯೊತ್ತುವ ಇಷ್ಟ ನನಗಿಲ್ಲ. ಹರಟೆಯೆಂಬ ಮಾಧ್ಯಮಕ್ಕೆ ರೂಪುಗೊಂಡಿರುವ ಲಕ್ಷಣಗಳನ್ನು ಇವು ಪೂರೈಸುತ್ತವೆ ಎಂದು ನಾನು ಹೇಳ ಲಾರೆ. ಹಾಗೆ ಕೇಳಿದರೆ ಇವು ಯಾವ ಲಕ್ಷಣವಿಧಿಗೂ ಒಳಪಡದ ಸ್ವಚ್ಛಂದ ಬರಹಗಳು. ಓದುಗರು ನನ್ನ ನಗೆಬರಹಗಳನ್ನು ಸ್ವಾಗತಿಸಿದ್ದಾರೆಂಬುದಷ್ಟೇ ಅವುಗಳನ್ನು ಪ್ರಕಟಿಸುವುದಕ್ಕೆ ನೆವ.

ಇವು ಪ್ರಕಟವಾಗುವುದಕ್ಕೆ ಮುಖ್ಯ ಕಾರಣರೆಂದರೆ ನನ್ನ ಮಿತ್ರರಾದ ಜಿ. ಟಿ. ನಾರಾಯಣರಾಯರು. ಮೊದಲಿನಿಂದ ನನ್ನ ಬರಹಗಳ ಬಗ್ಗೆ ಒಳ್ಳೇ ಮಾತು ಹೇಳುತ್ತ ಬಂದ ಅವರು ಅವುಗಳನ್ನು ಸಂಗ್ರಹಿಸಿ ಪ್ರಕಟಿಸಲು ಆಗಾಗ್ಗೆ ಆಗ್ರಹಪಡಿಸುತ್ತ ಇದ್ದರು. ಸಂಗ್ರಹಿಸಿಕೊಟ್ಟಮೇಲೆ ಅವರೇ ಅವು ಗಳ ಪ್ರಕಟನೆಗೆ ಸಹಾಯ ಮಾಡಿದ್ದೂ ಅಲ್ಲದೆ ಕರಡುಗಳನ್ನು ತಿದ್ದುವ ಹೊಣೆ ಯನ್ನೂ ಹೊತ್ತರು. ಇದಕ್ಕಾಗಿ ಅವರಿಗೂ ಅವರ ಪುತ್ರ ಚಿ. ಅನಂತವರ್ಧನ ನಿಗೂ ಈ ಬರಹಗಳನ್ನೋದಿ ಮೆಚ್ಚಿಕೆ ವ್ಯಕ್ತಪಡಿಸಿದ ಶ್ರೀ ಪ್ರಹ್ಲಾದರಾವ್, ಎಚ್.ಎಸ್.ಕೆ. ಮೊದಲಾದ ಮಿತ್ರರಿಗೂ, ಮೊದಲು ಇವುಗಳನ್ನು ಪ್ರಕಟಿಸಿದ ಪತ್ರಿಕೆಗಳಿಗೂ, ಪ್ರಕಾಶಕರಾದ ಶ್ರೀ. ಡಿ. ವಿ. ಕೆ. ಮೂರ್ತಿಯವರಿಗೂ, ಅಂದವಾಗಿ ಬಲು ಬೇಗನೆ ಮುದ್ರಿಸಿದ ಶ್ರೀ. ಜಿ. ಎಚ್. ಕೃಷ್ಣಮೂರ್ತಿ ಯವರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಧಾರವಾಡ
ಸೆಪ್ಟೆಂಬರ್ ೬, ೧೯೭೬

ಪಾ. ವೆಂ. ಆಚಾರ್ಯ
(ಲಾಂಗೂಲಾಚಾರ್ಯ)

# ಪರಿವಿಡಿ


| | |
|---|---|
| ನಾನು ಹುಟ್ಟಿದ್ದು | ೧ |
| ನನ್ನ ಗಣಿತ ಸಮಸ್ಯೆಗಳು | ೬ |
| ಬೇಂದ್ರೆ ಅಂದ್ರೆ | ೧೦ |
| ದೇವರ ಭಾಷೆ | ೧೫ |
| ಸಿಗರೇಟಿನ ಹೊಗೆ ವರ್ತುಲ ವರ್ತುಲ | ೧೮ |
| ನಾನು ಯಾರು ? | ೨೨ |
| ಯಾರಿಗಾಗಿ ಬದುಕುತ್ತೇವೆ ? | ೨೮ |
| ಬೈಗಳಿಗೊಂದು ನಿಘಂಟು | ೩೫ |
| ದ್ರೋಣಾಚಾರ್ಯರನ್ನು ಕಂಡೆ | ೩೮ |
| ಈ ಶಬ್ದಕ್ಕೆ ಅಂಜುತ್ತೇನೆ | ೪೬ |
| ಮರಳಿ ಸೈಕಲ್ ಯುಗಕ್ಕೆ | ೪೯ |
| ಕನ್ನಡ ! ಕನ್ನಡ ! ಇದೆಲ್ಲಾವುಂ ಎನ್ನಡ ? | ೫೪ |
| ಸತ್ಯ, ನಾನು ಮತ್ತು ಹರಿಶ್ಚಂದ್ರ | ೫೮ |
| ಮಂತ್ರದಿಂದ ಅಗ್ನಿ | ೬೨ |
| ಗಗನಯುಗದಲ್ಲಿ ಜ್ಯೋತಿಷ್ಯ | ೬೬ |
| ಅದೃಷ್ಟ ಅಪ್ಪಳಿಸಿದರೆ | ೭೨ |
| ನಾನು ಕಾಣದ ಭೂತಗಳು–೧ | ೭೫ |
| ನಾನು ಕಾಣದ ಭೂತಗಳು–೨ | ೮೬ |
| ಬೀಳುವ ಸುಖ | ೯೫ |
| ಲಿಯಾಕತ್ ಅಲಿಯವರನ್ನು ಕಂಡೆ | ೯೯ |
| ಉಪಕಾರ ಮಾಡಿ ನೋಡಿ ! | ೧೦೩ |
| ಸ್ನಾನಾಸ್ನಾನ ವಿವೇಕಂ | ೧೦೯ |
| ಮೈಸೂರು ದರ್ಶನ | ೧೧೬ |
| ಸನಾತನ ಧರ್ಮ ಮತ್ತು ಸೈಕಲ್ | ೧೧೯ |

ಮಾದರಿ ಮಡದಿ ಬೇಕೆ? ... ... ... ೧೨೨
ಮನೆಗೊಂದು ಹೆಸರು ... ... ... ... ೧೩೦
ಭಾಷೆ ಮತ್ತು ಮುಖ ... ... ... ... ೧೩೩
ಇಡಲೀ ಶಾಸ್ತ್ರ ... ... ... ... ೧೪೦
ನಮ್ಮ ರಾವಣನನ್ನು ಕಾಪಾಡಿ! ... ... ... ೧೪೪
ನನ್ನ ಆಧ್ಯಾತ್ಮಿಕ ಅಲರ್ಜಿ ... ... ... ೧೪೮
ಸಕ್ಕರೆ ಗೀತ ... ... ... ... ೧೫೨
ಗೊಣಗಿ ಗೊಣಗಿ ಕ್ರಾಂತಿ ತಪ್ಪಿಸಿರಿ ... ... ... ೧೫೫
ಇಸು ... ... ... ... ... ೧೬೧
ಸವಿಗನಸುಗಳು ... ... ... ... ೧೬೩
ಸ್ಟೈಟ–ಸ್ಟಿಕ್ಕುಗಳು ... ... ... ... ೧೭೧
ನಾಸಿಕಾವಿಲಾಸಂ ... ... ... ... ೧೭೫
ಆಸ್ಪತ್ರೆಯಲ್ಲಿ ಆಚಾರ್ಯರು ... ... ... ೧೭೮
ನಿಕ್ಸನ್ನರೊಡನೆ ನಾನು ... ... ... ... ೧೮೧
ಗಾಂಧೀಜಿ ಬದುಕಿದ್ದಾರೆ! ... ... ... ೧೮೯
ನನ್ನ ಆಸ್ತ್ಮಾ ಷಷ್ಟ್ಯಬ್ದಿ ... ... ... ... ೧೯೩
ಸಾವಿನ ಸಮಸ್ಯೆ : ಮಕ್ಕಳು ಕಂಡಂತೆ ... ... ... ೧೯೮
ಲಾಂಗೂಲಾಚಾರ್ಯ ಯಾರು? ... ... ... ೨೦೪

# ನಾನು ಹುಟ್ಟಿದ್ದು

ನನ್ನ ರಾಮಕಹಾನಿಯನ್ನು ಪ್ರಾರಂಭದಿಂದಲೇ ಪ್ರಾರಂಭಿಸಬೇಕೆಂದರೆ ನನ್ನ ಜನ್ಮದ ವೃತ್ತಾಂತವನ್ನು ಮೊದಲು ಹೇಳಬೇಕು. ಆದರೆ ಇಲ್ಲಿಯೇ ಕಷ್ಟವೂ ಪ್ರಾರಂಭವಾಗುತ್ತದೆ. ಸಮಸ್ಯೆಯೆಂದರೆ, ನಾನು ನಿಜವಾಗಿ ಹುಟ್ಟಿದೆನೇ? ನನ್ನ ತಂದೆ ತಾಯಿಗಳೂ ಬಂಧುಗಳೂ ನಾನು ಹುಟ್ಟಿದೆನೆಂದು ಹೇಳುತ್ತಾರೆ. ಆದರೆ ಈ ಮಹನೀಯರೆಲ್ಲರೂ ನನ್ನ ಹತ್ತಿರ ಎಷ್ಟೆಲ್ಲ ಹಸಿ ಹಸಿ ಸುಳ್ಳುಗಳನ್ನು ಹೇಳಿದ್ದಾರೆಂದರೆ ಅವರ ಮಾತುಗಳ ಮೇಲೆ ಭರವಸೆ ಯಿಡುವುದು ಸಾಧ್ಯವಿಲ್ಲೆಂದು ನಾನು ಬಹಳ ಬೇಗ ತೀರ್ಮಾನಿಸಿದ್ದೆ. ನನ್ನ ಸ್ವಂತ ಊಹೆಯನ್ನು ಹೇಳುವುದಾದರೆ ನಾನು ಮೊದಲಿನಿಂದಲೂ ಇಲ್ಲಿ ಇದ್ದೆ ಮತ್ತು ಒಂದು ದಿನ ನನ್ನ ಸುತ್ತಲೂ ಈ ಜಗತ್ತು ಹುಟ್ಟಿಕೊಂಡು ಬರಬರುತ್ತ ಬೆಳೆದು ವಿಸ್ತಾರಗೊಂಡಿತು. ನನ್ನ ತಂದೆ ತಾಯಿಗಳೂ ಆ ಮೇಲೆಯೇ ಹುಟ್ಟಿದರು. ನನಗೆ ತಾಯಿ ಹುಟ್ಟಿದ್ದರ ಮುಖ್ಯ ಉದ್ದೇಶ ನನ್ನ ಬಾಯಿ ಮುಚ್ಚಿಸುವುದಕ್ಕಾಗಿ ಮೊಲೆಯನ್ನು ಅದರಲ್ಲಿ ತುರುಕುವುದು ಮತ್ತು ನಾನು ಬಿದ್ದಾಗ ನನ್ನನ್ನು ಎತ್ತಿಕೊಳ್ಳುವುದಾಗಿತ್ತು. ನನ್ನ ತಾಯಿಗಿಂತ ಎಷ್ಟೋ ಕಾಲದ ನಂತರ ನನ್ನ ತಂದೆ ಹುಟ್ಟಿದರು. ಅವರ ಮುಖ್ಯ ಉದ್ಯೋಗ ನಾನು ಎದ್ದು ಓಡಾಡತೊಡಗಿದ ಮೇಲೆ ಕೈಯನ್ನು ಬಾಗಿಲ ಸಂದಿಯಲ್ಲಿ ಸಿಕ್ಕಿಸಿಕೊಂಡು ಕೂಗತೊಡಗಿದಾಗ ನನ್ನನ್ನು ಬೈಯುವುದು ಮತ್ತು ನನಗೆ ಮಾತು ಬರತೊಡಗಿದ ನಂತರ ನನಗೆ ಅರ್ಥವಿಲ್ಲದ ಶ್ಲೋಕ ಗಳನ್ನು ಹೇಳಿಕೊಡುವುದಾಗಿತ್ತು. ಮೊದಲನೆಯದನ್ನು, ಅಂದರೆ ತಾಯಿಯ ಮೊಲೆಯನ್ನು, ನಾನು ಬಹಳವಾಗಿ ಪ್ರೀತಿಸುತ್ತಿದ್ದೆ; ಮತ್ತು ಎರಡನೆಯ ದನ್ನು, ಅಂದರೆ ತಂದೆಯವರು ಕಲಿಸುತ್ತಿದ್ದ ಶ್ಲೋಕಗಳನ್ನು, ಅಷ್ಟೇ ತೀವ್ರ ವಾಗಿ ದ್ವೇಷಿಸುತ್ತಿದ್ದೆ.

ಆದರೆ ಅನೇಕ ವರ್ಷಗಳ ನಂತರ ನಾನು ನನ್ನ ಅಭಿಪ್ರಾಯವನ್ನು ಬದ ಲಿಸಿ ನಾನು ನಿಜವಾಗಿ ಹುಟ್ಟಿದೆನೆಂದೂ ನನ್ನ ತಂದೆ-ತಾಯಿಗಳು ನನಗಿಂತ ಮೊದಲೇ ಇದ್ದರೆಂದೂ ಒಪ್ಪಿಕೊಳ್ಳಬೇಕಾಯಿತು. ಸುತ್ತಲ ಪ್ರಪಂಚ

ದಲ್ಲಿ ಎಲ್ಲೆಲ್ಲಿಯೂ ಮಕ್ಕಳು ಹುಟ್ಟುತ್ತಿರುವುದನ್ನೂ ಬೆಳೆದು ಬಾಯಿ ಅಗಲಿಸಿ ಅಮೇರಿಕದ ಅಧ್ಯಕ್ಷರಿಗೆ ತಲೆನೋವುಂಟುಮಾಡುವುದನ್ನೂ ಕಂಡ ಮೇಲೆ ನಾನೂ ಹೀಗೆಯೇ ಹುಟ್ಟಿ ಬೆಳೆದಿರಬೇಕೆಂಬ ತರ್ಕವನ್ನು ನಾನು ಮನ್ನಿಸಲೇ ಬೇಕಾಗಿದೆ.

ನಾನು ಹುಟ್ಟಿದಂದಿನಿಂದ ಒಂದು ದೊಡ್ಡ ವಿವಾದ ನಮ್ಮ ಕೌಟುಂಬಿಕ ವಲಯದಲ್ಲಿ ಮಸಗಿತೆಂದು ಆ ಮೇಲೆ ನನಗೆ ತಿಳಿಯಿತು. ನಾನು ಹೆಂಗೆ ಮನೆಯಲ್ಲೂ ನೆರೆಮನೆಯ ತೋಮುಮಡಿವಾಳನ ಕೋಳಿ ಅವನ ಹಿತ್ತಲಲ್ಲೂ ಏಕ ಕಾಲಕ್ಕೆ ಕೂಗಿದವಂತೆ. ಇದರಿಂದಾಗಿ ನಮ್ಮ ಬಂಧುಗಳಲ್ಲಿ ಶುಕ್ರವಾರ ವಾದಿಗಳು ಮತ್ತು ಶನಿವಾರವಾದಿಗಳು ಎಂದು ಎರಡು ಪಂಗಡಗಳಾದವು. ಶುಕ್ರವಾರವಾದಿಗಳು ಸೂರ್ಯೋದಯದ ವರೆಗೂ ವಾರ ಬದಲಾಗುವುದಿಲ್ಲವಾದ್ದರಿಂದ ನಾನು ಶುಕ್ರವಾರ ದಿನವೇ ಹುಟ್ಟಿದೆನೆಂದು ಅನೇಕ ಶಾಸ್ತ್ರಾಧಾರಗಳ ಸಹಿತ ವಾದಿಸಿದರಂತೆ. ಶನಿವಾರವಾದಿಗಳು ಕೋಳಿ ಕೂಗಿದ ಮೇಲೆ ದಿವಸ ಬದಲಾದ ಹಾಗೆಯೇ; ಆದ್ದರಿಂದ ನಾನು ಹುಟ್ಟಿದ್ದು ಶನಿವಾರವೇ ಎಂದು ಸಾಧಿಸಿದರು. ಅದಕ್ಕೂ ಕೆಡಕೆಂದರೆ, ಅವರು ನನ್ನ ಮೈಬಣ್ಣದ ಮೇಲೆ ಅಪಾದನೆ ದೃಷ್ಟಿಯನ್ನು ಬೀರಿ ಬೆಳ್ಳಿ ಚಿಕ್ಕೆಯ ದಿನ ನಾನು ಹುಟ್ಟಿದ್ದರೆ ಈ ವರ್ಣ ನನಗಿರುವುದು ಸಾಧ್ಯವೇ ಇದ್ದಿಲ್ಲವೆಂದು ಬೇರೆ ಪ್ರಮಾಣ ಕೊಟ್ಟರು. ಆದರೂ ನನ್ನ ತಾಯಿಗೆ ನಾನು ಶುಕ್ರವಾರವೇ ಹುಟ್ಟಿದೆನೆಂಬ ದೃಢವಾದ ನಂಬಿಕೆ ಇತ್ತು. ಹಂಬಲಿಸಿ ಹಡೆದ ಗಂಡು ಮಗು ಶನಿವಾರ ಹುಟ್ಟೀತೇ?

ನಾನು ಹುಟ್ಟಿದ ಒಂದು ತಿಂಗಳಲ್ಲಿ ಶುಕ್ರವಾರವಾದಿಗಳ ವಿಶ್ವಾಸದ ತಳ ಅಲುಗತೊಡಗಿತು. ನನ್ನ ತಂದೆ ಊರು ಬಿಟ್ಟು ನೂರಿಪ್ಪತ್ತು ಮೈಲು ದೂರದ ಮಲೆನಾಡ ಕೊಂಪೆಯಲ್ಲಿ ಕೆಲಸಕ್ಕೆ ಹೋದರು. ತಂದೆಯನ್ನು ಒಂದು ತಿಂಗಳೊಳಗೆ ಊರಿಂದ ಓಡಿಸುವ ಗಂಡಸು ಮಗ ಶನಿವಾರಿಯಲ್ಲದೆ ಇರಲು ಸಾಧ್ಯವೇ? ನನ್ನ ಐದನೇ ವರ್ಷದಲ್ಲಿ ನನ್ನ ತಂದೆ ತೀರಿಕೊಂಡ ಮೇಲಂತೂ ನಾನೊಬ್ಬ ಶನಿಸಂತಾನ ಎಂಬಲ್ಲಿ ಯಾರಿಗೂ ಸಂಶಯ ಉಳಿಯಲಿಲ್ಲ. ಐದರಲ್ಲಿ ತಂದೆಯನ್ನು "ಮುಕ್ಕಿ ತಿಂದ" ಮಗ ಹುಟ್ಟದಿದ್ದರೇ ಚೆನ್ನಾಗಿತ್ತು ಎಂದು ನನ್ನ ತಾಯಿ ಕೂಡ ಹೇಳತೊಡಗಿದರಂತೆ.

ಆದರೆ ನಾನೇನು ಮಾಡಲಿ ಹೇಳಿ? ಶನಿವಾರವೇ ಹುಟ್ಟಬೇಕೆಂದು ನನಗೆ

ಆತುರವಿರಲಿಲ್ಲ. ನಾನು ಹುಟ್ಟುವ ಮೊದಲು ನನಗೆ ವಾರಗಳ ಲೆಕ್ಕವೇ ಗೊತ್ತಿದ್ದಿಲ್ಲ. (ಅಲ್ಲಿ ಒಳ್ಳೊಳ್ಳೇ ಹುಡುಗಿಯರ ಚಿತ್ರಗಳುಳ್ಳ ಕೆಲೆಂಡರುಗಳನ್ನು ತೂಗಹಾಕುವ ಪರಿಪಾಠವಿದ್ದಿಲ್ಲ ನೋಡಿ.) ಒಂದು ದಿವಸ ಇನ್ನೊಂದು ದಿವಸದಷ್ಟೇ ಸುದಿನವೆಂದು ನಾನು ಭಾವಿಸಿದ್ದೆ. ಶನಿವಾರ ಹುಟ್ಟಬೇಡವೆಂದು ಯಾರಾದರೂ ನನಗೆ ತಿಳಿಸಿದ್ದರೆ ನಾನು ಖಂಡಿತವಾಗಿ ಅವರ ಸಂತೋಷಕ್ಕಾಗಿ ಇನ್ನೂ ಕೆಲ ಗಂಟೆಗಳು ಮೊದಲಾಗಿಯೆ ಹುಟ್ಟಬಹುದಾಗಿತ್ತು. ಶನಿವಾರ ಹುಟ್ಟಿದವರು ಕಪ್ಪಗಿರುತ್ತಾರೆಂದೂ ಶುಕ್ರವಾರ ನೆಲಕ್ಕೆ ಬಿದ್ದವರು ಶುಭ್ರವರ್ಣಿಗಳಾಗುತ್ತಾರೆಂದೂ ನನಗೆ ಗೊತ್ತಿದ್ದರಂತೂ ಬಿಳಿಯನ್ನು ಕಪ್ಪಾಗಿ ಮಾಡುವ ಆ ಅನಿಷ್ಟ ಮುಹೂರ್ತ ಒದಗುವ ಮೊದಲೇ ನಾನು ನನ್ನ ತಾಯಿಯ ಗರ್ಭಾಂಬೋಧಿಯಿಂದ ದಡ ಸೇರಿಕೊಳ್ಳುತ್ತಿದ್ದೆ. ಹುಟ್ಟಿದ ಮೇಲೆ ನಮ್ಮ ಬಣ್ಣ ಬದಲಾಯಿಸುವುದು ಸಾಧ್ಯವಿಲ್ಲವಲ್ಲ—ನಾವು ರಾಜಕಾರಣಿಗಳಾದ ಹೊರತು.

ಇಷ್ಟು ನಾನು ಹುಟ್ಟಿದ್ದರ ಕುರಿತು. ಇನ್ನು ನನ್ನ ವಂಶಾವಳಿಯನ್ನು ಕುರಿತು ಸ್ವಲ್ಪ ಹೇಳಲೇಬೇಕು. ನಾವು ಅಹಿಚ್ಛತ್ರದಿಂದ ನೇರವಾಗಿ ಪರಶುರಾಮ ಕ್ಷೇತ್ರಕ್ಕೆ ಬಂದ ಬ್ರಾಹ್ಮಣರು. ಬಹಳ, ಬಹಳ ಹಿಂದೆ ಆ ಪ್ರದೇಶದ ಯಾವನೋ ರಾಜನು ಯಾವುದೋ ಯಜ್ಞ ಮಾಡುವುದಕ್ಕೋಸ್ಕರ ತಾಜಾ ಬ್ರಾಹ್ಮಣರು ಬೇಕೆಂದು ಬಯಸಿದನು. ಅಲ್ಲಿ ನಮಗಿಂತ ಮೊದಲೂ ಬ್ರಾಹ್ಮಣರಿದ್ದರು ಎನ್ನಿ; ಆದರೆ ಅವರು ಸಾಕಷ್ಟು ತಾಜಾ ಇರಲಿಲ್ಲವೆಂದು ಆ ರಾಜ ಭಾವಿಸಿ ನಮಗಾಗಿ ಪಲ್ಲಕ್ಕಿ ಕಳಿಸಿದ. ನಿಜವಾಗಿ ನಾವೆಷ್ಟು ತಾಜಾ ಬ್ರಾಹ್ಮಣರಾಗಿದ್ದೆವೆಂದರೆ ನಾವು ಮುಟ್ಟಿದ ಬ್ರಾಹ್ಮಣೇತರರೆಲ್ಲ—ವಿಶೇಷವಾಗಿ ಹೆಂಗಸರು—ಬ್ರಾಹ್ಮಣರಾಗಿ ಹೋಗುತ್ತಿದ್ದರಂತೆ. ಹೀಗೆ ಬೇಕಾದವರನ್ನು ಮುಟ್ಟಿ ಬ್ರಾಹ್ಮಣರನ್ನಾಗಿ ಮಾಡುವ ಶಕ್ತಿ ಇದ್ದುದ್ದರಿಂದ ಅಹಿಚ್ಛತ್ರದಿಂದ ತಮಗೆ ಬೇಕಾದ ಹೆಂಗಸರನ್ನು ಕರೆತರುವ ಅಗತ್ಯವನ್ನು ನನ್ನ ಪೂರ್ವಜರು ಕಾಣಲಿಲ್ಲವಂತೆ. ಇದರ ಫಲವಾಗಿ ನಾವು ಅನೇಕರು ಕರಿಯ ಬ್ರಾಹ್ಮಣರಾಗಿ ಬಿಟ್ಟಿದ್ದೇವೆ. ಬೇಕಾದವರನ್ನು ಮುಟ್ಟಿ ಬ್ರಾಹ್ಮಣರಾಗಿ ಮಾಡಲು ನಮಗೆ ಶಕ್ತಿ ಇದ್ದರೂ ಅವರ ಬಣ್ಣವನ್ನು ಮಾತ್ರ ಬದಲಿಸಲು ನಮ್ಮಿಂದಾಗಲಿಲ್ಲ.

"ಆದರೆ ಅಜ್ಜೀ, ನಾವು ಈ ಜಿಲ್ಲೆಯ ಎಲ್ಲ ಶೂದ್ರರನ್ನು ಮುಟ್ಟಿ

ಬ್ರಾಹ್ಮಣರನ್ನಾಗಿ ಏಕೆ ಮಾಡಿಬಿಡಲಿಲ್ಲ ?" ಎಂದು ನಾನು ಕೇಳಿದೆ. "ನಾವು ಹೊಲೆಯರಿಂದ ಮುಟ್ಟಿಸಿಕೊಳ್ಳಲು ಹೆದರುವ ಹಾಗೆ ಅವರೂ ನಮ್ಮಿಂದ ಮುಟ್ಟಿಸಿಕೊಳ್ಳಲು ಅಂಜುತ್ತಿದ್ದರೆ ?"

ನನ್ನ ಅಜ್ಜ ನನ್ನ ಕಿವಿಯನ್ನು ಕೆಂಪಾಗುವ ವರೆಗೂ ಹಿಂಡಿ, "ಎಂಥಾ ಖೋಡಿಯೋ ನೀನು ! ನಮ್ಮಿಂದ ಮುಟ್ಟಿಸಿಕೊಳ್ಳಲು ಅವರು ನಾ ಮುಂದೆ ತಾ ಮುಂದೆ ಎಂದು ಬರುತ್ತಿದ್ದರು. ಆದರೆ ನಮ್ಮ ಪುರಾತನರು ಅವರೆಲ್ಲ ರನ್ನೂ ಅನುಗ್ರಹಿಸಲಿಲ್ಲ" ಎಂದರು.

"ಆದರೆ ಯಾಕೆ ?" ಎಂದು ನಾನು ಪಟ್ಟುಹಿಡಿದೆ, ಕಿವಿ ತಿಕ್ಕಿಕೊಳ್ಳುತ್ತ. "ಎಲ್ಲರೂ ಬ್ರಾಹ್ಮಣರಾಗಿಬಿಟ್ಟಿದ್ದರೆ ಒಳ್ಳೇ ಮೋಜಾಗುತ್ತಿತ್ತಲ್ಲ! ನಾನೀಗ ನೆರೆಮನೆಯ ಸದಿಯ ಪೂಜಾರಿಯ ಮಗನ ಸಂಗಡ ಆಡಬಹುದಿತ್ತು. ಅವನು ಎಷ್ಟು ಚೆನ್ನಾಗಿ ಕುಟ್ಟಿದೊಣ್ಣೆ (ಚಿಣಿ-ಫಣಿ) ಆಡುತ್ತಾನೆ !"

"ಮೂರ್ಖಾ !" ಗದರಿಸಿದರು ನನ್ನ ಭಾವ. "ಎಲ್ಲರನ್ನೂ ಬ್ರಾಹ್ಮಣ ರನ್ನಾಗಿ ಮಾಡಿಬಿಟ್ಟಿದ್ದರೆ ನಾವು ಶ್ರೇಷ್ಠರಾಗಿ ಹೇಗೆ ಉಳಿಯುತ್ತಿದ್ದೆವು ?"

ಸದಿಯ ಪೂಜಾರಿಯ ಮಗ ಕೊರಗ ಪೂಜಾರಿಗಿಂತ ಶ್ರೇಷ್ಠನಾಗಿದ್ದು ಅವನೊಡನೆ ಕುಟ್ಟಿದೊಣ್ಣೆ ಆಡುವ ಅವಕಾಶ ತಪ್ಪಿಸಿಕೊಳ್ಳುವುದರಲ್ಲಿ ನನ ಗೇನೂ ಜಾಣ್ಮೆ ತೋರಲಿಲ್ಲ. ಆದರೆ ನನ್ನ ಭಾವನಿಗೆ ನಾನು ಬಹಳ ಅಂಜು ತ್ತಿದ್ದೆ. ಆದ್ದರಿಂದ ಅವರು ನನಗಿತ್ತ ಬಿರುದನ್ನೂ ಅವರು ಕೊಟ್ಟ ಕಾರಣ ವನ್ನೂ ಪ್ರತಿಭಟನೆ ಇಲ್ಲದೆ ಸ್ವೀಕರಿಸಿದೆ.

ಶೂದ್ರ ಸ್ತ್ರೀಯರನ್ನು ಬ್ರಾಹ್ಮಣರಾಗಿ ಮಾಡುವುದನ್ನು ನನ್ನ ಪೂರ್ವ ಜರು ಎಂದು, ಏಕೆ, ನಿಲ್ಲಿಸಿದರೆಂದು ನನಗೆ ಗೊತ್ತಿಲ್ಲ. ನಾನಾಗ ನನ್ನ ಅಜ್ಜಯನ್ನಾಗಲಿ, ಭಾವನನ್ನಾಗಲಿ ಈ ವಿಷಯವಾಗಿ ಕೇಳಲಿಲ್ಲ. ಏಕೆಂದರೆ ನನಗಾಗ ಸ್ತ್ರೀಯರಲ್ಲಿ ಏನೂ ಆಸಕ್ತಿ ಇರಲಿಲ್ಲ. ಆದರೆ ಹದಿನೆಂಟು ವರ್ಷ ಗಳ ನಂತರ, ನನ್ನ ಮನಸ್ಸು ಬೇರೆ ಜಾತಿಯ ಹುಡುಗಿಯೊಬ್ಬಳಿಂದ ಅಪ ಹರಿಸಲ್ಪಟ್ಟಾಗ ನನ್ನ ಪೂರ್ವಜರು ತಮ್ಮ ಬ್ರಾಹ್ಮಣೀಕರಣ ಶಕ್ತಿಯನ್ನು ಉಪಸಂಹಾರ ಮಾಡಿ ಬಲು ದೊಡ್ಡ ಅನ್ಯಾಯ ಮಾಡಿದರೆಂದು ನಾನು ಬಹಳವಾಗಿ ಹಳಹಳಿಸಬೇಕಾಯಿತು.

ದಕ್ಷಿಣ ಕನ್ನಡದ ಆ ರಾಜನ ಯಜ್ಞ ಮಾಡಿಸುವ ಸಲುವಾಗಿ ಅಹಿಚ್ಛತ್ರ

ದಿಂದ ಆಳುವಖೇಟಕ್ಕೆ ಆಮದು ಮಾಡಲ್ಪಟ್ಟ ಮೂವತ್ತೆರಡು ಉಚ್ಚ—ಇದನ್ನು ಹೆಚ್ಚು ಉಚ್ಚವಾಗಿ ಮಾಡಲು ಕೆಲವರು ಉಚ್ಛ ಎಂದು ಉಚ್ಚರಿಸುತ್ತಾರೆ—ಮತ್ತು ತಾಜಾ ಬ್ರಾಹ್ಮಣರ ಕುಲಗಳಲ್ಲಿ ನಮ್ಮ ಪೂರ್ವಜರೂ ಸೇರಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಯಜ್ಞದಲ್ಲಿ ನನ್ನ ಕುಲಪ್ರವರ್ತಕರು ಯಾವ ಪಾತ್ರ ವಹಿಸಿದ್ದರೆಂದು ಖಚಿತವಾಗಿ ಗೊತ್ತಿಲ್ಲವಾದರೂ ಅವರಿಗೆ ದೊರೆತ ದಕ್ಷಿಣೆ ಅವರ ಯೋಗ್ಯತೆಗೆ ತಕ್ಕದ್ದಾಗಿರಲಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ಆ ಕಾಲದಲ್ಲಿಯೂ ಯೋಗ್ಯತೆಗೆ ತಕ್ಕ ಪುರಸ್ಕಾರವಿರಲಿಲ್ಲವೆಂದು ಇದು ತೋರಿಸುತ್ತದೆ. ತಾತ್ಪರ್ಯವಿಷ್ಟೇ: ಮಹರ್ಷಿ ಭರದ್ವಾಜನ ಗೋತ್ರೋತ್ಪನ್ನರಾದ ನಾವು ಬಡತನದಲ್ಲೇ ಉಳಿದೆವು. ನಮ್ಮ ಗೋತ್ರ ಚೂಡಾಮಣಿಯಾಗಿದ್ದ ದ್ರೋಣಾಚಾರ್ಯನೇ ಮಗನಿಗೆ ಹಾಲೆಂದು ಸುಣ್ಣದ ನೀರನ್ನು ಕೊಡುವ ಅವಸ್ಥೆಯಲ್ಲಿದ್ದನೆಂದಮೇಲೆ ನಮಗೂ ಬಡತನಕ್ಕೂ ಏನೋ ಅಂಟಿದ ನಂಟೇ ಇರಬೇಕು.

ಆದರೆ ನಮಗೆ ಮಿದುಳು ಧಾರಾಳವಾಗಿತ್ತು, ಇದೆ. ಹಣ ಕೂಡಹಾಕುವುದರಲ್ಲಿ ಹೊರತು ಉಳಿದೆಲ್ಲ ಕೆಲಸಗಳಲ್ಲಿ ನಿರರ್ಗಳವಾಗಿ ಓಡುವ ಮಿದುಳು. ಈ ಮಿದುಳಿಗತನವು ನನ್ನಲ್ಲಿ ಪರಿಪೂರ್ಣಾವಸ್ಥೆಗೆ ಮುಟ್ಟಿದೆ ಎಂದು ನಿಮಗೆ ಈಗಾಗಲೇ ಅರ್ಥವಾಗಿರಬೇಕು. ನಮ್ಮ ಕುಲದವರಲ್ಲಿ ಆತ್ಮಚರಿತ್ರೆ ಬರೆಯುತ್ತಿರುವುದು ನಾನೇ ಮೊದಲು, ಆದ್ದರಿಂದ.

ಉಡುಪಿಯಿಂದ ಹದಿನಾಲ್ಕು ಮೈಲು ದಕ್ಷಿಣಕ್ಕಿರುವ ಒಂದು ಹಳ್ಳಿಯಲ್ಲಿ ನನ್ನ ಪೂರ್ವಜರು ನೆಲೆಸಿದ್ದರು. ಈ ಸ್ಥಳವನ್ನು ನಾನು ನೋಡಿಲ್ಲ. ನನ್ನ ಅಜ್ಜನ ಅಪ್ಪ ಆ ಊರನ್ನು ಚಿಕ್ಕಂದಿನಲ್ಲೇ ತ್ಯಜಿಸಿ ಓಡಿಬಂದು ಉಡುಪಿಯಲ್ಲಿ ನೆಲೆ ನಿಂತರು. ಅದರ ಕಥೆ ಅನಾದಿ ಕಾಲದಿಂದ ಆದ ಕಥೆಗಳ ಪುನರ್ಮುದ್ರಣವೇ ಆಗಿದೆ. ನನ್ನ ಮುತ್ತಜ್ಜನ ತಂದೆ ಬೇಗ ವೈಕುಂಠವಾಸಿಗಳಾದರು. (ನಮ್ಮ ಕುಲದಲ್ಲಿ ಯಾರೂ ವೈಕುಂಠಕ್ಕಿಂತ ಕೆಳಗಿನ ಯಾವ ಲೋಕಕ್ಕೂ ಹೋದ ಉದಾಹರಣೆಯೇ ಇಲ್ಲ.) ನನ್ನ ಮುತ್ತಜ್ಜ ಅವರ ಕೊನೆಯ ಪುತ್ರ. ತಂದೆ ಸತ್ತ ಮೇಲೆ ಅಧಿಕಾರ ನನ್ನ ಮುತ್ತಜ್ಜನ ಅಣ್ಣನ ಕೈಗೆ ಬಂತು. ಅಣ್ಣ ಬಹಳ ಒಳ್ಳೆಯವರು. ಆದರೆ ಒಳ್ಳೆಯ ಅಣ್ಣನಾಗಿರಬೇಕೋ ಒಳ್ಳೆಯ ಗಂಡನಾಗಿರಬೇಕೋ ಎಂಬ ಧರ್ಮಸಂಕಟ ಬಂದಾಗ

ಅನೇಕ ಧರ್ಮಶಾಸ್ತ್ರಗಳನ್ನು ಶೋಧಿಸಿ ಒಳ್ಳೆಯ ಗಂಡನಾಗಿರುವುದೇ ಉತ್ತಮ ಧರ್ಮವೆಂಬ ತೀರ್ಮಾನಕ್ಕೆ ಅವರು ಬಂದರು. ಅದು ಹೆಚ್ಚು ಸುಲಭ ಧರ್ಮವೂ ಆಗಿತ್ತು. ಆದ್ದರಿಂದ ಕೆಲಸಕ್ಕೆ ಬಾರದ ಪಾಠ ಪ್ರವಚನಗಳಲ್ಲಿ ತಮ್ಮನು ಹೊತ್ತು ಕಳೆಯುವುದಕ್ಕಿಂತ ಮನೆಯ ದನಕರುಗಳನ್ನು ಮೇಯಿಸುವುದು ಒಳ್ಳೇದು ಎಂಬ ತಮ್ಮ ಹೆಂಡತಿಯ ಅಭಿಪ್ರಾಯವನ್ನು ಅವರು ಅನುಮೋದಿಸಿದರು. ನಾವು ಭಾರದ್ವಾಜ ಗೋತ್ರೀಯರು, ಪುಸ್ತಕ ಓದುವುದರಲ್ಲಿ ಎಕ್ಸಪರ್ಟರಾಗಿರುವಷ್ಟು ದನ ಕಾಯುವುದರಲ್ಲಿ ಎಂದೂ ಆಗಿರಲಿಲ್ಲ. ಒಂದು ಸಂಜೆ ನಮ್ಮ ಒಂದು ಆಕಳು ರೈತನೊಬ್ಬನ ಗದ್ದೆಯನ್ನು ಹೊಕ್ಕಿತು. ಅವನು ಬಂದು ಮನೆಯಲ್ಲಿ “ಸಹಸ್ರನಾಮ” ವಾಚನ ಮಾಡಿದನು. ಅಣ್ಣನಿಲ್ಲದಾಗ ಅತ್ತಿಗೆಯೇ ಅಧಿಕಾರವಹಿಸಿ ಮೈದುನನ ಬೆನ್ನನ್ನು ಬೆಚ್ಚಗೆ ಮಾಡಿದಳು. ಇದು, ಅಂದರೆ ಅತ್ತಿಗೆಯಿಂದ ಪೆಟ್ಟು ತಿನ್ನುವುದು, ಭಾರದ್ವಾಜ ಗೋತ್ರೀಯರಿಗೆ ಮೆಚ್ಚುಗೆಯಾಗದ ಎರಡನೇ ಸಂಗತಿಯಾಗಿದೆ. (ಮೊದಲನೆಯದು ದನ ಕಾಯುವುದು). ಆದರಿಂದ ಅವರು ಉಟ್ಟ ಕೌಪೀನದಲ್ಲೇ ಮನೆಬಿಟ್ಟು ನಾಲ್ಕು ಮೈಲು ನಡೆದು ಒಂದು ಮಠ ಸೇರಿದರು. ಕಾಲಾಂತರದಲ್ಲಿ ಪಾಠ ಹೇಳಿಸಿಕೊಂಡು ಪೌರಾಣಿಕರಾಗಿ ಉಡುಪಿಗೆ ಬಂದು ನೆಲಸಿ ಲಗ್ನ ಮಾಡಿಕೊಂಡರು. ಆದ್ದರಿಂದಲೇ ನಾನಿಲ್ಲಿ ಆತ್ಮಚರಿತ್ರೆ ಬರೆಯಲು ಸಾಧ್ಯವಾಯಿತು.

(೧೯೬೭)

## ನನ್ನ ಗಣಿತ ಸಮಸ್ಯೆಗಳು

ಒಂದಕ್ಕೆ ಒಂದು ಕೂಡಿಸಿದರೆ ಎರಡು ಎಂಬುದಾಗಿ ಯಾವಾಗ ಹೇಳಿತೋ ಆವಾಗ ಪಶು ಮನುಷ್ಯನೆಂದು ಹೆಸರು ಪಡೆಯಿತು ಎಂದು ಗಣಿತ ಶಾಸ್ತ್ರದ ಒಬ್ಬ ವಕೀಲ ಹೇಳಿದ್ದಾನೆ. ಅವನ ಅಭಿಪ್ರಾಯದಲ್ಲಿ ಗಣಿತವೇ ಮನುಷ್ಯನ ಮುಖ್ಯ ಲಕ್ಷಣ. ನನಗೆ ಈ ತರ್ಕದ ಮೇಲೆ ಆಕ್ಷೇಪ ಇಲ್ಲ. ಇದಕ್ಕೆ ನಾನು ಒಂದು ಕೊರೊಲರಿ ಸೇರಿಸಬಹುದಷ್ಟೆ. ಒಂದಕ್ಕೆ ಒಂದು ಕೂಡಿಸಿದರೆ (ತೆಗೆದುಕೊಳ್ಳುವಾಗ) ಮೂರು ಎಂದು ಮನುಷ್ಯ ಯಾವಾಗ ಸಾಧಿಸತೊಡಗಿದನೋ ಆವಾಗ ನಾಗರಿಕತೆ ಪ್ರಾರಂಭವಾಯಿತು; ಎರಡಕ್ಕೆ ಎರಡು ಕೂಡಿಸಿದರೆ ಮೂರು ಆಗಬೇಕು ಎಂದು ಕೆಲವರೂ ಐದು ಆಗಬೇಕೆಂದು ಕೆಲವರೂ ಸಾಧಿಸ

ತೊಡಗಿದಾಗ ರಾಜಕಾರಣ ಪ್ರಾರಂಭವಾಯಿತು ; ಮತ್ತು ಎರಡಕ್ಕೆ ಎರಡು ಸೇರಿಸಿದರೆ ನಾಲ್ಕು ಎಂದು ನಿರ್ಣಯ ಪಡೆಯುವುದಕ್ಕೆ ವಕೀಲರಿಗೆ ಎರಡು ಮತ್ತು ನ್ಯಾಯಾಲಯದ ಖರ್ಚಿಗೆ ಮೂರು ಹಣ ಕಕ್ಕಿಸತೊಡಗಿದಾಗ ನ್ಯಾಯಪೀಠ ಪ್ರಾರಂಭವಾಯಿತೆಂದು ನನ್ನ ಕೊರೊಲರಿ.

ನಾಗರಿಕತೆ ಮೊದಲಾದ ಇತರ ಗುಣಗಳು ನನಗೆ ದಕ್ಕಿದ್ದವೆಂದು ಹೇಳುವ ಧೈರ್ಯ ನನಗಿಲ್ಲ ; ಆದರೆ ಒಂದೂ ಒಂದೂ ಎರಡು ಎನ್ನುವಷ್ಟು ಮಾನವತೆಯನ್ನು ಪ್ರದರ್ಶಿಸಲು ನನಗೆ ಎಂದೂ ಕಷ್ಟವಾಗಲಿಲ್ಲ. ಒಂದಕ್ಕೆ ಒಂದು ಕೂಡಿಸುವುದಕ್ಕೆ ಮಾತ್ರವಲ್ಲದೆ ಉದ್ದುದ್ದ ಸಂಖ್ಯೆಗಳನ್ನು ಕೂಡಿಸುವುದಕ್ಕೂ ಕಲಿತೆ. ಅಷ್ಟೇ ಏಕೆ, ಕಂಸಗಳ ಬಂಧನದಿಂದ ಅಂಕೆಗಳನ್ನೂ ಅಕ್ಷರಗಳನ್ನೂ ಬಿಡಿಸುವುದು, $a^2+2ab+b^2$ ಇವುಗಳಿಗೆ ಫ್ಯಾಕ್ಟರುಗಳನ್ನ ತೆಗೆಯುವುದು— ಇಂಥಾ ಸರ್ಕಸ್ಸುಗಳನ್ನೂ ಮಾಡಬಲ್ಲವನಾದೆ.

ಆದರೆ, ಗಣಿತದ "—ರೆ"ಗಳು ಬಂದವೋ ನನ್ನ ತಲೆ ಕೆಟ್ಟುಹೋಗುತ್ತಿತ್ತು—ಈಗಲೂ ಕೆಟ್ಟುಹೋಗುತ್ತದೆ. ನಮ್ಮ ಮಾಸ್ತರರೊಬ್ಬರು ತಾವು ಹೊಸ ಮಾದರಿಯ ಗಣಿತ ಶಿಕ್ಷಕರೆಂದು ತಿಳಿದುಕೊಂಡಿದ್ದರು. ಮಕ್ಕಳ ಮನಸ್ಸನ್ನು ಉಲ್ಲಾಸಗೊಳಿಸುವ ಹಾಗೆ ಲೆಕ್ಕ ಹೇಳಿದರೆ ಅವರು ಸರಿಯಾಗಿ ಲೆಕ್ಕ ಬಿಡಿಸಿಯೇ ಬಿಡಿಸುತ್ತಾರೆ ಎಂಬುದು ಅವರ ಥಿಯರಿಯಾಗಿತ್ತು. ಒಂದು ಸಲ ಅವರು ಕೇಳಿದರು: "ನಿನ್ನ ಹತ್ತಿರ ಹನ್ನೆರಡು ಬಾಳೇ ಹಣ್ಣುಗಳನ್ನು ಕೊಡುತ್ತೇನೆ. ಅವುಗಳನ್ನು ಒಬ್ಬೊಬ್ಬರಿಗೆ ಎರಡೆರಡರಂತೆ ಹಂಚಿದರೆ ಐದು ಜನರಿಗೆ ಕೊಟ್ಟ ಮೇಲೆ ನಿನ್ನ ಹತ್ತಿರ ಎಷ್ಟು ಉಳಿಯುತ್ತವೆ?" ಈಗ ನೋಡಿ, ಬಾಳೇ ಹಣ್ಣುಗಳು ನನಗೆ ಬಲು ಇಷ್ಟ. ಹನ್ನೆರಡು ಬಾಳೇ ಹಣ್ಣುಗಳನ್ನು ನನಗೆ ಮಾಸ್ತರು ಕೊಡುತ್ತಾರೆ ಎಂದು ಕೇಳಿ ನನ್ನ ಮನಸ್ಸು ಉಬ್ಬಿತು. ಆದರೆ ಒಬ್ಬೊಬ್ಬರಿಗೆ ಎರಡೆರಡರಂತೆ ಬೇರೆಯವರಿಗೆ ಕೊಡಬೇಕೆಂದು ಅವರು ಹೇಳಿದ ಕೂಡಲೆ ನನ್ನ ಉತ್ಸಾಹವೆಲ್ಲ ಉಡುಗಿ ಹೋಯಿತು. ನಾನೊಬ್ಬನೇ ಹನ್ನೆರಡು ಹಣ್ಣುಗಳನ್ನೂ ತಿಂದುಬಿಡಬಹುದೆಂದುಕೊಂಡಿದ್ದ ನನಗೆ ಈ ಸುದ್ದಿ ಕೇಳಿದ ಮೇಲೆ ಆ ಲೆಕ್ಕ ಮಾಡಲು ಸಾಧ್ಯವೇ ಆಗಲಿಲ್ಲ. ಬೇರೆಯವರಿಗೆ ಕೊಡಲೇಬೇಕೆಂದಾದರೆ ನನ್ನ ಕೈಯಲ್ಲಿದ್ದದ್ದನ್ನೇ ಕೊಡಿಸುವ ಕ್ರೂರತನ ಏಕೆ? ನಾನು ಕಳೆದುಕೊಂಡ ಬಾಳೇ ಹಣ್ಣುಗಳ ಚಿಂತೆಯಿಂದಾಗಿ ನಾನು ಸರಿಯಾಗಿ

ಲೆಕ್ಕ ಮಾಡಲಾರದೆ ನನ್ನ ಕೈಯಲ್ಲಿ ಮೂರು ಉಳಿಯುತ್ತವೆಂದು ಉತ್ತರ ಬರೆದು ಮಾಸ್ತರರಿಂದ ಕಿವಿ ಹಿಂಡಿಸಿಕೊಂಡೆ.

ಇನ್ನೊಂದು ಉದಾಹರಣೆ ನೋಡಿ : "೩೬ ಜನರು ೪೮ ದಿನಗಳಲ್ಲಿ ಒಂದು ಮನೆ ಕಟ್ಟುತ್ತಾರಾದರೆ ಅದೇ ಮನೆಯನ್ನು ೬೪ ಜನರು ಎಷ್ಟು ದಿನಗಳಲ್ಲಿ ಕಟ್ಟಿ ಮುಗಿಸಬಲ್ಲರು ?" ಒಂದು ಮನೆಯನ್ನು ೩೬ ಜನರು ೪೮ ದಿನಗಳಲ್ಲಿ ಕಟ್ಟಿದ ಮೇಲೆ ಅದೇ ಮನೆಯನ್ನು ಬೇರೆ ಜನರು ಕಟ್ಟುವುದು ಹೇಗೆ ? ಎಂದು ನನಗೆ ಚಿಂತೆ ಹತ್ತಿತು. ಕಟ್ಟಿದ್ದನ್ನು ಕಿತ್ತು ಹಾಕಬೇಕೆ ? ಕಿತ್ತು ಹಾಕಬೇಕಾದರೆ ಅದಕ್ಕೆ ಸಮಯವೂ ಜನರೂ ಬೇಡವೇ ? ಅದನ್ನು ಯಾರು ಕೊಡುತ್ತಾರೆ? ಇಷ್ಟೆಲ್ಲ ಕೂಡಿಬಂದರೂ ಹೊಸದಾಗಿ ಕಟ್ಟಿದ್ದು ಅದೇ ಮನೆ ಹೇಗಾದೀತು ? ನಮ್ಮ ಮನೆಯಲ್ಲಿ ಜನ ಹೆಚ್ಚಾದಷ್ಟು ಕಡಿಮೆ ಕೆಲಸವಾಗುತ್ತದೆಂದು ನಾನು ನೋಡಿದ್ದೆ. ೬೪ ಜನರಲ್ಲಿ ನಾಲ್ಕು ಜನರಿಗೆ ಒಮ್ಮೆಲೇ ಹೊಟ್ಟೆ ನೋವು ಬಂದು ಫ್ರೆಂಚ್‌ಲೀವ್ ತೆಗೆದುಕೊಂಡರೆ ಏನಾಗುತ್ತದೆಂದು ಹೇಗೆ ಹೇಳುವುದು ? ಇಟ್ಟಿಗೆ ಕಟ್ಟುವವರೇ ಗೈರುಹಾಜರಿಯಾದರೆ ಗಾರೆಯವರೆಲ್ಲ ಹಾಜರಾದರೆ ಕೆಲಸ ಮುಂದುವರಿದೀತೇ ? ಇದೆಲ್ಲಾ ಚಿಂತೆಯಲ್ಲಿ ನಾನು ಬಹಳ ತೊಳಲಾಡುತ್ತಿದ್ದಾಗ ಗಂಟೆ ಹೊಡೆದುಬಿಟ್ಟಿತು. ಮಾಸ್ತರರು ಪೇಪರು ಕಸಿದುಕೊಂಡರು.

ಇನ್ನೊಂದು ಸಲ ಹೀಗೊಂದು ಪ್ರಶ್ನೆ ಬಂತು : "ಒಬ್ಬ ಅಗಸನ ಹತ್ತಿರ ಮೂರು ಕತ್ತೆಗಳಿವೆ. ಮೊದಲನೆಯದು ಮೂರು. ಎರಡನೆಯದು ಎರಡು, ಮೂರನೆಯದು ಒಂದು ಬಕೆಟ್ ನೀರು ಕುಡಿಯುತ್ತದೆ. ಆದರೆ ಅಗಸನ ಕಲ್ಲುಬಾನಿಯಲ್ಲಿ ನಾಲ್ಕೇ ಬಕೆಟ್ ನೀರು ಇದೆ. ಕತ್ತೆಗಳು ಯಾವ ದಾಮಾಶಯದಲ್ಲಿ ನೀರು ಕುಡಿಯಬೇಕು ?" ನನಗೆ ಒಡನೆ ಸಮಸ್ಯೆಯಾಯಿತು. ಕತ್ತೆಗಳಿಗೆ ದಾಮಾಶಯದ ಲೆಕ್ಕವನ್ನು ನಾನು ಹೇಗೆ ಕಲಿಸಲಿ ? ಕತ್ತೆಗಳಿಗೆ ಕಲಿಸುವುದು ಸಾಧ್ಯವೇ ಇಲ್ಲೆಂದು ಮಾಸ್ತರರು ಎಷ್ಟೊ ಸಲ ನಮ್ಮ ಉದಾಹರಣೆ ಕೊಟ್ಟು ಹೇಳಿದ್ದರು. ಆದ್ದರಿಂದ ನಾನು ಹೀಗೆ ಬರೆದೆ : "ಕತ್ತೆಗಳಿಗೆ ದಾಮಾಶಯ ಲೆಕ್ಕ ಕಲಿಸಲು ನನ್ನಿಂದ ಸಾಧ್ಯವಿಲ್ಲ. ಇದ್ದದ್ದರಲ್ಲಿ ಒಳ್ಳೇ ಉಪಾಯ ಹೀಗಿದೆ: ಒಂದು ಬಕೆಟ್ ಕುಡಿಯುವ ಕತ್ತೆಯನ್ನು ಮೊದಲು ಕಲ್ಲುಬಾನಿಗೆ ಬಿಡಬೇಕು. ಅದು ಕುಡಿದ ಮೇಲೆ ಎರಡು ಬಕೆಟ್ಟಿನ ಕತ್ತೆಯನ್ನು ಬಿಡಬೇಕು. ಅದು

ಕುಡಿದ ಮೇಲೆ ಮೊದಲನೇ ಕತ್ತೆಯನ್ನು ಬಿಡಬೇಕು. ಅದಕ್ಕೆ ಮೂರಲ್ಲಿದ್ದರೂ ಒಂದು ಬಕೆಟ್ಟು ನೀರಾದರೂ ಸಿಕ್ಕುತ್ತದೆ. ಇನ್ನಾವ ವಿಧಾನದಿಂದಲೂ ಇಷ್ಟು ನ್ಯಾಯವಾದ ಹಂಚಿಕೆ ಕೂಡ ಆಗದು.”

ಬ್ರಿಟಿಷ್ ಸಾಮ್ರಾಜ್ಯ ಇನ್ನೂ ಈ ದೇಶದಲ್ಲಿ ಮೆರೆಯುತ್ತಿದ್ದ ಕಾಲದಲ್ಲಿ ನನ್ನ ಈ ಉತ್ತರ ಅಪಾಯಕರವಾದ ಕಮ್ಯುನಿಸ್ಟ್ ವಿಚಾರಗಳಿಂದ ಪೀಡಿತವಾದ ಅಧಿಕಪ್ರಸಂಗದ ಧಾರ್ಷ್ಟ್ಯವೆಂದು ತೀರ್ಮಾನಿಸಿ ಹೆಡ್ಮಾಸ್ತರರು ನನಗೆ ಎಚ್ಚರಿಕೆ ಕೊಟ್ಟರು.

“ಗಂಟೆಗೆ ಅರುವತ್ತು ಮೈಲು ವೇಗದಿಂದ ಓಡುವ ರೈಲಿನಲ್ಲಿ ಪಲಾಯನ ಮಾಡಿದ ಕಳ್ಳನನ್ನು ಹಿಡಿಯಲು ರೈಲು ಹೊರಟ ೧೫ ನಿಮಿಷಗಳ ನಂತರ ಗಂಟೆಗೆ ಅರುವತ್ತು ಮೈಲು ಓಡುವ ಕಾರಿನಲ್ಲಿ ಹೊರಟ ಪೊಲೀಸರು ೧೫ ನಿಮಿಷಗಳ ನಂತರ ಮುಂದಿನ ನಿಲ್ದಾಣದಲ್ಲಿ ಕಳ್ಳನನ್ನು ಹಿಡಿದರೆ ಎರಡು ಸ್ಟೇಶನ್ನುಗಳ ನಡುವಿನ ದೂರವೆಷ್ಟು ?”

ಈ ಪ್ರಶ್ನೆ ನನಗೆ ಅನೇಕ ಸಂಶಯಗಳನ್ನು ಉಂಟುಮಾಡಿತು. ಮೊದಲನೆಯದಾಗಿ ಗಂಟೆಗೆ ೬೦ ಮೈಲು ಓಡುವ ರೈಲು ಆಗ ಎಲ್ಲಿತ್ತು ? ಅಲ್ಲದೆ ಗಂಟೆಗೆ ಅರುವತ್ತು ಮೈಲು ಓಡುವ ಕಾರಿಗೆ ಎದುರು ಒಂದು ಎಮ್ಮೆ ಅಡ್ಡ ಬಂದರೆ ಸಮಯ ಹಾಳಾಗುತ್ತಿದ್ದಿಲ್ಲವೇ ? ಪೊಲೀಸರು ಆ ರಸ್ತೆಯಲ್ಲಿನ ಎಲ್ಲಾ ವಾಹನ ಸಂಚಾರವನ್ನು ಮೊದಲೇ ನಿಲ್ಲಿಸಿರಬಹುದೆ ? ಹೊರಡುವಾಗ ನಿಲ್ಲುವಾಗ ವೇಗ ಕಡಿಮೆಯಾಗುವುದನ್ನು ಪ್ರಶ್ನಕರ್ತನು ಗಮನಕ್ಕೆ ತೆಗೆದುಕೊಂಡಿದ್ದಾನೆಯೇ ? ಯೋಚಿಸುತ್ತಾ ಯೋಚಿಸುತ್ತಾ ನನಗೆ ಇದು ಅಸಾಧ್ಯ ಪ್ರಶ್ನೆ ಅನಿಸಿತು. ಈ ಪ್ರಶ್ನೆಗೆ ಪೂಜಿ ಮಾರ್ಕುಗಳನ್ನು ಸಂಪಾದಿಸಿದ ಮೇಲೆ ನಾನು ಮಾಸ್ತರರ ಹತ್ತಿರ ನನ್ನ ತೊಡಕುಗಳನ್ನು ತೋಡಿಕೊಂಡೆ. ಮಾಸ್ತರರು ಸಹಾನುಭೂತಿಯಿಂದ ಹೇಳಿದರು : “ನಿನ್ನ ಕಷ್ಟವೆಂದರೆ ನೀನು ತೀರ ಹೆಚ್ಚು ವಿಚಾರ ಮಾಡುತ್ತಿ. ಲೆಕ್ಕ ಮಾಡುವಾಗ ಜಟಕಾ ಕುದುರೆಯ ಹಾಗೆ ಅತ್ತಿತ್ತ ಕಣ್ಣು ಹಾಯಿಸದೆ ಲೆಕ್ಕದಲ್ಲಿ ಹೇಳಿದ ಅಂಶಗಳ ಹಾದಿಯಲ್ಲಿ ಹೋಗಬೇಕು. ಲೆಕ್ಕವನ್ನು ಜೀವನಕ್ಕೆ ಅನ್ವಯಿಸಿದಾಗ ಆಗಬಹುದಾದ ಅಪಘಾತಗಳಿಗೆ ನೀನು ಜವಾಬ್ದಾರನಲ್ಲ ಎಂದು ತಿಳಿದುಕೋ” ಎಂದು ಉಪದೇಶಿಸಿದರು.

ಮುಂದಿನ ಪರೀಕ್ಷೆಯಲ್ಲಿ ಇದನ್ನು ಅಕ್ಷರಶಃ ಪಾಲಿಸಿದೆ. ಆ ಸಲ ಬಂದ

ಸರಳ ಸಮೀಕರಣದ ಪ್ರಶ್ನೆಯನ್ನು ಅತ್ತಲಿತ್ತ ಚಲಿಸದಂತೆ ಬಿಡಿಸಿದೆ. ಪರಿಣಾಮವಾಗಿ ತಂದೆಯ ವಯಸ್ಸು ಹನ್ನೊಂದು, ತಾಯಿಯದು ಒಂಭತ್ತು ಮತ್ತು ಮಗನದು ಏಳು ಎಂದುತ್ತರ ಬಂತು. ಬಾತ್ಮೀದಾರರ ಅಭಿಪ್ರಾಯ ಗಳಿಗೆ ನಾನು ಜವಾಬ್ದಾರನಲ್ಲವೆಂದು ಮಾಸ್ತರರು ಆಶ್ವಾಸನ ಕೊಟ್ಟಿದ್ದರೂ ಈ ತುತ್ತು ನನ್ನ ಗಂಟಲಲ್ಲಿ ಇಳಿಯಲು ಒಪ್ಪಲಿಲ್ಲ. ನಾನು ಲೆಕ್ಕ ಬಿಡಿಸು ವುದರಲ್ಲೇ ತಪ್ಪುಮಾಡಿರಬೇಕೆಂದು ಪುನಃ ಪುನಃ ಈಕ್ವೇಶನ್ನು ಹಾಕಿ ನೋಡಿದೆ. ಎರಡನೆ ಸಲ ಮೊದಲನೇ ಉತ್ತರವೇ ಬಂತು. ಆಮೇಲೆ ಮಗನ ವಯಸ್ಸು ೧೫, ತಾಯಿಯದು ೭, ತಂದೆಯದು ೯ ಇತ್ಯಾದಿಯಾಗಿ ಉತ್ತರ ಬರತೊಡಗಿತು. ಪುಟಗಳೆಲ್ಲ ಚಿತ್ತಾದವು. ಬೇರೆ ಪ್ರಶ್ನೆಗಳನ್ನು ತೆಗೆದುಕೊಳ್ಳ ಲಾಗಲಿಲ್ಲ. ಇದನ್ನೆಲ್ಲ ನೋಡಿದ ಪರೀಕ್ಷಕರು, "ಈ ಹುಡುಗನಿಗೆ ಗಣಿತ ಶಾಸ್ತ್ರಕ್ಕೆ ಸಲ್ಲದ ಅತಿ ಬುದ್ಧಿ ಇದೆ" ಎಂದು ರಿಮಾರ್ಕು ಬರೆದರು.

ಈಗ ಅದೆಲ್ಲ ಹಳೆಯ ಕಥೆಯಾಗಿದೆ. ನನ್ನ ಜೀವನದಲ್ಲಿ ಲೆಕ್ಕದ ಉಸಾಬರಿ ಯಿಲ್ಲದ ರಂಗವನ್ನೇ ಆರಿಸಿಕೊಂಡಿದ್ದೇನೆ. ಆದರೂ ಈಗ ನನ್ನ ಮೊಮ್ಮಗನಿಗೆ ಲೆಕ್ಕ ಕಲಿಸುವ ಸರದಿ ನನಗೆ ಬಂದಿದೆ. ನನ್ನ ಪ್ರೈಮರಿ ಶಾಲೆಯ ಮಾಸ್ತರರ ದಾರಿಯನ್ನನುಸರಿಸಿ ನಾನು ಆತನಿಗೆ, "ನಿನ್ನ ಕೈಲಿ ಮೂರು ಬಾಳೆಹಣ್ಣು ಕೊಡುತ್ತೇನೆ. ನಿನ್ನ ತಂಗಿಗೆ ಒಂದು ಬಾಳೆಹಣ್ಣನ್ನು ನೀನು ಕೊಟ್ಟರೆ ನಿನ್ನ ಹತ್ತಿರ ಎಷ್ಟು ಉಳಿಯುತ್ತೆ ಮಗೂ?" ಎಂದು ಕೇಳಿದೆ. "ನಾ ತಂಗಿಗೆ ಕೊಡೋಲ್ಲಾ. ನಾನೇ ತಿಂತೀನಿ!" ಎಂದ. ಬಹಳ ಬುದ್ಧಿವಂತ. ನನ್ನ ಹಾಗೆ ತೊಡಕು ಬಿಚ್ಚುವ ಶ್ರಮ ತೆಗೆದುಕೊಳ್ಳದೆ ತೊಡಕನ್ನೇ ಕತ್ತರಿಸಿಬಿಟ್ಟಿದ್ದಾನೆ. ಭೇಶ್! ಎಂದುಕೊಂಡೆ. (೧೯೭೨)

## ಬೇಂದ್ರೆ ಅಂದ್ರೆ

ಕವಿ ಬೇಂದ್ರೆಯವರು ಮಾತಾಡುವುದನ್ನು ಕೇಳುತ್ತಿರುವುದೇ ಒಂದು ಉಲ್ಲಾಸ. ಹರಟೆಯಲ್ಲಿ ಅವರು ನಿಸ್ಸೀಮರಾಗಿರುವಷ್ಟು ಭಾಷಣದಲ್ಲಿ ಆಗಿರ ದಿದ್ದರೂ ಭಾಷಣವನ್ನೇ ಹರಟೆ ಮಾಡಿಬಿಡುವ ಚಾತುರ್ಯ ಅವರಲ್ಲಿದೆ. ಹರಟೆ ಗಳಿಗೆ ಎರಡು ಪಕ್ಷಗಳಿರಬೇಕೆಂಬ ನಿಯಮಃ ಬೇಂದ್ರೆಯವರಿಗೆ ಅನ್ವಯಿಸುವು

ದಿಲ್ಲ. ಎರಡೂ ಪಾತ್ರಗಳನ್ನು ಅವರು ಕೆಲ ಶೇಕ್ಸ್‌ಪೀರಿಯನ್ ನಟರಂತೆ ಏಕಾಕಿಯಾಗಿ ನಿರ್ವಹಿಸಬಲ್ಲರು. ೧೯೫೧ ರಲ್ಲಿ ಧಾರವಾಡದ ಕಲೋಪಾಸಕ ಮಂಡಲದವರ ವಾರ್ಷಿಕೋತ್ಸವದಲ್ಲಿ ಅವರು ಮಾಡಿದ ಭಾಷಣ ಕೇಳುವ ಯೋಗ ಪ್ರಥಮತಃ ಲಾಂಗೂಲಾಚಾರ್ಯರಿಗೆ ಬಂದದ್ದು. ಅವರು ಮಾತಾಡು ತ್ತಿದ್ದುದು ಕಾಳಿದಾಸನ ಶಾಕುಂತಲದ ಮೇಲೆ. ಶ್ರೋತೃಗಳಿಗೆ ಭಾಷಣ ಮುಗಿದ ನಂತರ ಶಾಕುಂತಲದ ಬಗ್ಗೆ ಮೊದಲು ಗೊತ್ತಿದ್ದುದಕ್ಕಿಂತಲೂ ಕಡಿಮೆ ತಿಳಿವಳಿಕೆಯಾಯಿತೆಂಬ ಮಾತು ಬೇರೆ. ಅವರು ಕಾಳಿದಾಸನಿಗೇ ವಿಸ್ಮಯವುಂಟುಮಾಡಬಹುದಾದ ಅರ್ಥಗಳನ್ನು ಅವನ ಕಾವ್ಯದಲ್ಲಿ ಓದಿದ ರೆಂಬುದೂ ಮುಖ್ಯವಲ್ಲ. ಅವರು ಒಂದೂವರೆ ತಾಸು ಮಾತಾಡಿದರು; ಮತ್ತು ಸಭಿಕರು ಅದನ್ನು ಮೈಮರೆತು ಅಲ್ಲದಿದ್ದರೂ ಉಳಿದೆಲ್ಲ ಚಿಂತೆಗಳನ್ನು ಮರೆತು ಕೇಳಿದರು; ಯಾರೂ ಆಕಳಿಸಲು ಕೂಡ ಪ್ರಯತ್ನಿಸಲಿಲ್ಲ—ಎಂಬುದೀಗ ಮುಖ್ಯ.

ಉದಾಹರಣೆಗಾಗಿ, ಕಾಳಿದಾಸನ. ನಾಟಕವನ್ನು ಓದುವ ರಸಿಕರ ಬಗ್ಗೆ ಅಲ್ಲ—ಅರಸಿಕರ ಬಗ್ಗೆ ಯಾವ ಭಾಷಣಕಾರ ತನ್ನ ಭಾಷಣದ ಹಲ ಮಿನಿಟು ಗಳನ್ನು ವ್ಯಯಿಸಿಯಾನು? ಆದರೆ ಬೇಂದ್ರೆಯವರಿಗೆ ತಪ್ಪು ಮಾತಾಡುವ, ವಿಷಯಗಳಿಗೆ ಕೈಕಾಲು ಹುಟ್ಟಿಸಿಕೊಂಡು ಹೋಗುವ ಅಪೂರ್ವ ಕೌಶಲವಿದೆ. ಅವರು ಕಾಳಿದಾಸನನ್ನು ಸಾವಕಾಶವಾಗಿ ಓದಿ ರಸವನ್ನು ಗ್ರಹಿಸುವ ಬದಲು ಬೇಗನೇ ಓದಿ ಮುಗಿಸುವವರನ್ನು, ಧಾರವಾಡದ ಲೈನ್ ಬಜಾರ್ ಪೇಡೆ ಯನ್ನು ಗಪಗಪನೆ ತಿಂದು ಮುಗಿಸುವವರಿಗೆ ಹೋಲಿಸಿದರು. ಗಪಗಪನೆ ಪೇಡೆ ನುಂಗಿ ತಾನು ಧಡೆ ಪೇಡೆ ತಿಂದೆನೆಂದು ಸಂತೋಷ ಪಟ್ಟಾಕ್ಷಣ ಅವನೇನು ಸವಿಗಾರನಾಗಿ ಹೋದನೆ! ಬಹಳವಾದರೆ ಹೊಟ್ಟೆಬಾಕ ಎನಿಸಿಯಾನು. ಆದರೆ ಸವಿಗಾರ ಒಂದೆರಡೇ ಪೇಡೆ ತಿಂದರೂ ಅದನ್ನು ಬಾಯಲ್ಲಿ ಸಾಕಷ್ಟು ಹೊತ್ತು ಇರಿಸಿಕೊಂಡು ಸವಿಸವಿದು ತಿನ್ನುತ್ತಾನೆ. ಬೇಂದ್ರೆಯವರು ಯುದ್ಧ ಪೂರ್ವದ ಪೇಡೆಯ ಬಗ್ಗೆ ಹೇಳುತ್ತಿರಬಹುದೆಂದಷ್ಟೇ ಲಾಂಗೂಲಾಚಾರ್ಯ ರಿಗೆ ಅನಿಸಿತು. ಇಪ್ಪತ್ತನೇ ಶತಮಾನದ ಆರನೇ ದಶಕದ ಪ್ರಾರಂಭದಲ್ಲಿ ದೊರಕುವ ಪೇಡೆಗಳನ್ನು ಸವಿಸವಿದು ತಿನ್ನಬಲ್ಲವನು ಸವಿಗಾರನೆನಿಸುವುದ ಕ್ಕಿಂತಲೂ ಹಿಟ್ಟೂ ಬೂದಿಯೂ ಅಷ್ಟೇ ಎನ್ನುವ ಯೋಗಿಯಾಗಿರಬೇಕು.

ರಸಿಕನು ಅವುಗಳನ್ನು ತಿನ್ನಲೇಬೇಕಾಗಿ ಬಂದರೆ ನಾಲಿಗೆಗೆ ತಾಗಿಸದೇ ಆಸ್ಪ್ರೀ ನುಂಗಿದಂತೆಯೇ ನುಂಗಿಯಾನು.

ಬೇಂದ್ರೆಯವರ ಭಾಷಣದಲ್ಲಿ ನೀವು ಬರೆದುಕೊಳ್ಳುವುದಿದ್ದರೆ ನಡುನಡುವೆ ಬರುವ ಉಪಕಥೆಗಳನ್ನು ಬರೆದುಕೊಳ್ಳಬೇಕು. ಅವು ಆಶು ಉಪಕಥೆಗಳು —ಅಂದರೆ ನಿಂತ ಕಾಲಮೇಲೆ ಸೃಷ್ಟಿಸಿದವುಗಳು—ಎನ್ನುವ ಸಂಶಯ ಲಾಂಗೂಲಾಚಾರ್ಯರಿಗೆ ಇದೆ. ಧರ್ಮಸಂಕಟಕ್ಕೆ ಅವರ ಉದಾಹರಣೆ. ಅವರ ಒಬ್ಬ ಗೆಳೆಯನಿಗೆ ಏಕಾದಶೀವ್ರತವಂತೆ. ಅವನಿಗೆ ಪೇಡೆಯೆಂದರೆ ಪಂಚ ಪ್ರಾಣ; ಮತ್ತು ಅವನ ದುರ್ದೈವಕ್ಕೆ ಯಾರಾದರೂ ಅವನಿಗೆ ಪೇಡೆ ಕೊಡ ಮಾಡುವುದು ಏಕಾದಶಿಯ ದಿನವೇ! ಭಾರೀ ಧರ್ಮ ಸಂಕಟ. ಅವನು ಯೋಚಿಸಿ ಯೋಚಿಸಿ ಈ ಉಭಯ ಸಂಕಟದಲ್ಲಿ ಪೇಡೆಯನ್ನು ಸ್ವೀಕರಿಸಿ ಏಕಾ ದಶಿಗೆ ಆ ದಿನದ ಮಟ್ಟಿಗೆ ವಿಶ್ರಾಂತಿ ಕೊಡುತ್ತಿದ್ದನಂತೆ. ಏಕಾದಶಿ ಹೋದರೆ ಹದಿನೈದು ದಿನಗಳಲ್ಲಿ ಮತ್ತೆ ಖಾತ್ರಿಯಾಗಿ ಬರುತ್ತದೆ. ಪೇಡೆ ಮತ್ತೆ ಬಂದೀ ತೆಂದು ಏನು ಗ್ಯಾರಂಟಿ? ದುಷ್ಯಂತ ಶಕುಂತಲೆಯನ್ನು ನೋಡಿದಾಗ ಗುರುತು ಹಿಡಿಯಲಾರದವನು ಉಂಗುರ ಕಂಡಕೂಡಲೆ ಗುರುತು ಹಿಡಿದದ್ದಕ್ಕೆ ದೃಷ್ಟಾಂತ ಕಥೆ ಇದು : ಆನೆ ಮನೆ ಮುಂದೆಯೇ ಹೋಗುತ್ತಿತ್ತಂತೆ. "ಅಯ್ಯೋ, ಆನೆ ಹೋಗುತ್ತಿದೆ" ಅಂದರೆ, "ಛೇ ಛೇ ಎಲ್ರೀ ಆನೆ? ಆನೆ ಎಲ್ಲಾದರೂ ಹೀಗೆ ಇರುತ್ತದೆಯೆ?" ಎಂದನಂತೆ. ಆನೆ ಹೋದಮೇಲೆ, "ನೋಡಯ್ಯಾ ಪ್ರಾಣಿಯ ಹೆಜ್ಜೆ" ಎಂದು ನೆಲದಲ್ಲಿ ಊರಿದ ಗುರುತನ್ನು ತೋರಿಸಿದರೆ, "ಆಹಾ, ನಿಜ, ನಿಜ. ಆನೆಯ ಹೆಜ್ಜೆಯೇ ಖಂಡಿತ," ಎಂದನಂತೆ! ಬೇಂದ್ರೆ ಯವರ ಭಾಷಣಗಳು ಇಂಥ ಕವಲುದಾರಿಗಳಿಂದಲೆ ನಮ್ಮನ್ನು ಮೆಚ್ಚಿಸುತ್ತವೆ.

೨

ಬೇಂದ್ರೆಯವರ ಜೀನಿಯಸ್ಸು ಯಾವುದೊಂದು ಕಟ್ಟುಪಾಡಿಗೆ ಒಳಪಡು ವಂಥಾದ್ದಲ್ಲ. ಕಮ್ಮಿ ತರದ ಜೀವಿಗಳ ಹಾಗೆ ಅವರು ತಯಾರಿ ಭಾಷಣದಿಂದ ಓದುವವರಲ್ಲ. ವಿಶ್ವವಿದ್ಯಾಲಯ ವಿಸ್ತರಣ ಭಾಷಣಗಳಂಥ ಸಂದರ್ಭಗಳಲ್ಲಿ ಕೂಡ ಅವರು ಕೆಲ ಮುಖ್ಯ ಪಾಯಿಂಟುಗಳನ್ನಷ್ಟೇ ಗುರುತು ಹಾಕಿಕೊಂಡು

ಬರುತ್ತಾರೆ. ಮತ್ತು ಆ ಪಾಯಿಂಟುಗಳನ್ನೂ ಕೈಬಿಟ್ಟೇ ಮಾತಾಡುತ್ತಾರೆ. ಭಾಷಣಕ್ಕೊಂದು ಪ್ರಾರಂಭ ಬೇಕು, ಡೆವಲೆಪ್‌ಮೆಂಟ್ ಬೇಕು, ಮುಕ್ತಾಯ ಬೇಕು ಎನ್ನುವ ಚೌಕಟ್ಟಿನೊಳಗೆ ಸಿಕ್ಕಿಕೊಂಡವರು ನೀವಾದರೆ ನೀವು ಖಂಡಿತ ಚಡಪಡಿಸುತ್ತೀರಿ. ಏಕೆಂದರೆ ಬೇಂದ್ರೆ ಭಾಷಣಗಳು ಪರಬ್ರಹ್ಮ ವಸ್ತುವಿನ ಹಾಗೆ ಆದಿ-ಮಧ್ಯಾಂತರಹಿತವಾದವುಗಳು.

ನಾನು ತಿಳಿದುಕೊಂಡಂತೆ ಬೇಂದ್ರೆಯವರದು ಭಾಷಣವೇ ಅಲ್ಲ—ಅದು a series of insights—ಒಳ ಮಿಂಚುಗಳ ಸರಣಿ. ಎಷ್ಟೋ ಸಲ ಒಂದೊಂದು ಸಲ ಒಂದೊಂದು ಮಿಂಚು ಒಂದೊಂದು ಪ್ರಬಂಧದ ವಸ್ತುವಾಗಬಹುದು. ಎಷ್ಟೋ ಸಲ ಆ ಮಿಂಚು ನಿಮ್ಮ ಕಣ್ಣು ಕಟ್ಟಿಬಿಟ್ಟು ಅದರ ತಾತ್ಪರ್ಯವೇನು ಎಂದು ಅಪ್ರತಿಭರಾಗುತ್ತೀರಿ. ಆಮೇಲೆ ಅದರ ಧ್ವನಿ ನಿಮಗೆ ಪ್ರತೀತವಾಗಿ ನೀವು ಗೊಳ್ಳೆಂದು ನಗುತ್ತೀರಿ. ನಿಮ್ಮ ನಗುವಿನ ಧ್ವನಿ ಆರುವ ಮೊದಲು ಮತ್ತೊಂದು ಮಿಂಚು ಹೊಡೆದಿರುತ್ತದೆ. ಜ್ಞಾನ-ಪೀಠ ಪ್ರಶಸ್ತಿ ಸಿಕ್ಕಿದ್ದಕ್ಕೆ ಅವರಿಗೆ ಹುಬ್ಬಳ್ಳಿಯಲ್ಲಿ ಮೊನ್ನೆ ಆದ ಸತ್ಕಾರದ ಸಮಾರಂಭದಲ್ಲಿ ಅವರು ಸಭೆಯನ್ನು ನಗಿಸಿ ನಗಿಸಿ ಮತ್ತೆ ಒಂದು ಬಾಣ ಹೊಡೆದರು. "ಜನ ಅಂತಾರೆ, ಬೇಂದ್ರೆ ಬಹಳ ನಗಸ್ತಾನೆ ಅಂತ. ನೀವು ನಗತೀರಿ. ಆದರೆ ಹೊರಗೆ ಹೋದ ಮೇಲೆ ನಾ ಯಾಕೆ ನಕ್ಕೆ ಅಂತ ಆಲೋಚನೆ ಮಾಡಲಿಕ್ಕೆ ಸುರು ಮಾಡ್ತೀರಿ" ಅಂತ. ಮತ್ತೆ ಎಲ್ಲರೂ ನಕ್ಕರು. ನನಗೆ ನಗಲಿಕ್ಕಾಗಲಿಲ್ಲ. ಯಾಕೆಂದರೆ ಬೇಂದ್ರೆ ನನ್ನನ್ನೇ ನೋಡಿ ನಗುತ್ತಿದ್ದಾರೆ ಅಂತ ನನ್ನ self-conscious ಮನಸ್ಸಿಗೆ ಅನಿಸಿತು. ಹೌದು, ನಾ ಯಾಕೆ ನಕ್ಕೆ ಅಂತ ಯೋಚನೆಗೆ ಬಿದ್ದೆ. ಮುಂದೆ ನನಗೆ ನಗಲು ಬಹಳ ಕಷ್ಟವಾಯಿತು. ನಾನು ಯಾಕೆ ನಗುತ್ತೇನೆ ಅಂತ ಯೋಚಿಸತೊಡಗಿದರೆ ನಗೆ ಎಲ್ಲಿ ಬಂದೀತು !

ಬೇಂದ್ರೆಯವರು ಮಹಾ ನಟ ಶಿಖಾಮಣಿ ಅಂತ ಒಮ್ಮೊಮ್ಮೆ ನನಗೆ ಅನಿಸುತ್ತದೆ. ಉಪತಾರ ಸ್ವರದಲ್ಲಿ ಅವರ ಮಾತುಗಳು ಹರಿಯುತ್ತಿರುವ ಹಾಗೆ ಅವರ ಮುಖದ ರೇಖೆಗಳು ಬದಲಾಗುವುದು ಆಶ್ಚರ್ಯಕರವಾಗಿರುತ್ತದೆ. ಜಲತರಂಗದ ಪಿಂಗಾಣಿ ಬಟ್ಟಲುಗಳ ಮೇಲೆ ವಾದಕನು ಮೂರನೇ ಕಾಲದಲ್ಲಿ ಬಾರಿಸುತ್ತ ಹೋದಾಗ ಎದ್ದು ಹಬ್ಬುವ ತರಂಗಗಳ ಹಾಗೆ.

ಆದರೊಡನೆಯೆ ಅವರ ಕೈಗಳೂ ಮಾತಾಡುವ ಪರಿ ಬೇರೆಯೇ. ವಾಸ್ತವಿಕವಾಗಿ ಬೇಂದ್ರೆಯವರ ಕೈಗಳಷ್ಟು ಅರ್ಥವ್ಯಂಜಕ ಕೈಗಳು ದುರ್ಲಭ. ಎಲ್ಲ ಹುಟ್ಟು ನಟರ ಹಾಗೆ ಬೇಂದ್ರೆಯವರಿಗೂ ಪ್ರೇಕ್ಷಕರನ್ನು ನೋಡಿ ಹುರುಪು ಬರುತ್ತದೆ. ಆದರೆ ಪ್ರೇಕ್ಷಕರು ಒಂದು ಸ್ವಿಚ್ ಮಾತ್ರ ಎಂದೂ ನನಗೆ ತೋರುತ್ತದೆ. ಅವರ ಅಸ್ತಿತ್ವ ತಂತಿಯಲ್ಲಿ ಮಿಂಚಿನ ಸಂಚಾರ ಮಾಡಿ ಬಿಡಲಿಕ್ಕೆ ಮಾತ್ರವೇ. ನಿಜವಾಗಿ ಆಮೇಲೆ ಬೇಂದ್ರೆ ಮಾತಾಡುವುದೆಲ್ಲ ಶ್ರೋತೃಗಳಿಗಾಗಿ ಅಲ್ಲ. ತಮಗಾಗಿಯೇ, ತಮ್ಮೊಡನೆಯೇ, ಅವರು ತಮ್ಮ ತಲೆಯೊಳಗೆ ತುಂಬಿದ ಅಮೂರ್ತವಾದ ಚಿಂತನೆಗಳಿಗೆ ಇಲ್ಲಿ ಮಾತಿನ ಅಂಗಿ ತೊಡಿಸುತ್ತಿದ್ದಾರೆ ಮಾತ್ರ ಅನಿಸುತ್ತದೆ.

ಎಷ್ಟೋ ಸಲ ಬೇಂದ್ರೆಯವರು ಮಾತನಾಡುವಾಗ ಭವಭೂತಿ ಹೇಳಿದ —"ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತೀ" ಎನ್ನುವ ಅನಿಸಿಕೆ ಬರುತ್ತದೆ. ಮಾತಿನ ಹಿಂದೆ ಅರ್ಥ ಓಡುತ್ತದೆ ಎನ್ನುವುದೇ ವಾಕ್ಸಿದ್ಧಿಯ ಲಕ್ಷಣ. ಬೇಂದ್ರೆಯವರಲ್ಲಿ, ತುಂಬಾ ಲೌಕಿಕ ಮಟ್ಟದಲ್ಲಿ ಕೂಡ, ಮಾತಿನ ಹಿಂದೆ ಅರ್ಥ ಓಡುತ್ತದೆ. ಒಂದು ಸಭೆಯಲ್ಲಿ ಅವರು "ಕರ್ನಾಟಕದ ಇತಿಹಾಸವೇ ಹಾಂಗದ. ಜಗತ್ತಿನಾಗ ಎಲ್ಲಾ ಕಡೆಗೆ ಬ್ಯಾಡಾದವರೇ ಇಲ್ಲಿ ಬರುತ್ತಾರೆ" ಎಂದು ಅಯಾಚಿತವಾಗಿ ಹೇಳಿದರು. ಎಡಕ್ಕೇ ರಾಜ್ಯಪಾಲರು ಕೂತಿದ್ದರು. ರಾಜಸ್ಥಾನದಿಂದ ಅವರನ್ನು ಇಲ್ಲಿ ಸಾಗಹಾಕಲಾಗಿದೆ, ಅನ್ನುವ ತಥ್ಯಕ್ಕೂ ಬೇಂದ್ರೆಯವರು ಕರ್ನಾಟಕದ ಬಗ್ಗೆ ಅಂದ ಸತ್ಯಕ್ಕೂ ಇದ್ದ ಸಂಬಂಧ ಪೂರ್ವಚಿಂತಿತವಾಗಿದ್ದಿಲ್ಲವೆಂಬುದಕ್ಕೆ ಏನೂ ಸಂಶಯವಲ್ಲ. ಆದರೆ ಆ ಮಾತಿನ ಹಿಂದೆ ಆ ಅರ್ಥ ಅವರೂ ಎಣಿಸಿರದ ಹಾಗೆ ಕುಂಟುತ್ತ ಬಂದು ಕ್ಷಣ ತಡವಾಗಿ ಶ್ರೋತೃಗಳನ್ನು ತಟ್ಟಿತು. ಅದಕ್ಕೂ ಮೇಲಿನ ಸ್ವರದಲ್ಲಿ ಅವರು ಇನ್ನೊಂದು ಮಾತು ಆಡಿದರು. "ಪ್ರಾಂತ ಪ್ರಾಂತಗಳ ಗಡಿ ಶಿವಭೂಮಿಯಾಗಬೇಕು" ಎಂದು ಹೇಳಿ ಕ್ಷಣ ತಡೆದು, "ರುದ್ರ ಭೂಮಿಯಾಗಬಾರದು" ಎಂದರು. ಒಂದೇ ದೇವರಿಗಿರುವ ಎರಡು ಹೆಸರುಗಳು ಎಷ್ಟು ದೊಡ್ಡ ಅರ್ಥಭೇದವನ್ನುಂಟುಮಾಡಬಲ್ಲವು ಎಂದು ನಾನು ವಿಸ್ಮಯಪಟ್ಟೆ. ಆದರೆ ಬೇಂದ್ರೆಯವರು ಈ ಮಾತನ್ನು ಪೂರ್ವಚಿಂತಿತವಾಗಿ ಆಡಿದರೆ? ತೊಂಬತ್ತೊಂಬತ್ತು ಪಾಲು ಇಲ್ಲ. ಶಿವ

ಭೂಮಿಯಾಗಬೇಕು ಎನ್ನುವ ಮಾತು ಅವರ ಬಾಯಿಂದ ಉದುರುವ ವರೆಗೂ ಅವರಿಗೆ ರುದ್ರಭೂಮಿಯ ವಿಚಾರ ಹೊಳೆದಿರಲಿಕ್ಕೇ ಇಲ್ಲ. ಯಾವುದೋ ಅಂತ ರಂಗದ ಶಕ್ತಿ ಅವರನ್ನು ಶಿವದತ್ತ ಎಳೆದು ತಂದಿತ್ತು. ಆಮೇಲೆ ಹಠಾತ್ತಾಗಿ ಅವರಿಗೆ ರುದ್ರಭೂಮಿಯ ಘೋರ ಕಲ್ಪನೆ ಬಂತು. ನಾವು ಗಡಿಯಲ್ಲಿ ಶಿವನನ್ನು ಹೇಗೆ ರುದ್ರನನ್ನಾಗಿ ಮಾಡುತ್ತಿದ್ದೇವೆ ಎನ್ನುವ ತಥ್ಯ ಅವರನ್ನು ದಂಗು ಬಡಿಸಿರಬೇಕು. ಮುಂದೆ ನಾಲ್ಕೋ ಐದೋ ನಿಮಿಷ ಅವರು ಈ ಥೀಮನ್ನು ವಿಸ್ತರಿಸಿದ್ದೆಲ್ಲ ಅರ್ಥಂವಾಕ್ ಅನುವರ್ತತೇ. ಶಿವಭೂಮಿಯಾಗಬೇಕು – ರುದ್ರಭೂಮಿಯಲ್ಲ—ಇದು ಮಾತ್ರ ಅಥೆಂಟಿಕ್ ಆಗಿ ವಾಚಂ ಅರ್ಥೋ ಅನುಧಾವತೆಯೇ. ಇದೇ ಪ್ರತಿಭೆ. ಇದೇ one per cent inspiration. ಇದು ಎಲ್ಲಿಂದ ಬರುತ್ತದೆ? ವಾಕ್ಕಿನ ಆರಾಧನೆಯಿಂದ. ಶಬ್ದಗಳು ಅರ್ಥ ವನ್ನು ಕೊಡುವ ಪ್ರತಿಕ್ರಿಯೆಯ ಚಿಂತನದಿಂದ ಬಂದದ್ದು. ಅದನ್ನೇ ಜಗನ್ನಾಥ ಪಂಡಿತ "ಮನನ ಜಲಧೇರಂತರುದರಾತ್" ಅಂದದ್ದು. ಇಲ್ಲಿ ನುಡಿದದ್ದು ಅಂಬಿಕಾತನಯ. ಇದು ಋಷಿವಾಕ್ಯ. ಅಂಬಿಕಾತನಯನಿಗೆ ಅಂಭೃಣಿ ವರ ಕೊಟ್ಟದ್ದು ಇಂಥ ಎಡೆಗಳಲ್ಲಿ—"ಯಂ ಕಾಮಯೇ ತಂತ ಮುಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ." ಈ ಮಾತು ಕೇಳಿ ನಕ್ಕವರನ್ನೇ ಬೇಂದ್ರೆ ನಕ್ಕದ್ದು. "ಆಮೇಲೆ ಹೊರಗೆ ಹೋಗಿ ಯಾಕೆ ನಕ್ಕೆ ಅಂತ ಆಲೋಚನೆ ಮಾಡ್ತೀರಿ" ಅಂತ. ಎರಡಕ್ಷರದ ಶಿವ ಅಷ್ಟೇ ಅಕ್ಷರದ ರುದ್ರನನ್ನಾಗಿ ಮಾಡುವ ಮಾನವ ಮೌಢ್ಯಕ್ಕೆ ಅಳಬೇಕು—ಆದರೆ ನಾವು ನಗುತ್ತೇವಲ್ಲ! "ಬೇಂದ್ರೆ ಹೇಳಿದ್ದು ಯಾರಿಗೆ ತಿಳಿಯುತ್ತೆ?" (೧೯೭೪)

## ದೇವರ ಭಾಷೆ

ಮನುಷ್ಯರ ಹಾಗೆ ದೇವರುಗಳೂ ವಯಸ್ಸಾದ ಮೇಲೆ ಬದಲಾವಣೆಗೆ ಒಲ್ಲರು. ಜೀವಮಾನವೆಲ್ಲಾ ತಮ್ಮ ಬಾಬೂ ಇಂಗ್ಲಿಷಿನಲ್ಲಿ ಲೆಕ್ಚರುಗಳನ್ನು ಪುರಶ್ಚರಣೆ ಮಾಡಿದ ಪ್ರೊಫೆಸರ್ ಜನರು ಕನ್ನಡದಲ್ಲಿ ಪಾಠ ಹೇಳಿ ಅಂದರೆ ಕೆರಳುತ್ತಾರೆ. ಕನ್ನಡದಲ್ಲಿ ಶಬ್ದಗಳೇ ಇಲ್ಲ ಎಂದು ಅವರು ದೂರುತ್ತಾರೆ. ಅಂದರೆ ಅವರ ಅರ್ಥ ತಮಗೆ ಶಬ್ದಗಳು ಗೊತ್ತಿಲ್ಲ ಅಂತ. ಕನ್ನಡದಲ್ಲೇ

ಪಾಠ ಹೇಳಬೇಕು ಎಂದು ಒತ್ತಾಯಪಡಿಸುವುದು ತಮ್ಮ ಮೂಲಭೂತ ಹಕ್ಕುಗಳ ಉಲ್ಲಂಘನೆಯೆಂದು ಅವರು ಬಗೆಯುತ್ತಾರೆ. ಅದೇ ಪ್ರಕಾರ ದೇವರು ಕೂಡ ಒಂದು ಭಾಷೆಯಲ್ಲಿ ಪ್ರಾರ್ಥನೆಗಳನ್ನು ಕೇಳುವ ಅಭ್ಯಾಸ ಮಾಡಿ ಕೊಂಡರೆ ಮತ್ತೊಂದು ಭಾಷೆಯಲ್ಲಿ ಅದನ್ನು ಕೇಳುವುದಕ್ಕೆ ಸಹಸಾ ತಯಾ ರಾಗುವುದಿಲ್ಲ. ಇದಕ್ಕೇನುಪಾಯ?

ತಮಿಳುನಾಡು ಮುಖ್ಯಮಂತ್ರಿ ತಿರು ಕರುಣಾನಿಧಿಯವರನ್ನು ಕೇಳಿರಿ, ಹೇಳುತ್ತಾರೆ. ಈ ದೇಶದ ದೇವರಿಗೆಲ್ಲ ಬಹಳ ಕಾಲದಿಂದ ಸಂಸ್ಕೃತದಲ್ಲೇ ಮಂತ್ರಗಳನ್ನು ಕೇಳಿ ಅಭ್ಯಾಸವಾಗಿದೆ. ಅದೂ ವೈದಿಕ ಸಂಸ್ಕೃತದಲ್ಲಿ. ಈ ಮಂತ್ರಗಳ ಅರ್ಥ ಭಕ್ತರಿಗೆ ಆಗಲಿಕ್ಕಿಲ್ಲ; ಅರ್ಚಕರಿಗೂ ಆಗುವುದಿಲ್ಲ ಎನ್ನಿ. ಎಷ್ಟೋ ಸಲ ಅರ್ಚಕರ ಮಂತ್ರ ಅಬದ್ಧವಾಗಿರುತ್ತದೆ. ಹೆಚ್ಚಿನ ಅರ್ಚಕರಿಗೆ ರಾಮಶಬ್ದ ಅಕರಾಂತವೋ ರಕಾರಾಂತವೋ ಗೊತ್ತಿಲ್ಲವೆಂದು ನನಗೆ ಖಂಡಿತವಾಗಿ ಗೊತ್ತಿದೆ. ಆದರೆ ದೇವತೆಗಳಿಗೆ ಸಂಸ್ಕೃತವೇ ಬೇಕು. ತಪ್ಪು ಸಂಸ್ಕೃತವಾದರೂ ಸರಿಯೇ. ಕನ್ನಡವನ್ನೋ ತಮಿಳನ್ನೋ ಕಲಿಯಲು ಅವರಿಗೆ ವೈಗಳ್ಳತನ. ನಮ್ಮ ಹಳೇ ಪ್ರೊಫೆಸರರ ಹಾಗೆ. "ಈ ಮುದಿ ವಯಸ್ಸಿನಲ್ಲಿ (ಕೆಲ ಹಿಂದೂ ದೇವರುಗಳಿಗೆ ಕನಿಷ್ಠ ಪಕ್ಷ ೪೦೦೦ ವರ್ಷ ಗಳಾಗಿವೆ) ಎಲ್ಲಪ್ಪಾ ಹೊಸ ಭಾಷೆ ಕಲಿಯೋಣ? ಪುರೋಹಿತ ಸಂಸ್ಕೃತ ವಾದರೂ ಸರಿಯೇ, ನೀವು ಓದಿರಬೇಕಾದ ಪ್ರಾರ್ಥನೆಯನ್ನು ಅದರಲ್ಲಿ ಒದರಿ ಹೋಗಿ. ನಮ್ಮಲ್ಲಿ ಹೆಚ್ಚಿನವರು ಉತ್ತರದೇಶದಿಂದ ಬಂದಿದ್ದೇವೆ. ನಿಮ್ಮ ತಮಿಳು, ಕನ್ನಡ ನಮ್ಮ ಬುರುಡೇಲಿ ಹೊಕ್ಕಲ್ಲ. ಸುಮ್ಮನೆ ನಮ್ಮನ್ನು ಕಾಡಬೇಡಿ" ಎನ್ನುತ್ತಾರೆ.

ಆದರೆ ದೇವರುಗಳು ಯಾವಾಗಲೂ ಮನುಷ್ಯಾಧೀನರು. ಇಂದಲ್ಲ ನಾಳೆ ಅವರು ಮನುಷ್ಯನ ಇಚ್ಛೆಗೆ ತಲೆವಾಗಲೇಬೇಕು. ನಮ್ಮ ಸಿವಿಲ್ ಸರ್ವಿಸ್ ಮಾನ್ಯ ಮಂತ್ರಿಗಳ ಇಚ್ಛೆಗೆ ತಲೆವಾಗಲೇಬೇಕಾದ ಹಾಗೆ. ತಿರು ಕರುಣಾನಿಧಿ ಯವರಿಗೆ ಇದು ಗೊತ್ತು. ಅವರು ತಮಿಳುದೇಶದ ದೇವರಿಗೆಲ್ಲಾ ನೋಟೀಸು ಕೊಟ್ಟಿದ್ದಾರೆ: "ನೀವು ಕೂಡಲೇ ತಮಿಳನ್ನು ಕಲಿತು ತಮಿಳಿನಲ್ಲಿ ಹೇಳಿದ ಮಂತ್ರಗಳಿಗೆ ಫಲವನ್ನು ಕೊಡಲು ಒಪ್ಪಿದಿರೋ ನಿಮಗೆ ಕ್ಷೇಮ. ಇಲ್ಲದಿದ್ದರೆ ನಿಮ್ಮನ್ನೆಲ್ಲ ಉತ್ತರ ಭಾರತಕ್ಕೆ ಓಡಿಸಿ ಬಿಡುತ್ತೇನೆ. ನಮ್ಮ ಭಾಷೆ ಬಾರದ

ದೇವರು ನಮಗೆ ಬೇಡ. ನಿಮ್ಮ ಪೂಜಾರಿಗಳು ನಮ್ಮಿಂದ ದಕ್ಷಿಣೆಯನ್ನು ಸ್ವೀಕರಿಸಿ ನಿಮಗೆ ಏನು ಪ್ರಾರ್ಥನೆ ಮಾಡುತ್ತಾರೆಂದು ನಮಗೆ ಅರ್ಥವಾಗಬೇಕು. ನಾವು ತಮಿಳರು. ನಿಮ್ಮ ಹೊಟ್ಟೆ ಹೊರೆಯುವವರು ನಾವು. ಆದ್ದರಿಂದ ನಿಮ್ಮ ಭಾಷೆ ನಾವು ಕಲಿಯಬೇಕೆಂದು ನೀವು ನಿರೀಕ್ಷಿಸಬಾರದು. ಈ ಬಗ್ಗೆ ನೀವು ಕೋರ್ಟಿಗೇನಾದರೂ ಹೋದಿರೋ ನಿಮ್ಮ ಗುಡಿಗಳನ್ನೇ ಕಿತ್ತು ಹಾಕುತ್ತೇವೆ. ಜಾಗ್ರತೆ!"

ಬಡ ದೇವರುಗಳು! ಅವರೇನು ಮಾಡಬಲ್ಲರು! ಯಾವಾಗಲೂ ಅವರು ರಾಜಾಶ್ರಯದಲ್ಲಿ ಬಾಳಿದ್ದಾರೆ. ಸ್ವತಂತ್ರವಾಗಿ ತಮ್ಮ ಅನ್ನವನ್ನು ಅವರು ಗಳಿಸಲಾರರು. ಉತ್ತರ ಭಾರತಕ್ಕೆ ಹೋಗುವುದೂ ಅವರಿಗೆ ಸಾಧ್ಯವಿಲ್ಲ. ವಿಂಧ್ಯಪರ್ವತಗಳನ್ನೇರುವಷ್ಟು ತ್ರಾಣ ಅವರಿಗೆ ಉಳಿದಿಲ್ಲ. ಮೇಲಾಗಿ ತಮಿಳು ಜನ ಅವರಿಗೆ ಬೇರೆಯೆ ನಾಲಿಗೆ ರುಚಿಯನ್ನು ಕಲಿಸಿಬಿಟ್ಟಿದ್ದಾರೆ. ಆ ಪೊಂಗಲ್, ಆ ಪುಳಿಯೋಗರೆ, ಆ ಮೊಳಗು ಪಡೆ ಇವುಗಳನ್ನೆಲ್ಲ ಉತ್ತರ ಭಾರತದಲ್ಲಿ ಅವರಿಗೆ ಯಾರು ಒದಗಿಸಬೇಕು? ಉತ್ತರದವರು ಅಡಿಗೆಯ ವೈವಿಧ್ಯದಲ್ಲಿ ಯಾವಾಗಲೂ ಅಷ್ಟಕ್ಕಷ್ಟೇ. ಅವರಿಗೆ ತಿಳಿಯುವುದು ಪೂರಿ, ಚಪಾತಿ, ಮತ್ತು ಸಿಹಿತಿಂಡಿಗಳು, ಎಲ್ಲಾ ಸಪ್ಪೆ, ಇಲ್ಲ ಸಿಹಿ. ಇಲ್ಲ ಇಲ್ಲ. ದಕ್ಷಿಣಕ್ಕೆ ವಲಸೆ ಬಂದ ದೇವರುಗಳು ಇನ್ನು ಆ ಉತ್ತರ ಭಾರತದ ತಿಂಡಿತೀರ್ಥಗಳಿಗೆ ಹೊಂದಿಕೊಳ್ಳುವುದು ಸಾಧ್ಯವೇ ಇಲ್ಲ. ಅದಕ್ಕೂ ಹೆಚ್ಚಾಗಿ ಅಲ್ಲಿಯ ಚಳಿಯ ಸುದ್ದಿಯನ್ನು ಕೇಳಿದರೇ ಇಲ್ಲಿ ಇವರು ನಡುಗುತ್ತಾರೆ. ಇವರು ತಮಿಳನ್ನು ಕಲಿಯಬೇಕಾಗುತ್ತದೆ.

ನನ್ನ ಸಲಹೆ ಕೇಳಿದರೆ ತಮಿಳು ನಾಡಿನ ದೇವರು ತಮಿಳನ್ನು ಕಲಿಯುವುದೇ ಒಳ್ಳೆಯದು. ಅವರಿಗದು ಸ್ವಲ್ಪ ಕಷ್ಟವಾಗಬಹುದು. ಉದಾಹರಣೆಗೆ ತಮಿಳರ ಮೂರು ರಕಾರಗಳು, ಎರಡು ಳಕಾರಗಳು ಎರಡು ನಕಾರಗಳು —ಸಂಸ್ಕೃತ ದೇವರ ನಾಲಗೆಗಳು ಎಂದೂ ಅವುಗಳನ್ನು ಉಚ್ಚರಿಸಲು ಕಲಿಯಲಾರವು. ತಮಿಳ್ ಶಬ್ದವನ್ನೇ ಸರಿಯಾಗಿ ಉಚ್ಚರಿಸುವುದಕ್ಕೆ ದೇವರಿಗೆ ಬಿಡಿ, ನನಗೆ ಕೂಡ ಇಂದಿಗೂ ಸಾಧ್ಯವಾಗಿಲ್ಲ. ಒಂದೋ ಅದು ತಮಿಷ್ ಆಗುತ್ತದೆ. ಇಲ್ಲವೇ ತಮಿಲ್ ಆಗುತ್ತದೆ. ಇನ್ನೂ ಪ್ರಯತ್ನಿಸಿದರೆ ತಮಿಸ್ರ್ ಆಗುತ್ತದೆ. ನಾನು ನಾಲಗೆಯನ್ನು ಮೇಲೆ ಸುರುಳಿಮಾಡಿ

ನೋಡಿದ್ದೇನೆ, ಕೆಳಗೆ ಸುರುಳಿಮಾಡಿ ನೋಡಿದ್ದೇನೆ. ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಸೂಚಿಸಿದಂತೆ ಡಕಾರವನ್ನು ಬೆಟ್ಟತ್ತಾಗುಚ್ಚರಿಸಿ ನೋಡಿದ್ದೇನೆ. ದ್ರಾವಿಡನೆನಿಸಿದ ನನಗೇ ಹೀಗಾದಮೇಲೆ ಆರ್ಯರಾದ ದೇವರುಗಳಿಗೆ ಹೇಗೆ ಸಾಧ್ಯವಾಗಬೇಕು? ಆದರೆ ದೇವತೆಗಳು ತಮಿಳುನಾಡಿನಲ್ಲಿ ಹೋಗಿ ನೆಲಸಿ ತಮಿಳು ಕಲಿಯಬೇಕಾದ ಕನ್ನಡಿಗರಿಗಿಂತ ಸುದೈವಿಗಳು. ಅವರು ಯಾವುದೇ ಶಬ್ದವನ್ನು ಉಚ್ಚರಿಸಬೇಕಾಗಿಲ್ಲ. ದೇವರು ಮಾತನಾಡಬೇಕೆಂದು ಯಾರೂ ನಿರೀಕ್ಷಿಸುವುದಿಲ್ಲ. ಒಂದು ವೇಳೆ ಮಾತನಾಡಲೇಬೇಕಾಯಿತೆಂದಿಟ್ಟುಕೊಳ್ಳಿ. ತಮಿಳು ಪೂಜಾರಿಗಳು ಸಂಸ್ಕೃತ ಅಕ್ಷರಗಳನ್ನು ಕೊಲೆ ಮಾಡಿದಷ್ಟು ಸಂಸ್ಕೃತ ದೇವರು ತಮಿಳು ಅಕ್ಷರಗಳ ಕೊಲೆ ಮಾಡಿಲಿಕ್ಕಿಲ್ಲವೆಂದು ನನಗನಿಸುತ್ತದೆ. ಆದ್ದರಿಂದ ದೇವರುಗಳು ಹೆದರತಕ್ಕದ್ದೇನೂ ಇಲ್ಲ.

ಕರುಣಾನಿಧಿಯವರಿಗೂ ನಾನೊಂದು ಮಾತು ಹೇಳಬಯಸುತ್ತೇನೆ. ದೇವರುಗಳನ್ನು ಅವರು ಸ್ವಲ್ಪ ಔದಾರ್ಯದಿಂದ ನಡೆಸಿಕೊಳ್ಳಬೇಕು. ಸರ್ಕಾರಿ ನೌಕರರಿಗೆ ಹಿಂದಿ ಅಥವಾ ತಮಿಳು ಕಲಿಯುವುದಕ್ಕೆ ಹೇಗೆ ಅವಧಿ ಕೊಡಲಾಗುತ್ತದೇ ಹಾಗೆ ಈ ದೇವರುಗಳಿಗೂ ತಮಿಳು ಕಲಿಯುವುದಕ್ಕೆ ಸ್ವಲ್ಪ ಪುರಸೊತ್ತು ಕೊಡಿ. ನಿಜ, ಪುರಸೊತ್ತು ಕೊಟ್ಟರೆ ಅಷ್ಟರೊಳಗೆ ದ್ರಾವಿಡ ಮುನ್ನೇಟ್ರ ಕಳಗ ಸರಕಾರವೇ ತಲೆಕೆಳಗಾದರೆ? ಆದರೆ ರಾಜಕಾರಣದಲ್ಲಿ ನಾವು ಚಾನ್ಸ್-ಮಿಸ್ ಚಾನ್ಸ್ ಎರಡನ್ನೂ ತೆಗೆದುಕೊಳ್ಳಬೇಕಾಗುತ್ತಲ್ಲವೆ? (೧೯೭೧)

## ಸಿಗರೇಟಿನ ಹೊಗೆ ವರ್ತುಲ ವರ್ತುಲ

"ನೇಟಿವ್ ವೈದ್ಯರು" ಎಂದು ತಿರಸ್ಕಾರ ಪೂರಿತ ಅಭಿಧಾನದಿಂದ ಕರೆಯಲ್ಪಡುವ ದೇಶೀ ಚಿಕಿತ್ಸಕರೆಂಬ ಆ ಅಭಿಪ್ರಾಣಿಗಳಿಗಿಂತ ಅಲ್ಲೋಪಥಿ ಡಾಕ್ಟರರು ಹೆಚ್ಚು ಜನಪ್ರಿಯರಾಗಲು, ಅವರು ರೋಗಿಯ ಚಟಗಳ ಬಗ್ಗೆ ಉದಾರಬುದ್ಧಿ ತೋರುವುದೇ ಮುಖ್ಯ ಕಾರಣ. ನೇಟಿವ್ ವೈದ್ಯರು, ಹಿಂದೂ ದೇವರಂತೆ, ತುಂಬಾ ಬಿಗಿ. ಉಪ್ಪನ್ನು ಕಿರಿಬೆರಳಲ್ಲಿ ಮುಟ್ಟಬಾರದ ಪಥ್ಯ, ಮೆಣಸಿನಕಾಯಿಯನ್ನು ಕಣ್ಣಲ್ಲಿ ನೋಡಬಾರದ ಪಥ್ಯ, ನಿಮ್ಮ ಪ್ರೀತಿಯ ಚಹವನ್ನೋ ಕಾಫಿಯನ್ನೋ ಒಯ್ದ ದಾರಿಯಲ್ಲಿ ಕೂಡ ನಲುವತ್ತೆಂಟು ತಾಸು

ಕಾಲ ನಡೆಯಕೂಡದೆಂಬ ಪಥ್ಯ—ಹೀಗೆ ಅವರ ಔಷಧ ಕುಡಿದ ಮೇಲೆ ನೀವು ಬದುಕಿಕೊಂಡರೂ ಪಥ್ಯದಿಂದಲೇ ನಿಮ್ಮನ್ನು ಹಣ್ಣು ಮಾಡುವವರು ನಮ್ಮ ವೈದ್ಯರು. ಅವರ ಪಥ್ಯವರ್ಣನೆಯನ್ನು ಕೇಳಿಯೇ ನೀವು, ಗರುಡ ಪುರಾಣದಲ್ಲಿನ ಪಾಪ ಪ್ರಾಯಶ್ಚಿತ್ತ ವಿಧಿಗಳ ಶ್ರವಣದಿಂದಾಗುವಂತೆ, ತತ್ತರಿಸಿ ಹೋಗುವಿರಿ. ಹಿಂದೂ ದೇವರ ರಾಜ್ಯದಲ್ಲಿ ನೀವು ಮಾಡಿದ ಕರ್ಮವನ್ನು ಅನುಭವಿಸಿಯೇ ತೀರಿಸಬೇಕಾಗುವಂತೆ, ನೇಟಿವ್ ವೈದ್ಯರ ಚಿಕಿತ್ಸೆಯಲ್ಲಿ ನೀವು ಕಟ್ಟಿಕೊಂಡ ರೋಗದ ಋಣವನ್ನು ಪಥ್ಯ ಮಾಡಿಯೇ ತೀರಿಸ ಬೇಕಾಗುವುದು.

ಅದೇ, ಆಲ್ಲೋಪಥಿ ಡಾಕ್ಟರನನ್ನು ಮೊರೆ ಹೊಕ್ಕಿರಿ; ಕ್ರೈಸ್ತ ದೇವ ರಂತೆ ಅವನೂ ಕ್ಷಮಾಶೀಲ ಎಂದು ಮನಗಾಣುವಿರಿ. ಎಹೋವನು ಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸಲೇಬೇಕೆಂದು ಉಕ್ಕಿನ ವಿಧಿಯಿಂದ ವಿಧಿಸುವುದಿಲ್ಲ—ಅವನ ಭಕ್ತರವುಟ್ಟಿಗಂತೂ. ಅಲೋಪಥಿಕನಾದರೂ ಅವನ ಫೀಯೊಂದನ್ನು ನೀವು ಸಲೀಸಾಗಿ ಸಲ್ಲಿಸುತ್ತಿದ್ದರೆ ನಿಮ್ಮಿಂದ ಪಥ್ಯರೂಪ ಪ್ರಾಯಶ್ಚಿತ್ತವನ್ನು ಅಪೇಕ್ಷಿಸುವುದಿಲ್ಲ. ನಿಮಗೆ ಕಾಫಿ ಪ್ರಿಯವಾಗಿದ್ದರೆ ಅದೇ ನಿಮಗೆ ಪಥ್ಯವೆಂದು ಅವನು ಮಂಜೂರು ಮಾಡುತ್ತಾನೆ. ಚಹಾ ಬೇಕಾ ಗಿದ್ದರೆ ನೀವು ಅದನ್ನೇ ಕುಡಿಯಬಹುದು. ಅಭ್ಯಾಸ ಬಿದ್ದದ್ದನ್ನು ಒಂದೇ ಹೊಡೆತಕ್ಕೆ ಪರಿತ್ಯಾಗ ಮಾಡುವುದು ಒಳ್ಳೇದಲ್ಲವೆಂದು ಕೂಡ ನಿಮಗೆ ಮನೋಹರವಾದ ಹಿತವಚನವನ್ನೇ ಹೇಳುತ್ತಾನೆ. ಸ್ವಾಭಾವಿಕವಾಗಿ, ಕ್ರೈಸ್ತ ದೇವರಂತೆ ಅಲೋಪಥಿಕನೂ ಹೆಚ್ಚು ಜನಪ್ರಿಯನಾಗಿದ್ದಾನೆ. ಅವನು ನಿಮಗೆ ನಿದ್ರೆಬಾರದಿದ್ದರೆ ನಿದ್ರೆಯ ಗುಳಿಗೆಗಳನ್ನು ಕೊಡುತ್ತಾನೆ. ನಿಮ್ಮ ಕೊರಳನ್ನೆ ಕೊಯ್ಯಬೇಕಾದರೂ ಮೊದಲು ನಿಮಗೆ ನೋವು ತಿಳಿಯ ದಂತೆ ಮಾರ್ಫಿಯಾನೋ ಮತ್ತೇನೋ ಕೊಟ್ಟು ಆ ಮೇಲೆಯೆ ನಿಮ್ಮನ್ನು ಸಾಗಹಾಕುತ್ತಾನೆ. ಎರಡೂ ದೇವರು ನಿಮ್ಮನ್ನು ಮೃತ್ಯುವಿನಿಂದ ಉಳಿಸುವು ದಿಲ್ಲ ಹೇಗೋ ಹಾಗೆ ಈ ಇಬ್ಬರು ಚಿಕಿತ್ಸಕರೂ, ಸಾವಿನಿಂದ ಕಾಪಾಡುವು ದಿಲ್ಲ. ಅಂದ ಮೇಲೆ, ತಿನ್ನದೆ ಸಾಯಿ ಅನ್ನುವವನಿಗಿಂತ ತಿಂದು ಸಾಯಿ ಎಂದು ಲೈಸನ್ಸ್ ಕೊಡುವವನೇ ವಾಸಿ ಅಲ್ಲವೆ?

ಇದೆಲ್ಲ ವಿಚಾರಲಹರಿ ಹೇಗೆ ಕೆರಳಿತೆಂದರೆ, ಮೊನ್ನೆ ಒಬ್ಬ ಕ್ಷಯರೋಗ

ತಜ್ಞರು ಸಿಗರೇಟು ಸೇದಲು ನಿಮಗೆ—ಕ್ಷಯರೋಗಿಗಳಾಗಿದ್ದರೂ—ಪೂರ್ಣ ಲೈಸನ್ಸು ಕೊಟ್ಟುಬಿಟ್ಟಿದ್ದಾರೆ. ಇನ್ನು ಮೇಲೆ ನಿಮ್ಮ ಶ್ವಾಸಕೋಶಕ್ಕೆ ಹೊಗೆ ಹತ್ತೀತೆಂಬ ಅಂಜಿಕೆಯಿಂದ ನೀವು ಸಿಗರೇಟು ಸೇದಲು ಹಿಂಜರಿಯಬೇಕಾಗಿಲ್ಲ. ನಿಮ್ಮನ್ನು ಏನಾದರೂ ತಡೆಯುತ್ತಿದ್ದರೆ ಅದು ಕೇವಲ ನಿಮ್ಮ ಜೇಬಿನ ಸದ್ಯದ ಪರಿಸ್ಥಿತಿ ಅಥವಾ ನಿಮಗೆ ಉದ್ದರಿ ಕೊಡುವ ಸಿಗರೇಟಂಗಡಿಯಲ್ಲಿನ ನಿಮ್ಮ ಪತ್ತಿನ ಮಿತಿಯೇ ಇರಬೇಕಲ್ಲದೆ ನಿಮ್ಮ ಆರೋಗ್ಯದ ಭೀತಿಯಾಗಲಾರದು. ಸಿಗರೇಟು ಭಕ್ತರು ಈ ಮಾತಿನಿಂದ ಇನ್ನಷ್ಟು ಧೈರ್ಯಗೊಳ್ಳಬಹುದು. ನಿಮ್ಮ ಕೈಯಲ್ಲಿದ್ದ ಸಿಗರೇಟಿನ ಉರಿಯುವ ತುಂಡನ್ನು ಕಸಿದೊಗೆದು ಮಹತ್ತಾದ ಪತಿಸೇವೆ ಮಾಡಿದೆನೆಂದು ಇನ್ನು ನಿಮ್ಮ ಪ್ರಿಯಕರಿ ಸಮಾಧಾನ ಪಟ್ಟುಕೊಳ್ಳುವಂತಿಲ್ಲ.

ಕರ್ಮಗಳಲ್ಲಿ ನಿಷ್ಕಾಮ ಕರ್ಮವೇ ಶ್ರೇಷ್ಠವಾಗಿರುವಂತೆ, ಚಟಗಳಲ್ಲಿ ಹೊಗೆ ಬಿಡುವ ಚಟವೇ ಚಕ್ರವರ್ತಿ. ಚಹಾ, ಕಾಫಿಗಳ ಚಟ ಕಾಮ್ಯ ಕರ್ಮದಂತೆ "ಸೆಕೆಂಡ್‌ರೇಟ್"—ದುಯ್ಯಂ ಅಥವಾ ಗೌಣಮಾರ್ಗ. ಯಾಕೆಂದರೆ, ಅವುಗಳಲ್ಲಿ ಚಟಾನಂದದ ಸಂಗಡ ಹೊಟ್ಟೆಯನ್ನೂ ತುಂಬಿಸಿ ಕೊಳ್ಳುವ ಮತ್ತು ಹಾಲಿನ ಮತ್ತು ಸಕ್ಕರೆಯ ಸಮಾವೇಶದಿಂದ ಪುಷ್ಟಿ ಯನ್ನೂ ದೊರಕಿಸಿಕೊಳ್ಳುವ ಕಾಮಭಾವನೆಯ ಮಿಶ್ರಣವಿದೆ. ಕರ್ನಾಟಕದ ಬಹುಭಾಗದಲ್ಲಿ ಮದ್ಯ ಪ್ರತಿಬಂಧವಿರುವಾಗ, ಸುರಾನಂದದ ಕಾಮ್ಯತೆ ನಿಷ್ಕಾಮತೆಗಳ ಚರ್ಚೆ ವ್ಯರ್ಥವೇ ಸೈ. ಆದರೆ ಅದರಲ್ಲೂ ಕೆಲ ಬಿ-ಜೀವಾತು ಗಳ ಇರುವಿನ ಶಕ್ಯತೆ ಇರುವುದರಿಂದ ಅದು ಕಾಮ್ಯದ ಸಾಲಿಗೇ ಸೇರಿತು. ಆದರೆ ಹೊಗೆಯ ಚಟಾನಂದ ಬೇರಾವ ದೈಹಿಕ ಆವಶ್ಯಕತೆಗಳ ಸಂತೃಪ್ತಿಯ ಉದ್ದೇಶದಿಂದಲೂ ಕಲುಷಿತವಾಗದ ಕೇವಲಾನಂದ. ಆಧುನಿಕ ಕವಿಗಳು ಈ ಬ್ರಹ್ಮಾನಂದ(ಜ್ಯೇಷ್ಠ) ಸೋದರನನ್ನು ಕುರಿತು ಹಾಡಿದ್ದಾರೆ. ಗೋಪಾಲ ಕೃಷ್ಣ ಅಡಿಗರು "ಸಿಗರೇಟಿನ ಹೊಗೆ ವರ್ತುಲ ವರ್ತುಲ ಧೂಪ ಧೂಮ ಮಾಲೆ—" ಎಂದು ಹಾಡಿದಾಗ, ವೈದಿಕ ಋಷಿಗಳು, "ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ" ಎಂದು ಅಥವಾ ಉಮರನು ತನ್ನ ಒಸಗೆಯಲ್ಲಿ, "ಹಾ ತುಂಬು ಬಟ್ಟಲನು—" ಎಂದು ಹಾಡಿದಾಗಿನಿಗಿಂತ ಒಂದು ತೂಕ ಹೆಚ್ಚಿನ ಆನಂದೋನ್ಮಾದವೇ ವ್ಯಕ್ತವಾಗುತ್ತದೆ.

ನಿರುದ್ಯೋಗಿಗಳಿಗೆ ಋತು ಸಂಹಾರ (ಶ್ರೀರಂಗರ ಕ್ಷಮೆ ಬೇಡಿ !) ಮಾಡಲು ಹೇಗೋ ಹಾಗೆಯೇ ಉದ್ಯೋಗಿಗಳಿಗೆ ಉದ್ಯೋಗದ ನರಕದಿಂದ ಮಾನಸಿಕ ಕೆಲ ಕ್ಷಣಗಳ ಸ್ವಾತಂತ್ರ್ಯವನ್ನು ಅನುಭವಿಸಲು ಸಿಗರೇಟು ಮತ್ತು ಅದರ ಸಗೋತ್ರಿಗಳಾದ ಬೀಡಿ ಚುಟ್ಟಾದಿಗಳು ನೆರವಾಗುತ್ತವೆ. ನಿರ್ಜನ ಪ್ರದೇಶ ದಲ್ಲಿ ಕಾಲ ಮೇಲೆ ಕಾಲು ಹಾಕಿ ಕುಳಿತು ಸಿಗರೇಟು ಹೊತ್ತಿಸಿ ಒಂದು ದಂ ಎಳೆದು, ಒಮ್ಮೆ ದಂ-ಪತಿಯಾಗಿ, ಕೆಲ ಸೆಕೆಂಡು ಶ್ವಾಸ ಬಂಧ ಮಾಡಿ, ಮತ್ತೆ ಮೂಗಿನ ಹೊರಳೆಗಳಿಂದ ಹೊಗೆ ಬಿಟ್ಟು ಅದರ ಚಿತ್ರ ವಿಚಿತ್ರ ಊರ್ಧ್ವಗತಿಯನ್ನು ಅರೆ ಮುಚ್ಚಿದ ಕಣ್ಣುಗಳಿಂದ ಅವಲೋಕಿಸುತ್ತ ವಿಚಾರಲಹರಿಯನ್ನು ತೇಲಬಿಡುವ ನಿರ್ವಿಕಾರ ಆನಂದವನ್ನು ಬಲ್ಲವನೇ ಬಲ್ಲ. ಹೊಗೆಯ ಸುಳಿಗಳು ಒಮ್ಮೆ ನಿಮ್ಮ ಪ್ರೇಯಸಿಯ ಮುಂಗುರುಳುಗಳಂತೆ ಭಾಸ ವಾಗಬಹುದು, ಇನ್ನೊಮ್ಮೆ ಅವಳ ಹುಸಿ ಮುನಿಸಿನಂತೆ ಅಥವಾ ಅವಳ ಚಿತ್ತದಂತೆ ಕ್ಷಣಪರಿವರ್ತಿಯಾಗಿ ಗೋಚರಿಸಬಹುದು ; ಶರತ್ಕಾಲದ ಗರಿ ಮೋಡಗಳ ಮರಿಗಳನ್ನೇ ನೀವು ನಿಮ್ಮ ಮುಖದಿಂದ ಸೃಷ್ಟಿಸುತ್ತಿರುವುದಾಗಿ ಕಲ್ಪಿಸಿಕೊಳ್ಳಬಹುದು ; ಮನುಷ್ಯಜೀವನವೇ ಈ ಧೂಮಮಾಲೆಯಂತೆ ಚಂಚಲವಲ್ಲವೇ ಎಂದು ವಿರಕ್ತ ತಾತ್ತ್ವಿಕತೆಯನ್ನು ಮೆಲುಕಾಡಿಸಬಹುದು. (ಇದನ್ನು ಧೂಮ ವೈರಾಗ್ಯವೆಂದು ಕರೆಯಲಡ್ಡಿಯಿಲ್ಲ).

ವಾಸ್ತವಿಕವಾಗಿ, ಜೀವಂತವಿರುವಾಗಲೇ ನಿಮ್ಮ ಹೊಗೆಯನ್ನು ನೀವೇ ನೋಡಬೇಕೆಂದು ಬಯಸುತ್ತಿದ್ದರೆ ಧೌಮ್ಯರ್ಷಿ ನಿರ್ಮಿತವಾದ ಈ ಚೋಟುದ್ದದ ಇಂಧನಯಷ್ಟಿಯೊಂದರಿಂದಲೇ ಸಾಧ್ಯ. ನಿಮ್ಮೊಳಗಿನದು ಯಾವುದೋ ಒಂದು ಸುಟ್ಟು ಹೊಗೆ ಬಿಡುವುದನ್ನು ನೀವು ಕಾಣುವಿರಿ ; ಆದರೂ ನಿಮಗೆ ಲೇಶವೂ ಕ್ಲೇಶವೆನಿಸುವುದಿಲ್ಲ. ಇದರ ರಹಸ್ಯವೇನು ? ನಿಮ್ಮೊಳಗೆ ಸುಡುತ್ತಿರುವುದು ಮತ್ತೇನಲ್ಲ—ನಿಮ್ಮ ಚಿಂತೆ, ನಿಮಗಾಗಿರ ಬಹುದಾದ ಅವಮಾನ, ನಿಮ್ಮಲ್ಲಿ ಜನಿಸಿರಬಹುದಾದ ಪ್ರತೀಕಾರ ಬುದ್ಧಿ. ಆದ್ದರಿಂದಲೇ ನಿಮ್ಮ ಸಿಗರೇಟು ಮುಗಿಯುವಷ್ಟರಲ್ಲಿ ಏನೋ ಒಂದು ಹಗುರ ತನ, ಒಂದು ಬಂಧ ವಿಮೋಚನೆಯ ಭಾವನೆ ಮೂಡಿರುತ್ತದೆ. ನಿಮ್ಮ ತಲೆ ತಂಪಾಗಿರುತ್ತದೆ. ಬಿಸಿಯಾದದ್ದರ ಸಂಸರ್ಗದಿಂದ ತಂಪು ಹುಟ್ಟಿಸುವುದು ಸಿಗರೇಟೊಂದರಿಂದಲೇ ಇರಬೇಕು. "ನಿನ್ನ ಹೊಗೆ ನೋಡಿದ ಮೇಲೆಯೆ ನನಗೆ

ಶಾಂತಿ !" ಎಂದು "ಛಲದಿಂದಂ ಪೂರ್ಣ್ದ ಪೂರ್ಣ್ಕೆ"ಯನ್ನು ಜಾರಿಗೆ ಹೇಗೆ ತರ ಲೆಂದು ಚಿಂತಿಸುತ್ತಿರುವ ನಿಮ್ಮ ಶತ್ರುಗಳು ಒಂದು ನಾಣ್ಯದ ವೆಚ್ಚದಿಂದ ಒಂದು ಆನೆ ಛಾಪಿನ ಬಿಳೀ ಬತ್ತಿಯನ್ನು ನಿಮಗೆ ಕೊಡಿಸಿ ತಮ್ಮ ಭೀಷ್ಮ ಪ್ರತಿಜ್ಞೆಯನ್ನು ಅಹಿಂಸಾತ್ಮಕವಾಗಿ ಪೂರೈಸಿಕೊಳ್ಳಬಹುದು.

"ಕತೋ ಅಜಾನಾರೇ ಜಾನಾಯಿಲೇ ತುಮಿ ಕತೋ ಘರೇ ದಿಲೇ ಠಾಯಿ ....ಪರಕೇ ಕರಿಲೇ ಭಾಯಿ...." (ಅರಿಯದವರನ್ನೆಷ್ಟೋ ಗುರುತು ಮಾಡಿಸಿದೆ ನೀ, ಎಷ್ಟೋ ಮನೆಯಲಿ ನನಗೆ ಇಂಬು ಕೊಟ್ಟೆ; ದೂರದಲ್ಲಿದ್ದವರ ಸನಿಹಕ್ಕೆ ತಂದಿಟ್ಟೆ, ಪರರನ್ನು ನನ್ನವರ ಮಾಡಿಬಿಟ್ಟೆ, ಎಂದು ಕವೀಂದ್ರ ರವೀಂದ್ರರು ಹಾಡಿದ್ದು ಹೊಗೆ ಬತ್ತಿಯನ್ನು ಕುರಿತೇ ಇರಬೇಕೆಂದು ಲಾಂಗೂಲಾಚಾರ್ಯರಿಗೆ ಸಂಶಯವಿದೆ. ಯಾಕೆಂದರೆ, ಒಂದರ್ಧ ಬೀಡಿಯನ್ನು ಬಾಯಲ್ಲಿಟ್ಟುಕೊಂಡು, "ಕಡ್ಡಿಪೆಟ್ಟಿಗೆ ಉಂಟೇ" ಎಂದು ಎಂಥಾ ಅಪರಿಚಿತನನ್ನೂ ಕೇಳಿ ಪರಿಚಯ ಮಾಡಿಕೊಳ್ಳಬಹುದು. ಈ ಧೂಮ ಸ್ನೇಹದಂಥ ಸ್ನೇಹ ಬೇರೊಂದಿಲ್ಲ. ಒಬ್ಬನ ಹೊತ್ತಿಸಿದ ಸಿಗರೇಟಿನ ತುದಿಯಿಂದ ಇನ್ನೊಬ್ಬನು ತನ್ನ ಸಿಗರೇಟು ಹೊತ್ತಿಸಿಕೊಂಡನೆಂದರೆ ಅದು ಅಗ್ನಿ ಸಾಕ್ಷಿಕ ಸ್ನೇಹವೇ ಆಗಿಬಿಡುವುದು.

## ನಾನು ಯಾರು ?

"ನಾನು ಯಾರು ?" ಎಂಬ ಪ್ರಶ್ನೆ ನಿಮ್ಮನ್ನು ಎಂದಾದರೂ ಬಾಧಿಸಿದೆಯೆ ? ಇಲ್ಲ ? ನನ್ನನ್ನು ಬಾಧಿಸುತ್ತಲೇ ಇದೆ.

ಇಲ್ಲ, ಇಲ್ಲ. ನಾನೇನೂ "ಕೋಽಹಂ ಕುತ ಆಯಾತಃ ?" ಎಂದು ಕೇಳುತ್ತ ತಿರುಗುವ ತತ್ತ್ವಜ್ಞಾನಿಯಾಗಲೀ ವೇದಾಂತಿಯಾಗಲೀ ಅಲ್ಲ. ಅಥವಾ ಒಂದು ಬೆಳಗ್ಗೆ ತಾನು ಯಾರು ಎಂಬುದನ್ನು ಮರೆತುಬಿಟ್ಟ ಪ್ರೊಫೆಸರನೂ ಅಲ್ಲ. ಇಲ್ಲವೆ ಒಂದು ದಿನ ಹೆಂಡತಿಯಿಂದ ಮಂಗಳಾರತಿ ಮಾಡಿಸಿಕೊಂಡು ಮನೆಯಿಂದ ಹೊರಬಿದ್ದು ಮಾರ್ಕೆಟು ತಲುಪುವ ಮೊದಲೇ ಆನ್ಮೇಶಿಯಾಕ್ಕೆ ಒಳಗಾಗಿ ತಾನಾರೆಂಬುದನ್ನು ಕ್ಲೀನಾಗಿ ಮರೆತುಬಿಟ್ಟು ಮನೆಗೆ ಮರಳದಿರುವ ಆ ಅಪ ರೂಪ ಸುಖಿ ಜೀವಿಗಳಲ್ಲಿ ನಾನೊಬ್ಬನಲ್ಲ. ನಾನು ನಿಮ್ಮ ಹಾಗೆಯೇ ನಾರ್ಮಲ್ ಮನುಷ್ಯ ಅಂತ ತಿಳಿದುಕೊಂಡಿದ್ದೇನೆ. ಅಂದರೆ ನಿಮ್ಮ ಹಾಗೆ

ನಾನೂ ನನ್ನ ತಪ್ಪುಗಳನ್ನೆಲ್ಲಾ ದೇವರಿಗೆ ಸಮರ್ಪಿಸಿ ಒಪ್ಪುಗಳನ್ನು ನಾನೇ ಇಟ್ಟುಕೊಳ್ಳುವ ಪ್ರಾಕ್ಟಿಕಲ್ ವೇದಾಂತಿ. ನನ್ನ ಮರೆವು ಕೂಡ ಪ್ರೊಫೆಸರರ ಮಟ್ಟದ್ದಲ್ಲ; ನನಗೆ ಸಾಲ ಕೊಟ್ಟವರ ಮುಖಪಂಕಜದ ಗುರುತನ್ನು ಮಾತ್ರ ನಾನು ಆಗಾಗ್ಗ ಮರೆತುಬಿಡುವುದುಂಟು. ಅದೇ ಪ್ರಕಾರ ನನ್ನ ಬೆಟರ್-ಹಾಫಿನ ವಾಗ್ಬಾಣಗಳು ಈ ಕಿವಿಯಿಂದ ಒಳಹೊಕ್ಕರೆ ಅದು ನನ್ನ ಮಿದುಳನ್ನು ತಲುಪುವ ಮೊದಲೇ ಆ ಕಿವಿಯಿಂದ ಹೊರಬಿಟ್ಟು ನಾನು ನನ್ನ ಮಿದುಳಲ್ಲಿ ಅನಾವಶ್ಯಕವಾಗಿ ಕಂಜೆಶ್ಚನ್ ಆಗುವುದನ್ನು ಯಶಸ್ವಿಯಾಗಿ ತಪ್ಪಿಸಿಕೊಳ್ಳುತ್ತೇನೆ. ಆದರೂ ನಾನು ಯಾರು ಎಂಬ ಪ್ರಶ್ನೆ ನನ್ನನ್ನು ಪೀಡಿಸುತ್ತಲೇ ಇರುವುದು ಸತ್ಯ. ಒಂದು ಮಾತಂತೂ ಖಂಡಿತ. ನಾನು ನಾನಲ್ಲ; ಮತ್ತೆ ಯಾರು ಬೇಕಾದರೂ ಆಗಿರಬಹುದು.

ತೊಂದರೆ ಪ್ರಾರಂಭವಾದದ್ದು ನಾನು ಹದಿನೇಳು ವರ್ಷದವನಾಗಿದ್ದಾಗ. ನನ್ನ ದೂರದ ಅಜ್ಜಿಯೊಬ್ಬರು ಯಾವುದೋ ಊರಿನಲ್ಲಿದ್ದವರು ನಮ್ಮ ಮನೆಗೆ ಪ್ರಥಮ ಸಲ ಬಂದವರು ಪ್ರಥಮ ಸಲ ನನ್ನ ಮೇಲೆ ತಮ್ಮ ದಪ್ಪ ಕನ್ನಡಕಾಂತರ್ಗತ ದೃಷ್ಟಿಗಳನ್ನು ಚೆಲ್ಲಿದವರೇ "ಆಂ!" ಎಂದರು. ಗಾಬರಿಯಿಂದ ನನ್ನ ತಾಯಿ ಏನಾಯಿತೆಂದು ಪ್ರಶ್ನಿಸಿದರು. "ಅಲ್ಲಾ, ಇವ ನಿನ್ನ ಮಗನಲ್ಲವೆ? ನನಗೆ ಇವನನ್ನು ನೋಡಿದ ಕೂಡಲೇ ಒಂದು ಸಲ ಪುಟ್ಟಣ್ಣನೇ ನನ್ನ ಮುಂದೆ ಬಂದು ನಿಂತ ಹಾಗಾಯಿತು!" ಎಂದು ಉದ್ಗರಿಸಿ ಆ ಮೇಲೆ ಸೆರಗಿನಿಂದ ಕಣ್ಣುಜ್ಜಿಕೊಳ್ಳುತ್ತಾ "ನಾನು ಕಣ್ಣಾರೆ ಅವನನ್ನು ಚಟ್ಟದಲ್ಲಿ ಕಟ್ಟಿ ಒಯ್ಯುವುದನ್ನು ನೋಡಿರದಿದ್ದರೆ ಅವನೇ ಇಲ್ಲಿ ನಿಂತಿದ್ದಾನೆ ಅಂತ ನಂಬುತ್ತಿದ್ದೆ. ಈ ವಯಸ್ಸಿನಲ್ಲಿ ನಮ್ಮ ಪುಟ್ಟಣ್ಣ ಥೇಟ್ ಹೀಗೇನೇ ಇದ್ದ. ಅದೇ ಮೂಗು, ಅದೇ ಕಣ್ಣು, ಅದೇ ಬಾಯಿ; ಹಲ್ಲು ಕೂಡ ತತ್‌ಪ್ರತಿ" ಅಂತ ಹೇಳಿ ನನ್ನನ್ನು ಬೋಳೈಸಿ ಲಟಿಕೆ ಮುರಿದರು. ನಾನು ನನ್ನ ತಂದೆಯ ನೊಣಪ್ರತಿ ಎಂಬುದನ್ನು ನಮ್ಮ ಅಜ್ಜಿಯಿಂದ ಕೇಳಿ ನಮ್ಮ ತಾಯಿಗೆ ಸಂತೋಷವಾದಷ್ಟು ನನಗೆ ಆಗಲಿಲ್ಲ. ನಾನು ನಾನೇ ಅಂತ ಗಟ್ಟಿಯಾಗಿ ನಂಬಿಕೊಂಡಿದ್ದ ನನಗೆ ಇದು ಪ್ರಥಮ ಶಾಕ್ ಆಗಿತ್ತು. ಅವೊತ್ತಿನಿಂದ ನಾನು ನನ್ನಪ್ಪನಾಗಿ ಮಾತ್ರವಲ್ಲ, ನನ್ನ ಉಭಯಕುಲ ಜ್ಞಾತಾಜ್ಞಾತ ಪೂರ್ವಜರಾಗಿ ಮಾತ್ರವಲ್ಲ, ಇನ್ನೂ ಯಾರ್ಯಾರಾಗಿಯೋ

ಮುಂದಿಗೆ ಕಾಣುತ್ತ ಬಂದಿದ್ದೇನೆ.

ನನ್ನಜ್ಜಿ ನನ್ನನ್ನು ನನ್ನಪ್ಪನೆಂದು ತಪ್ಪು ತಿಳಿದ ಕೆಲವೇ ದಿನಗಳಲ್ಲಿ ನನ್ನನ್ನೊಬ್ಬ ಮುದುಕರು ಬೀದಿಯಲ್ಲಿ ನಿಲ್ಲಿಸಿ, ಹಾವು ತನ್ನ ಬೇಟೆಯನ್ನು ನೋಟದಿಂದ ಸ್ತಂಭಿಸುವ ಹಾಗೆ ನನ್ನನ್ನು ಸ್ತಂಭಿಸಿ "ಏನಯ್ಯಾ, ನೀನು ರಂಗೇಗೌಡನ ಮಗನಲ್ಲವೆ?" ಎಂದು ಪ್ರಶ್ನಿಸಿ, ಅಲ್ಲವೆಂದು ಹೇಳುವುದಕ್ಕೂ ನನಗೆ ಅವಕಾಶಕೊಡದೆ ಮುಂದುವರಿಸಿದರು: "ಈ ಮುದುಕನ ಕಣ್ಣು ಎಂದೂ ಮೋಸಹೋಗುವುದಿಲ್ಲ. ನನ್ನ ಮೂವತ್ತೈದು ವರ್ಷದ ಮೇಷ್ಟ್ರಿಕೆಯಲ್ಲಿ ನನ್ನ ಬೆತ್ತದ ರುಚಿ ಕಂಡ ಪ್ರತಿಯೊಬ್ಬ ಶಿಷ್ಯನನ್ನು (ಅದರ ರುಚಿ ಕಾಣದೆ ನನ್ನ ಶಾಲೆಯಿಂದ ಪಾರಾದವರು ಯಾರೂ ಇಲ್ಲ—ನೆನಪಿಟ್ಟುಕೋ) ಎಷ್ಟು ವರ್ಷಗಳ ನಂತರವೂ ನಾನು ಗುರುತುಹಿಡಿಯುತ್ತೇನೆ ಮಾತ್ರವಲ್ಲ, ಪ್ರತಿಯೊಬ್ಬನ ಮಕ್ಕಳನ್ನೂ ನೋಡಿದ ಕೂಡಲೇ ಇವನು ಇಂಥವನ ಮಗನೇ ಅಂತ ಹದಿನಾರಾಣೆ ಸರಿಯಾಗಿ ಗುರುತಿಸಿದ್ದೇನೆ. ನನ್ನ ದೃಷ್ಟಿಗೆ ಅಪೀಲೇ ಇಲ್ಲ!" ಎಂದರು. ಆ ಮೇಲೆ "ಹೇಗಿದ್ದಾನೆ ಈಗ ರಂಗೇಗೌಡ? ಭಲೇ ತುಂಟ ಕಣೋ. ವಾರಕ್ಕೊಂದಾವರ್ತಿಯಾದರೂ ನನ್ನ ಜ್ಞಾನ ವೃಕ್ಷದ ಬೇರಿನ ಸ್ಪರ್ಶ ಸುಖ ಕಾಣದೆ ಅವನಿಗೆ ಸಮಾಧಾನವೇ ಇಲ್ಲ. ಆದರೂ ಒಳ್ಳೇ ಹುಡುಗ. ಈಗ ಏನು ಮಾಡ್ತಾ ಇದಾನೆ?" ಎಂದು ಕೇಳಿ, ಉತ್ತರವನ್ನು ನಿರೀಕ್ಷಿಸದೆ "ಎಲ್ಲಿ, ಈ ಚೀಲಾನ ಸ್ವಲ್ಪ ಬಸ್ ಸ್ಟಾಪಿನ ವರೆಗೆ ಹಿಡಕೋ, ಅಪ್ಪಾ—ಏನು ನಿನ್ನ ಹೆಸರು? ಈಗ ಮುದುಕನಾಗಿ ಹೋಗಿದ್ದೇನೆ. ತರಕಾರಿ ಚೀಲಾ ಎತ್ತಿಕೊಳ್ಳೋಕ್ಕೂ ಕಷ್ಟವಾಗ್ತಾ ಇದೆ" ಎಂದು ಚೀಲವನ್ನು ನನಗೆ ಹಸ್ತಾಂತರಿಸಿದರು. ನಾನು ರಂಗೇಗೌಡರ ಮಗನಲ್ಲ ಅಂತ ಪ್ರೊಟೆಸ್ಟ್ ಮಾಡಿದರೆ ಏನೂ ಪ್ರಯೋಜನವಾಗಲಿಲ್ಲ. ಅವರಿಗೆ ಕಿವಿ ಏನೂ ಕೇಳಿಸುತ್ತಿರಲಿಲ್ಲ. ಆದರೆ ಅವರ ಮೇಷ್ಟ್ರಿಕೆಯ ದರ್ಪ ಎಷ್ಟಿತ್ತೆಂದರೆ ನಾನು ವಿಧೇಯತೆಯಿಂದ ಅವರ ಚೀಲವನ್ನು ಬಸ್‌ಸ್ಟಾಪ್ ತನಕ ಒಯ್ದು ಕೊಡಲೇಬೇಕಾಯಿತು.

ಮತ್ತೊಂದು ಸಲ ನನ್ನನ್ನೊಬ್ಬರು ಹಿಂದಿನಿಂದ ಬೆನ್ನು ತಟ್ಟಿ ನಿಲ್ಲಿಸಿದರು. ನಾನು ತಿರುಗಿ ನೋಡಿದೆ. ಜನ್ಮದಲ್ಲೇ ಅವರನ್ನು ನೋಡಿದ ಹಾಗಿರಲಿಲ್ಲ. ಆದರೆ ಅವರು, "ಏನಯ್ಯಾ ಗುರುತೇ ಸಿಗೋಲ್ಲವೋ? ಬಹು ದೊಡ್ಡ

ಮನುಷ್ಯನಾಗಿ ಹೋದೆ ಅಲ್ಲವ್ರೋ ? ನಾನು ಸುಬ್ರಾಯ ಕಮ್ತಿ. ತಿಳೀತಲ್ಲವ್ರೋ? ಕುಂದಾಪುರ ಬೋರ್ಡ್ ಹೈಸ್ಕೂಲಿನಲ್ಲಿ ಸಿಕ್ಸ್ತ್ ಫಾರ್ಮಿನಲ್ಲಿ ನಿನ್ನ ಕ್ಲಾಸ್ ಮೇಟ್ ಆಗಿದ್ದದ್ದು ನೆನಪಿಲ್ಲವ್ರೋ? ಈಗ ಎಲ್ಲಿದ್ದೀ? ಪಾದ್ರಿ ಆಗ್ತೇನೆ ಅಂತಿದ್ದಿಯಲ್ಲಾ ? ಏನು ಯಾರಾದರೂ ಜೂಲಿಯಟ್ ಗಂಟು ಬಿದ್ದಳೋ? ಬಾ ಬಾ ! ಎಲ್ಲಿಯಾದರೂ ಒಳ್ಳೇ ಕಾಫಿ ಸಿಗುತ್ತಾ ನೋಡುವಾ" ಅಂತ ನನ್ನ ಕೈ ಹಿಡಿದು ಎಳೆದುಕೊಂಡೇ ಹೊರಟ. ನಾನು, ಸುಬ್ರಾಯ ಕಮ್ತಿಯ ವಾಗ್ಧಾರೆಯನ್ನು ಹೇಗೋ ತಡೆದು ನಾನು ಅವನು ತಿಳಿದುಕೊಂಡ ವ್ಯಕ್ತಿಯಲ್ಲ, ಕುಂದಾಪುರದಲ್ಲಿ ನಾನು ಎಂದೂ ಕಾಲೇ ಇರಿಸಿರಲಿಲ್ಲ, ನಾನು ಪಾದ್ರಿಯಾಗಬೇಕೆಂದು ಎಂದೂ ಅಪೇಕ್ಷಿಸಿರಲಿಲ್ಲ, ನನಗೆ ದುರ್ದೈವದಿಂದ ಯಾವ ಜೂಲಿಯಟ್ಟೂ ಗಂಟುಬೀಳಲಿಲ್ಲ, ಒಂದು ಶುದ್ಧ ಅನ್‌ರೋಮ್ಯಾಂಟಿಕ್ ಬ್ರಾಹ್ಮಣ ಹುಡುಗಿಯನ್ನು ಕಟ್ಟಿಕೊಂಡಿದ್ದೇನೆಂದು ಮುಂತಾಗಿ ವಿವರಿಸಿ ನನ್ನ ನಿಜ ಐಡೆಂಟಿಟಿಯನ್ನು ಅವನಿಗೆ ಸಾಬೀತುಮಾಡಿ ತೋರಿಸಿದ ಮೇಲೆ ಅವನು ಅರೆಮನಸ್ಸಿನಿಂದಲೇ ತಪ್ಪು ಒಪ್ಪಿಕೊಂಡು "ಕ್ಷಮಿಸಿ ಆಚಾರ್ರೇ, ಆದರೆ ನೀವು ಥೇಟ್ ನನ್ನ ಕ್ಲಾಸ್‌ಮೇಟ್ ರೊಜಾರಿಯೋ ಫರ್ನಾಂಡೀಸನ ಹಾಗೆಯೇ ಕಾಣುತ್ತೀರಿ. ಅದೇ ಮೂಗು, ಅದೇ ಕಿವಿ, ಅದೇ ಕಣ್ಣು....ಒಳ್ಳೇ ಕೊಮೆಡಿ ಆಫ್ ಎರರ್ಸ್ ಆಗಿಹೋಯಿತು ನೋಡಿ ! ಕ್ಷಮಿಸಿ" ಎಂದು ಹೇಳಿದ. ಆದರೆ ನಾನು ರೊಜಾರಿಯೋ ಫರ್ನಾಂಡೀಸ್ ಆಗದೇ ಇದ್ದದ್ದಕ್ಕೆ ಅವನು ನನ್ನನ್ನು ಕ್ಷಮಿಸಿದ ಹಾಗೆ ಮಾತ್ರ ಕಾಣಲಿಲ್ಲ. ಆದರೆ ನನ್ನ ಕಿವಿಗಳಲ್ಲಿ ತೆಗೆದ ತೂತುಗಳನ್ನು ತೋರಿಸಿ ನಾನು ಕ್ರೈಸ್ತನಲ್ಲ ಅಂತ ಅವನಿಗೆ ನಿಸ್ಸಂದಿಗ್ಧವಾಗಿ ತೋರಿಸಿಕೊಟ್ಟದ್ದರಿಂದ ಅವನು ನಿರುಪಾಯನಾಗಿದ್ದ.

ಇದಾದ ನಂತರ ನಾನು ಬೇರೆ ಬೇರೆ ಜನರಿಗೆ ಹಮ್ಮದೆ ಬ್ಯಾರಿ, ಬಸ್ತ್ಯಂ ಡಿಸೋಜ, ನೀರದ ಮುಕರ್ಜಿ, ವಿನಾಯಕ ವಾಘ, ವೆಂಕೋಜಿ ಸರಭೋಜಿ, ಪೀತಾಂಬರ ದಾಸ, ಸಂಕಪ್ಪ ಸುವರ್ಣ, ಸುಬ್ರಹ್ಮಣ್ಯ ಶಾಸ್ತ್ರಿ, ಎಂ. ಆರ್. ಇ. ಎಸ್. ಎನ್. ಮುದಲಿಯಾರ್, ಭಾಷ್ಯಂ ಆಚಾರಿ ಮತ್ತು ಇತರ ಅಸಂಖ್ಯ ನಾಮರೂಪಗಳಲ್ಲಿ ಕಾಣಿಸಿಕೊಂಡಿದ್ದೇನೆ. ಮತ್ತೆ ನನಗೆ ಈ ಎಲ್ಲ ವ್ಯಕ್ತಿತ್ವಗಳನ್ನು ಆರೋಪಿಸಿದ ಎಲ್ಲ ಜನರಿಗೂ ನಾನು ಆ ವ್ಯಕ್ತಿಗಳಲ್ಲ ಎಂದು ಮನವರಿಕೆ ಮಾಡಿಕೊಡುವುದು ಸುಲಭವಾಗಿರಲಿಲ್ಲ. ಅವರಲ್ಲಿ ಕೆಲವರು

ನಾನು ಸುಳ್ಳೆ ನಾನೆಂದು ನಟಿಸುತ್ತಿರುವುದಾಗಿ ಭಾವಿಸಿದ್ದಾರೆ. ಒಬ್ಬಿಬ್ಬರಂತೂ "ಹೀಗೆ ತಪ್ಪಿಸಿಕೊಳ್ಳಬೇಡಯ್ಯಾ, ನಾನೇನು ನಿನ್ನ ಹತ್ತಿರ ಸಾಲ ಕೇಳೊಲ್ಲ" ಎಂದಾಗಲಿ "ನೀನೇನು ನನಗೆ ಕಾಫಿ ಕೊಡಿಸಬೇಕಾಗಿಲ್ಲ" ಎಂದಾಗಲಿ ಹಂಗಿಸಿದ್ದೂ ಉಂಟು. ಒಬ್ಬಾತನಂತೂ ಬೊಂಬಾಯಿಯಲ್ಲಿ, ನನ್ನನ್ನು ಶಾಮರಾಯ ಶೆಟ್ಟಿಯೆಂದು ಸಾಧಿಸಿ, ನಾನು ಅಲ್ಲಗಳೆದದ್ದಕ್ಕೆ ನಾನು ಅವನಿಂದ ಏನಾದರೂ ನಷ್ಟವಾದೀತೆಂದು ಭಯಪಡುವುದೇ ಕಾರಣವೆಂದು ನಂಬಿ, ನನ್ನ ಭಯ ನಿಷ್ಕಾರಣವೆಂದು ತೋರಿಸುವುದಕ್ಕಾಗಿ ನನ್ನನ್ನು ಹೋಟೆಲ್ಲಿಗೆ ಎಳೆದುಕೊಂಡು ಹೋಗಿ ಕಾಫಿ ತಿಂಡಿ ಕೊಡಿಸಿದ್ದೂ ಉಂಟು.

ಇವು ಪೂರ್ಣ ವ್ಯಕ್ತಿತ್ವಾಂತರದ ಉದಾಹರಣೆಗಳಾದವು. ನಾನು ಅಂಶತಃ ಬೇರೆ ವ್ಯಕ್ತಿಯಾದದ್ದಕ್ಕೆ ಲೆಕ್ಕವೇ ಇಲ್ಲ. ಒಂದು ಸಲ ಮಂಗಳೂರಿನಲ್ಲಿ ಯಾರೋ ಅರ್ಧ ಪರ್ಲಾಂಗು ದೂರದಿಂದ ಕೈತಟ್ಟಿ "ಹೋಯ್ ! ಹೋಯ್! ಓ ಇವರೇ !" ಎಂದು ಕೂಗುವುದು ಕೇಳಿ ತಿರುಗಿ ನೋಡಿದರೆ ಅವರು ಕೈ ಎತ್ತಿ ನನ್ನ ಕಡೆ ಓಡಿಬರುವುದು ಕಂಡೆ. ಹತ್ತಿರ ಬಂದ ಮೇಲೆ ಅವರು ನನ್ನನ್ನು ಆ ಪಕ್ಕದಿಂದೊಮ್ಮೆ ಈ ಪಕ್ಕದಿಂದೊಮ್ಮೆ ನೋಡಿ, ನಿರಾಶೆಯಿಂದ "ಓ ನೀವಲ್ಲ. ಏನನ್ಯಾಯ !" ಎಂದರು. ನಾನು "ಯಾಕೆ ಸ್ವಾಮಿ ಅಷ್ಟು ನೋಡಿಕೊಳ್ಳದೆ ದಾರಿಯಲ್ಲಿ ಹೋಗುವವರನ್ನು ಕೈತಟ್ಟಿ ನಿಲ್ಲಿಸೋದು ?" ಅಂತ ತುಸು ಕೋಪದಿಂದಲೇ ಕೇಳಿದೆ. ಅವರು "ನೋಡಿ ಸ್ವಾಮಿ, ನನ್ನದೇನೂ ತಪ್ಪಿಲ್ಲ. ಹಿಂದಿನಿಂದ ನೋಡುವಾಗ ನೀವು ನಮ್ಮ ವಕೀಲರ ಗುಮಾಸ್ತರ ಹಾಗೇ ಕಾಣುತ್ತೀರಿ. ಅವರದೇ ಹೇರ್‌ಕಟ್, ಅವರ ಹಾಗೆ ಕುತ್ತಿಗೆ, ಅವರ ಹಾಗೇ ನಡಿಗೆ ಕೂಡ—ಎಡಬದಿಗೆ ವಾಲಿಕೊಂಡು ನಡೆಯುತ್ತೀರಿ. ಕೋಟು ಕೂಡ ಅವರದ್ದೇ !" ಎಂದರು. ನಾನು ಕೋಪದಿಂದ "ಇದು ನನ್ನ ಸ್ವಂತ ಕೋಟು, ಹುಬ್ಬಳ್ಳೀಲಿ ಹೊಲಿಸಿಕೊಂಡದ್ದು" ಎಂದೆ. ಅವರು ಏನೂ ಪಶ್ಚಾತ್ತಾಪವಿಲ್ಲದೆ "ಇರಬಹುದು. ಆದರೆ ಅವರದ್ದರ ಹಾಗೇ ಉಂಟು" ಎಂದು ನನ್ನಿಂದ ತಮಗೆ ಏನೋ ದೊಡ್ಡ ಅನ್ಯಾಯವಾಗಿದೆ ಎಂಬ ಹಾಗೆ ಗೊಣಗುತ್ತ ಹೋಗಿಯೇಬಿಟ್ಟರು.

ಹಿಂದಿನಿಂದ ಮಾತ್ರವಲ್ಲ, ಎಡಪಕ್ಕದಿಂದ, ಬಲ ಪಕ್ಕದಿಂದ, ಉಪ್ಪರಿಗೆಯ ಬಾಲ್ಕನಿಯಿಂದ ನಾನು ಬೇರೆಯವರ ಹಾಗೆ ಕಾಣುತ್ತೇನೆ. ನಡಿಗೆಯಲ್ಲಿ,

ಓಟದಲ್ಲಿ, ಮಲಗಿದಲ್ಲಿ, ಕುಳಿತಲ್ಲಿ ನಾನು ಬೇರೆಯವರ ಹಾಗೆ ಕಾಣುತ್ತೇನೆ. ಒಂದು ಸಲವಂತೂ ನಾನು ಮನೆಯೊಳಗೆ ಯಾರೊಡನೆಯೋ ಗಟ್ಟಿ ದನಿಯಲ್ಲಿ ಮಾತನಾಡುತ್ತಿದ್ದಾಗ ಯಾರೋ ಒಬ್ಬ ಮಹನೀಯರು ಬಾಗಿಲುತಟ್ಟಿ ಒಳಗೆ ಬಂದು "ಸ್ವಾಮೀ, ವಿಠ್ಠಲರಾಯರನ್ನು ಸ್ವಲ್ಪ ಕರೀತೀರಾ ?" ಎಂದು ಕೇಳಿದರು. ನಾನು ವಿಠ್ಠಲರಾಯರೆಂಬವರು ಈ ಮನೆಯಲ್ಲಿ ಮಾತ್ರವಲ್ಲ, ಈ ರಸ್ತೆಯಲ್ಲಿ ಕೂಡ ಯಾರೂ ಇಲ್ಲ ಅಂತ ಸ್ವಲ್ಪ ಬಿರುಸಾಗಿಯೇ ಹೇಳಿದೆ. ಅವರು "ಓ, ತಪ್ಪಾಯಿತು. ನಿಮ್ಮ ದನಿ ನಮ್ಮ ಬಿ. ವಿಠ್ಠಲರಾಯರ ಹಾಗೆ ಕೇಳಿಸಿತು. ಏನು ದೇವರ ಮಹಿಮೆ. ಇಷ್ಟು ಧ್ವನಿಸಾಮ್ಯ ನಾನು ಬೇರೆಲ್ಲಿಯೂ ಕಂಡಿಲ್ಲ" ಎಂದು ನನಗೆ ನಮಸ್ಕಾರ ಹೇಳಿ ಅಲ್ಲಿಂದ ಜಾರಿಕೊಂಡರು. ಯಾವಾಗಾದರೊಂದು ದಿವಸ ನನ್ನ ಗೊರಕೆಯನ್ನು ಕೇಳಿ ಹೀಗೆ ತಪ್ಪು ಗುರುತು ಹಿಡಿಯುವವರು ಯಾರಾದರೂ ನನಗೆ ಗಂಟುಬೀಳುವರೋ ಎಂದು ನನಗೆ ಸಂಶಯವಿದೆ.

ನನ್ನನ್ನು ಈ ಪ್ರಕಾರ ಪ್ರತಿಯೊಬ್ಬರಿಗೂ ತಮಗೆ ಬೇಕಾದ ಬೇರಾರೋ ಆಗಿ ಕಾಣಿಸುವ ಮತ್ತು ಕೇಳಿಸುವ ಹಾಗೆ ದೇವರು ಹೇಗೆ ಮಾಡಿದನೋ ಎಂಬುದು ನನಗೆ ಯಾವಾಗಲೂ ಆಶ್ಚರ್ಯ. ಒದೊಂದು ಸಲ ನನ್ನ ಈ ಪೀಡಕರು ತಮ್ಮ ಐಡೆಂಟಿಫಿಕೇಶನ್ ಬಗ್ಗೆ ಎಷ್ಟು ನಿಸ್ಸಂಶಯರಾಗಿರುತ್ತಾರೆಂದರೆ ನನಗೇ ನಾನು ನಾನಲ್ಲ, ಅವರು ಹೇಳುವ ಮನುಷ್ಯನೇ ಇರಬೇಕು ಅನಿಸುತ್ತದೆ. ಒಂದು ದಿನ ಧಾರವಾಡದ ಆ ಮಾರ್ವಾಡಿ ಅಂಗಡಿಯ ಮುಂದೆ ಹೋಗುತ್ತಿದ್ದೆ. ಆತ ಜವಾನನನ್ನು ಕಳಿಸಿ ನನ್ನನ್ನು ಕರೆಸಿಕೊಂಡು ನಾನು ಒಯ್ದಿದ್ದ ಧರ್ಮಾವರಂ ಸೀರೆಯ ಹಣವನ್ನು ತೀರಿಸುವ ಆಲೋಚನೆಯೇ ಇಲ್ಲವೇ ಎಂದು ಕೇಳಿದಾಗ ನನ್ನ ಕೈಲಿ ಹಣ ಇದ್ದಿದ್ದರೆ ಅವನ ಬಾಕಿ ತೀರಿಸಿಯೇ ಬಿಡುತ್ತಿದ್ದೆ. ಇಲ್ಲದೆ ಹೋದದ್ದರಿಂದಲೇ ನಾನು ಅವನ ಆಸಾಮಿಯಲ್ಲ ಎಂದು ಸಪ್ರಮಾಣವಾಗಿ ವಾದಿಸಿ ಪಾರಾದೆ. ನೋಡಿ, ಇಷ್ಟೆಲ್ಲಾ ಜನರ ಅಭಿಪ್ರಾಯದಲ್ಲಿ ನಾನು ನಾನಲ್ಲ ಎಂಬುದು ನಿಶ್ಚಯ ಪಟ್ಟಿರುವಾಗ ನನ್ನ ನಂಬಿಕೆಯಾದರೂ ದೃಢವಾಗಿ ಉಳಿಯಬಲ್ಲದೆ ? ನನ್ನೆದುರು ಯಾವನಾದರೂ ಪೊಲೀಸ್ ಅಧಿಕಾರಿ ಬರುತ್ತಿದ್ದರೆ ಈಗೀಗ ನನ್ನ ಹೃದಯ ಜೋರಾಗಿ ಬಡಿದುಕೊಳ್ಳತೊಡಗುತ್ತದೆ. ಯಾವನೋ ಬದಮಾಸ ಅಂತ ಗುರುತಿಸಿ ಅವನು

ನನ್ನನ್ನು ಹಿಡಿಯಬಹುದೆ ? ಅವನು ನನ್ನನ್ನು ಠಾಣೆಗೆ ಕರೆದೊಯ್ದು ಸವಾಲು ಹಾಕಿದರೆ ನಾನು ಎಷ್ಟು ಹೊತ್ತು ನನ್ನತನವನ್ನು ಕಾಯ್ದುಕೊಳ್ಳಬಲ್ಲೆ ? ಇದಕ್ಕೆಲ್ಲ ಏನುಪಾಯ ? ನನ್ನ ಮೈಯಲ್ಲಿ ನನ್ನ ನಿಜವಾದ ಹೆಸರನ್ನು ಹಚ್ಚೆ ಚುಚ್ಚಿಸಿಕೊಂಡು ಬಿಡಲೇ ?

ಒಮ್ಮೆಯಂತೂ ನಾನು ಅತ್ಯಂತ ಸ್ವಾರಸ್ಯವಾದ ಪ್ರಸಂಗದಲ್ಲಿ ಸಿಕ್ಕಿದ್ದೆ. ರಭಸದಿಂದ ಓಡುತ್ತಿದ್ದ ಕಾರೊಂದು ಜಗ್ಗನೆ ನನ್ನೆದುರು ನಿಂತಿತು. ಕಾರು ಹೊಡೆಯುತಿದ್ದ ಆಂಗ್ಲೋ ಇಂಡಿಯನ್ ಬ್ಯೂಟಿಯೊಬ್ಬಳು ಸ್ಪ್ರಿಂಗಿನಂತೆ ಇಳಿದಳು. “ಹಲೋ ! ಹೌಡ್ಯುಡೂ ?” ಎಂದು ನನ್ನೆದುರು ಕೈ ಮುಂದೆ ನೀಡಿದಳು. ನಾನು ಹಿಡಿಯಲೋ ಬೇಡವೋ ಎಂದು ಅನುಮಾನಿಸುತ್ತಿದ್ದ ಹಾಗೆ ಅವಳು ಸರ್ರನೆ ಕೈ ಹಿಂದೆಳೆದುಕೊಂಡಳು. “ಓ ಐಮ್ ಸಾರಿ ! ನಾನು ನಿಮ್ಮನ್ನ ನನ್ನ ಫ್ರೆಂಡೂಂತ ತಪ್ಪು ತಿಳಿದೆ, ಓ ಐ'ಮ್ ರಿಯಲಿ ವೆರಿ ಸಾರಿ!” ಎಂದು ಸಂಕೋಚದ ಮಧುರ ನಗು ನಕ್ಕಳು. ನಾನು ಮತ್ತಾರಾದರೂ ಆಗಿರದಿದ್ದುದಕ್ಕೆ ನಿಜವಾಗಿ ವೆರಿ ಸಾರಿ ಆಗಿದ್ದು ಅದೊಂದೇ ಸಲ.

## ಯಾರಿಗಾಗಿ ಬದುಕುತ್ತೇವೆ?

ನಾವು ಯಾರಿಗೋಸ್ಕರ ಬದುಕುತ್ತೇವೆ ? ಎಂಬ ಪ್ರಶ್ನೆಯನ್ನು ನಾನು ಆಗಾಗ್ಗೆ ಕೇಳಿಕೊಳ್ಳುವುದುಂಟು. ನಾನು ಪರೋಪಕಾರದ ವಿಚಾರ ಮಾತಾಡುತ್ತಾ ಇಲ್ಲ. ದೇಶಕೋಸ್ಕರ ಜೀವವನ್ನು ತೇಯುವ ಅಥವಾ ಬಲಿಕೊಡುವ ವಿಚಾರವನ್ನೂ ಹೇಳುತ್ತಾ ಇಲ್ಲ. ಇವೆಲ್ಲ ಹಳೇ ಭಾವನೆಗಳು. ಈ ಕಾಲದಲ್ಲಿ ನಮಗೆ ಪರೋಪಕಾರಕ್ಕೆ ಪುರಸೊತ್ತು ಇಲ್ಲ. ಎಲ್ಲವನ್ನೂ ಉದ್ಧಾರ ಮಾಡುವುದಕ್ಕಾಗಿ ಟೊಂಕ ಕಟ್ಟಿ, ಎದೆ ತಟ್ಟಿ ನಿಂತಿರುವ ಸರಕಾರಗಳಿರುವಾಗ ನಾವು ವ್ಯಕ್ತಿಗಳಾಗಿ ಪರೋಪಕಾರ ಮಾಡುವ ಮಬ್ಬಿಗೆ ಬೀಳುವುದರಲ್ಲಿ ಅರ್ಥವಿಲ್ಲ. ನಾವೆಲ್ಲಾದರೂ ಪರೋಪಕಾರವನ್ನು ಸೀರಿಯಸ್ಸಾಗಿ ಮಾಡತೊಡಗಿದರೆ ಅದೇ ಕೆಲಸದಲ್ಲಿ ನಿರತವಾಗಿರುವ ಸರಕಾರಗಳು ನಮ್ಮನ್ನು ದಾಯಾದಿಗಳೆಂದು ತಿಳಿಯಬಹುದು. ಇನ್ನು ದೇಶಕ್ಕಾಗಿ ಜೀವ ಕೊಡುವುದು ಕೂಡ ಈ ಕಾಲದಲ್ಲಿ ಒಳ್ಳೇ ಫ್ಯಾಶನ್ ಅಲ್ಲ. ನಾವೆಲ್ಲರೂ ದೇಶಕ್ಕಾಗಿ ಇನ್ನೊಬ್ಬರ ರಕ್ತದ

ಕೊನೆಯ ಹನಿಯವರೆಗೂ ಹೋರಾಡುವುದಕ್ಕೆ ಸಿದ್ಧರೇ ಹೊರತು ನಮ್ಮ ಸ್ವಂತ ರಕ್ತ ಹರಿಸುವುದಕ್ಕಲ್ಲ.

ಆದ್ದರಿಂದ ನಾವೆಲ್ಲ ಈ ಕಲಿಯುಗದಲ್ಲಿ ನಮ್ಮ ಸ್ವಂತಕ್ಕಾಗಿ ಬದುಕುತ್ತಿದ್ದೇವೆ, ಅಥವಾ ನಮ್ಮ ಹೆಂಡತಿ ಮಕ್ಕಳು ಬಂಧು-ಬಾಂಧವರ ಸಲುವಾಗಿ ಬಾಳುತ್ತಿದ್ದೇವೆ ಎಂದು ನೀವು ತಿಳಿದಿದ್ದರೆ ಅದೂ ತಪ್ಪು. ಈ ತಿಳಿವಳಿಕೆಯ ಯುಗದಲ್ಲಿ ಸ್ವಂತಕ್ಕಾಗಿ ಬದುಕುವುದೂ ಔಟ್ ಆಫ್ ಫ್ಯಾಶನ್ನೇ ಆಗಿದೆ. ನಾವು ಅಂಥ ಸ್ವಾರ್ಥಿಗಳಲ್ಲ. ನಮ್ಮ enlightened age ನಲ್ಲಿ ನಾವೆಲ್ಲರೂ ಪರರಿಗಾಗಿ—ಪರೋಪಕಾರಕ್ಕಾಗಿ ಅಲ್ಲ—ಬದುಕುತ್ತಿದ್ದೇವೆ.

ಮತ್ತು ಅದೇ ನಮ್ಮ ಯುಗದ ಅನೇಕ ಸಂಕಟಗಳ ಮೂಲವಾಗಿದೆ.

ತನ್ನ ಸ್ವಂತಕ್ಕಾಗಿ ಬದುಕುವವನು ಹೇಗೆ ಬದುಕುತ್ತಾನೆ? ಅವನು ಜೀವನದಲ್ಲಿ ಒಂದು ಗುರಿಯನ್ನಿಟ್ಟುಕೊಂಡಿರುತ್ತಾನೆ. ತನಗೆ ನಿಜವಾಗಿ ಮನಸ್ತೃಪ್ತಿಯನ್ನು ಕೊಡುವ ಸಂಗತಿಗಳೇನೆಂದು ನಿರ್ಧರಿಸಿಕೊಳ್ಳುತ್ತಾನೆ. ಒಬ್ಬನಿಗೆ ಕೇವಲ ಹಣಗಳಿಸುವುದು ತೃಪ್ತಿಯನ್ನು ಕೊಡಬಹುದು, ಇನ್ನೊಬ್ಬನಿಗೆ ಅಧ್ಯಾತ್ಮದಲ್ಲಿ ಆಸಕ್ತಿ ಇರಬಹುದು, ಮತ್ತೊಬ್ಬನಿಗೆ ಸಂಗೀತವೋ ಸಾಹಿತ್ಯವೋ ಸಂತೋಷವನ್ನು ಕೊಡಬಹುದು. ತನ್ನ ಸ್ವಂತಕ್ಕಾಗಿ ಬದುಕುವವನು ತನ್ನ ಗುರಿಯನ್ನು ಕುರಿತು ಜೀವಮಾನವೆಲ್ಲ ಪ್ರಯತ್ನದಲ್ಲಿ ನಿರತನಾಗುತ್ತಾನೆ. ಆ ಯತ್ನ ಕೊಂಚವಾದರೂ ಕೈಗೂಡಿದರೆ ಅವನಿಗೆ ಆತ್ಮಸಮಾಧಾನವಾಗುತ್ತದೆ. ತನಗಾಗಿ ಬದುಕುವವನು ಬೇರೆಯವರು ತನ್ನ ಪ್ರಯತ್ನಗಳ ವಿಷಯದಲ್ಲಿ ಏನು ತಿಳಿದುಕೊಳ್ಳುತ್ತಾರೆಂಬ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಳ್ಳುವುದಿಲ್ಲ. ಪರೋಪಕಾರದ ವಿಷಯದಲ್ಲಿ ಕೂಡ, ತನಗಾಗಿ ಬಾಳುವವನು ಬಹಳ ಆಗ್ರಹ ತಾಳುವುದಿಲ್ಲ. ಇನ್ನೊಬ್ಬನಿಗೆ ತಾನು ಉಪಕಾರ ಮಾಡಿಯೇ ತೀರಬೇಕೆಂದಾಗಲಿ, ಉಪಕಾರ ಮಾಡಿಸಿಕೊಂಡವನು ತನಗೆ ಕೃತಜ್ಞನಾಗಿರಲೇಬೇಕೆಂದಾಗಲಿ, ಅವನಿಗೆ ಹಟವಿಲ್ಲ. ಏಕೆಂದರೆ ಅವನ ಕೆಲಸಗಳೆಲ್ಲ ಆತ್ಮಸಮಾಧಾನದ ಅಳತೆಗೋಲಿನಲ್ಲಿ ಅಳೆಯಲ್ಪಡುತ್ತವೆ.

ಆದರೆ ಇಂದಿನ ಯುಗದವರಾದ ನಾವು ಮಾತ್ರ ಈ ಪ್ರಕಾರ ನಮಗಾಗಿಯೇ ಬದುಕುವುದಕ್ಕೆ ಒಪ್ಪುವುದಿಲ್ಲ. ನಮಗೆ ಯಾವುದು ಒಳ್ಳೆಯದು, ಯಾವುದು ಅಗತ್ಯವಾದುದು ಎಂಬುದನ್ನು ನಾವು ಯೋಚಿಸುವುದೇ ಇಲ್ಲ.

ನೆರೆಮನೆಯವರ ರೀತಿ-ನೀತಿಗಳು ನಮಗೆ ಧ್ಯೇಯಗಳಾಗುತ್ತವೆ.

ನೆರೆಮನೆಯವಳು ಓರೆ ಬೈತಲೆ ತೆಗೆಯುತ್ತಾಳೆ. ಅದು ತನಗೆ ಬಹಳ ಒಪ್ಪುತ್ತದೆ; ಅದರಿಂದ ತಾನು ಉರ್ವಶಿಯ ಹಾಗೆ ಕಾಣಿಸುತ್ತೇನೆ ಎಂದು ಅವಳು ನಂಬುತ್ತಾಳೆ. ಅದು ನಿಜವೂ ಇರಬಹುದು. ಅಥವಾ ಅವಳಿಗೆ ತಾನು ನೆರೆಮನೆಯವಳಿಗಿಂತ ಬೇರೆಯಾಗಿ ಕಾಣಬೇಕು ಎಂಬ ಆಕಾಂಕ್ಷೆ ಇರ ಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಪ್ರತಿ ವ್ಯಕ್ತಿಯೂ ತನ್ನದೇ ಒಂದು ವೈಶಿಷ್ಟ್ಯ ಬೇಕೆಂದು ಅಪೇಕ್ಷಿಸುವುದು ಸಹಜ. ಆದರೆ ಆಚೆ ಮನೆಯವಳು ಓರೆ ಬೈತಲೆ ತೆಗೆದು ಹೊರಗೆ ತಲೆ ತೋರಿಸಿದೊಡನೆಯೇ ಈಚೆ ಮನೆ ಯವಳಿಗೆ ತಾನೂ ಹಾಗೆಯೇ ಮಾಡಬೇಕೆಂಬ ತಡೆಯಲಾರದ ಚಪಲ ಹುಟ್ಟಿ ಕೊಳ್ಳುತ್ತದೆ. ತನಗೆ ಅದು ಒಪ್ಪುತ್ತದೆಯೇ ಎಂಬ ಪ್ರಶ್ನೆಯನ್ನು ಅವಳು ಕೇಳಿಕೊಳ್ಳುವುದೇ ಇಲ್ಲ. ಕೆಲವೇ ದಿನಗಳಲ್ಲಿ ಓರೆ ಬೈತಲೆ ಎಲ್ಲಾ ಮಹಿಳೆ ಯರ ತಲೆಗಳನ್ನು ಅಲಂಕರಿಸುತ್ತದೆ; ಇಲ್ಲವೇ ವಿಕಾರಗೊಳಿಸುತ್ತದೆ. ಯಾಕೆ ಓರೆ ಬೈತಲೆ ತೆಗೆಯುತ್ತೀರಿ ಎಂದು ಕೇಳಿದರೆ ಅವರಲ್ಲಿ ಹೆಚ್ಚಿನವರಿಗೆ ಸಮಾಧಾನಕರವಾದ ಉತ್ತರ ಹೇಳಲು ಬಾರದು. "ಎಲ್ಲರೂ" ಹಾಗೆ ಮಾಡು ತ್ತಿರುವುದರಿಂದ ಅವರೂ ಮಾಡುತ್ತಾರೆ, ಇಷ್ಟೇ. ವನವಾಸಿ ರಾಮನ ಜಡೆ ಯನ್ನು ಹೋಲುವ, ತಲೆಯ ಮೇಲೆ ಒಂದು ಬುಟ್ಟಿಯನ್ನು ಮಗುಚಿ ಹಾಕಿದ ಹಾಗೆ ಕಾಣಿಸುವ, ತಲೆಯ ಮೇಲಿಂದ ಹಿಂದಿನ ದಿಕ್ಕಿಗೆ ಒಂದು ತುಪಾಕಿ ಯನ್ನು ನಿಲ್ಲಿಸಿದಂತೆ ತೋರುವ, ತಲೆಯ ಮೇಲೆ ಚಿಪ್ಪಿಗನ ಹಕ್ಕಿ ಗೂಡುಕಟ್ಟಿದ ಹಾಗೆ ಕಾಣಿಸುವ ಮತ್ತು ಇನ್ನೂ ಅಸಂಖ್ಯ ತರಹದ ಮೋಡಿಗಳು ಒಂದ ಮೇಲೊಂದರಂತೆ ಕಾಳ್ಗಿಚ್ಚಿನ ಹಾಗೆ ಹಬ್ಬುವುದನ್ನು ನಾವು ನೋಡುತ್ತೇವೆ ಐವತ್ತೈದು ದಾಟಿದವನಾದ ನಾನು ಸ್ತ್ರೀ ಸೌಂದರ್ಯವನ್ನು ಮನೋವಿಕಾರ ವಿಲ್ಲದೆ ಗಮನಿಸಬಲ್ಲವನಾಗಿದ್ದೇನೆ. ಕೆಲವರ ತಲೆಗಳ ಮೇಲೆ ಇವು ಬಲು ಮುದ್ದಾಗಿ ಕಾಣಿಸುತ್ತವೆ ಎಂದು ನಾನು ಒಪ್ಪುತ್ತೇನೆ. ಸಾಮಾನ್ಯವಾಗಿ ಅವರು ತಮಗೆ ಒಪ್ಪುವಂಥದನ್ನು ಆರಿಸಬಲ್ಲ ರಸಜ್ಞೆಯರಾಗಿರುತ್ತಾರೆ. ಹೆಚ್ಚಿನ ಮಹಿಳಾಮಣಿಯರಿಗೆ ಅದೊಂದು ವೇಷ ಕಟ್ಟಿದ ಹಾಗೆಯೇ ತೋರುತ್ತದೆ. ಆದರೆ ಅವರಿಗೆ ಅದರ ಪರಿವೆ ಇಲ್ಲ. ಏಕೆಂದರೆ ಇತರರು ಮಾಡಿದ ಹಾಗೆ ತಾವೂ ಮಾಡಬೇಕೆಂಬ ಚಪಲವೇ ಅವರ ಮುಖ್ಯ ಪ್ರೇರಣೆ. ತಲೆಯ

ಮೇಲಿನ ಫ್ಯಾಶನ್ನುಗಳಿಗೆ ಅನ್ವಯಿಸತಕ್ಕದ್ದನ್ನೇ ಕೆಳಗಿನ ಫ್ಯಾಶನ್ನುಗಳಿಗೂ ಅನ್ವಯಿಸಬಹುದು. ಲೋಕಟ್ ಬ್ಲೌಜುಗಳು, ಭುಜಪ್ರದರ್ಶಕ ಬ್ಲೌಜುಗಳು, ಹೊಕ್ಕುಳ ಕೆಳಗಿನ ನೀವಿಗಳು ಇವುಗಳಲ್ಲಿ ಯಾವುದನ್ನೂ ನಾನು ಅಶ್ಲೀಲವೆಂದು ಹೇಳುವುದಿಲ್ಲ. ಆದರೆ ಕೆಲವರ ಮೇಲೆ ಅವು ಅಶ್ಲೀಲವಾಗಿ ಕಾಣಿಸುತ್ತವೆ ಎಂದು ಮಾತ್ರ ಹೇಳಬಲ್ಲೆ. ತಮಗೆ ಯಾವುದು ಒಪ್ಪುತ್ತದೆ ಎಂಬುದನ್ನು ಅವರು ಯೋಚಿಸಿದರೆ ಅವರು ಆಚೆ ಮನೆಯವರ ಬಣ್ಣಕ್ಕೆ ಮೈ ಸುಟ್ಟುಕೊಳ್ಳುವ ಹುಚ್ಚಿಗೆ ಇಳಿಯುವುದಿಲ್ಲ ಎಂಬುದು ಖಂಡಿತ.

ಎಲ್ಲಾ ಮುದುಕರ ಹಾಗೆ ನಾನೂ ಹೆಂಗಸರ ಹೊಸ ರೀತಿಗಳ ಬಗ್ಗೆ ಆಡಿಕೊಳ್ಳುತ್ತಿದ್ದೇನೆ ಎಂದುಕೊಳ್ಳಬೇಡಿ. ಈ ಮನೋವೃತ್ತಿ ಅಬಲಾವರ್ಗಕ್ಕೇ ಮೀಸಲಾದ ದೌರ್ಬಲ್ಯವಲ್ಲ. ಪುರುಷವರ್ಗದ ಹೇರ್‌ಕಟ್ ಫ್ಯಾಶನ್, ವೇಷಭೂಷಣಗಳು ಕೂಡ ಇದೇ ಬಗೆಯ ಅನುಕರಣೆಯ ಮೋಹಕ್ಕೆ ಒಳಗಾದವುಗಳೇ. ಬಿದಿರ ಗಳಗಳಂಥ ಕಾಲುಗಳುಳ್ಳವರಿಗೆ ಕೊಳವೆ ಪ್ಯಾಂಟು ಬೆಲ್ಲದ ಬಯಲಿನ ಬೆರ್ಚಪ್ಪನನ್ನು ಅಣಕಿಸುವ ಸೌಂದರ್ಯವನ್ನು ನೀಡುತ್ತದೆ. ಆದರೆ ಅದು ತಮಗೆ ಹೇಗೆ ಕಾಣುತ್ತದೆಂದು ಯಾರಿಗಿದೆ ಚಿಂತೆ ? ಅದು ಫ್ಯಾಶನ್.

ನಮ್ಮ ತಲೆಯ ಮೇಲಿನ ದೇವರು ಕೊಟ್ಟ ಕೂದಲನ್ನು ಹೇಗೆ ಇಟ್ಟುಕೊಂಡರೇನು ? ಹೇಗೂ ತೊಡಲೇಬೇಕಾದ ಬಟ್ಟೆಯನ್ನು ಬಿಗಿಯಾಗಿ ತೊಟ್ಟರೇನು ಸಡಿಲಾಗಿ ತೊಟ್ಟರೇನು ? ಎಂದು ಕೇಳುತ್ತೀರಿ. ಆದರೆ ನೆರೆಮನೆಯವರನ್ನು ಅನುಕರಿಸುವ ವೃತ್ತಿ ಇಷ್ಟಕ್ಕೇ ಮುಗಿಯುವುದಿಲ್ಲ. ಅದು ಇದಕ್ಕಿಂತ ಹೆಚ್ಚಾದದ್ದಾಗಿ ಪರಿಣಮಿಸುತ್ತಿದೆ.

ನೆರೆಮನೆಯವರು ರೇಡಿಯೊ ತಂದಿದ್ದಾರೆ ಮತ್ತು ತಂದದ್ದು ಜಗಜ್ಜಾಹೀರಾಗಬೇಕೆಂದು ಅದನ್ನು ಹಗಲೆಲ್ಲ ಗಟ್ಟಿಯಾಗಿ ಕಿರಿಚಿಸುತ್ತಾರೆ. ಬಹುಶಃ ಅವರ ಕೈಲಿ ಸ್ವಲ್ಪ ಉಳಿಕೆ ಹಣ ಇರಬೇಕು. ಅಥವಾ ರೇಡಿಯೋದಲ್ಲಿ ವ್ಯಾಪಾರಿ ಸುದ್ದಿಯನ್ನೋ ಕೃಷಿರಂಗದ ಪ್ರಗತಿಯನ್ನೋ ಕೇಳಿ ಅವರು ಪ್ರಯೋಜನ ಪಡೆಯುವ ಇರಾದೆ ಇರಿಸಿಕೊಂಡಿದ್ದಾರೆ. ಅಥವಾ ಸಂಗೀತದಲ್ಲಿ ಅವರಿಗೆ ತೀವ್ರ ಅಭಿರುಚಿ ಇದೆ. ಅದನ್ನು ಕೇಳಿ ಸಂತೋಷ ಪಡುವ ಇಲ್ಲವೆ ಅರ್ಥ ಮಾಡಿಕೊಂಡು ರಸಾನುಭವ ಪಡೆಯುವ ಶಕ್ತಿ ಅವರಿಗಿದೆ. ಆದರೆ ಅವರ ಮನೆಯಲ್ಲಿ ಎರಡು ದಿನ ರೇಡಿಯೋ ಕಿರಿಚಿತೋ ಸುತ್ತಮುತ್ತಲ

ಮನೆಗಳಲ್ಲಿ ತುಮುಲ ಪ್ರಾರಂಭವಾಗುತ್ತದೆ. ತಮ್ಮ ಮನೆಗಳಿಗೆ ರೇಡಿಯೋ ಬಾರದಿದ್ದರೆ ತಾವು ಮನುಷ್ಯರೇ ಅಲ್ಲವೆಂದು ಗೃಹಿಣಿಯರು ಭಾವಿಸತೊಡಗುತ್ತಾರೆ. ಸಾಲವೋ ಸೋಲವೋ ಮಾಡಿ ರೇಡಿಯೋ ಬರುತ್ತದೆ. ರಾಗವೆಂದರೇನೆಂದು ಅರ್ಥವಾಗದವರು ಶಾಸ್ತ್ರೀಯ ಸಂಗೀತ ಊಪಿಸುತ್ತಾರೆ. ಔರಂಗಜೇಬನನ್ನು ಮೀರಿಸುವ ರಸಜ್ಞರು ಸಿನೆಮ ಸಂಗೀತ ಹಚ್ಚುತ್ತಾರೆ. ಯಾರಾದರೊಬ್ಬರಿಗೆ ರೇಡಿಯೋ ತರುವುದು ಸಾಧ್ಯವಾಗದಿದ್ದರೆ ಅವರ ಹೆಂಡತಿ ಅಥವಾ ಮಕ್ಕಳು ಅವರನ್ನು ಅಪ್ರಯೋಜಕರೆಂದು ತೀರ್ಮಾನಿಸುತ್ತಾರೆ. ರೇಡಿಯೋ ತಮಗೆ ಅಗತ್ಯವೇ, ಕೊಳ್ಳುವ ಶಕ್ತಿ ತಮ್ಮ ಗಂಡರಿಗುಂಟೇ ಎಂದು ವಿಚಾರಿಸುವುದು ಅಸಾಧ್ಯವಾಗುತ್ತದೆ. ರೇಡಿಯೋ ಬಂದಾಗಲೇ ನೆರೆಮನೆಯವರಿಗಿಂತ ತಾವು ಕಡಿಮೆಯವರಲ್ಲ ಎಂಬ ವಿಶ್ವಾಸ ಅವರಿಗೆ ಬರುವುದು.

ರೇಡಿಯೋದಿಂದ ಏನೊಂದು ಪ್ರಯೋಜನ ಹೊಂದಲಾರದ ಜನರು ಇಂದು ಟ್ರಾನ್ಸಿಸ್ಟರುಗಳನ್ನು ಹೆಗಲಿಗೇರಿಸಿಕೊಂಡು ನಾವು ಕೃತಾರ್ಥರಾದೆವೆಂದು ಬೀದಿಯಲ್ಲಿ ಅಲೆಯುವುದನ್ನು ನೋಡಬಹುದು. ಗಂಟೆ ಎಷ್ಟಾಯಿತೆಂದು ನೋಡಲಾರದವರು ರಿಸ್ಟ್ ವಾಚುಗಳನ್ನು ಕಟ್ಟಿಕೊಂಡು ತಿರುಗುವುದನ್ನು ನೋಡಬಹುದು. ನಾವು ಚಿಕ್ಕವರಿದ್ದಾಗ ರಿಸ್ಟ್‌ವಾಚುಗಳು ಕೌತುಕದ ಪದಾರ್ಥಗಳಾಗಿದ್ದವು. ಪಟ್ಟಣಗಳಲ್ಲಿ ಕೂಡ ಸಾವಿರಕ್ಕೊಬ್ಬರು ಅವುಗಳನ್ನು ಮುಂಗೈ ಮೇಲೆ ತೊಡುವ ಭಾಗ್ಯ ಪಡೆದಿದ್ದರೋ ಇಲ್ಲವೋ. ಆದರೂ ನಾವು ಶಾಲೆಗೆ ಸಕಾಲದಲ್ಲೇ ಹೋಗುತ್ತಿದ್ದೆವು. ಜನರು ಆಫೀಸುಗಳಿಗೆ ಸರಿಯಾಗಿ ಹಾಜರಾಗುತ್ತಿದ್ದರು. ಕೆಲವರು ತಡವಾಗಿಯೂ ಹೋಗುತ್ತಿದ್ದರು. ಇಂದು ಗಂಡಸರು ಹೆಂಗಸರು ಮಕ್ಕಳಾದಿಯಾಗಿ ಎಲ್ಲ ವರ್ಗಗಳ ಮುಂಗೈಗಳೂ ರಿಸ್ಟ್ ವಾಚುಗಳಿಂದ ಶೋಭಿಸುತ್ತಿವೆ. ಆದರೆ ಶಾಲೆ-ಕಾಲೇಜುಗಳಲ್ಲಾಗಲಿ ಕಚೇರಿಗಳಲ್ಲಾಗಲಿ ಜನರು ತಡವಾಗಿ ಹಾಜರಾಗುತ್ತಲೇ ಇದ್ದಾರೆ. ವಾಚ್ ಇಲ್ಲದ್ದಕ್ಕಲ್ಲ. ವಾಚನ್ನು ಬರೇ ಅಲಂಕಾರ ವಸ್ತುವೆಂದು ಅವರು ಭಾವಿಸುವುದರಿಂದ. ನೆರೆಮನೆಯವನು ಅಥವಾ ಅವಳು ಕೈಗಡಿಯಾರ ಹಾಕಿಕೊಳ್ಳುವುದರಿಂದ ಇವರಿಗೆ ಅದು ಬೇಕಾಗಿತ್ತಷ್ಟೇ ಹೊರತು ತಮಗೋಸ್ಕರ ಅಲ್ಲ. ಜಗತ್ತಿನಲ್ಲೇ ನಿಖರವಾಗಿ ಸಮಯ ತೋರಿಸುವ ಗಡಿಯಾರ ಕೂಡ ಅವರಿಂದ

ಹೊತ್ತಿಗೆ ಸರಿಯಾಗಿ ಕೆಲಸ ಮಾಡಿಸಲಾರದು. ಆದರೆ ಕುರುಡನಿಗೆ ಬ್ಯಾಟರೀ ದೀಪ ಬೇಕಾದ ಹಾಗೆ ಅವರಿಗೂ ಅದು ಬೇಕು. ಸ್ವಲ್ಪ ಮೇಲಿನ ಸ್ತರಕ್ಕೆ ಹೋಗಿ ಕಾರು, ಸ್ಕೂಟರುಗಳ ವಿಚಾರ ತೆಗೆದುಕೊಳ್ಳಿ. ಕಾರು ಇಡುವುದು ಇಂದು ಪ್ರತಿಯೊಬ್ಬನ ಧ್ಯೇಯವಾಗಿದೆ. ಹೆಚ್ಚುಹೆಚ್ಚು ಜನರು—ಯಾವ ಮೂಲದಿಂದ ಎಂದು ಹೇಳುವುದು ಕಷ್ಟ—ಕಾರುಗಳನ್ನೂ ಸ್ಕೂಟರುಗಳನ್ನೂ ಇಡುತ್ತಿದ್ದಾರೆಂಬುದೂ ನಿಜ. ಇದು ನಮ್ಮ ದೇಶದ ಪ್ರಗತಿಯ ಲಕ್ಷಣವೆಂದು ಭಾವಿಸಲಾಗುತ್ತದೆ. ಆದರೆ ಸ್ಕೂಟರ್, ಮೋಟರ್ ಸೈಕಲ್ ಇಟ್ಟವರೆಲ್ಲರಿಗೂ ಅದರ ಆಗತ್ಯವುಂಟೇ ಎಂದು ಕೇಳಿದರೆ ಉತ್ತರ ಏನೆಂದು ಎಲ್ಲರಿಗೂ ಗೊತ್ತಿದೆ. ಮೋಟರ್ ಅಥವಾ ಸ್ಕೂಟರಿನ ಮೂಲಕ ಧಾವಿಸಿ ಉಳಿಸಿದ ಸಮಯವನ್ನು ಅವರು ಏತಕ್ಕೆ ವಿನಿಯೋಗಿಸುತ್ತಾರೆ ? ಕೆಲಸಕ್ಕೆ ಬಾರದ ಹರಟೆಗಳಿಗೆ, ಅರ್ಥ ವಿಲ್ಲದ ಧಾವಂತಕ್ಕೆ ಅದರ ವಿನಿಯೋಗವಾಗುತ್ತದೆ. ಕೆಲವರಿಗಂತೂ ಧೂಳೆಬ್ಬಿ ಸುವುದೇ ಕಾರ್, ಸ್ಕೂಟರ್‌ಗಳ ಪ್ರಯೋಜನ. ಹೆಚ್ಚಿನ ಶ್ರೀಮಂತರೂ ಅವರ ಹೆಂಡರೂ ಕಾರಿನ ದೆಸೆಯಿಂದ ಚರ್ಬಿ ಬೆಳೆಸಿಕೊಂಡು ಅದರ ನಿವೃತ್ತಿಗೆ ಔಷಧ ತೆಗೆದುಕೊಳ್ಳುತ್ತಾರೆ. ಡಾಕ್ಟರರು ವಾಕಿಂಗ್ ಮಾಡಿರಿ ಎಂದರೆ ಕಾರಿನಲ್ಲೇ ಅವರು ವಾಕಿಂಗ್ ಹೋಗುತ್ತಾರೆ.

ನಲವತ್ತು ವರ್ಷಗಳ ಕೆಳಗೆ ಲುಂಗಿ ಉಟ್ಟು ಕಾಲೇಜಿಗೆ ಹೋಗಿ ಪಾಸಾದವರ ಮಕ್ಕಳು ಈಗ ಪ್ಯಾಂಟ್ ತೊಟ್ಟು ಕಾಲೇಜಿಗೆ ಹೋಗಿ ಫೇಲಾಗು ತ್ತಾರೆ. ಪ್ಯಾಂಟ್ ತೊಟ್ಟದ್ದರಿಂದಲೇ ಅವರು ಫೇಲಾದರೆಂದು ನನ್ನ ವಾದ ವಲ್ಲ. ಆದರೆ ಪ್ಯಾಂಟು ಅವರಿಗೆ ಪಾಸಾಗಲು ನೆರವಾಗಲಿಲ್ಲವೆಂಬುದನ್ನು ನಾನು ಬೊಟ್ಟು ಮಾಡಿ ತೋರಿಸಬಯಸುತ್ತೇನೆ. ಉರಿಯುವ ಬೇಸಿಗೆಯಲ್ಲಿ ಫಿಟ್ ಪ್ಯಾಂಟ್ ಧರಿಸಿ ಕಷ್ಟಪಡುವವರನ್ನು ಕಂಡು ಅಯ್ಯೋ ಅನಿಸುತ್ತದೆ. ಆದರೆ ಯಾರಾದರೂ ಅಗಲ ಕಾಲಿನ ಪ್ಯಾಂಟುಗಳನ್ನು ಫ್ಯಾಶನ್ನಾಗಿ ಮಾಡುವ ವರೆಗೆ ಇವರೆಲ್ಲಾ ಫಿಟ್ ಪ್ಯಾಂಟಿನಲ್ಲಿ ಬೇಯಲೇ ಬೇಕು. ಯಾಕೆಂದರೆ "ಎಲ್ಲರೂ" ಅದನ್ನು ಧರಿಸುತ್ತಾರೆ.

ನಿಜ, ಲೋಕ ಬದಲಾಯಿಸುತ್ತಾ ಇದೆ. ಆದರ ಸಂಗಡ ನಾವೂ ಹೆಜ್ಜೆ ಹಾಕಬೇಕು. ಇಪ್ಪತ್ತು ವರ್ಷಗಳ ಹಿಂದೆ ಯಾವುದು ವಿಲಾಸ ಸಾಮಗ್ರಿ ಎನಿಸಿತ್ತೋ ಅದು ಅಗತ್ಯ ಇಂದು ವಸ್ತುವಾಗಿದೆ. ಇದು ಒಪ್ಪತಕ್ಕ ಮಾತು.

ಇಂದೂ ಚಕ್ಕಡಿಗಾಡಿಯಲ್ಲಿ ಓಡಾಡಬೇಕೆಂದು ಯಾರೂ ಹೇಳಲಾರರು. ಕೆಲಸ ಮಾಡುವುದಕ್ಕೆ ಧೋತರಕ್ಕಿಂತ ಪ್ಯಾಂಟು ಅನುಕೂಲವಾಗಿದೆಯೆಂದು ನನಗೂ ಅನುಭವಕ್ಕೆ ಬಂದಿದೆ. ಆದರೆ ಇನ್ನೊಬ್ಬರಿಗೆ ಇದೆ ಎಂಬೊಂದೇ ಕಾರಣಕ್ಕೆ ನಮಗೂ ಬೇಕು ಎನ್ನುವ ಭಾವನೆಯಲ್ಲಿ ವಿಪತ್ತು ಅಡಕವಾಗಿದೆ.

ಆಧುನಿಕ ಜಗತ್ತಿನಲ್ಲಿ ಬೇಕಾಗಿ ಬೇಡವಾಗಿ ಪ್ರಚುರಪಡುತ್ತಿರುವ ಅನೇಕ ಪದಾರ್ಥಗಳನ್ನು ಸುತ್ತಲಿನವರು ಪಡೆದಿರುವುದರಿಂದ ನಮಗೂ ಅದು ಬೇಕು ಎಂದು ನಮಗಾಗಲಿ ನಮ್ಮ ಕುಟುಂಬದವರಿಗಾಗಲಿ ಅನಿಸಿದಾಗ ಅದು ತೀವ್ರವಾದ ಮನೋವೇದನೆಯನ್ನುಂಟುಮಾಡುತ್ತದೆ. ಹೇಗಾದರೂಮಾಡಿ ಅದನ್ನು ಪಡೆದ ಹೊರತು ನಾವು ಮನುಷ್ಯರೇ ಅಲ್ಲ ಅನಿಸಿಬಿಡುತ್ತದೆ. ಇವೆಲ್ಲಕ್ಕೂ ಹಣ ಬೇಕು. ಹಣ ಇದ್ದರೆ ಕೊಳ್ಳುವುದರಲ್ಲಿ ಅನಾಹುತವಿಲ್ಲ. ಆದರೆ ಒಂದು ವಸ್ತು ನಮಗಿಲ್ಲವೆಂಬುದಕ್ಕಾಗಿ ತೀವ್ರವಾದ ಅಸಂತೋಷವನ್ನನುಭವಿಸುವುದಾದರೆ ಅದರಿಂದ ನಿವೃತ್ತಿ ಪಡೆಯುವುದಕ್ಕಾಗಿ ಅದಕ್ಕೆ ಬೇಕಾದ ಹಣವನ್ನು ಹೇಗಾದರೂ ಸಂಪಾದಿಸುವುದು ಅನಿವಾರ್ಯವಾಗುತ್ತದೆ.

ನನ್ನ ಅಭಿಪ್ರಾಯದಲ್ಲಿ ದೇಶದಲ್ಲಿ ಇಂದು ಕಾಣಬರುವ ಅನೇಕ ದುರ್ವ್ಯಾಪಾರಗಳಿಗೆ ಈ ಬಗೆಯ ತುಟ್ಟಿಯಾದ ಪರಾನುಕರಣೆಯೇ ಕಾರಣ. ಹಣಕ್ಕಾಗಿಯೇ ಹಣವನ್ನು ಅಪೇಕ್ಷಿಸುವ ಧನದಾಸರು ತೀರ ಕಡಿಮೆ. ಆದರೆ ನಾಲ್ಕು ಜನರಲ್ಲಿ ತಾನೂ ಒಬ್ಬ ಎನ್ನಿಸಿಕೊಳ್ಳುವುದಕ್ಕಾಗಿ ಅನಗತ್ಯ ಮತ್ತು ಯೋಗ್ಯತೆ ಮೀರಿದ ಪದಾರ್ಥಗಳನ್ನು ಸಂಗ್ರಹಿಸುವ ಹುಚ್ಚು ಲಂಚ, ಕಳ್ಳಪೇಟೆ ಮೊದಲಾದ ಅವ್ಯಾಪಾರಗಳಿಗೆ ಪೋಷಕವೂ ಹೌದು, ಪ್ರೇರಕವೂ ಹೌದು. ನಮ್ಮ ದೇಶದ ಒಂದು ದುರ್ದೈವವೆಂದರೆ ನಮ್ಮ ಅಪೇಕ್ಷೆಗಳು ಹೆಚ್ಚಾಗಿವೆ. ಆದರೆ ಅವುಗಳ ಸಾಧನೆಗಾಗಿ ಶ್ರಮಿಸುವ ಪ್ರವೃತ್ತಿ ಸಾಕಷ್ಟು ಇಲ್ಲ. ಇದರಿಂದ ನಾವು ಎಷ್ಟು ಭೋಗ ಸಾಮಗ್ರಿಗಳನ್ನು ಕಲೆಹಾಕುತ್ತೇವೋ ಅಷ್ಟು ಮಟ್ಟಿಗೆ ನೀತಿಯನ್ನು ಅಧೋಗತಿಗೆ ಇಳಿಸುತ್ತೇವೆ. ಇನ್ನೊಬ್ಬರಲ್ಲಿ ಉಂಟೆಂಬುದಕ್ಕಾಗಿ ನಮಗೂ ಬೇಕೆನ್ನುವುದು ಶುದ್ಧ ಮತ್ಸರದ ಮನೋವೃತ್ತಿ ಮತ್ತು ಸ್ವಬುದ್ಧಿಯ ಅಭಾವದ ಲಕ್ಷಣ. ಇದನ್ನೇ ನಾನು ಇನ್ನೊಬ್ಬರಿಗಾಗಿ ಬದುಕುವುದು ಅನ್ನುತ್ತೇನೆ. ನಮಗಾಗಿ ನಾವು ಬದುಕಿದರೆ ಇವೆಲ್ಲ ಹೊಂಡಗಳಲ್ಲಿ ಬೀಳುವುದರಿಂದ ತಪ್ಪಿಸಿಕೊಳ್ಳಬಹುದು. ನಮಗೆ ಒಂದು ಪದಾರ್ಥ ಅತ್ಯಗತ್ಯವೆನಿ

ಸಿದರೆ ಅದಕ್ಕಾಗಿ ದುಡಿಯಬಹುದು. ಅಗತ್ಯತೆ ಇನ್ನೊಬ್ಬರನ್ನು ನೋಡಿ ಹುಟ್ಟಿದ್ದಿದ್ದರೆ ಅದು ಸುಳ್ಳು ಅಭಿಮಾನದ ಪ್ರಶ್ನೆಯಾಗುತ್ತದೆ. ಯೇನಕೇನ ಪ್ರಕಾರೇಣ ಅದನ್ನು ಗಿಟ್ಟಿಸಿದರಾಯಿತು ಎಂಬ ಕೀಳುಮಟ್ಟಕ್ಕಿಳಿಯುತ್ತೇವೆ. ಇದರಿಂದಾಗುವ ನೈತಿಕ ಪರಿಣಾಮಗಳನ್ನು ಅಲಕ್ಷಿಸಿದರೂ ಅದು ಮಾನವ ಕುಲದ ಒಟ್ಟು ದುಃಖವನ್ನು ಹೆಚ್ಚಿಸುವುದನ್ನು ಕಡೆಗಣಿಸಲಾಗುವುದಿಲ್ಲ. ಅಸುಖದ ಮೊತ್ತವನ್ನು ಹೆಚ್ಚಿಸುವುದು ಪ್ರಗತಿಯಲ್ಲ. (೧೯೭೧)

## ಬೈಗಳಿಗೊಂದು ನಿಘಂಟು

ಬ್ರಿಟನ್ನಿನಲ್ಲಿ ಒಂದು ಹೊಸಾ ಶಬ್ದಕೋಶ ಬಂದಿದೆಯಂತೆ. ಅದೊಂದು ತರಹದ ತುಲನಾತ್ಮಕ ಬಹುಭಾಷಾ ಬೈಗಳ ನಿಘಂಟು. ಇಂಗ್ಲಿಷ್, ಫ್ರೆಂಚ್, ಜರ್ಮನ್, ಸ್ಪ್ಯಾನಿಶ್ ಮತ್ತು ಇಟಾಲಿಯನ್ ಭಾಷೆಗಳಲ್ಲಿ ಹೇಗೆ ಬಯ್ಯಬೇಕೆಂದು ಅದು ತಿಳಿಸುತ್ತದೆ. ಯಾವ ಯಾವ ಬೈಗಳು ಯಾವ ಯಾವ ಭಾಷೆಯಲ್ಲಿ ಹೇಗೆ ಭಾಷಾಂತರಿಸಲ್ಪಡಬೇಕೆಂದು ಅದರಲ್ಲಿ ವಿವರಿಸಲ್ಪಟ್ಟಿದೆ. ಬರೇ ಹತ್ತು ರೂಪಾಯಿ ಬೆಲೆಗೆ ನೀವು ಐದು ಭಾಷೆಗಳಲ್ಲಿ ಬಯ್ಯಲು ಕಲಿಯಬಹುದು. ಹೋಟೆಲ್ ಮಾಣಿಗಳನ್ನು ಹೇಗೆ ಬೈಯಬೇಕು, ರೈಲುಗಳಲ್ಲಿ ಸಹಪ್ರವಾಸಿಕರನ್ನು ಹೇಗೆ ಬೈಯಬೇಕು ಇತ್ಯಾದಿ ವಿವರ ಅದರಲ್ಲಿದೆ.

ಬಯ್ಗಳಿಲ್ಲದ ಭಾಷೆ ಇಲ್ಲ. ಆದರೆ ಕೆಲಭಾಷೆಗಳು ಬೈಯಲು ಉಳಿದೆಲ್ಲವುಗಳಿಗಿಂತ ಹೆಚ್ಚು ಶಕ್ತಿಯುತವಾಗಿರುತ್ತವೆ. ಹಿಂದುಸ್ತಾನಿ ಬಯ್ಯುವುದಕ್ಕೆ ಅತ್ಯುತ್ತಮವೆಂದು ಇಲ್ಲಿ ನೆಲಸಿದ ಯುರೋಪಿಯನ್ನರು ಕೂಡ ಭಾವಿಸಿದರು. ಬಯ್ಯಬೇಕೆಂದಾಗ ಅವರು ತಮ್ಮ ರಾಜಾ ಇಂಗ್ಲೀಷನ್ನು ತೊರೆದು ಹಿಂದುಸ್ತಾನಿಗೆ ತಿರುಗಿ "ಸುವ್ವರ್‌ಕೇ ಬೇಟೇ!" ಇತ್ಯಾದಿ ಪ್ರಯೋಗಗಳನ್ನು ಮಾಡುತ್ತಿದ್ದರು. ಅದಕ್ಕೇ ಹಿಂದುಸ್ತಾನಿಯನ್ನು ಗಂಡು ಭಾಷೆ ಅನ್ನುವುದು.

ಒಂದೇ ಅರ್ಥ ಬರುವ ಬೈಗಳ ಶಬ್ದಗಳು ಬೇರೆ ಬೇರೆ ಭಾಷೆಗಳಲ್ಲಿ ಹೇಗೆ ಬೇರೆ ಬೇರೆ ತರಹದ ಶಕ್ತಿಯನ್ನು ತೋರಿಸುತ್ತವೆಂದು ನೋಡಿದರೆ ಆಶ್ಚರ್ಯವಾಗುತ್ತದೆ. ಹಿಂದುಸ್ತಾನಿಯ "ಸುವ್ವರ್" ಅನ್ನೇ ತೆಗೆದುಕೊಳ್ಳಿ. ಇದು

ಸಂಸ್ಕೃತದ "ಸೂಕರ"ದ ಅಪಭ್ರಂಶ ರೂಪ. ಆದರೆ "ಹೇ ಸೂಕರ, ತ್ವಂಕ ಸ್ಮಾತ್ ಇಹ ಆಗತಃ" ಎಂದು ಬಯ್ದು ನೋಡಿ ಅದನ್ನು ಕೇಳಿ ಬಯ್ಸಿಕೊಂಡವನೂ ನಕ್ಕಾನು. "ಏ ಹಂದಿ!" ಎಂದು ಕನ್ನಡದಲ್ಲಿ ಹೇಳಿ ನೋಡಿ. ಅದು ಬಹಳ ನಿತ್ರಾಣ ಬೈಗಳೇ ಆಗಿ ಕೇಳಿಸುತ್ತದೆ. ಇಂಗ್ಲೀಷಿನ "ಪಿಗ್" ಕೂಡ ಹಿಂದುಸ್ತಾನಿಯ "ಸುವ್ವರ್"ನಲ್ಲಿ ಅಡಕವಾದ ದ್ವೇಷ ತಿರಸ್ಕಾರ ಅಹಂಕಾರ ದರ್ಪಗಳನ್ನು ಸೂಚಿಸಲಾರದು.

ತಮಿಳು ಸಾಹಿತ್ಯಿಕ ಅರ್ಥವನ್ನು ಸೂಕ್ಷ್ಮವಾಗಿ ಅಭಿವ್ಯಂಜಿಸಲು ಹೇಗೊ ಹಾಗೆ ಬೈಗಳನ್ನೂ ಸಮರ್ಥವಾಗಿ ಮಾಡಬಲ್ಲ ಭಾಷೆ. "ಎನ್ನಡಾ!" ಎಂಬುದನ್ನೇ ತೆಗೆದುಕೊಳ್ಳಿ. ಇದರ ಅರ್ಥ "ಏನೋ!" ಎಂದು. ಆದರೆ ತೆಲುಗಿನ "ಏಮಿರಾ" ಆಗಲಿ, ಕನ್ನಡದ "ಏನಲಾ" ಆಗಲಿ ಕಡೆಗೆ ಹಿಂದುಸ್ತಾನಿಯ "ಕ್ಯೋಂರೇ" ಆಗಲಿ "ಎನ್ನಡಾ"ದಷ್ಟು ಅರ್ಥಗರ್ಭಿತವಾಗಿ ಹೇಳುವವನ ದರ್ಪವನ್ನೂ ಕೇಳುವವನ ಅಲ್ಪತ್ವವನ್ನೂ ಸೂಚಿಸಲಾರದು. ಕನ್ನಡದ "ಏನಲೇ" ತಮಿಳಿನ "ಎನ್ನಡಾ"ಕ್ಕೆ ಹತ್ತಿರ ಬರುತ್ತದೆ. ಆದರೂ ಆ ತ್ರಾಣ ಇದಕ್ಕಿಲ್ಲ. ತಮಿಳಿನ "ಪೋಡಾ! ಪೋಡಾ!" (ಹೋಗೋ ಹೋಗೋ) ಕೂಡ ತತ್ಸಮಾನ ದ್ರಾವಿಡ ಭಾಷಾ ಪದಗಳಿಗಿಂತ ಸತ್ತ್ವಶಾಲಿಯಾದದ್ದು. ಅದನ್ನೇ ಇಂಗ್ಲಿಷಿಗೆ ತರ್ಜುಮೆ ಮಾಡಿ "ಗೋ ಗೋ!" ಎಂದರೆ ನೀವು ಗೌ ಎಂದು ನಗುವಿರಿ. ಇಂಗ್ಲಿಷ್ ಶಬ್ದಕ್ಕೆ ಆ ಅರ್ಥಸಂಪತ್ತಿ ಇಲ್ಲವೇ ಇಲ್ಲ.

ಕೆಲ ಶಬ್ದಗಳು ಒಂದು ಭಾಷೆಯಿಂದ ಇನ್ನೊಂದಕ್ಕೆ ಹೋದಾಗ ತಮ್ಮ ಶಕ್ತಿಯನ್ನು ಅಪಾರವಾಗಿ ಹೆಚ್ಚಿಸಿಕೊಳ್ಳುತ್ತವೆ. ಹಿಂದುಸ್ತಾನಿಯ "ಹಲಕಾ" ಎಂಬ ಶಬ್ದ ತೆಗೆದುಕೊಳ್ಳಿರಿ. ಅದರ ಅರ್ಥ ಹಗುರು. "ಬಹುತ್ ಹಲಕಾ ಆದಮಿ ಹೈ" ಅಂದರೆ ಹಿಂದುಸ್ತಾನಿಯಲ್ಲಿಯೂ ಬೈಗಳ ಮಾತೇ ನಿಜ. ಕನ್ನಡಕ್ಕೆ ಅದನ್ನು ಅನುವಾದಿಸಿ "ಹಗುರ ಮನುಷ್ಯ!" ಅಂದರೆ ನೀವು "ಹಾಗಾದರೆ ಅವನಿಗೆ ವಿಮಾ ಏಜಂಟರ ಕಾಟ ಇಲ್ಲ" ಎಂದುಕೊಳ್ಳುತ್ತೀರಿ. ಬದಲಿಗೆ ಹಿಂದುಸ್ತಾನಿಯನ್ನು ಕನ್ನಡಕ್ಕೆ ಇದ್ದಕ್ಕಿದ್ದಂತೆ ಹಾಗೆ ಎತ್ತಿತಂದು ಅದಕ್ಕೆ ಕನ್ನಡದ 'ಟ' ಪ್ರತ್ಯಯವನ್ನು ಹಚ್ಚಿನೋಡಿ. "ಏ ಹಲಕಟ್!" ಇದನ್ನು ಪ್ರಯೋಗಿಸಿದರೆ ಅದಕ್ಕೆ ಗುರಿಯಾದವನು ಹಲ್ಲು ಕಡಿದು ನಿಮ್ಮ ಮೇಲೆ ಏರಿ ಬರುವುದು ಖಂಡಿತ.

"ಅಯ್ಯಾ, ಎಂದೊಡೆ ಸ್ವರ್ಗ. ಎಲವೋ ಎಂದೊಡೆ ನರಕ"—ಎಂದೋ ಏನೋ ವಚನಕಾರರು ಹೇಳಿದ್ದಾರೆ. ವಚನಕಾರರ ಕಾಲದ ನಂತರದ ಎಂಟು ಶತಮಾನಗಳಲ್ಲಿ "ಅಯ್ಯಾ" ಶಬ್ದದ ಅರ್ಥಾಂತರವನ್ನು ನೋಡಿ ತುಸು ಸೋಜಿಗವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಅಯ್ಯಾ ಶಬ್ದ ಜಂಗಮರ ಹೆಸರುಗಳ ಕೊನೆಯಲ್ಲಿ ಮಾತ್ರ ಉಳಿದುಕೊಂಡಿದೆ. ಅದು ಹೊಗಳಿಕೆಯೂ ಅಲ್ಲ, ತೆಗಳಿಕೆಯೂ ಅಲ್ಲ. ಕರಾವಳಿ ಜಿಲ್ಲೆಗಳಲ್ಲಿ "ಅಯ್ಯಾ" ಎಂದರೆ ಬಡವರು ಒಡೆಯರನ್ನು ಸಂಬೋಧಿಸುವ ಶಬ್ದವಾಗಿದೆ. ಮೈಸೂರು ಪ್ರದೇಶದಲ್ಲಿ ಮಾತ್ರ ಅದು ಬೇರೆ ಅರ್ಥವನ್ನೇ ಸಂಪಾದಿಸಿಕೊಂಡಿದೆ. "ಏನಯ್ಯಾ! ನೀನು ಹೀಗೆ ಮಾಡಬಹುದೆ!" ಎಂದು ಕೇಳಿದರೆ ಅದು ಅಪ್ಪಟ ಬೈಗಳಲ್ಲ—ಆದರೆ ದುಯ್ಯಂಪ್ರತಿಯ ಬೈಗಳ ಸ್ಥಾನಮಾನಕ್ಕೆ ಏರುತ್ತದೆಂಬುದು ಖಂಡಿತ.

ಕೆಲವು ಬೈಗಳ ಮಾತುಗಳು ತುಂಬಾ ಜನಪ್ರಿಯವಾಗಿ ಸವೆದು ಹೋಗುವುದುಂಟು. ಉತ್ತರ ಕರ್ನಾಟಕದಲ್ಲೆಲ್ಲ ಕೇಳಿಬರುವ ಅವ್ವನನ್ನು ಕುರಿತ ಕೆಲ ಮಾತುಗಳನ್ನು ನೋಡಿ. ಇದು ಸಂಭಾವಿತರ ನುಡಿಗಳಲ್ಲಿ ಕೂಡ ಅನಾಯಾಸವಾಗಿ ಸೇರಿಕೊಂಡು ನಾಗರಿಕತ್ವವನ್ನು ಪಡೆದಿವೆ. ನಾಗರಿಕತ್ವವನ್ನೇ ಏಕೆ, ಪಾವಿತ್ರ್ಯವನ್ನು ಕೂಡ. ಏಕೆಂದರೆ ತುಂಬ ಹೆಸರುವಾಸಿಯಾದ ಸ್ವಾಮಿಗಳೊಬ್ಬರು ಸಂಭಾವಿತರಿಂದ ತುಂಬಿದ ಮಿಶ್ರ (ಸ್ತ್ರೀ ಪುರುಷ) ಸಭೆಯಲ್ಲಿ ಭಾಷಣ ಮಾಡುವಾಗ ಈ ಮಾತನ್ನು ಪ್ರಯೋಗಿಸಿದ್ದನ್ನು ನಾನು ಕೇಳಿದ್ದೇನೆ. ಕೆಲವರಂತೂ ವಾಕ್ಯದ ಪ್ರಾರಂಭದಲ್ಲೊಮ್ಮೆ ಮುಕ್ತಾಯದಲ್ಲೊಮ್ಮೆ ಈ ಪದಪುಂಜವನ್ನು ಪ್ರಯೋಗಿಸದಿದ್ದರೆ ಅದು ವ್ಯಾಕರಣ ಶುದ್ಧ ವಾಕ್ಯವೇ ಅಲ್ಲ ಎಂದು ಭಾವಿಸುತ್ತಾರೆ.

ಇಂಗ್ಲಿಷಿನ ಬಗ್ಗೆ ನಾನು ಕೆಲ ಹಗುರ ಮಾತುಗಳನ್ನು ಹೇಳಿದೆ. ಆದರ ಅರ್ಥ ಇಂಗ್ಲಿಷಿನಲ್ಲಿ ಒಳ್ಳೊಳ್ಳೆ ಬೈಗಳು ಇಲ್ಲವೆಂದಲ್ಲ. ಅನುವಾದಿಸಲಿಕ್ಕೆ ಅಸಾಧ್ಯವೇ ಆದ ಬೈಗಳ ಸಂಪತ್ತು ಇಂಗ್ಲಿಷಿನಲ್ಲಿದೆ. ಉದಾಹರಣೆಗೆ "ಬ್ಲಡಿ ಫೂಲ್"ನ್ನು ಹೇಗೆ ಅನುವಾದಿಸುತ್ತೀರಿ ಹೇಳಿ! "ಸ್ಕೌಂಡ್ರೆಲ್", "ರ್ಯಾಸ್ಕಲ್", "ಬಗ್ಗರ್"—ಇವಾವುದಕ್ಕೂ ಸಮಾನ ಪದಗಳು ಕನ್ನಡದಲ್ಲಿ ಸಿಗುವುದೇ ಇಲ್ಲ. "ಘಟಿಂಗ", "ಧಡ್ಡ", "ಬೆಂಕಿ" ಇತ್ಯಾದಿ ಯಾವ ಶಬ್ದವೂ ತೃಪ್ತಿಕರವಾಗಿ ಆ ಇಂಗ್ಲಿಷ್ ಬೈಗಳನ್ನು ಪ್ರತಿನಿಧಿಸುವುದಿಲ್ಲ.

ತಮಿಳಿನಲ್ಲಿರುವ "ಭಡವಾ" ಮಾತ್ರ ಅವುಗಳ ಹತ್ತಿರ ಹತ್ತಿರ ಬರುತ್ತದೆ. ಅದು ಹಿಂದಿಯಿಂದ ಬಂದ ಎರವಲು ಅಂತ ದ್ರಾವಿಡ ಕಳಗದವರಿಗೆ ಗೊತ್ತಿಲ್ಲ ವಾದ್ದರಿಂದ ಇನ್ನೂ ಉಳಿದುಕೊಂಡಿದೆ.

ಇದಕ್ಕಿಂತಲೂ ರುಚಿರುಚಿಯಾದ ಬೈಗಳ ಚರ್ಚೆಯನ್ನು ನೀವು ಇಲ್ಲಿ ನಿರೀಕ್ಷಿಸಿರಬಹುದು. ಆದರೆ ನಿಮ್ಮನ್ನು ನಿರಾಶೆಗೊಳಿಸಬೇಕಾಗಿದೆ. "ಭಾರತ ದಲ್ಲಿನ ಬೈಗಳ ತುಲನಾತ್ಮಕ ವಿಚಾರ ಮತ್ತು ಅವುಗಳ ಸಾಮಾಜಿಕ ಹಿನ್ನೆಲೆ" ಎಂಬ ಮಹಾ ಪ್ರಬಂಧವನ್ನು ಬರೆದು ನಾನು ಡಾಕ್ಟರೇಟ್ ಗಳಿಸಬೇಕೆಂದಿ ದ್ದೇನೆ.

## ದ್ರೋಣಾಚಾರ್ಯರನ್ನು ಕಂಡೆ

ಮೊನ್ನೆ ಒಂದು ದಿನ ನನ್ನ ಪರಿಚಯದ ತರುಣಿಯೊಬ್ಬಳು ತನ್ನ ಎರಡು ವರ್ಷದ ಮಗುವಿನೊಡನೆ ನಮ್ಮ ಮನೆಗೆ ಬಂದಿದ್ದಳು. ಮಗು ಬಹಳ ಬೆಳ್ಳ ಗಾಗಿತ್ತು. ಮುಖ ಗುಂಡಗಾಗಿತ್ತು. ಹಣೆ ಉಬ್ಬಿ ವಿಶಾಲವಾಗಿತ್ತು. ಮಗು ವನ್ನು ನಾನು ಅಶ್ವತ್ಥಾಮಾಚಾರ್ರೀ ಎಂದು ಕರೆದೆ. ಮಹಾಭಾರತದ ಅಶ್ವತ್ಥಾಮ ಬೆಳ್ಳಗಿದ್ದನೋ ಗುಂಡಗಿದ್ದನೋ ಹೇಗಿದ್ದನೋ ನನಗೆ ಗೊತ್ತಿಲ್ಲ. ಆದರೆ ಈ ಮಗುವನ್ನು ನೋಡಿದೊಡನೆ ನನಗೆ ಅಶ್ವತ್ಥಾಮನ ನೆನಪಾಗಿತ್ತು. ಮಗುವಿಗೂ ಆ ಹೆಸರು ಮೆಚ್ಚಿಕೆಯಾದಂತೆ ಕಂಡಿತು. ಅದು ಕೇಕೆಹಾಕುತ್ತ "ಅಚ್ಚತ್ತಾಮ" ಅಂದು ಉರುಹೊಡೆಯುತೊಡಗಿತು.

ಆ ರಾತ್ರಿ ನನಗೆ ಅಶ್ವತ್ಥಾಮನದಲ್ಲ, ಅವನಪ್ಪನ ಭೆಟ್ಟಿಯಾಯಿತು. ದ್ರೋಣಾಚಾರ್ಯರು ಹಾಳುಬಿದ್ದ ಸ್ವರ್ಗದಲ್ಲಿ ಸ್ವರ್ಗಂಗೆಯ ತಟದಲ್ಲೊಂದು ಬಂಡೆಗಲ್ಲ ಮೇಲೆ ಕುಳಿತು ಯೋಚನಾಮಗ್ನರಾಗಿದ್ದರು. ದ್ರೋಣಾಚಾರ್ಯ ರನ್ನು ನಾನು ಹಿಂದೆಂದೂ ಕಂಡಿದ್ದಿಲ್ಲ. ಆದರೆ ಅವರೇ ದ್ರೋಣಾಚಾರ್ಯರೆಂದು ನನಗೆ ಗೊತ್ತಾಗಿಹೋಯಿತು. ಅದು ಹೇಗೆಂದು ನನಗೇ ತಿಳಿಯದು. ಆರನೇ ಇಂದ್ರಿಯ, ಇಂದ್ರಿಯಾತೀತ ಪ್ರಜ್ಞೆ ಎಂದೆಲ್ಲ ಹೇಳುತ್ತಾರಲ್ಲ ಅದು ಇರ ಬಹುದು. ಅಥವಾ ಪತ್ರಿಕೋದ್ಯೋಗಿಗಳಲ್ಲಿರುವ ವಾಸನಾಶಕ್ತಿ ಇರಬಹುದು.

"ಕುರುಕುಲಗುರವೇ ಭಾರದ್ವಾಜಾಯ ದ್ರೋಣಾಯ ಸಗೋತ್ರೋದ್ಭವೋ

ಅಹಂಭೋ ಲಾಂಗೂಲಾಚಾರ್ಯಃ ಅಭಿವಾದಯೇ" ಎಂದು ಸಂಧ್ಯಾ ಮಂತ್ರದಲ್ಲಿ ಗೋತ್ರೋಚ್ಚಾರಣ ವಾಕ್ಯವನ್ನು ನೆನಪಿಗೆ ಬಂದಷ್ಟು ಜ್ಞಾಪಿಸಿ ಕೊಂಡು ಕಿವಿಗಳನ್ನು ಮುಟ್ಟಿಕೊಂಡು ದ್ರೋಣಾಚಾರ್ಯರಿಗೆ ನಮಸ್ಕರಿಸಿದೆ.

ದ್ರೋಣಾಚಾರ್ಯರು ಬೆಚ್ಚಿಬಿದ್ದು, ಆ ಮೇಲೆ ಹುಬ್ಬು ಗಂಟಿಕ್ಕಿ "ಏಹ್, ಯಾರಯ್ಯ ನೀನು? ಇಲ್ಲಿಗೆ ಹೇಗೆ ಬಂದೆ? ಸಾಯದ ಹೊರತು ಇಲ್ಲಿಗೆ ಈ ಕಾಲದಲ್ಲಿ ಯಾರೂ ಬರಲ್ಲ. ಆದರೆ ನಿನ್ನ ಕಂಡರೆ ಸತ್ತವನ ಹಾಗೆ ಕಾಣಲ್ಲ" ಎಂದು ಕೇಳಿದರು.

"ಇಲ್ಲಾ ಸಾರ್, ಪೂರಾ ಬದುಕಿದ್ದೇನೆ. ನಿದ್ದೆ ಮಾಡಿದ್ದೆ. ಬಹಳ ಸುಸ್ತಾಗಿತ್ತು. ಸತ್ತಿದ್ದೇನೆ ಅಂತ ಇಲ್ಲಿಯ ದೂತರು ನನ್ನ ಕರೆದುಕೊಂಡು ಬಂದರೋ ಏನೋ. ನನ್ನ ಹೆಸರು ಲಾಂಗೂಲಾಚಾರ್ಯ ಅಂತ. ತಮ್ಮದೇ ಗೋತ್ರದವ. ಅದಕ್ಕೇ ಹೃದಯ ತುಂಬಿಬಂದು ಗೋತ್ರಾಭಿವಾದನ ಮಾಡಿದೆ."

"ಭಾರದ್ವಾಜ ಗೋತ್ರದವರಿಗೆ ಹೃದಯ ತುಂಬಿಬರುವುದಿಲ್ಲ. ಅವರನ್ನು ಪ್ರಚೋದಿಸುವುದು ಬುದ್ಧಿ. ನಮಗೆ ಹೃದಯವೇ ಇಲ್ಲವೇನೋ ಅಂತ ನನಗೆ ಒಮ್ಮೊಮ್ಮೆ ತೋರುತ್ತದೆ. ನಮಗೆ ಪ್ರಚಂಡವಾದ ಅಹಂಕಾರವಿದೆ. ಆ ಅಹಂಕಾರಕ್ಕೆ ಪೆಟ್ಟು ಬಿದ್ದರೆ ನಾವು ಅತ್ಯಂತ ಅಮಾನುಷವಾಗಿ ಪ್ರತೀಕಾರ ಮಾಡಬಲ್ಲೆವು. ನನ್ನ ಚರಿತ್ರೆಯನ್ನೇ ನೋಡು. ನನ್ನ ಮಗನ ಕೆಲಸ ನೋಡು."

ನಾನು ಯೋಚಿಸಿದೆ. "ಹೌದೆನಿಸುತ್ತದೆ" ಎಂದೆ. "ನಮ್ಮ ಭಾರದ್ವಾಜೀ ಯರ ನೆನಪು ಅತ್ಯಂತ ದೀರ್ಘವಾದದ್ದೆಂದು ತೋರುತ್ತದೆ. ನಮಗೆ ಏನನ್ನೂ ಮರೆಯಲು ಸಾಧ್ಯವಾಗುವುದಿಲ್ಲ. ಅದೇ ನಮ್ಮ ಅಮಾನುಷತೆಗೆ ಹೇಗೋ ಹಾಗೆ ನಮ್ಮ ಬುದ್ಧಿಶಕ್ತಿಗೂ ಕಾರಣವೋ ಏನೋ."

"ಹೌದು. ಮಹಾಭಾರತ ಎಲ್ಲಿಂದ ಆರಂಭವಾಯಿತು? ದ್ರುಪದನ್ನ ಶಿಷ್ಯರಿಂದ ಕಟ್ಟಿಸಿ ನನ್ನ ಕಾಲ ಬುಡದಲ್ಲಿ ಕೆಡವಿಸಿಕೊಳ್ಳುತ್ತೇನೆ ಅಂತ ನಾನು ಪ್ರತಿಜ್ಞೆ ಮಾಡಿದಲ್ಲಿಂದ ಅಂತ ನನಗೆ ಒಮ್ಮೊಮ್ಮೆ ಅನಿಸುತ್ತೆ. ಆತ ನನ್ನ ಗುರುತೇ ಇಲ್ಲ ಅಂತ ನಟಿಸಿ ನನ್ನನ್ನು ಅವಮಾನ ಮಾಡಿದ್ದು ಮಹಾಪ ರಾಧ ನಿಜ. ಆದರೆ ಈ ಅಪರಾಧಕ್ಕೆ ನಾನು ತಕ್ಷಣ ದಂಡನೆ ಮಾಡಬಹು ದಿತ್ತು. ಅವನ ಜುಟ್ಟು ಹಿಡಿದು ಸಿಂಹಾಸನದಿಂದ ಎಳೆದುಹಾಕಿ ಅವನ ಮೆರೆ

ವಿನ ಪರೆಯನ್ನು ಕಳಚಿಹಾಕಬಹುದಿತ್ತು. ಬದಲಿಗೆ ಅವನನ್ನ ಶಿಷ್ಯರಿಗೆ ಹೆಡ ಮುರಿಗೆ ಬಿಗಿಸುತ್ತೇನೆ ಅಂತ ನಾನು ಯಾಕೆ ಪ್ರತಿಜ್ಞೆ ಮಾಡಿದೆ ? ಆದಕ್ಕಾಗಿ ಎಷ್ಟು ದೀರ್ಘ ದ್ವೇಷವನ್ನು ಸಾಧಿಸಿದೆ. ಬಹುಶಃ ನಾನು ಹೀಗೆ ಮಾಡಿರ ದಿದ್ದರೆ ಮುಂದಿನ ಅನಾಹುತ ತಪ್ಪುತ್ತಿತ್ತೇನೋ. ಉಗ್ರಕೋಪ, ಅದನ್ನು ಹತ್ತಿಕ್ಕಿಕೊಂಡು ಅಗ್ನಿಹೋತ್ರಿ ಅಗ್ನಿಯನ್ನು ಕಾಪಾಡಿಕೊಳ್ಳುವ ಹಾಗೆ ಒಳಗೇ ವರ್ಷಾನುವರ್ಷ ಸಾಕಿ ಸಲಹುತ್ತ ಒಂದು ದಿನ ದಾಹವನ್ನು ಹೊತ್ತಿಸೋದು— ಈ ಪ್ರವೃತ್ತಿ ನಮ್ಮನ್ನ ಅದಮ್ಯವಾಗಿ ಪ್ರಚೋದಿಸುತ್ತೆ. ನಮ್ಮ ಕ್ರೋಧ ತೀರುವವರೆಗೆ ನಮ್ಮ ಮಾನವತೆ ಮರೆಯಾಗಿರುತ್ತೆ. ಆದಾದ ಮೇಲೆ ನಾವು ನಮ್ಮನ್ನೇ ದ್ವೇಷಿಸೋಕೆ ಸುರುಮಾಡುತ್ತೇವೆ. ಪಾಂಡವ ಪುತ್ರರನ್ನ, ನಿದ್ದೆ ಯಲ್ಲಿದ್ದವರನ್ನ ಸಿಗಿದು ಹಾಕಿದ ಅಶ್ವತ್ಥಾಮನ ಕೃತ್ಯವನ್ನು ಸ್ವರ್ಗದಿಂದ ನೋಡಿದ ಮೇಲಂತೂ ನನಗೆ ಘೋರವಾದ ಆತ್ಮಗ್ಲಾನಿ ಆಯಿತು."

"ಹೌದು, ನಾವು ಸಾಮಾನ್ಯರ ಹಾಗೆ ಬುದ್ಧಿಯನ್ನ ಸಿಟ್ಟಿನ ಕೈಲಿ ಕೊಡಲ್ಲ, ಸಿಟ್ಟನ್ನ ಬುದ್ಧಿಯ ಕೈಲಿ ಕೊಡತೀವಿ—"

"ನೀನು ಇಡೀ ವಿಷಯನ್ನ ಒಂದು ಚುಟುಕು ಮಾತಿನಲ್ಲಿ ಹೇಳಿದಿ. ಬುದ್ಧಿಪ್ರಧಾನರ ದೋಷವೇ ಇದು ಅಂತ ಕಾಣುತ್ತೆ. ನಿಗ್ರಹ ನಮ್ಮ ಕೈಲಿ ಆಯುಧವಾಗುತ್ತೆ. ಮಸೆಯುವ ಕಲ್ಲಾಗುತ್ತೆ. ವಿಧಿಯೋ ಮುಷ್ಟಿ ಆಗಲ್ಲ."

"ಮತ್ತು ಎಲ್ಲಾ ತೀರಿ ಮೀರಿದ ಮೇಲೆ ಆತ್ಮವಿಮರ್ಶೆ ನಮ್ಮ ಬದುಕನ್ನ ನರಕವಾಗಿ ಮಾಡುತ್ತೆ."

"ನಮ್ಮ ಶರೀರ ಸ್ವರ್ಗದಲ್ಲೇ ಇದ್ದರೂ ನಾವು ನರಕವನ್ನು ಅನುಭವಿಸು ತ್ತೇವೆ" ಎಂದರು ಆಚಾರ್ಯರು.

"ದ್ರುಪದನ ಪ್ರಸಂಗವನ್ನ ಎತ್ತಿದಿರಿ ಆಚಾರ್ಯವರ್ಯ. ಪ್ರಪಂಚದಲ್ಲೆ ಅಸಮಾನವಾದ ವಿದ್ಯೆಯ ಪ್ರಭುಗಳಾಗಿಯೂ ತಮಗೆ ಒಂದು ಹಸುವಿಗಾಗಿ ಸ್ನೇಹಿತನನ್ನ ಬೇಡೋ ಪ್ರಸಂಗ ಯಾಕೆ ಬಂತು ?"

"ಅದೇ ಬ್ರಾಹ್ಮಣರ ಟ್ರಾಜಡಿ ಕಣಯ್ಯ. ಅಂಧಂ ತಮಃ ಪ್ರವಿಶಂತಿ ಯೇ ವಿದ್ಯಾಮುಪಾಸತೇ ಅಂತ ಈಶಾವಾಸ್ಯದಲ್ಲಿ ಹೇಳಿದ್ದು ನಮಗೇನೇ ಅಂತ ಸಂಶಯ ಬರುತ್ತೆ. ಈ ವಿದ್ಯೆಯನ್ನೇ ಆರಾಧಿಸುತ್ತ ಬಂದದ್ದು ನಮ್ಮ ತಪ್ಪು. ಬ್ರಾಹ್ಮಣವಿದ್ಯೆ ಸ್ವತಃ ಸಂಪತ್ತನ್ನ ಉತ್ಪಾದಿಸಲಿಕ್ಕೆ ಅಸಮರ್ಥವಾಗೋ

ಮಟ್ಟಿಗೂ ವಿಶೇಷೀಕೃತವಾಯಿತು. ನೀವೀಗ over-specialisation ಅಂತೀರಲ್ಲ—ಅದು, ವಿದ್ಯೆ ಅಂತ ಕರಿಯೋ ಪದಾರ್ಥ ಒಂದು skill ಮಾತ್ರ ಆಯಿತು. ಅದು ಸ್ವತಃ ಏನನ್ನೂ ಉತ್ಪಾದಿಸಲಿಕ್ಕೆ ಅಸಮರ್ಥವಾಗಿತ್ತು.”

“ಆದರೆ ಆಚಾರ್ಯ, ತಮ್ಮಂಥಾ ಜಗದೇಕ ಪಂಡಿತರಿಗೆ ಕಾಲು ಹಿಡಿದು ಬರುವ ವಿದ್ಯಾರ್ಥಿಗಳು ಸಿಗಬಹುದಾಗಿತ್ತಲ್ಲ?”

“ಇಲ್ಲ, ದ್ವಾಪರದಲ್ಲಿ ಆಗಲೇ ಬ್ರಾಹ್ಮಣರ ಇಳಿಗಾಲ ಪ್ರಾರಂಭವಾಗಿ ಬಿಟ್ಟಿತ್ತು. ಅವರ ವಿದ್ಯೆಯ ದೌರ್ಬಲ್ಯ ಕ್ಷತ್ರಿಯರಿಗೆ ಅರ್ಥವಾಗಿ ಹೋಗಿತ್ತು. ತ್ರೇತೆಯಲ್ಲಿ ಬ್ರಾಹ್ಮಣ ಪುರೋಹಿತಶ್ರೇಷ್ಠರು ಅರಣ್ಯದಲ್ಲಿ ವಾಸವಾಗಿದ್ದರು. ಚಕ್ರವರ್ತಿ ದಿಲೀಪ ಪುರೋಹಿತ ವಸಿಷ್ಠರ ಬಾಗಿಲಿಗೆ ಬಂದು ಸಲಹೆ ಕೇಳಿದ. ದ್ವಾಪರದಲ್ಲಿ ರಾಜರು ಪುರೋಹಿತರನ್ನು ಅರಮನೆಯಲ್ಲೇ ಅಥವಾ ಅದರ ಸಮೀಪ ಇರಿಸಿಕೊಂಡು ಕರಸಿಕೊಳ್ಳತೊಡಗಿದರು. ನಿಮ್ಮ ಈಗಿನವರ ಮಾತಿನಲ್ಲಿ ಹೇಳೋದಾದರೆ spiritual power became subordinated to temporal power. ಎಂಥಾ ವಿದ್ವಾಂಸನೇ ಆದರೂ ತನ್ನ ಅನ್ನವನ್ನು ಸ್ವತಂತ್ರವಾಗಿ ತಾನೇ ಹುಟ್ಟಿಸಿಕೊಳ್ಳಲಾರನಾದರೆ ಅವನ ಪ್ರಾಪ್ತಿ ಭಿಕ್ಷೆಗಿಂತ ಸ್ವಲ್ಪ ಮಾತ್ರ ಮೇಲ್ಮಟ್ಟದ ಸೇವೆಯಾಗುತ್ತೆ.”

“ಬಹುಶಃ ದ್ವಾಪರದಷ್ಟು ಹೊತ್ತಿಗೆ ವಿದ್ಯಾವಂತರ ಸಂಖ್ಯೆ ಬಹಳವಾಗಿ—ನನ್ನ ಇಂಗ್ಲಿಷ್ ಶಬ್ದಗಳನ್ನು ಆಚಾರ್ಯರು ಕ್ಷಮಿಸಬೇಕು—over-supply ಆಯಿತೇನೋ ಅಂತ.”

“ಅದೂ ನಿಜವೇ. ಬ್ರಾಹ್ಮಣರು ಶರೀರ ಶ್ರಮವನ್ನ ಬಿಟ್ಟರು, ತಪಸ್ಸನ್ನ ಬಿಟ್ಟರು. ವಿದ್ಯೆಯೊಂದನ್ನೇ ನಂಬಿದರು. ಆದ್ದರಿಂದ ವಿದ್ಯಾವೈಶ್ಯರಾದರು. ವೈಶ್ಯನಿಗೆ the customer is always right ಅಂತ ನೀವು ಕಲಿಯುಗದವರು ಹೇಳುತ್ತೀರಲ್ಲ, ಹಾಗಾಯಿತು ನಮಗೂ.”

“ಓ ಆಚಾರ್ಯ, ತಾವು ಹಳೇ ಮಾತು ಹೇಳುತ್ತಿದ್ದೀರಿ. ಭಾರತದ ಈಗಿನ ವೈಶ್ಯರಿಗೆ the customer is always right ಆಗಿ ಉಳಿದಿಲ್ಲ. ಅವರು ಗಿರಾಕಿಗೆ ಡಿಕ್ಟೇಟ್ ಮಾಡತಾರೆ. ಕಣ್ಣಿಗೆ ಕಾಣದ ಅವರ ಸೂತ್ರಗಳು ಸರಕಾರಗಳನ್ನೇ ಎಬ್ಬಿಸುತ್ತವೆ, ಉರುಳಿಸುತ್ತವೆ” ಎಂದೆ ನಾನು.

“ದ್ವಾಪರದಲ್ಲಿ ಬ್ರಾಹ್ಮಣನಿಗೆ ಆದದ್ದು ಕಲಿಯಲ್ಲಿ ಕ್ಷತ್ರಿಯನಿಗೂ ಆಯಿತು

ಅನ್ನು ಹಾಗಾದರೆ” ಎಂದು ದ್ರೋಣಾಚಾರ್ಯರು ಒಂದು ತರದ ತಾಮಸ ಸಮಾಧಾನದಿಂದ ಹೇಳಿದರು.

“ಅದಿರಲಿ ಆಚಾರ್ಯ, ತಾವು ವಿದ್ಯೆ ಹೇಳುವಾಗ ಜಾತಿಭೇದ ಮಾಡಿದಿರಿ ಅಂತ ಆಕ್ಷೇಪ ಇದೆಯಲ್ಲ. ಉದಾಹರಣೆಗೆ, ತಾವು ಕರ್ಣನನ್ನು ಧನುರ್ಧಾರಿಗಳ ಶರ್ಯತ್ತಿನಲ್ಲಿ ಜಾತಿ ಹಿಡಿದು ಹೀಯಾಳಿಸಿದಿರಿ ಅಂತ ವ್ಯಾಸರು ವರದಿ ಮಾಡಿದ್ದಾರೆ.”

“ಕರ್ಣನ ವಿರುದ್ಧ ನನಗೇನೂ ಇದ್ದಿಲ್ಲ ಲಾಂಗೂಲ. ನನಗೆ ಅರ್ಜುನನ ಬಗ್ಗೆ ಒಂದು ತರಹದ ಮೋಹ ಹುಟ್ಟಿಬಿಟ್ಟಿತ್ತು. ಎಲ್ಲಾ ಮಾಸ್ತರ ಜನರಿಗೂ ಇದು ಆಗುತ್ತೆ. Fancy ಅನ್ನು. ಈತ ನನಗೆ ಹೆಸರು ತರುತ್ತಾನೆ ಅನ್ನೋ ಸ್ವಾರ್ಥ ಅನ್ನು. ತನ್ನ pet ಶಿಷ್ಯನನ್ನು ಮೀರಿಸುವವರು ಯಾರಾದರೂ ಕಾಣಿಸಿದರೆ ಅವರಿಗೆ ನಿರುತ್ಸಾಹ ಉಂಟುಮಾಡೋ ಚಪಲ ಬರುತ್ತೆ. ಯಾವ professorರನ್ನ ಬೇಕಾದರೂ ಕೇಳು. ಅಲ್ಲದೆ, ನನಗೆ ಸಂಬಳ ಕೊಡುವವರ ಹುಡುಗನನ್ನ ಗೆಲ್ಲಿಸದೇ ಹೋದರೆ ಅವರು ಏನು ಹೇಳಬಹುದಾಗಿತ್ತು! ನೀನೇ ಹೇಳು.”

“ಆದರೆ ಕರ್ಣ ಕ್ಷತ್ರಿಯ ಆಗಿದ್ದರೆ ಅಥವಾ ಕ್ಷತ್ರಿಯ ತಾಯಿಯ ಮಗ ಅಂತ ಆಗ ತಮಗೆ ತಿಳಿದಿದ್ದರೆ ತಾವು ಅವನನ್ನ ಅಷ್ಟು ಹೀಯಾಳಿಸುತ್ತಿರಲಿಲ್ಲ ಅಲ್ಲವೆ?”

“ಇರಬಹುದು. ಒಬ್ಬರನ್ನ ಕೆಳಗೆ ತಳ್ಳಬೇಕು ಅನಿಸಿದರೆ ಅತಿ ಅನುಕೂಲವಾದ ಅಥವಾ ಸುಲಭವಾಗಿ ಸಿಗುವ ಅಸ್ತ್ರವನ್ನ ಉಪಯೋಗಿಸುತ್ತೇವಲ್ಲವೆ? ಅವನು ಸೂತಪುತ್ರ ಅಲ್ಲದೆ ಹೋಗಿದ್ದರೆ ಮತ್ತೇನಾದರೂ ಸಣ್ಣ ಮಾತು ಹೇಳಿ ಅವನ ತೇಜೋವಧೆ ಮಾಡಬಹುದಾಗಿತ್ತು. ಹೇಗಾದರೂ ಮಾಡಿ ಅರ್ಜುನನ್ನ ಗೆಲ್ಲಿಸಬೇಕಾಗಿತ್ತು ನನಗೆ.”

“ಆದರೆ ಬಡಪಾಯಿ ಕರ್ಣ ತಮ್ಮ ಈ ವರ್ತನೆಯಿಲ್ಲದಿದ್ದರೆ ಅರ್ಜುನನನ್ನ ಮೀರಿಸಬಹುದಾಗಿತ್ತಲ್ಲವೆ?”

“ಅದು ಮಾತ್ರ ಬರೇ–ರೆ. ನೀನು ಕರ್ಣನ ದೌರ್ಬಲ್ಯಗಳನ್ನ ಸಂಪೂರ್ಣ ಮರೆತಿದ್ದೀ. ಅವನು ಹೆಚ್ಚುಮಟ್ಟಿಗೆ ಸ್ವಯಂಶಿಕ್ಷಿತ ವೀರ. ಮತ್ತು ಎಲ್ಲಾ self-made ಜನರ ಹಾಗೆ ಅವನಿಗೆ ಅತಿಯಾದ ಆತ್ಮವಿಶ್ವಾಸ ಇತ್ತು.

ಯಾವುದೇ ವಿದ್ಯೆಯ ಸೂಕ್ಷ್ಮಗಳನ್ನ ತಿಳಿಯಕ್ಕೆ, ಅಥವಾ ಅದರ ಇತಿಮಿತಿಗಳನ್ನ ಗ್ರಹಿಸಕ್ಕೆ ಆತ್ಮವಿಶ್ವಾಸ ಮಾತ್ರ ಸಾಲದು, humility—ವಿನಯ—ಬೇಕು. ಕರ್ಣನಿಗೆ ವಿನಯ ಕಮ್ಮಿ ಇತ್ತು. ತಾನು ತಪ್ಪಬಹುದು ಅನ್ನೋ ಸಾಧ್ಯತೇನ ಆತ ಸ್ವೀಕರಿಸಲಿಕ್ಕೇ ತಯಾರಿದ್ದಿಲ್ಲ."

"ಕರ್ಣನ ಮಾತು ಬಂತು ಅನ್ನೋಕೆ ಕೇಳತೀನಿ. ಅಷ್ಟೆಲ್ಲಾ self-confidence ಇದ್ದೂ ಕರ್ಣ ಯಾಕೆ ದ್ರೌಪದೀ ಸ್ವಯಂವರದಲ್ಲಿ ಮತ್ಸ್ಯಭೇದನ ಮಾಡಲಿಕ್ಕೆ ತಪ್ಪಿದ?"

"ಅದೃಷ್ಟ ಅಂತ ಹೇಳಬಹುದು. ಅಥವಾ ಅದನ್ನೇ ಇನ್ನೊಂದು ತರಹ ಹೇಳೋದಾದರೆ ತಾನು ಸೂತಪುತ್ರ ಅನ್ನೋ ಪ್ರಜ್ಞೆ ತಾನು ಕ್ಷತ್ರಿಯರಿಗಿಂತ ಶ್ರೇಷ್ಠ ತೋರಿಸೋ ಚಪಲವನ್ನೂ ಅವನ ಸ್ವಭಾವದಲ್ಲಿ ಸೇರಿಸಿಬಿಟ್ಟಿತ್ತು. ಆದ್ದರಿಂದ ಯಾವಾಗಲೂ ತನ್ನ ಕಾರ್ಯದ ಕಡೆ ಏಕಾಗ್ರತೆ ಸಾಧಿಸೋದು ಅವನಿಂದ ಆಗತಿರಲಿಲ್ಲ. ಪ್ರತಿಯೊಂದು ಕೆಲಸ ಮಾಡುವಾಗಲೂ ಇತರರು ತನ್ನ ಹಿರಿಮೆಯನ್ನ ಲಕ್ಷಿಸಬೇಕು ಅನ್ನೊ ಆತುರ ಇರುತ್ತಿತ್ತು. ಅವನು ಅತಿಯಾದ ಪ್ರೇಕ್ಷಕನಿಷ್ಠ—audience conscious—ನಟನ ಹಾಗೆ ಏಕಾಗ್ರನಾಗೋ ಬದಲಿಗೆ ವ್ಯಗ್ರನಾಗಿಬಿಡುತ್ತಿದ್ದ. ಆದ್ದರಿಂದಲೇ ಅತ್ಯಂತ ಬಿಕ್ಕಟ್ಟಿನ ಪ್ರಸಂಗಗಳಲ್ಲಿಯೇ ಅವನ ಗುರಿ ತಪ್ಪುತ್ತಿತ್ತು ಅಂತ ನನಗೆ ಅನಿಸೋದು."

"ಏಕಲವ್ಯನ ಹೆಬ್ಬೆರಳನ್ನು ಕತ್ತರಿಸಿ ತೆಗೆದುಕೊಂಡದ್ದು ತಮಗೆ ತುಂಬಾ ಅಪಕೀರ್ತಿ ತಂದಿದೆ ಆಚಾರ್ಯ! ನಮ್ಮ ಒಬ್ಬ ಕವಿಗಳಂತೂ ಅದರ ಮೇಲೆ 'ಬೆರಳ್ಗೆ ಕೊರಳ್' ಅನ್ನೋ ನಾಟಕಾನೇ ಬರೆದುಬಿಟ್ಟಿದ್ದಾರೆ; ಅಲ್ಲದೆ ಶೂದ್ರ ತರುಣನೊಬ್ಬ ಕುಲೀನನನ್ನು ಮೀರಿಸಬಾರದು ಎಂಬ ಜಾತಿದ್ವೇಷದಿಂದ ಈ ಅನ್ಯಾಯ ಮಾಡಿಸಿದಿರಿ ಅನ್ನೋ ಆಕ್ಷೇಪಕ್ಕೆ ನೀವೇನು ಹೇಳುತ್ತೀರಿ?" ಅಂತ ನಾನು ಮತ್ತೊಂದು ಬಾಣ ಎಸೆದೆ.

ದ್ರೋಣಾಚಾರ್ಯರು ಸ್ವಲ್ಪ ಯೋಚನಾಮಗ್ನರಾದರು. ಆ ಮೇಲೆ ಹೇಳಿದರು: "ಈ ಪ್ರಶ್ನೆಗೆ ನಾನು ಆಗಲೇ ಉತ್ತರ ಕೊಟ್ಟುಬಿಟ್ಟಿದ್ದೇನೆ. ಒಬ್ಬ ಬ್ರಾಹ್ಮಣನನ್ನ ಮೇಲೆತ್ತೋಕೆ ನಾನು ಏಕಲವ್ಯನ ಬೆರಳು ಕೊಂಡೆ ಅಂತ ಆಗಿದ್ದರೆ ನನ್ನ ಮೇಲೆ ಈ ಆರೋಪ ಸರಿಯಾಗಿ ಕೂರುತ್ತಿತ್ತು. ನಾನಿದನ್ನ ಒಬ್ಬ ಕ್ಷತ್ರಿಯನ ಸಲುವಾಗಿ ಮಾಡಿದೆ. ಕ್ಷತ್ರಿಯ ಏನು ನನ್ನ ತಲೆ! ನನ್ನ

ಯಜಮಾನನ ಕುಲದ ಸಲುವಾಗಿ ಮಾಡಿದೆ. ಬ್ರಾಹ್ಮಣರು ಆಗಲೆ ಕ್ಷತ್ರಿಯರಿಗೆ ವಶರಾಗಿದ್ದರು ಅಂತ ನಿನಗೆ ಹೇಳಿಯೆ ಇದ್ದೇನೆ. ನಿನಗೆ ಗೊತ್ತಿಲ್ಲ ಲಾಂಗೂಲ, ಕರ್ಣನನ್ನ ಅವಮಾನಿಸಿದ್ದಕ್ಕಿಂತಲೂ ಏಕಲವ್ಯನ ಪ್ರಕರಣ ನನ್ನ ಮನಸ್ಸಾಕ್ಷಿಗೆ ಮುಳ್ಳಾಗಿದೆ. ಆ ಹುಡುಗ ಕಾಡಿನಲ್ಲಿ ಬೆಳೆದವ. ಕ್ಷತ್ರಿಯರಿಗೆ ಮಾತ್ರವೇ ಮೀಸಲೆಂದು ನಾನು ತಿಳಿದುಕೊಂಡಿದ್ದ ಸತ್ಯ—honour—ಪ್ರಜ್ಞೆ ಈ ಕಾಡು ಹುಡುಗನಿಗೆ ಎಲ್ಲಿ ಬಂದೀತು ಅಂದುಕೊಂಡಿದ್ದೆ. ನಾನು ಬೆರಳು ಕೇಳಿದರೆ ಆರ್ಯನೀತಿಯನ್ನರಿಯದ ಆತ, 'ಹೋಗಿ ಹೋಗಿ! ಗುರುದಕ್ಷಿಣೆ ಕೇಳೋಕೆ ನೀವೇನೂ ನನಗೆ ವಿದ್ಯೆ ಹೇಳಿಲ್ಲ. ನಿಮ್ಮ ಮೂರ್ತೀನ ಮುಂದಿಟ್ಟುಕೊಂಡು ನಾನೇ ಸ್ವಪ್ರಯತ್ನದಿಂದ ಕಲಿತೆ. ಕೊಡಲ್ಲ ಹೋಗಿ!' ಅಂತ ಹೇಳಬಹುದಂತ ನಾ ತಿಳಕೊಂಡಿದ್ದೆ. ಹಾಗೇನಾದರೂ ಹೇಳಿದ್ದರೆ ನನಗೆ ತುಂಬಾ ಸಂತೋಷವಾಗುತ್ತಿತ್ತು. ಆದರೆ ಕಸಕ್ ಅಂತ ಕತ್ತರಿಸಿ ಕೊಟ್ಟುಬಿಟ್ಟ ಹುಂಬ ಹುಡುಗ. ಎಲ್ಲಿ ಆರ್ಯ, ಎಲ್ಲಿ ಅನಾರ್ಯ! ಆರ್ಯ ದ್ರುಪದ ರಾಜ, ಕೊಟ್ಟ ಮಾತು ನಿರಾಕರಿಸಿ ಗುರುಪುತ್ರ, ಸಹಪಾಠಿ ಆದ ನನ್ನ ಗುರುತೇ ಇಲ್ಲ ಎಂದುಬಿಟ್ಟ. ಅನಾರ್ಯ ಏಕಲವ್ಯ ಬರೇ ಸಾಂಕೇತಿಕ ಗುರುವಿಗೆ ಬೆರಳ ಗುರುದಕ್ಷಿಣೆ ಕೊಟ್ಟ. ಈ ತ್ಯಾಗದ ಮುಂದೆ ನಿರ್ಭಾವವಾಗಿ ಇರಬಹುದಾಗಿದ್ದ ವ್ಯಕ್ತಿ ಮಹಾಭಾರತದಲ್ಲಿ ಕೃಷ್ಣ ಒಬ್ಬನೇ. ಈ ದ್ರೋಣಾಚಾರ್ಯನಿಗೆ ಹೃದಯ ಇರಲಿಕ್ಕಿಲ್ಲ. ಆದರೆ ಬಹಳ ಸೂಕ್ಷ್ಮವಾದ ನ್ಯಾಯಾನ್ಯಾಯ ಪ್ರಜ್ಞೆ ಇದೆ. ತಿರುಗಿ ಆ ಬೆರಳನ್ನು ಜೋಡಿಸುವ ಶಕ್ತಿ ನನಗಿದ್ದಿದ್ದರೆ ಜೋಡಿಸಿಕೊಟ್ಟು ಧಿಕ್ ಸೇವಾಧರ್ಮಂ ಅಂತ ಆಸ್ಥಾನದಿಂದ ಎದ್ದು ಹೋಗಿಬಿಡುತ್ತಿದ್ದೆ."

"ನೀವು ಏಕಲವ್ಯನ ಬೆರಳು ಕೊಳ್ಳದಿದ್ದರೆ ಏನಾಗುತ್ತಿತ್ತು ಅಂತ ನಿಮ್ಮ ತರ್ಕ? ಅವನು ಮೂರು ಲೋಕದ ಗಂಡ. ಸ್ಥಾನವನ್ನು ಅರ್ಜುನನಿಂದ ಕಸಿದುಕೊಳ್ಳುತ್ತಿದ್ದ ಅಂತೀರಾ?" ನಾನು ಕೇಳಿದೆ.

ದ್ರೋಣಾಚಾರ್ಯರು ಅವಸರದಿಂದ ಹೇಳಿದರು: "ನನ್ನ ಈ ವಿಷಯದಲ್ಲಿ ದಯವಿಟ್ಟು ಹೆಚ್ಚು ಚುಚ್ಚಬೇಡ. ಅದನ್ನು ಯೋಚಿಸಿದಷ್ಟೂ ನಾನು ನನ್ನನ್ನ ತಿರಸ್ಕರಿಸಿಕೋತೀನಿ. ಏಕಲವ್ಯ ಬಹುಶಃ ಮೂರು ಲೋಕದ ಗಂಡ ಪದವಿಗೆ ಸ್ಪರ್ಧಿಸುತ್ತಲೇ ಇರಲಿಲ್ಲ. ಆ ಮಗು ತೀರ innocent ಅಮಾಯಕ ಮನಸ್ಸಿ

ನದು. ಜಗತ್ತನ್ನೇ ಗೆಲ್ಲುವ ವೀರತ್ವದ ಕಲ್ಪನೆಯೆಲ್ಲ ಆರ್ಯರಿಗೇ ವಿಶಿಷ್ಟವಾದದ್ದೋ ಅಂತ ಕೂಡ ನನಗೆ ಸಂಶಯವಾಗುತ್ತದೆ. ಬಹುಶಃ ನಾನು ಹೇಳಿದ್ದರೆ ಆತ ಮುಂದೆ ಧನುಸ್ಸನ್ನೇ ಎತ್ತದಿರಬಹುದಿತ್ತು. ಅಥವಾ ನಾನು ಯುದ್ಧದಲ್ಲಿ ಸತ್ತೆ ಅಂತ ಕೇಳಿ ರೋಷ ಏರಿ ಕೌರವ ಪಕ್ಷದಲ್ಲಿ ಹೋರಾಡಿ ಅರ್ಜುನನನ್ನ ಕೊಲ್ಲಲೂಬಹುದಿತ್ತು. ಆದರೆ ಕೃಷ್ಣ ಬಿಡುತ್ತಿರಲಿಲ್ಲ ಅನ್ನು." ದ್ರೋಣಾಚಾರ್ಯರು ತುಂಬಾ ವಿಚಲಿತರಾಗಿದ್ದರು.

ನಾನು ಸ್ವಲ್ಪ ವಿಷಯ ಬದಲಿಸಿ ಅವರನ್ನು ದ್ರೌಪದೀ ವಸ್ತ್ರಾಪಹರಣದ ಕಡೆ ಕರೆತಂದೆ. "ಆಚಾರ್ಯ, ಈ ಅನ್ಯಾಯ ನಡೆಯುತ್ತಿರುವಾಗ ತಾವು ಕೂಡ ಸಭೆಯಲ್ಲಿ ಯಾಕೆ ಮೌನ ವಹಿಸಿ ತಲೆ ತಗ್ಗಿಸಿದ್ದಿರಿ ?" ಅಂತ ಕೇಳಿದೆ.

"ವತ್ಸಾ, ನೀವು ಕಲಿಯುಗದವರು ದ್ವಾಪರದವರಿಗಿಂತ ಚೆನ್ನಾಗಿ ಯೋಚಿಸುತ್ತೀರಿ. ನಿಜ ಕೇಳಿದರೆ ದ್ವಾಪರದಲ್ಲಿ ಸತ್ಯವಾಗಿ ಯೋಚನಾಶಕ್ತಿ ಇದ್ದವನು ಕೃಷ್ಣ ಒಬ್ಬನೇ. ಭೀಷ್ಮರಲ್ಲ, ನಾನಲ್ಲ, ಕೃಪನಲ್ಲ, ಅಶ್ವತ್ಥಾಮನಲ್ಲ ನಾವೆಲ್ಲ ಶಾಸ್ತ್ರದ ಕೈದಿಗಳಾಗಿದ್ದೆವು. ದ್ರೌಪದಿಯನ್ನ ಅವಳ ಗಂಡ ದುರ್ಯೋಧನನಿಗೆ ಸೋತಿದ್ದ. ಅವಳು ದಾಸಿಯಾಗಿದ್ದಳು. ದಾಸಿಯನ್ನು ಹೊಚ್ಚುವುದು ಬಿಚ್ಚುವುದೆಲ್ಲ ಯಜಮಾನನ ಹಕ್ಕು ಅಂತ ನಮ್ಮ ಕಾಲದಲ್ಲಿ ಶಾಸ್ತ್ರ ಇತ್ತು. ದಾಸಿಯರು ಹೆಚ್ಚು ಕಮ್ಮಿ ನಗ್ನರಾಗಿಯೇ ಇರುತ್ತಿದ್ದರು. ಶಾಸ್ತ್ರವನ್ನೇ ಪ್ರಶ್ನಿಸೋ ಧೈರ್ಯ ನಮಗೆ ಯಾರಿಗೂ ಇರಲಿಲ್ಲ. ನಮ್ಮ ಸಹಾನುಭೂತಿಯೆಲ್ಲ ಅವಳ ಕಡೆಗೇ ಇತ್ತು. ಆದರೆ ನಾವು ಶಾಸ್ತ್ರಹತರಾಗಿದ್ದೆವು."

"ದುರ್ಯೋಧನನ ಬಗ್ಗೆ ತಮ್ಮ ಅಭಿಪ್ರಾಯವೇನು ?" ನಾನು ಪ್ರಶ್ನಿಸಿದೆ.

"ಅವನು ತನ್ನ ಹಿಂದಿನ ಅಥವಾ ಮುಂದಿನ ವಿಜಿಗೀಷು ರಾಜರಿಗಿಂತ ಒಳ್ಳೆಯವನೂ ಅಲ್ಲ, ಕೆಟ್ಟವನೂ ಅಲ್ಲ. ಒಂದು ಮಾತಿನಲ್ಲಿ ಅವನು power monger. ನಮ್ಮ ಕಾಲದ ಕಾನೂನುಗಳನ್ನೆಲ್ಲ ಬಲ್ಲವನು ಆತ. ಆದರ ಮಿತಿಗಳೊಳಗೆ ಅವನು ತನ್ನೆಲ್ಲ ಆಟ ಆಡಿದ. ಆದ್ದರಿಂದ ಭೀಷ್ಮರು, ನಾನು, ಶಲ್ಯನಂಥವರೆಲ್ಲಾ ಅವನ ಪಕ್ಷದಲ್ಲೇ ಹೋರಾಡಬೇಕಾಯಿತು. ದುರ್ಯೋಧನನ ಅತಿ ದೊಡ್ಡ ಹೆಡ್ಡತನವೆಂದರೆ ದೊಡ್ಡ ಸೈನ್ಯಗಳಲ್ಲಿ ಅವನಿಗಿದ್ದ ಭ್ರಾಂತ ವಿಶ್ವಾಸ. ಸೈನ್ಯದ ಗಾತ್ರಕ್ಕಿಂತ ಅದರ ಏಕೀಭಾವ, ಏಕನಾಯಕತ್ವ ಹೆಚ್ಚಿನದೆಂಬುದು ಅವನಿಗೆ ಹೊಳೆಯುತ್ತಲೇ ಇರಲಿಲ್ಲ."

"ಆಚಾರ್ಯರೇ, ಕಡೆಯ ಪ್ರಶ್ನೆ, ನಿಮ್ಮ—greatest hour—ಮಹಾ ಮುಹೂರ್ತ ಯಾವುದು?" ನಾನು ಕೇಳಿದೆ.

ದ್ರೋಣರು ಯೋಚಿಸಿದರು. "ಲಾಂಗೂಲ, ಈ ಯೋಚನೆಯನ್ನು ನೀನೇ ಪ್ರಥಮತಃ ನನ್ನ ತಲೆಯಲ್ಲಿ ಹಾಕಿದಿ. ಮಹಾ ಮುಹೂರ್ತ....ಮಹಾ ಮುಹೂರ್ತ. ಭೀಷ್ಮರಿಗೆ ಮಹಾ ಮುಹೂರ್ತವಿತ್ತು, ಕರ್ಣನಿಗೆ ಮಹಾ ಮುಹೂರ್ತವಿತ್ತು, ಆ ಹುಡುಗ ಏಕಲವ್ಯನಿಗೆ ಮಹಾ ಮುಹೂರ್ತವಿತ್ತು, ಅಭಿಮನ್ಯುವಿಗೂ ಇತ್ತು. ಆದರೆ ದ್ವಾಪರದ ಅದ್ವಿತೀಯ ಚಾಪ ವಿದ್ಯಾ ವಿಶಾರದನಾದ ದ್ರೋಣನಿಗೆ ಮಹಾ ಮುಹೂರ್ತ ಇರಲಿಲ್ಲ, ವತ್ಸಾ. ತಾಯಿ ಯನ್ನರಿಯದೆ ಹುಟ್ಟಿದ. ಚಾಪ ಸಂನ್ಯಾಸ ಮಾಡಿ ಪುತ್ರಶೋಕದಿಂದ ಸಂಮೂಢನಾಗಿದ್ದಾಗ ಸಾವನ್ನರಿಯದೆ ಸತ್ತ." ಮುಂದೆ ಆಚಾರ್ಯರು ಮಾತಾಡಲಿಲ್ಲ. (೧೯೭೪)

## ಈ ಶಬ್ದಕ್ಕೆ ಅಂಜುತ್ತೇನೆ

ಆ ಶಬ್ದವನ್ನು ನೀವು ಜಗತ್ತಿನ ಯಾವ ನಿಘಂಟಿನಲ್ಲಾಗಲಿ ಶಬ್ದಕೋಶ ದಲ್ಲಾಗಲಿ ಕಾಣಲಾರಿರಿ. ಅಮರಸಿಂಹ ತನ್ನ ಅಮರಕೋಶದಲ್ಲಿ ಅದನ್ನು ಸೇರಿಸಿಲ್ಲ. ಕಿಟ್ಟೆಲ್ಲರು ತಮ್ಮ ಮಹಾ ನಿಘಂಟಿನಲ್ಲಿ ಅದನ್ನು ಅಲಕ್ಷಿಸಿದ್ದಾರೆ. ಮನುಷ್ಯಕುಲದ ಅತಿ ಪ್ರಾಚೀನ ನಿಘಂಟಾದ ಯಾಸ್ಕನ ವೈದಿಕ ನಿಘಂಟಿ ನಲ್ಲಿಯೂ ಅದಕ್ಕೆ ಸ್ಥಾನ ದೊರತಿಲ್ಲ. ಚೇಂಬರನ ಟ್ವೆಂಟಿಯತ್ ಸೆಂಚುರಿ ಡಿಕ್ಶನರಿಯಲ್ಲಿ ಕೂಡ ನನಗದು ಸಿಗಲಿಲ್ಲ. ಆದರೂ ಅದು ಮನುಷ್ಯನ ಅತ್ಯಂತ ಪ್ರಾಚೀನ ಶಬ್ದಗಳಲ್ಲಿ ಒಂದಾಗಿದೆ. ಭಾಷೆಗಳು ಬೇರೆಬೇರೆಯಾಗುವ ಮೊದಲೇ ಅದು ಹುಟ್ಟಿದೆ. ನಿಜವಾಗಿ ಬಾಯಿಯನ್ನು ಪೂರ್ತಿಯಾಗಿ ಮುಚ್ಚಿ ಕೊಂಡು ಉಚ್ಚರಿಸಬಹುದಾದ ಏಕಮಾತ್ರ ಶಬ್ದ ಅದು.

ಅದೇ "ಹ್ಂಂಂಂ." ಇದು ಆ ಶಬ್ದವನ್ನು ಕರೆಕ್ಟಾಗಿ ಬರೆಯುವ ವಿಧಾನ ವಲ್ಲವೆಂದು ನಾನು ಬಲ್ಲೆ. ಇದು ಅದರ ಉಚ್ಚಾರಕ್ಕೆ ಸಾಧ್ಯವಿದ್ದಷ್ಟು ಹತ್ತಿರದ ಲಿಪೀಕರಣ ಅಷ್ಟೇ.

"ಹ್ಂಂಂಂ" ಎಂಬುದು ಯಾವ ಅರ್ಥವನ್ನೂ ಹೇಳುತ್ತಿರಬಹುದು.

ಯಾವ ಒಳ್ಳೇ ಅರ್ಥವೂ ಅದಲ್ಲ ಎಂಬುದು ಮಾತ್ರ ಖಾತ್ರಿ. ಮತ್ತು ಕೆಟ್ಟ ಅರ್ಥವೇ ಆದರೂ ಖಂಡಿತವಾಗಿ ಯಾವ ಅರ್ಥ ಎಂಬುದು ನಿಮಗೆ ತಿಳಿಯದೆ ಹೋಗುವುದರಿಂದ ಅದರ ಅರಿಷ್ಟತನ ಇನ್ನಷ್ಟು ಭಯಂಕರವಾಗುತ್ತದೆ. ಅದು ಹುಂಕಾರವಲ್ಲ. ಹುಂಕಾರ ನಿಮ್ಮನ್ನು ಹೆದರಿಸುವುದಕ್ಕಾಗಿ ಉಚ್ಚರಿಸಲ್ಪಡು ತ್ತದೆ. ನೀವು ಶಸ್ತ್ರತ್ಯಾಗಮಾಡಿ ಪಲಾಯನ ಮಾಡಿದರೆ ಅದು ನಿಮ್ಮ ಬೆನ್ನಟ್ಟು ವುದಿಲ್ಲ. ಹ್‌ೞಂಂಕಾರ ಹಾಗಲ್ಲ. ಅದು ನಿಮ್ಮನ್ನು ಬೆನ್ನಟ್ಟಿ ಹೊಡೆಯುತ್ತದೆ.

ನಾನೊಮ್ಮೆ ನಾನು ಜಗತ್ತಿನಲ್ಲೇ ಅತಿ ಶ್ರೇಷ್ಠವೆಂದು ತಿಳಿದುಕೊಂಡಿದ್ದ ನನ್ನ ಒಂದು ಕವಿತೆಯನ್ನು ಒಬ್ಬ ಪ್ರಸಿದ್ಧ ಕವಿಗಳ ಮುಂದೆ ಓದಿದೆ. ತುಂಬಾ ಸಹನೆಯಿಂದ ಕೇಳಿದರು. ಕೊನೆಗೆ "ಹ್‌ೞಂಂಂ" ಎಂದರು. ನನ್ನ ರಕ್ತ ಹೆಪ್ಪು ಗಟ್ಟಿದಂತಾಯಿತು. ಆದರೂ ಅವರ ಸ್ಪಷ್ಟ ಅಭಿಪ್ರಾಯ ತಿಳಿಸಬೇಕೆಂದು ಕೇಳಿದೆ. ಅವರು ಮುಖದಲ್ಲಿ ಯಾವ ಭಾವವನ್ನೂ ಪ್ರಕಟಿಸದೆ "ಹ್‌ೞಂಂಂಂ, ಪರವಾಗಿಲ್ಲ, ಚೆನ್ನಾಗಿದೆ" ಎಂದರು. ಆದರೆ ಅವರ ಹ್‌ೞಂಂಂಂ ಅರ್ಥವೇನಿದ್ದಿರಬಹುದು? "ಹುಡುಗಾ, ಇಂಥಾ ಕವಿತೆಯನ್ನು ನನ್ನ ಮುಂದೆ ಓದಲಿಕ್ಕೆ ತಂದಿಯಲ್ಲಾ, ನಿನ್ನ ಧೈರ್ಯ ದೊಡ್ಡದು" ಎಂದೇ? "ನಿನ್ನನ್ನು ನಿರಾಶೆಗೊಳಿ ಸುವ ಇಷ್ಟ ನನಗಿಲ್ಲ, ಆದರೂ ಇದು ಕವಿತೆ ಎನಿಸುವುದಿಲ್ಲ" ಎಂದೆ? ಅಥವಾ "ಪರವಾಯಿಲ್ಲ. ಬಿಸಿ ನೀರ ಒಲೆಗೆ ಹಾಕುವುದಕ್ಕೆ ಯೋಗ್ಯ ಇದೆ" ಎಂದೆ? ನನ್ನ ಹಳೇ ಕಡತಗಳಲ್ಲಿ ಈ ಕವಿತೆ ನನ್ನ ಕಣ್ಣಿಗೆ ಬಿದ್ದರೆ ಈಗಲೂ ನನಗೆ ಆ ಹ್‌ೞಂಂಂಂ ಕಾರ ನೆನಪಿಗೆ ಬಂದು ಜಗತ್ತಿನಲ್ಲಿ ನನ್ನಂಥ ಮೂಢ ಯಾರೂ ಇಲ್ಲ ಅನಿಸುತ್ತದೆ.

ಮಾಧ್ಯಮಿಕ ಸ್ಕೂಲಿನಲ್ಲಿ ನಮಗೊಬ್ಬ ಹೆಡ್ಮಾಸ್ತರರಿದ್ದರು. ಅವರು ನಮ್ಮಲ್ಲಿ ಯಾರನ್ನಾದರೂ ತಮ್ಮ ಕೋಣೆಗೆ ಕರೆದು "ಹ್‌ೞಂಂಂ" ಎಂದು ಪ್ರಾರಂಭಿಸಿದರೆ ಸಾಕು, ನಮ್ಮ ಚಡ್ಡಿ ಒದ್ದೆಯಾಗುತ್ತಿತ್ತು. ಆಮೇಲೆ ಅವರು "ನಿನ್ನೆ ರಾತ್ರಿ ನೀನು ನಾಟಕದ ಥಿಯೇಟರಿನ ಹತ್ತಿರ ಏನು ಮಾಡು ತ್ತಿದ್ದೆ?" ಅಥವಾ "ಈವೊತ್ತು ಎಷ್ಟು ತಡವಾಗಿ ಶಾಲೆಗೆ ಬಂದೆ?" ಅಥವಾ "ಈವೊತ್ತು ಎರಡನೇ ಪಿರಿಯಡ್ಡಿನಲ್ಲಿ ಮಿಸ್ ಬ್ರಗಾಂಜಾ ಎಂಬವಳ ಮೇಲೆ ಕಾಗದದ ಪಿಲ್ಲೆಟ್ ಒಗೆಯಲ್ಪಟ್ಟಿತಂತಲ್ಲಾ?" ಎಂದು ವ್ಯಾಕರಣ ಶುದ್ಧವಾಗಿ ಪ್ರಶ್ನೆ ಕೇಳುತ್ತಿದ್ದರು. ಅವರ ಕನ್ನಡ ವ್ಯಾಕರಣ ಶುದ್ಧವಾಗಿ

ದ್ದಷ್ಟೂ ಅವರ ಪೂರ್ವ ಹ್‌ಂಂಂಂಕಾರದ ಅರ್ಥ ಹೆಚ್ಚು ಅಮಂಗಲಕರ ವಾಗಿ ಕಾಣಿಸುತ್ತಿತ್ತು. ನಾವು ಏನಾದರೊಂದು ವಿವರಣೆಯನ್ನು ಬಡಬಡಿಸು ತ್ತಿದ್ದೆವು. ಕೇಳಿ ಅವರು ಬರೇ "ಹೀಗೋ?" ಎಂದರೆ ಬದುಕಿದೆವೆಂದರ್ಥ. "ಹ್‌ಂಂಂಂ" ಅಂದರೋ ಅವಾಂತರದ ಭಯ ನಮ್ಮನ್ನು ನಡುಗಿಸಿ ಬಿಡುತ್ತಿತ್ತು. ಅದರ ಹಿಂದೆ ಏನು ಬರುತ್ತದೆ ಎಂಬ ನಂಬಿಕೆ ಇರಲಿಲ್ಲ. ತತ್‌ಕ್ಷಣ ತಮ್ಮ ಮಾರುದ್ದದ ನಾಗಬೆತ್ತ ಹಿರಿದು ಅಂಗೈ ಮೇಲೆ ಆರು ಕಡತಗಳನ್ನವರು ಕೊಡಬಹುದಾಗಿತ್ತು; ಅಥವಾ "ನಿನ್ನ ಮಾತನ್ನು ನಂಬುವುದಿಲ್ಲ. ಇನ್ನಾ ದರೂ ಸತ್ಯ ಹೇಳು" ಎಂದು ಅದಕ್ಕೆ ಅರ್ಥವಾಗಿರಬಹುದು; ಅಥವಾ "ನೀನು ಸುಳ್ಳು ಹೇಳುತ್ತಿದ್ದೀ, ಆದರೆ ಈ ಸಲಕ್ಕೆ ನಿನ್ನನ್ನು ಬಿಡಬೇಕೆಂದಿ ದ್ದೇನೆ" ಎಂಬ ಅಭಿಪ್ರಾಯವಾಗಿರಬಹುದು. "ನೀನು ಈಗ ಹೋಗಬಹುದು" ಎಂದು ಅಪ್ಪಣೆಕೊಟ್ಟರೆ ಕೂಡ ಅದು ಹ್‌ಂಂಂಂಕಾರ ಪೂರ್ವಕವಾಗಿದ್ದರೆ, ಅದರ ಹಿಂದೇನೋ ಅಮಂಗಲಕಾದಿದೆ ಎಂಬ ಭಯ ಉಳಿಯುತ್ತಿತ್ತು. ಅದರ ಅರ್ಥ "ಆಮೇಲೆ ಕ್ಲಾಸಿನಲ್ಲಿ ಎಲ್ಲರ ಮುಂದೆ ನಿನ್ನ ಸಮಾಚಾರ ತೆಗೆದು ಕೊಳ್ಳುತ್ತೇನೆ" ಎಂದಾಗಿರಬಹುದು.

ಯಾವುದೋ ಪೇಚಿನಲ್ಲಿ ಸಿಕ್ಕಿಕೊಂಡು ನಾನು ಒಬ್ಬ ವಕೀಲರ ಹತ್ತಿರ ಹೋದೆ. ಅವರು ನನ್ನ ಅಹವಾಲು ಕೇಳಿಕೊಂಡು ರಿಕಾರ್ಡುಗಳನ್ನು ಮಗುಚಿ ಹಾಕಿ "ಹ್‌ಂಂಂಂ" ಎಂದು ತಮ್ಮಷ್ಟಕ್ಕೇ ಅಂದುಕೊಂಡು "ಕೇಸ್ ಚೆನ್ನಾ ಗಿದೆ, ಜಯ ಸಿಕ್ಕೀತು" ಎಂದು ನನ್ನನ್ನು ಕುರಿತು ಹೇಳಿದರು. ಅವರ ಹ್‌ಂಂಂಂ ಅರ್ಥ ಏನೆಂದು ನನಗೆ ತಿಳಿಯಲೇ ಇಲ್ಲ. ಎರಡು ವರ್ಷಗಳ ನಂತರ ಆ ಕೇಸು ಮುಗಿದಾಗಲೇ ಅವರ ಸ್ವಗತ ಹ್‌ಂಂಂಂಕಾರದ ಅರ್ಥ ತಿಳಿದದ್ದು: "ಒಳ್ಳೇ ಬಕರಾ? ನಿನ್ನ ಹತ್ತಿರ ಕೆಲವು ನೂರನ್ನಾದರೂ ಕಕ್ಕಿಸಿ ಕೊಳ್ಳದಿದ್ದರೆ ನಾನು ಈ ನಾಲ್ಕು ಕೈ ವಕೀಲನಾದದ್ದು ಯಾಕೆ?" ಎಂದು ಅವರು ಹ್‌ಂಂಂಂ ಕಾರದ ಮೂಲಕ ತನಗೇ ಹೇಳಿಕೊಳ್ಳುತ್ತಿದ್ದರು.

ಹೋದ ವರ್ಷ ಏಳೆಂಟು ದಿನ ನಿರಂತರವಾಗಿ ಹೊಟ್ಟೆನೋವಿನಿಂದ ಬಳಲಿದ ನಂತರ ನಾನು ಡಾಕ್ಟರರ ಹತ್ತಿರ ಹೋದೆ. ಅವರು ನನ್ನ ಹೊಟ್ಟೆ ಯನ್ನು ಒತ್ತಿದರು. ಎದೆಯನ್ನು ಆಲಿಸಿದರು. ಕಫ ಪರೀಕ್ಷಿಸಿದರು, ರಕ್ತ ಹೀರಿದರು, ಮಲವನ್ನು ಸೂಕ್ಷ್ಮದರ್ಶಕದಲ್ಲಿ ನೋಡಿದರು. ಆಮೇಲೆ ಮೂತ್ರ

ಪರೀಕ್ಷೆಗಾಗಿ ಮೂತ್ರ ಮಾಡಲು ಬಚ್ಚಲಿನ ಕಡೆ ನನ್ನನ್ನು ಕಳಿಸುತ್ತ "ಹ್‌ಂಂಂ" ಎಂದರು. ನನಗೆ ಜುಬ್ಬೆಂದಿತು. ಬಚ್ಚಲಿನಲ್ಲಿ ತಲೆತಿರುಗಿ ಬಿದ್ದೆ. "ಏನು ಏನಾಯಿತು ?" ಎಂದವರು ನನ್ನನ್ನು ಹಿಡಿದೆತ್ತಿ ಕರೆತಂದು ಪರೀಕ್ಷಾ ಮಂಚದ ಮೇಲೆ ಮಲಗಿಸಿದರು. ನಾನು "ನಿಜ ಹೇಳಿ ಡಾಕ್ಟರ್, ನನ್ನ ಹಾರ್ಟ್ ಹಾಳಾಗಿದೆಯೋ, ಅಥವಾ ಜಠರದಲ್ಲಿ ಕ್ಯಾನ್ಸರೇ ?" ಎಂದು ಕೇಳಿದೆ. "ಛೇ ಛೇ, ಏನೂ ಇಲ್ಲ. ಬರೀ ಅಜೀರ್ಣ" ಎಂದರು. ಹಾಗಾದರೆ "ಹ್‌ಂಂಂ ಎಂದಿರಲ್ಲ ?" ಎಂದು ಸಂಶಯದಿಂದ ಕೇಳಿದೆ. "ಅಯ್ಯೋ ಅದೇ ? ನನ್ನ ಹೆಂಡತಿಯನ್ನ ಈವೊತ್ತು ಮ್ಯಾಟನಿಗೆ ಕರೆದುಕೊಂಡು ಹೋಗಲು ಟಿಕೆಟ್ ರಿಜರ್ವ್ ಮಾಡಿಸುತ್ತೇನೆ ಅಂದಿದ್ದೆ. ಮರೆತೇಹೋಗಿತ್ತು. ಇನ್ನು ಟಿಕೆಟ್ ಸಿಗುವ ಸಂಭವ ಇಲ್ಲ. ಇವೊತ್ತು ಮನೆಯಲ್ಲಿ ಮಂಗಳಾರತಿ ಉಂಟು, ಎಂದು ನೆನೆದೆ. ಹಾಗೇ ಹ್‌ಂಂಂಕಾರ ಹೊರಟಿತು" ಎಂದರು.

ಮನೆಗೆ ಹೋಗಿ ಈ ಕಥೆಯನ್ನು ನನ್ನವಳಿಗೆ ಹೇಳಿದೆ. ಅವಳು "ಹ್‌ಂಂ" ಅಂದಳು. ಮತ್ತೇನೂ ಹೇಳಲಿಲ್ಲ. ನನ್ನ ಆಯುರ್ದಾಯ ಹೆಚ್ಚಿದ್ದಕ್ಕೆ ಸಂತೋಷ ವ್ಯಕ್ತಪಡಿಸಿ ದೇವರಿಗೆ ತುಪ್ಪದ ದೀಪ ಹಚ್ಚಲಿಲ್ಲ. ರಾತ್ರಿಯ ವರೆಗೂ ಅವಳ ಹ್‌ಂಂಂಕಾರದ ಅರ್ಥವನ್ನು ಊಹಿಸುತ್ತ ಕಳೆದೆ. ಕ್ಯಾನ್ಸರ್ ಆಗಿದ್ದರೇನೇ ಚೆನ್ನಾಗಿತ್ತು. ಇನ್‌ಶೂರೆನ್ಸ್ ಹಣ ಸಿಗುತ್ತಿತ್ತು ಎಂದು ಕೊಂಡು ಹ್‌ಂಂಂಗುಟ್ಟಿದಳೇ ಎಂಬ ಅನುದಾರ ಸಂಶಯವೊಂದು ಸುಳಿದು ಹೋಯಿತು. ಆಗ ಒಮ್ಮೆಲೇ ನನಗೆ ನೆನಪಾಯಿತು. ಪರವೂರಿನಲ್ಲಿ ಕಾಲೇಜು ಕಲಿಯುವ ನನ್ನ ಮಗಳಿಗೆ ಕಳಿಸುವುದಕ್ಕೆ ಒಂದು ರಿಸ್ಟ್‌ವಾಚ್ ತರುತ್ತೇನೆಂದು ಹಿಂದಿನ ರಾತ್ರಿ ಪ್ರಾಮಿಸ್ ಮಾಡಿ ಅದನ್ನು ಪೂರ್ತಿ ಮರೆತಿದ್ದೆ. "ನೀವು ಗಂಡಸರೆಲ್ಲಾ ಒಂದೇ" ಎಂಬರ್ಥದಲ್ಲಿ ಅವಳು ಹ್‌ಂಂಂ ಎಂದಿದ್ದಳು.

(ಸ್ಫೂರ್ತಿ : ಆಲನ್ ಸ್ಮಿತ್‌ರ ಲೇಖ) (೧೯೭೧)

## ಮರಳಿ ಸೈಕಲ್ ಯುಗಕ್ಕೆ

ಅತ್ತೆಗೊಂದು ಕಾಲವಂತೆ, ಸೊಸೆಗೊಂದು ಕಾಲವಂತೆ. ಆದರೆ ಕಳೆದು ಹೋದ ಅತ್ತೆಯ ಕಾಲ ಮತ್ತೊಮ್ಮೆ ಆ ಅತ್ತೆಗೇ ಸಿಗುವುದು ಆಗದ ಮಾತು.

ಅತ್ತೆಯ ಕಾಲ ಹೋದದ್ದು ಹೋಗಿಯೇ ಹೋಯಿತು. ಬೈಸಿಕಲ್ಲಿಗೆ ಮಾತ್ರ ಕಳೆದುಹೋದ ಕಾಲ ಈಗ ಪುನಃ ಬರತೊಡಗಿದೆ. ನಲವತ್ತೈದು ವರ್ಷಗಳ ಹಿಂದೆ ನಾನು ಹೈಸ್ಕೂಲಿನಲ್ಲಿದ್ದಾಗ ಬೈಸಿಕಲ್ಲು ರಸ್ತೆಯ ರಾಣಿಯಾಗಿತ್ತು. ಅದರ ಮೇಲೆ ಸವಾರಿ ಮಾಡುವವನು ಒಂದು ತರಹದ ಅತಿಮಾನವನೇ ಆಗಿ ಕಾಣಿಸುತ್ತಿದ್ದ. ನನ್ನಜ್ಜಿಗಂತೂ ಬೈಸಿಕಲ್ಲಿನಲ್ಲಿ ಸವಾರಿ ಮಾಡುವವನು ಯಕ್ಷಿಣಿಯನ್ನು ವಶಪಡಿಸಿಕೊಂಡವನೇ ಆಗಿದ್ದ. ಇಲ್ಲದಿದ್ದರೆ ಒಂದಂಗುಲ ಅಗಲದ ಎರಡೇ ಚಕ್ರಗಳು ಒಂದರ ಮುಂದೊಂದು ತಿರುಗುತ್ತ ನೆಲದಮೇಲೆ ಮುಂದೋಡುವುದು ಹೇಗೆ ತಾನೇ ಸಾಧ್ಯ ? ಅದು ನನ್ನ ಅಜ್ಜಿಯ ಕಾಲದ ಚಲನ ಸಿದ್ಧಾಂತಕ್ಕೆ ವಿರುದ್ಧವಾದ ಪವಾಡವಾಗಿತ್ತು. ಆದ್ದರಿಂದ ಬೈಸಿಕಲ್ಲಿನ ಹತ್ತಿರ ಹೋಗುವುದು ಅತ್ಯಂತ ಅಪಾಯಕರವೆಂದು ಅಜ್ಜಿ ನಮಗೆ ಹೇಳುತ್ತಿದ್ದರು. ಒಮ್ಮೆ ಯಕ್ಷಿಣಿ, ಅದೂ ಗಂಡು ಹುಡುಗರನ್ನು, ಹಿಡಿದುಕೊಂಡು ಬಿಟ್ಟರೆ ಆಮೇಲೆ ಜೀವಮಾನವೆಲ್ಲ ಬಿಡುವ ಮಾತೇ ಇಲ್ಲ. ನಾವೊ, ನಮ್ಮ ಕೌಮಾರ್ಯದ ಹುಮ್ಮಸ್ಸಿನಲ್ಲಿ ಬೈಸಿಕಲ್ ಅಂತರ್ಗತ ಯಕ್ಷಿಣಿಯನ್ನು ವಶಪಡಿಸಿಕೊಳ್ಳುವ ಕನಸು ಕಾಣುತ್ತಿದ್ದೆವು. ಚೆನ್ನಾಗಿ ಪಾಲಿಶ್ ಮಾಡಿದ ಸೈಕಲನ್ನು ಒಮ್ಮೆ ಮುಟ್ಟುವ ಅವಕಾಶಕ್ಕೋಸ್ಕರ ನಾವು, ಮುಂದೆ ಹೊಸ ಯೌವನದಲ್ಲಿ ಸುಂದರಿತರುಣಿಯನ್ನು ಆಕಸ್ಮಿಕವಾಗಿ ಸ್ಪರ್ಶಿಸುವ ರೋಮಾಂಚಕ್ಕೋಸ್ಕರ ಚಡಪಡಿಸಿದ ರೀತಿಯಲ್ಲೇ, ಚಡಪಡಿಸುತ್ತಿದ್ದೆವು.

ಆದರೆ ನಲುವತ್ತರ ದಶಕ ಆರಂಭವಾಗುವ ಮೊದಲೇ ಸೈಕಲ್ ಅತ್ತೆಯ ಕಾಲ ಮುಗಿದು ನಾಲ್ಕು ಗಾಲಿಯ ಮೇಲೆ ಓಡುವ ಕಾರಿನ ಸೊಸೆ ರಸ್ತೆಯ ಮೇಲೆ ಪ್ರಭುತ್ವ ಪಡೆದುಬಿಟ್ಟಿದ್ದಳು. ನನ್ನ ಎರಡು ವರ್ಷದ ಮಗ ಆಗಲೇ ಕಾರಿನ ಡ್ರೈವರಾಗುವ ಕನಸು ಕಾಣತೊಡಗಿದ್ದ. ಸೈಕಲ್ಲು ಬಡವರ ಕುದುರೆಯಾಗಿಬಿಟ್ಟಿತ್ತು. ಸ್ವಾತಂತ್ರ್ಯ ಸಿಕ್ಕಿದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಸೈಕಲ್ಲು ಪೂರ್ತಿ ಇಳಿಕಾಲವನ್ನು ಕಂಡುಬಿಟ್ಟಿತು. ನಾವೂ ವರ್ಷಕ್ಕೆ ಲಕ್ಷಾಂತರ ಸೈಕಲ್ಲುಗಳನ್ನು ಉತ್ಪಾದಿಸುತ್ತಿದ್ದೆವು. ಅವು ನಮಗಿಂತಲೂ ಹಿಂದುಳಿದಿದ್ದ ಆಗ್ನೇಯ ಏಶಿಯ ಮತ್ತು ಆಫ್ರಿಕದ ರಾಷ್ಟ್ರಗಳಿಗೆ ರಫ್ತುಮಾಡಲು ಮಾತ್ರ ಯೋಗ್ಯವಾದ ವಾಹನಗಳೆನಿಸಿದ್ದವು. ಪತ್ರಿಕೆ ಹಂಚುವ ಹುಡುಗರು ಕೂಡ ಸೈಕಲ್ಲನ್ನು ತಮ್ಮ ಗೌರವಕ್ಕೆ ತಕ್ಕ ವಾಹನವಲ್ಲವೆಂದು ಮೋಪೆಡ್

ಉಪಯೋಗಿಸಲಾರಂಭಿಸಿದ್ದರು.

ಆದರೀಗ ಸೈಕಲ್ ಅತ್ತೆಯ ಕಾಲ ಮರಳಿ ಬರುತ್ತಿದೆ. ಈ ಅದೃಷ್ಟ ಪರಿವರ್ತನೆಗೆ ನಾವು ನಮ್ಮ ಅರಬ ಮಿತ್ರರಿಗೆ ಋಣಿಗಳಾಗಿರಬೇಕು. ಅವರು ಪೆಟ್ರೋಲಿನ ದರಗಳನ್ನು ನಮಗೆ ಎಟುಕಲಾರದಷ್ಟು ಎತ್ತರಕ್ಕೆ ಏರಿಸಿಬಿಟ್ಟಿದ್ದಾರೆ. ಇದರಿಂದ ಹಿಂದುಳಿದ ಭಾರತ ಮಾತ್ರವಲ್ಲ, ಅಮೆರಿಕದ ಅರ್ಥ ಶಾಸ್ತ್ರಜ್ಞರು ಕೂಡ ಸೈಕಲ್ ಯುಗ ಮರಳಿಬರಬೇಕೆಂದು ವಾದಿಸತೊಡಗಿದ್ದಾರೆ. ಇದನ್ನು ಕೇಳಿ ನನಗೆ ನನ್ನ ಬಾಲ್ಯದ ದಿನಗಳೇ ವಾಪಸ್ಸು ಬರುತ್ತಿರುವಂತೆ ಭಾಸವಾಗುತ್ತಿದೆ. ಯಾರು ತಾನೇ ತಮ್ಮ ಬಾಲ್ಯದ ದಿನಗಳನ್ನು ಪ್ರೀತಿಸುವುದಿಲ್ಲ ಹೇಳಿ !

ನಾನು ಸೈಕಲ್ ನಡೆಸಲಿಕ್ಕೂ ಕಲಿತಿದ್ದೆ, ಆಮೇಲೆ ಕೆಲ ವರ್ಷಗಳಲ್ಲಿ ಕಾರು ನಡೆಸಲಿಕ್ಕೂ ಕಲಿತೆ ; ಪ್ರಥಮ ಸಲ ಏರಿಯಲ್ಲಿ ಗೇರು ಬದಲಾಯಿಸುವ ಅನುಭವ ಉತ್ತೇಜಕವಾದದ್ದೇನೋ ಸರಿ. ಕ್ಲಚ್ ಮೆಟ್ಟುವ ಮತ್ತು ಗೇರಿನ ತಲೆಯನ್ನು ದೂಡುವ ಕ್ರಿಯೆಗಳ ಸಿಂಕ್ರನೈಜೇಶನ್—ಏಕಕಾಲಿಕತೆಯನ್ನು ಮೊದಲ ದಿನದ ಕಾರ್ ಡ್ರೈವಿಂಗಿನಲ್ಲೇ ನಾನು ಗೇರುಗಳ ಕಿರಿಚಾಟ ವಿರಹಿತವಾಗಿ ಸಾಧಿಸಿದ್ದಕ್ಕೆ ಹತ್ತಿರ ಕುಳಿತಿದ್ದ ಡ್ರೈವರ್ ಕುಂಞಕೋಯಾ ನನಗೆ ಶಹಬಾಸ್‌ಗಿರಿಕೊಟ್ಟಾಗ ನಾನು ಉಬ್ಬಿದ್ದೆ. ಆದರೂ ಹದಿನೈದನೇ ವಯಸ್ಸಿನಲ್ಲಿ ಪ್ರಥಮ ಸಲ ಬೈಸಿಕಲ್ಲಿನ ಎಡ ಪೆಡಲ್ ಮೇಲೆ ಕಾಲಿಟ್ಟು ಬಲಗಾಲನ್ನು ಉಪಾಯವಾಗಿ ಬಾರಿನಾಚೆಗೆ ದಾಟಿಸಿ ಬಲ ಪೆಡಲ್ಲಿಗೆ ತಾಗಿಸಿ ಒತ್ತಿ ಸೈಕಲ್ಲನ್ನು ಬೀಳಗೊಡದೇನೇ ಏರಿದ ಪ್ರಥಮಾನುಭವದ ರೋಮಾಂಚದೊಡನೆ ಹೋಲಿಸಿದರೆ ಕಾರಿನ ಗೇರು ಬದಲಿಸುವ ಪ್ರಥಮಾನುಭವದ ಅನುಭೂತಿ ಏನೂ ಅಲ್ಲ. ಬೇಬಿ ಫೋರ್ಡು ಏನು ಹೆಚ್ಚು ಕಡಿಮೆಯಾದರೂ ಪಕ್ಕಕ್ಕೆ ಮಗುಚಿಬೀಳುವ ಭಯವೇನೂ ಇದ್ದಿಲ್ಲ. ಬೈಸಿಕಲ್ಲಿನಲ್ಲಿ ಹಾಗಲ್ಲ. ಕಣ್ಣು, ಕೈ, ಕಾಲುಗಳ ಕೋ ಆರ್ಡಿನೇಶನ್ ಕಾರಿನ ಗೇರ್ ಬದಲಿಸುವಾಗ ಬೇಕಾದ್ದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿಬೇಕು. ಅದೊಂದು ತರಹದ ಅಷ್ಟಾವಧಾನದ ಕಲೆ. ಕಾರು ನಡೆಸುವುದಕ್ಕೆ ಅಂಥಾ ಅವಧಾನಬೇಕಾಗಿಲ್ಲ.

ಕಾರು ಬಿಡುವವನಿಗೆ ತನ್ನ ಬಟ್ಟೆಯ ಸ್ಥಿತಿ ಅದೇನೂ ಮಹತ್ತ್ವದ್ದಲ್ಲ. ಆದರೆ ಸೈಕಲ್ ಬಿಡುವವನಿಗೆ ಹಾಗಲ್ಲ. ಇಂದಿನ ಪ್ಯಾಂಟ್ ಯುಗದಲ್ಲಿ ಅಮೂ ತೊಂದರೆಯ ವಿಷಯವಲ್ಲ ಅನ್ನಿ : ಆದರೆ ನಾವು ಸೈಕಲ್ ಕಲಿಯು

ವಾಗ ಇನ್ನೂ ಧೋತರದ ಯುಗ. ಆಗಿನ ಕಾಲದಲ್ಲಿ ಸೈಕಲ್ ಸವಾರರೇ ಸೃಷ್ಟಿಸಿದ ಸೈಕಲ್ ಕಚ್ಚೆ ಅಥವಾ ಡಬಲ್ ಕಚ್ಚೆಯ ಫ್ಯಾಶನ್ ಲಲನೆಯರಿಗೂ ಆಕರ್ಷಕವಾಗಿತ್ತು. ಎರಡೂ ಕಾಲುಗಳಿಗೆ ಹಾಕಿಕೊಳ್ಳುವ ಈ ಕಚ್ಚೆಯಲ್ಲಿಯೂ ಅವರವರ ಕಲಾ ವೈಖರಿಗನುಸಾರವಾಗಿ ವೈವಿಧ್ಯಗಳಿದ್ದವು. ನಮ್ಮ ಮಾಸ್ತರ್ ಸುಂದರರಾಯರ ಸೈಕಲ್ ಕಚ್ಚೆ ಅತ್ಯಂತ ಎಲಿಗೆಂಟ್ ಅಂತ ಆ ಕಾಲದಲ್ಲಿ ಭಾವಿಸಲಾಗುತ್ತಿತ್ತು. ಅವರು ಸೈಕಲ್ ಏರಿದ್ದು ನಾಕಾಣೆ. ಆದರೆ ಎಂಟುಮೊಳದ ಮದ್ರಾಸ್ ಮಲ್ಲಿನಲ್ಲಿ ಸೈಕಲ್ ಕಚ್ಚೆ ಹಾಕಿ ಕಚ್ಚೆಯ ಎರಡೂ ತುದಿಗಳು ಎರಡೂ ಪಕ್ಕಗಳಲ್ಲಿ ಸ್ವಲ್ಪ ಹೊರನೀಡಿ ಬಾವುಟಗಳಂತೆ ಮೆತ್ತಗೆ ಅಲುಗುತ್ತಿರುವಂತೆ ಧೀರ ಗತಿಯಲ್ಲಿ ಸುಂದರರಾಯರು ಬರುತ್ತಿದ್ದರೆ ನಿಜಕ್ಕೂ ಸುಂದರರಾಯರೆ ಆಗಿರುತ್ತಿದ್ದರು. ಆಗ ಸೈಕಲ್ ಕಚ್ಚೆ ಎಷ್ಟು ಫ್ಯಾಶನೇಬಲ್ ಆಗಿತ್ತೆಂದರೆ, ಏನಿಲ್ಲೆಂದರೂ ಒಬ್ಬ ಉಪವರ ಕನ್ಯೆ ತನ್ನನ್ನು ನೋಡಲು ಬಂದ ಹುಡುಗನನ್ನು ಸೈಕಲ್ ಕಚ್ಚೆ ಕೂಡ ಹಾಕುವುದಿಲ್ಲ ಅಂತ ರಿಜೆಕ್ಟ್ ಮಾಡಿದ್ದು ನನಗೆ ಗೊತ್ತು. ಮಂಗಳೂರು ಕಡೆ ನಾಲ್ಕು ಮೊಳದ ಮುಂಡು ಸುತ್ತಿ, ಅದರ ಹಿಂಬದಿಯ ಕೆಳ ಅಂಚನ್ನು ಮುಂದೆಳೆದು ಮುಂದೆ ಹೊಕ್ಕುಳ ಎದುರಿಗೆ ಸಿಕ್ಕಿಸಿಕೊಂಡು ಸೈಕಲ್ ಸವಾರಿ ಮಾಡುವವರೂ ಇದ್ದರು. ಇದು ಅಸಹ್ಯ ಮಾತ್ರವಲ್ಲ, ಸರಿಯಾಗಿ ಹಾಕಿಕೊಳ್ಳದಿದ್ದರೆ ರಿಸ್ಕೀ ಕೂಡ ಆದ ವಿಧಾನ. ಅದು ಮೀನು ಮಾರುವವರಲ್ಲಿ ಮಾತ್ರ ಜನಪ್ರಿಯವಾಗಿತ್ತು.

ಸೈಕಲ್ ಏರುವುದರಲ್ಲಿ ಕನಿಷ್ಠ ಪಕ್ಷ ಮೂರು ವಿಧಾನಗಳಿವೆ. ಎಡಪೆಡಲ್ ಮೇಲೆ ಎಡಪಾದವಿಟ್ಟು ನಾಲ್ಕು ಕುಂಟು ಹೆಜ್ಜೆಗಳೊಡನೆ ಬೈಕಿಗೆ ಸ್ಪೀಡ್ ಕೊಟ್ಟು ಬಲಕಾಲನ್ನು ಹಿಂದಿನಿಂದ ಬೀಸಿ ವಾಹನದ ಬಲಗಡೆಗೆ ತಂದು ಸೀಟ್ ಮೇಲೆ ಧಪ್ಪನೆ ಕುಳಿತು ಬಲ ಪೆಡಲ್ಲಿಗೆ ಬಲಪಾದವೊತ್ತುವ ವಿಧಾನವೊಂದು. ಎರಡೂ ಕೈಗಳಿಂದ ಹ್ಯಾಂಡಲ್‌ಬಾರ್ ಹಿಡಿದುಕೊಂಡು ಎಡಪಾದವನ್ನು ಹಿಂದಿನ ಗಾಲಿಯ ಪಿನ್ನಿನ ಮೇಲಿರಿಸಿ ಸೈಕಲನ್ನು ತಳ್ಳಿ ಇಡೀ ಮೈಯನ್ನೇ ಸೈಕಲ್‌ಮೇಲೆ ಆಕಾಶದ ಹಾಗೆ ಬಾಗಿಸಿ ಹಾರಿ ಸೀಟಿನ ಮೇಲೆ ಕುಳಿತು ಆಮೇಲೆ ಪೆಡಲುಗಳನ್ನು ವಶಕ್ಕೆ ತೆಗೆದುಕೊಳ್ಳುವುದು ಇನ್ನೊಂದು ವಿಧಾನ. ನನಗೆ ಇವೆರಡೂ ಸೇರುವುದಿಲ್ಲ. ಎರಡನೆಯದರಲ್ಲಿ ಸರ್ಕಸ್ಸಿನ ಲಕ್ಷಣ ಕಾಣಿಸುತ್ತದೆ. ಸ್ವಲ್ಪ ಕಾಮಿಕ್ ಕೂಡ. ಎರಡೂ ವಿಧಾನಗಳನ್ನು

ನಾನು ಸ್ವಲ್ಪ ಅಶ್ಲೀಲವೆಂದೂ ಭಾವಿಸುತ್ತೇನೆ. ನನಗೆ ಮೆಚ್ಚಿಕೆಯಾಗಿರುವುದು ಬಲಗಾಲನ್ನು ನಡುವಿನ ಬಾರಿನ ಮೇಲ್ಭಾಗದಲ್ಲಿ ಎದುರಿಂದಲೇ ಆಚೀಕಡೆಗೆ ಒಯ್ಯುವ ವಿಧಾನ. ಇದನ್ನು ನಾನು ಕಲಾತ್ಮಕ ಎಂದು ಭಾವಿಸುತ್ತೇನೆ; ಏಕೆಂದರೆ ಅದರಲ್ಲಿ ಪ್ರದರ್ಶನಾತ್ಮಕವಾದದ್ದೇನೂ ಇಲ್ಲ. ನೀವು ಇದನ್ನೊಪ್ಪದಿರಬಹುದು. ನಿಮ್ಮ ಅಭಿಪ್ರಾಯ ನಿಮಗೆ.

ಸೈಕಲ್ ಮತ್ತು ಕಾರ್ ಎರಡರ ಡ್ರೈವಿಂಗಿನ ನನ್ನ ಕಲಿಕೆಗಳೂ ಸ್ವಲ್ಪ ರಕ್ತಸಿಕ್ತವಾಗಿವೆ. ಕಾರ್ ಡ್ರೈವಿಂಗಿನ ಮೊದಲ ದಿನ ನನ್ನ ಮಾರ್ಗಕ್ಕೆ ಅಡ್ಡ ಬರುವ ಧಾರ್ಷ್ಟ್ಯ ತೋರಿಸಿದ ಕೋಳಿಯೊಂದು ಚಕ್ರಕ್ಕೆ ಆಹುತಿಯಾಯಿತು. ಹೇಂಟೆಯ ಮಾಲಕನಿಗೆ ಪರಿಹಾರ ಕೊಡುವುದಕ್ಕೆ ನಾನು ಕುಂಞಕೋಯಾನ ಕೈಲಿ ಒಂದು ರೂಪಾಯಿಕೊಟ್ಟೆ. ಅವನು ಕೊಲೆಯಾದ ಕೋಳಿಯನ್ನು ತೆಗೆದುಕೊಂಡೇ ಅದರ ಮಾಲಿಕನಿಗೆ ಹಣ ಕೊಟ್ಟನೋ ಹಾಗೇ ಕೊಟ್ಟುಬಿಟ್ಟನೋ ನನಗೆ ತಿಳಿಸಲಿಲ್ಲ. ನಾನೂ ಕೇಳಲಿಲ್ಲ. ಸೈಕಲ್ ಕಲಿಯುವುದರಲ್ಲಿ ನಾನು ಕೊಟ್ಟ ರಕ್ತಬಲಿ ನನ್ನದೇ—ಮೊಣಕಾಲು ಮತ್ತು ಮೊಣಕೈಯದು. ನನಗೆ ಸೈಕಲ್ ಕಲಿಸಲು ಬೇಣಕ್ಕೆ ಕರೆದುಕೊಂಡು ಹೋದ ಕೇಶವ ಪೈ–ನನ್ನ ಸಹಪಾಠಿ–ಸೀಟ್ ಮೇಲೆ ನನ್ನನ್ನು ಕುಳ್ಳಿರಿಸಿ ಪೆಡಲುಗಳ ಮೇಲೆ ಪಾದಗಳನ್ನು ಇಟ್ಟು ಒತ್ತಲು ಹೇಳಿ "ಏ ಆಚಾರ್ ಹ್ಯಾಂಡಲ್ ಬಾರ್ ತುದಿಗಳನ್ನು ಹಿಡಿದುಕೊಂಡರೆ ಸಾಕು. ಹ್ಯಾಂಡಲ್‌ಬಾರ್ ನೋಡಬೇಡ, ಮುಂದೆ ರಸ್ತೆ ನೋಡು" ಎಂದು ಎಚ್ಚರ ಹೇಳಿ ತಳ್ಳಿಬಿಟ್ಟ. ನಾನು ಹ್ಯಾಂಡಲ್ ಬಾರ್‌ನಿಂದ ಕಣ್ಣು ಎತ್ತಿ ಆದರೆ ಮುಂದಿನ ಗಾಲಿ ತಿರುಗುವುದನ್ನು ಮಂತ್ರಮುಗ್ಧನಾಗಿ ನೋಡುತ್ತ ಪೆಡಲ್ ಒತ್ತಿದೆ. ಎದುರಿನ ಚಕ್ರ ಹೊಯ್ದಾಡುತ್ತಿತ್ತು. ಕೇಶವ ಪೈ ಓಡಿ ಬಂದು ಹಿಡಿಯುವುದರೊಳಗೆ ವಾಹನ ಬಲಬದಿಗೆ ಮಗುಚಿಕೊಂಡು ಬಿತ್ತು. ಗುಡ್ಡದ ಬೆಣಚುಕಲ್ಲಿಗೆ ಮೊಣಕಾಲು ಬಡಿದು ರಕ್ತ ತರ್ಪಣವಾಯಿತು. ಆದರೆ ನಾನು ಹ್ಯಾಂಡಲ್ ಬಾರನ್ನು ಕೈ ಬಿಡಲಿಲ್ಲ! ಮತ್ತೊಮ್ಮೆ ಎಂದರೆ ರಸ್ತೆಯಮೇಲೆ ಪ್ರಪ್ರಥಮ ಸೈಕಲ್ ಸವಾರಿ ಮಾಡಿದಾಗ ಈಸಲ ನಮ್ಮ ಗೋತ್ರ ಪ್ರವರ್ತಕ ಋಷಿಗಳಿಗೆ ಆದದ್ದೇ ನನಗೂ ಆಯಿತು. ನಾನು ಹೆಚ್ಚು ಕಮ್ಮಿ ನಿರ್ಜನವಾಗಿದ್ದ ರಸ್ತೆಯ ಮೇಲೆ ಸಾಕಷ್ಟು ಆತ್ಮವಿಶ್ವಾಸದಿಂದ ಸೈಕಲ್ ಹೊಡೆಯುತ್ತಿದ್ದೆ. ರಸ್ತೆ

ಸ್ವಲ್ಪ ಇಳಿಜಾರಾಗಿದ್ದುದು ನನ್ನ ತಪ್ಪಲ್ಲ. ಒಮ್ಮೆಲೆ ರಸ್ತೆ ತಿರುವಿನಲ್ಲಿ ಹುಡುಗಿಯೊಬ್ಬಳು ಕಾಣಿಸಿಕೊಂಡಳು. ನನ್ನ ಸೈಕಲ್ ಪ್ರಾವೀಣ್ಯವನ್ನು ತೋರಿಸಬೇಕೆಂಬ ಹುಮ್ಮಸ್ಸನ್ನು ತಡೆದುಕೊಳ್ಳಲಾಗಲಿಲ್ಲ. ನಾನು ಎರಡೂ ಕೈಗಳನ್ನು ಹ್ಯಾಂಡಲ್ಲಿನಿಂದ ತೆಗೆದು ಪೆಡಲನ್ನು ಒಂದು ಸುತ್ತು ತಿರುಗಿಸಿದೆ. ವೇಗವನ್ನು ಸಂಪಾದಿಸಿದ ಸೈಕಲ್ ನಾನು ಗಮನಿಸುವ ಮೊದಲೇ ತಿರುವಿಗೆ ಬಂತು. ನಾನು ಹ್ಯಾಂಡಲ್‌ನ್ನು ಹಿಡಿದುಕೊಳ್ಳಲು ಯತ್ನಿಸುತ್ತಿದ್ದಂತೆ ಸೈಕಲ್ ಗಟಾರಕ್ಕೆ ನನ್ನೊಡನೆ ತೆರಳಿತು. ಬಲ ಮೊಣಕೈ ಅಲ್ಲಿ ಬಿದ್ದಿದ್ದ ಮುಳ್ಳು ತಡಿಕೆಗೆ ಸರಿಯಾಗಿ ತೆರೆಯಿತು. ಅಪ್ಸರೆ ತಪೋಭಂಗ ಮಾಡಿದ್ದಳು. ಆದರೆ ಬಿದ್ದ ನನ್ನ ಬಗ್ಗೆ ಏನೊಂದು ಕಾಳಜಿ ಮಾಡದೆ ಅವಳು ಮುಂದೆ ಸಾಗಿದ್ದಳು. ಭಾರತೀಯ ಹುಡುಗಿಯರು ನಿಜಕ್ಕೂ ಕ್ರೂರರು ಅಂದುಕೊಂಡೆ. ಕೆಲ ರೊಮಾಂಟಿಕ್ ಕಾದಂಬರಿಗಳನ್ನೋದಿ ಬೇರೆ ಅಭಿಪ್ರಾಯ ಮಾಡಿಕೊಂಡಿದ್ದ ನಾನು, ಈಗ ಹೆಚ್ಚು ಬುದ್ಧಿವಂತನಾಗಿದ್ದೆ. ನನ್ನನ್ನು ಬುದ್ಧಿವಂತನನ್ನಾಗಿ ಮಾಡಿದ ಸೈಕಲ್‌ಗೆ ನಮೋ! (೧೯೭೪)

## ಕನ್ನಡ! ಕನ್ನಡ? ಇದೆಲ್ಲಾವುಂ ಎನ್ನಡ?

ಕನ್ನಡ ಆಡಳಿತ ಭಾಷೆ ಆಗಬೇಕು. ಕನ್ನಡ ಶಿಕ್ಷಣದ ಭಾಷೆ ಆಗಬೇಕು—ಅಂತ ಮಂಡ್ಯದಲ್ಲಿ ಸೇರಿದ ಸಾಹಿತಿಗಳು ನಿರ್ಣಯ ಮಾಡಿದರು. ಸರಕಾರದವರು ಇದನ್ನೆಲ್ಲ ಇಷ್ಟು ಕಾಲ ಒಪ್ಪಿದ ಹಾಗೆ ಮಾಡಿಕೊಂಡು ಆಮೇಲೆ ಮರೆತು ಬಿಡುತ್ತಿದ್ದರು. ಈಗೇನೋ ಇದನ್ನು ಜಾರಿ ಮಾಡಿಬಿಡುತ್ತಾರೋ ಅನ್ನುವ ಭಯ ಲಾಂಗೂಲಾಚಾರ್ಯರಿಗೆ ಹುಟ್ಟಿದೆ. ಯಾಕೆಂದರೆ ಸಾಹಿತಿಗಳ ಈ ಕೂಟಕ್ಕೆ ಹಿಂದೆಂದೂ ಕಂಡು ಕೇಳಿರದಷ್ಟು ಮಂತ್ರಿಗಳು ಪಾದ ಬೆಳೆಸಿದ್ದರು. ಐ.ಎ.ಎಸ್. ಅಧಿಕಾರಿಗಳು ಕೂಡ ಭಾಷಣ ಕುಟ್ಟಿದ್ದರು. ಲಕ್ಷಣ ಚೆನ್ನಾಗಿಲ್ಲ: ಈ ಸಲ ಇವರು ಏನಾದರೂ ಮಾಡಿಯೇ ಕೈತೊಳೆದುಕೊಳ್ಳುತ್ತಾರೆ ಅಂತ ತೋರುತ್ತದೆ. ಈ ಸಂದರ್ಭದಲ್ಲಿ ಈ ಬಗೆಯಾಗಿ ಕತ್ತಲಲ್ಲಿ ಬಾವಿಗೆ ಹಾರಿಕೊಳ್ಳುವುದನ್ನು ತಪ್ಪಿಸಲು ಲಾಂಗೂಲಾಚಾರ್ಯರು ತಮ್ಮ ಖಡ್ಗ–ಅಂದರೆ ಬಾಲ್‌ಪೆನ್ನು–ಎತ್ತಲೇಬೇಕು ಎಂದು ಅವರ ಆತ್ಮಸಾಕ್ಷ್ಯ

ಅಪ್ಪಣೆ ಕೊಡುತ್ತಾ ಇದೆ; ಇದು ಅತ್ಯಂತ ಅಪಾಯಕಾರಿಯಾದ ಕ್ರಮ ಅಂತ ಆಚಾರ್ಯರು ಎಚ್ಚರಿಕೆ ಕೊಡಬಯಸುತ್ತಾರೆ.

ಕೆಲವೇ ಉದಾಹರಣೆಗಳನ್ನು ಎತ್ತಿ ತೋರಿಸಲು ಇಲ್ಲಿ ಸಾಧ್ಯ. ಇಲ್ಲಿ ನೋಡಿ.

"ಮೊದಲನೆಯದಾಗಿ ಕಾವೇರಿಯಿಂದ ಮಾ ಗೋದಾವರಿವರವಿರ್ಪ ನಾಡದಾ" ನಮ್ಮೀ ಕನ್ನಡ ನಾಡು. ಪ್ರಾಚೀನ ಕಾಲದಿಂದಲೂ ಸಕಲ ಧರ್ಮ, ಭಾಷೆ, ಸಂಸ್ಕೃತಿಗಳಿಗೆ ಆಶ್ರಯ ಕೊಡುತ್ತ ಬಂದಿದೆ. ಬೇಕಾದವರು ನಮ್ಮ ಎದೆಯ ಮೇಲೆ ನಡೆಯಲಿ ಎನ್ನುವುದೇ ನಮ್ಮ ಪುರಾತನ ಸಂಸ್ಕೃತಿ. ಈಗ ನಾವು ನಮ್ಮ ಭಾಷೆಯಲ್ಲೇ ಆಡಳಿತ ಆರಂಭಿಸಿದರೆ ಈ ಅನಾದಿ ಸಂಸ್ಕೃತಿಗೆ ತಿಲಾಂಜಲಿ ಕೊಟ್ಟಂತಾಗುತ್ತದೆ. ಇನ್ನು ಮುಂದೆ ಇಲ್ಲಿ ಹೊರಗಿನವರು ಬಂದು ನಮ್ಮೆದೆಯ ಮೇಲೆ ತಮ್ಮ ಶ್ರೀಪಾದಗಳನ್ನು ಊರಲು ಹಿಂದೇಟು ಹಾಕಬಹುದು. ಕರ್ನಾಟಕದಲ್ಲಿ ಕನ್ನಡ ಹೊರತು ಮತ್ತೆಲ್ಲಾ ಭಾಷೆಗಳು ನಡೆಯುತ್ತವೆ ಎಂಬ ಕೀರ್ತಿ ಕಣ್ಮರೆಯಾಗುತ್ತದೆ. ಕೀರ್ತಿ ಹೋದಮೇಲೆ ನಾವು ಇದ್ದರೇನು ಇಲ್ಲದಿದ್ದರೇನು ?

ಈ ದೇಶಕ್ಕೆ ಅನೇಕಾನೇಕ ವಿದೇಶೀ ಪ್ರವಾಸಿಕರು ಬರುತ್ತಾರೆ. ನಮ್ಮ ಬೆಂಗಳೂರಿನ ಹವೆಯ ಕೀರ್ತಿ ಕೇಳಿ ಅಲ್ಲಿಗೂ ಬರುತ್ತಾರೆ. ಬೆಂಗಳೂರಲ್ಲಿ ಹೆಸರಿಸ ತಕ್ಕವರಿಗೆಲ್ಲ ಇಂಗ್ಲಿಷು ಬರುವುದರಿಂದ ಈ ವಿದೇಶೀಯರಿಗೆ ಇಲ್ಲಿ ಬಹಳ ಅನುಕೂಲವಾಗುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ವಿದೇಶೀ ಗೂಢಚಾರರೂ ಇಲ್ಲಿ ಬಂದು ಸೇರಿಕೊಂಡಿರುತ್ತಾರೆ. ಸಿ.ಐ.ಎ., ಓ.ಜಿ.ಪಿ.ಯು.. ಇತ್ಯಾದಿ ಇತ್ಯಾದಿಗಳ ಏಜೆಂಟರುಗಳೆಲ್ಲ ಇಲ್ಲಿರುತ್ತಾರೆ. ನಮ್ಮ ಆಡಳಿತ, ಶಿಕ್ಷಣ ಇವೆಲ್ಲವೂ ಇಂಗ್ಲಿಷಿನಲ್ಲಾಗುವುದರಿಂದ ಅವರಿಗೆಲ್ಲ ತಮಗೆ ಬೇಕಾದ ವಿಷಯಗಳೆಲ್ಲ ತಮಗೆ ಗೊತ್ತಿರುವ ಭಾಷೆಯಲ್ಲೇ ಸಿಗುತ್ತವೆ. ಈಗ ನೀವು ಕನ್ನಡದಲ್ಲೇ ಎಲ್ಲಾ ಆಡಳಿತವನ್ನು ಪ್ರಾರಂಭಿಸಿದರೆ ಈ ಜನರಿಗೆ ತುಂಬಾ ಕಷ್ಟವಾಗುತ್ತದೆ. ಅವರು ಕನ್ನಡವನ್ನು ಕಲಿಯಬೇಕಾಗುತ್ತದೆ. ಪ್ರತಿಯೊಂದು ರಾಜ್ಯವೂ ತನ್ನದೇ ಭಾಷೆಯಲ್ಲಿ ಆಡಳಿತ ಪ್ರಾರಂಭಿಸಿದರೆ ಈ ಬಡಪಾಯಿ ಗೂಢಚಾರರ ಕಷ್ಟವನ್ನು ನೀವೇ ಊಹಿಸಿಕೊಳ್ಳಬಲ್ಲಿರಿ. ಈ ವರೆಗೆ ಅವರು ಇಂಗ್ಲಿಷಿನಲ್ಲಿ ತಾವು ಬರೆದದ್ದನ್ನು ನಮ್ಮವರಿಗೆ ತಿಳಿಸಲು ಕನ್ನಡ ಅನುವಾದಕ

ರನ್ನು ನೇಮಿಸಿಕೊಳ್ಳುತ್ತಿದ್ದರು. ಇನ್ನು ಕನ್ನಡ, ಮರಾಠಿ, ತಮಿಳು ಇತ್ಯಾದಿ ಇತ್ಯಾದಿಗಳಿಂದ ಇಂಗ್ಲಿಷು, ರಶಿಯನ್ನು, ಫ್ರೆಂಚು ಮೊದಲಾದವುಗಳಿಗೆ ಭಾಷಾಂತರಮಾಡಿ ತಮ್ಮ ದೇಶಗಳಿಗೆ ಕಳಿಸಲು ಬೇರೆಬೇರೆ ಜನರನ್ನು ನೇಮಕ ಮಾಡಬೇಕಾಗುತ್ತದೆ. ಈ ಪರಿಸ್ಥಿತಿಯಿಂದ ನಮ್ಮ ವಿದೇಶ ಸಂಬಂಧದ ಮೇಲಾಗ ಬಹುದಾದ ಪರಿಣಾಮಗಳನ್ನು ನೆನೆದರೆ ಹೆದರಿಕೆಯಾಗುತ್ತದೆ. ನಿಕ್ಸನ್ನರು ನಮ್ಮ ಯೋಜನೆಗಳಿಗೆ ಹಣ ನಿರಾಕರಿಸಬಹುದು ಅಥವಾ ತಮ್ಮ ಏಳನೇ ನೌಕಾಪಡೆಯನ್ನೇ ಕಳಿಸಬಹುದು.

ಅದು ಹೋಗಲಿ, ಅದು ಕೇಂದ್ರ ಸರಕಾರದ ತಲೆನೋವು, ನಮಗೇನು ಅನ್ನುತ್ತೀರಾ ? ಕನ್ನಡವನ್ನು ಆಡಳಿತ ಭಾಷೆ ಮಾಡಿದರೆ ಆಡಳಿತ ದಕ್ಷ ವಾಗಿ ನಡೆಯುವುದೇ ಕಷ್ಟವಾದೀತು. ಕನ್ನಡದಲ್ಲಿ ಸರಿಯಾದ ಅರ್ಥಪೂರ್ಣ ಭಾವಪೂರ್ಣ ಶಬ್ದಗಳೇ ಇಲ್ಲ. ಇಂಗ್ಲಿಷು ಬಾರದವರಿಗಾಗಿ ಕವಿತೆ ಬರೆಯು ಲಿಕ್ಕೆ ಮಾತ್ರ ಬರುವ ಭಾಷೆ ಅದು. ಉದಾಹರಣೆಗೆ ಮೇಲಧಿಕಾರಿಗೆ ಕೆಳಗಿ ನವನನ್ನು ಕರೆದು ಗದರಿಸಬೇಕಾಗಿದೆ ಅನ್ನಿ. What is this nonsense ! ಎಂದು ಕೇಳುತ್ತಾನೆ. ಈಗ nonsenseಗೆ ಸರಿಯಾದ ಶಬ್ದ ಕನ್ನಡದಲ್ಲಿ ಎಲ್ಲಿದೆ ? ಯಾರಾದರೂ ಹೇಳಲಿ. ಅರ್ಥಹೀನ, ಬುಡುಬುಡಿಕೆ, ತೊಳಲೊಟ್ಟೆ ಇತ್ಯಾದಿ ಯಾವ ಶಬ್ದವೂ nonsenseನ ಅರ್ಥವನ್ನು ಕೊಡುವುದಿಲ್ಲ. ಚಪರಾಸಿಯನ್ನು bloody fool ಅಂತ ಬೈಯಬೇಕಾಗಿದ್ದರೆ ಅಧಿಕಾರಿ ಕನ್ನಡದಲ್ಲಿ ಏನು ಹೇಳಬೇಕು ? ರಕ್ತ ಸುರಿಸುವ ದಡ್ಡ ಅನ್ನೋದೇ ? ಅದು ಹೋಗಲಿ. ಆಫಿಸಿಗೆ ಬಂದು ತೊಂದರೆದಾಯಕ ಪ್ರಶ್ನೆಗಳನ್ನು ಕೇಳುವ ಪ್ರಜೆಗೆ get out ! ಎಂದು ಕೂಗಬೇಕಾದರೆ ಹೇಗೆ ಸ್ವಾಮಿ ಅಷ್ಟು ಪವರ್‌ಫುಲ್ ಆಗಿ ಹೇಳೋದು, ನಿಮ್ಮ ನರಸತ್ತ ದರಿದ್ರ ಕನ್ನಡದಲ್ಲಿ ? ಹೊರಗೆ ಹೋಗು ಅಂತ ಕನ್ನಡದಲ್ಲಿ ಹೇಳಿದರೆ ಯಾರಪ್ಪಾ ಈ ಕಾಲದಲ್ಲಿ ಎದ್ದು ಹೊರಡು ತ್ತಾನೆ ! ನಿಮ್ಮ ಮುಖಕ್ಕೇ ನಗುತ್ತಾನೆ ! ಆಡಳಿತಕ್ಕೆ ಬೇಕಾದ ಶಬ್ದಗಳು ಕನ್ನಡದಲ್ಲಿ ಸಿಗುವುದಿಲ್ಲ ಅನ್ನೋದು ಇದಕ್ಕೇನೇ. ಇದಿಲ್ಲದೇ ಹೋದರೆ ಆಡಳಿತ ಸಾವಕಾಶವಾಗಿ ಶಿಥಿಲವಾಗದೆಬಿಡದು:

ಏಳು ವರ್ಷಗಳೊಳಗೆ ಹೈಕೋರ್ಟಿನಲ್ಲೂ ಕನ್ನಡವನ್ನೇ ಉಪಯೋಗಿಸಲು ಸಾಧ್ಯವಿದೆ ಅಂತ ನ್ಯಾಯಮೂರ್ತಿ ನಾರಾಯಣ ಪೈ ಅವರು ಅಪ್ಪಣೆ

ಕೊಡಿಸಿದರಂತೆ. ಕೋರ್ಟುಗಳಲ್ಲಿ ಕನ್ನಡವನ್ನು ಬಳಸುವುದಕ್ಕೆ ನಾನಂತೂ ಬದ್ಧ ವಿರೋಧಿಯಾಗಿದ್ದೇನೆ. ಸಾಕ್ಷಿಗಳ ವಿಚಾರಣೆ ಮಟ್ಟಿಗೆ ಉಪಾಯವಿಲ್ಲ ದ್ದಕ್ಕೆ ಕನ್ನಡ ಬಳಸಬೇಕಾಗುತ್ತದೆ. ಆದರೆ ಕಕ್ಷಿಗಾರರ ಸಮ್ಮುಖದಲ್ಲಿ ಉಭಯ ವಕೀಲರು "ಯುವರ್ ಆನರ್", "ಯುವರ್ ಲಾರ್ಡ್‌ಶಿಪ್" ಇತ್ಯಾದಿ ಸಂಬೋಧನೆಗಳೊಡನೆ ಇಂಗ್ಲಿಷಿನಲ್ಲಿ ವಾದಮಾಡುತ್ತಿರುವಾಗ ಅರ್ಥವಾಗ ದಿದ್ದರೂ—ಅಥವಾ ಅರ್ಥವಾಗದ್ದರಿಂದ—ಬೆರಗಾಗಿ ನೋಡುತ್ತ ಕಕ್ಷಿಗಾರ ತಾನು ವಕೀಲರಿಗೆ ಕೊಟ್ಟ ಹಣಕ್ಕೆ ಪೂರ್ಣ ಪ್ರತಿಫಲ ಬಂತು, ಕೋರ್ಟಿಗೆ ಕೊಟ್ಟ ಫೀಯೂ ಸಾರ್ಥಕವಾಯಿತು ಅಂತ ಸಮಾಧಾನ ಹೊಂದುತ್ತಾನೆ. ಅದೇ ವಾದವನ್ನು ಕನ್ನಡದಲ್ಲಿ ಹೇಳಿನೋಡಿ. ಕಕ್ಷಿಗಾರ "ಫುಸ್ ! ಇಷ್ಟೇನಾ ಈ ವಕೀಲರು ಮಾಡೋದು ? ನಮ್ಮ ಪುಟ್ಟಬೋರೇಗೌಡ ಇಷ್ಟೇ ಚೆನ್ನಾಗಿ ವಾದಾಮಾಡ್ತಿದ್ದ ! ಇವರಿಗೆ ಕೊಟ್ಟ ಹಣದಂಡ" ಅಂತ ಹೇಳಿ ಮುಂದಿನ ಸಲ ಫೀದರ ಅರ್ಧಕ್ಕಿಳಿಸಬೇಕು ಅನ್ನೋ ಚಳವಳೀನೂ ಮಾಡಬಹುದು. ನ್ಯಾಯ ಸ್ಥಾನದ ಗೌರವ, ವಕೀಲರ ಮರುವಾದೆ ಉಳಿಯಬೇಕಾದರೆ ಇಂಗ್ಲಿಷೇ ಬೇಕು ಸ್ವಾಮಿ. ಕನ್ನಡ ನಿಮ್ಮ ನಮ್ಮಂಥ ಹೈದಗಳಿಗೇ ಸರಿ.

ಶತಮಾನಗಳಿಂದ ವಿದ್ಯೆಯ ಸಂಪರ್ಕದಿಂದ ವಂಚಿಸಲ್ಪಟ್ಟ ನಮ್ಮ ದೇಶದ ಜನಸಾಮಾನ್ಯರು ಇದೀಗ ತಮ್ಮ ಮಕ್ಕಳನ್ನು ಇಂಗ್ಲಿಷು ಶಾಲೆಗಳಿಗೆ ಕಳಿಸಿ ಅವರು ಕಿಸ್‌ಪಿಸ್ ಅಂತ ಮಾತಾಡೋದು ಕೇಳಿ ತಾವೂ ಮನುಷ್ಯ ರಾದೆವು ಅಂತ ಅಭಿಮಾನಪಡಕ್ಕೆ ಶುರುಮಾಡಿದಾರೆ. ಅವರು ಹೀಗೆ ಮೇಲೆ ಬರುವುದನ್ನು ನೋಡಿ ಹೊಟ್ಟೆಕಿಚ್ಚಿನಿಂದ, ಈ ವರೆಗೆ ಜನರ ಅಜ್ಞಾನದಿಂದ ಹೊಟ್ಟೆ ಬೆಳೆಸಿಕೊಳ್ಳುತ್ತಿದ್ದ ಪುರೋಹಿತ ವರ್ಗ ಮತ್ತು ಅವರ ಆಶ್ರಯ ದಾತರು, ಈಗ ಇಂಗ್ಲಿಷನ್ನು ಉಚ್ಚಾಟನೆ ಮಾಡುವ ಕುತಂತ್ರ ಪ್ರಾರಂಭಿಸಿ ದ್ದಾರೆ. ಇದನ್ನು ಹಿಂದುಳಿದವರು ಎಷ್ಟು ಮಾತ್ರಕ್ಕೂ ಸಹಿಸಲಾರರು. ಹಿಂದುಳಿದವರೆಲ್ಲ ಇನ್ನೊಂದು ನೂರು ವರ್ಷ ಇಂಗ್ಲಿಷು ಓದಿ ಮನುಷ್ಯ ರಾಗಲಿ ಆಮೇಲೆ ದೇಶದಲ್ಲಿ ಯಾರಿಗಾದರೂ ಇನ್ನೂ ಕನ್ನಡ ನೆನಪಿದ್ದರೆ ಕನ್ನಡವನ್ನು ಆಡಳಿತ ಭಾಷೆ ಮಾಡೋಣ. ಆ ವರೆಗೆ ಖಂಡಿತಾ ಬೇಡ.

(೧೯೭೪)

# ಸತ್ಯ, ನಾನು ಮತ್ತು ಹರಿಶ್ಚಂದ್ರ

ನಾನು ಒಂಭತ್ತು ವರ್ಷದವನಾಗಿದ್ದಾಗ ನನ್ನ ಭಾವ ನನ್ನನ್ನು ಸತ್ಯ ಹರಿಶ್ಚಂದ್ರ ನಾಟಕಕ್ಕೆ ಕರೆದುಕೊಂಡು ಹೋಗಿದ್ದರು. ಅದು ನನಗೆ ಸತ್ಯ ದರ್ಶನ ಮುಹೂರ್ತ—moment of truth ಅನ್ನುತ್ತಾರಲ್ಲ—ಆಯಿತು. ಅವೊತ್ತು ನನಗೆ ಗೋಚರವಾಯಿತು: ಸತ್ಯವೆಂಬುದು ಮೂಢರ ಮತ್ತು ನೀಚರ ಕೈಲಿ ಸಿಕ್ಕಿದರೆ ಎಷ್ಟು ಕೇಡಿನ ಪದಾರ್ಥವಾಗಬಲ್ಲದು ಎಂದು. ಅಂದೇ ನಾನು ನಿರ್ಧರಿಸಿಕೊಂಡೆ: ಸತ್ಯ ಹೇಳಿ ಕಷ್ಟಕ್ಕೆ ಸಿಲುಕುವ ಹೆಡ್ಡತನವನ್ನು ನಾನು ಮಾಡಬಾರದು ಎಂದು. ತಮ್ಮ ಮಕ್ಕಳು ಸತ್ಯವಾದಿಗಳಾಗಿರ ಬೇಕೆಂದು ಯಾರಾದರೂ ಅಪೇಕ್ಷಿಸುತ್ತಿದ್ದರೆ ಅವರು ತಮ್ಮ ಮಕ್ಕಳಿಗೆ ಎಳೇ ವಯಸ್ಸಿನಲ್ಲಿ ಸತ್ಯ ಹರಿಶ್ಚಂದ್ರನ ಕಥೆಯನ್ನು ಹೇಳಬಾರದು, ನಾಟಕವನ್ನಂತೂ ತೋರಿಸಬಾರದು ಎಂದು ಸೂಚಿಸುತ್ತೇನೆ.

ಇಡೀ ನಾಟಕ ನನಗೆ ಅರ್ಥರಹಿತ, ಬುದ್ಧಿ ಹೀನವಾಗಿ ಕಾಣಿಸಿತು. ಇಬ್ಬರು ಬಿಳೀ ಗಡ್ಡದವರು ಸ್ವರ್ಗಸಭೆಯಲ್ಲಿ ಜಗಳಾಡಬೇಕು; ಅದಕ್ಕಾಗಿ ಭೂಲೋಕ ದಲ್ಲಿ ಒಬ್ಬ ರಾಜ ಹೇಳತೀರದ ಸಂಕಷ್ಟಗಳನ್ನು ಅನುಭವಿಸಬೇಕು. ಪ್ರಾರಂಭ ದಲ್ಲೀನೇ ನನಗೆ ಹರಿಶ್ಚಂದ್ರನ ಮೇಲೆ ಸ್ವಲ್ಪ ಸಹಾನುಭೂತಿ ಹುಟ್ಟಿತು. ಆದರೆ ಬರಬರುತ್ತಾ ನನಗೆ ಅವನ ಮೇಲೆ ಕೋಪವೇರುತ್ತಹೋಯಿತು: ಎಂಥಾ ಮೂರ್ಖ ಈತ, ಇವನಿಗೆ ಆದ ಶಾಸ್ತಿಯೆಲ್ಲ ಸರಿಯಾಗಿಯೆ ಇದೆ. ವಿಶ್ವಾಮಿತ್ರನ ಕಾಮುಕ ಮಗಳಂದಿರಿಗೆ ಅವಮಾನ ಮಾಡಿದ್ದಕ್ಕೆ ರಾಜ್ಯ ವನ್ನೇನೊ ದಂಡವಾಗಿ ಕೊಟ್ಟ. ಹೋಗಲಿ ಅದರ ಮೇಲೆ ದಕ್ಷಿಣೆ ಕೊಡುವು ದಕ್ಕೆ ಯಾಕೆ ಒಪ್ಪಿಕೊಂಡ? ದಾನಕ್ಕೆ ದಕ್ಷಿಣೆ ಹೊರತು ದಂಡಕ್ಕೆ ದಕ್ಷಿಣೆ ಕೊಡುವ ಶಾಸ್ತ್ರವಿಲ್ಲ ಅಂತ ನನ್ನಂಥಾ ಹುಡುಗನಿಗೆ ಹೊಳೆಯುವ ಮಾತು ಈ ರಾಜನಿಗೆ ಏಕೆ ಹೊಳೆಯಲಿಲ್ಲ? ಇಷ್ಟು ಪೆದ್ದನಾದ ಹರಿಶ್ಚಂದ್ರ ರಾಜ್ಯವಾಳುವುದಕ್ಕೆ ಯೋಗ್ಯನೇ ಅಲ್ಲ ಎಂಬ ತೀರ್ಮಾನಕ್ಕೆ ನಾನು ಬಂದೆ. ನಾನಾಗಿದ್ದರೆ ನಕ್ಷತ್ರಕನಿಗೆ ಕಾಡಿನಲ್ಲಿ ಅವನ ಹಿಂಬದಿಗೆ ಒಳ್ಳೇ ಫುಟ್‌ಬಾಲಿಗೆ ಕೊಡುವ ಹಾಗೆ ನಾಲ್ಕು ಘನ ಲತ್ತೆಗಳನ್ನು ಕೊಟ್ಟು "ಮಗನೇ, ವಸೂಲಿ ಜವಾನ ನಿನಗೆಷ್ಟು ಧಿಮಾಕೋ! ಒಳ್ಳೇ ಮಾತಿನಲ್ಲಿ ನಾನು ಹಣ ಕೊಡೋ ವರೆಗೂ ನನ್ನ ಹಿಂದೆ ಬಾ. ಇಲ್ಲದಿದ್ದರೆ ನಾನು ದಕ್ಷಿಣೆ ಹಣ ತೀರಿಸ

ಲಿಲ್ಲ ಅನ್ನೋ ಸುದ್ದಿ ತಲುಪಿಸೋದಕ್ಕೇ ನೀನು ಇಲ್ಲದ ಹಾಗೆ ಮಾಡೇನು" ಎಂದು ಹೇಳುತ್ತಿದ್ದೆ ಎಂದುಕೊಂಡೆ. ಒಳ್ಳೇ ಮಾತು ಮಾಡಲಾರದ್ದನ್ನು ಒಂದೆರಡು ಒದಿಕೆಗಳು ಹೇಗೆ ಮಾಡಬಲ್ಲವು ಎಂಬುದು ನನಗೆ ಆಗಲೆ ಸ್ವಾನುಭವದಿಂದ ತಿಳಿದುಹೋಗಿತ್ತು.

ನಾನು ದೊಡ್ಡವನಾದ ಹಾಗೆ ಮತ್ತು ಸತ್ಯದ ವಿಷಯ ಹೆಚ್ಚು ಹೆಚ್ಚು ಕಥೆ ಕೇಳಿದ ಹಾಗೆ ಈ ಸತ್ಯದ ವಿಷಯ ಬೊಬ್ಬಾಟವೆಲ್ಲ ಹಾಸ್ಯಾಸ್ಪದವೆಂದು ಮನವರಿಕೆಯಾಗುತ್ತ ಹೋಯಿತು. ಸತ್ಯಕಥೆಗಳಲ್ಲೆಲ್ಲಾ ಒಂದು ಸಾಮಾನ್ಯ ಲಕ್ಷಣವೆಂದರೆ ಸತ್ಯವಂತರ ಸುಖಾವಸಾನ. ಹರಿಶ್ಚಂದ್ರನಿಗೆ ರಾಜ್ಯ ತಿರುಗಿ ಸಿಕ್ಕಿತು ; ಮೇಲೆ ವಿಶ್ವಾಮಿತ್ರನ ಪುಣ್ಯರಾಶಿಯೂ ಸಿಕ್ಕಿತು. ಗೋವಿನ ಕಥೆಯ ಪುಣ್ಯಕೋಟಿಯ ಸತ್ಯ ನೋಡಿ ಹೆಬ್ಬುಲಿ "ತನ್ನ ಪ್ರಾಣವ ಬಿಟ್ಟಿತು." ಜಾರ್ಜ್ ವಾಷಿಂಗ್‌ಟನ್ ತನ್ನ ಹೊಸ ಚಾಕುವಿನ ಹರಿತ ಪರೀಕ್ಷೆಗಾಗಿ ನಿಂಬೇ ಗಿಡ ಕೆತ್ತಿ ಆ ಮೇಲೆ ಸತ್ಯ ಹೇಳಿದ್ದಕ್ಕಾಗಿ ಅವನಿಗೆ ತಂದೆಯಿಂದ ಬಹುಮಾನ ಸಿಕ್ಕಿತು. ಸತ್ಯವಂತರಿಗೆ ಕೊನೆಗೆ ಒಳ್ಳೇ ಬಹುಮಾನ ಸಿಕ್ಕುತ್ತದೆ; ಅದು ಒಳ್ಳೇ ಇನ್‌ವೆಸ್ಟ್‌ಮೆಂಟು ; ಟಾಟಾ ಆಯರ್ನ್ ಷೇರುಗಳು ಯುದ್ಧಕಾಲದಲ್ಲಿ ಕೊಟ್ಟದ್ದಕ್ಕಿಂದಲೂ ಹೆಚ್ಚು ರಿಟರ್ನ್ ಕೊಡುತ್ತವೆ—ಅಂತ ಪುಸಲಾಯಿಸುವುದಕ್ಕಾಗಿ ಸುಖಾಂತ್ಯವಾಗಿಯೆ ಈ ಸತ್ಯಕಥೆಗಳು ಮುಗಿಯುತ್ತವೆ.

ಚಿಕ್ಕಂದಿನಿಂದಲೇ ನಾನು ಚಿಕಿತ್ಸಾಸ್ವಭಾವದವನು. ಎಕ್ಸ್‌ಪೆರಿಮೆಂಟ್ ಮಾಡಿ ನೋಡುವವನು. ವಾಷಿಂಗ್‌ಟನ್ ಮತ್ತು ಅವನಪ್ಪನ ನಿಂಬೇ ಗಿಡದ ಕಥೆ ಓದಿದ ಮೇಲೆ ನಾನು ಒಂದು ದಿನ ಸಂಜೆ ಒಂದು ಕತ್ತಿ ತೆಗೆದುಕೊಂಡು ಹೋಗಿ ತೋಟದಲ್ಲಿದ್ದ ಒಂದು ಬಾಳೇಗಿಡ ಕಡಿದುಹಾಕಿದೆ. ವಿಚಾರಣೆ ಆಯಿತು. ನಾನು ಸವಾಯಿ ವಾಷಿಂಗ್‌ಟನ್ನನಾಗಿ ನನ್ನ ಅಪರಾಧ ಒಪ್ಪಿಕೊಂಡೆ. "ಯಾಕೆ ಕಡಿದಿ ?" ಎಂಬ ಪ್ರಶ್ನೆ ಬಂತು. "ಒಂದೇ ಏಟಿನಲ್ಲಿ ಬಾಳೇಗಿಡ ಕಡಿಯೋದಕ್ಕೆ ನನ್ನಿಂದಾಗುತ್ತೋ ಇಲ್ವೋ ನೋಡಬೇಕೆನಿಸಿತು" ಅಂದೆ. "ಹೀಗೆ ? ಹಾಗಾದರೆ ಒಂದೇ ಏಟಿನಲ್ಲಿ ನಿನ್ನ ಬೆನ್ನ ಮೇಲೆ ಎಷ್ಟು ಬೆರಳು ಮೂಡಿಸೋದಕ್ಕೆ ಬರುತ್ತೆ ಅಂತ ನೋಡುತ್ತೇನೆ" ಅಂತ ನನ್ನ ಭಾವ ನನ್ನ ಅಂಗಿ ತೆಗೆದು ಎಕ್ಸ್‌ಪೆರಿಮೆಂಟ್ ಮಾಡಿದರು. ನಾಲ್ಕು ಬೆರಳು ಪೂರ್ಣ ಮತ್ತು ಒಂದು ಅರ್ಧ ಮೂಡಿದ್ದವೆಂದು ಆ ಮೇಲೆ ನನ್ನಕ್ಕ ಹೇಳಿದರು. ನನ್ನ

ಭಾವ "ಬಾಳೇಗಿಡ ಕಡಿದದ್ದು ಮಾತ್ರವಲ್ಲದೆ ತಾನೇ ಕಡಿದದ್ದು ಅಂತ ಪೌರುಷ ಕೊಚ್ಚಿಕೊಳ್ಳೋದಕ್ಕೆ ಬಂದಿದ್ದಾನೆ !" ಅಂತ ಗೊಣಗುತ್ತಿದ್ದದ್ದನ್ನೂ ಕೇಳಿದೆ.

ಈ ಪ್ರಯೋಗ ಮತ್ತು ಆದರ ಪರಿಣಾಮದ ನೋವು ಹಿಂಗಿದ ಬಳಿಕ ನಾನು ಎರಡು ತೀರ್ಮಾನಗಳಿಗೆ ಬಂದೆ : ಒಂದು, ಪುಣ್ಯಕೋಟಿಯನ್ನು ಹಿಡಿದ ಹೆಬ್ಬುಲಿ "ತನ್ನ" ಪ್ರಾಣವನ್ನು ಬಿಟ್ಟದ್ದು ಸುಳ್ಳು; ಅದು ನಮ್ಮ ಅನೇಕ ದೇಶಭಕ್ತರ ಹಾಗೆ, ಬೇರೆ ಯಾರದೋ ಪ್ರಾಣವನ್ನು ಬಿಟ್ಟಿರಬೇಕು ; ಎರಡು, ನಾನು ಬಾಳೇಗಿಡ ಕಡಿದದ್ದಕ್ಕಿಂತಲೂ ಸತ್ಯ ಹೇಳುವ ದಿಟ್ಟತನ ಮಾಡಿದ್ದು ನನ್ನ ಭಾವನನ್ನು ಕೆರಳಿಸಿತ್ತು ಅಂತ. ನನ್ನ ಈ ಪಾಠಗಳನ್ನು ನಾನು ಹೃತ್ಪೂರ್ವಕ ಹೃದ್ಗತಮಾಡಿಕೊಂಡೆ ಎಂಬುದಾಗಿ ಬೇರೆ ಹೇಳಬೇಕಾಗಿಲ್ಲವಷ್ಟೇ.

ಸತ್ಯ ಸತ್ಯ ಅಂತ ಮನುಷ್ಯ, ಅದರಲ್ಲಿಯೂ ನಮ್ಮ ದೇಶ ಯಾಕೆ ಹಂಬಲಿಸುತ್ತಾ ಇದೆ ಅನ್ನುವುದು ನನಗೆ ಅರ್ಥವಾಗುವುದಿಲ್ಲ. ಮನುಷ್ಯನಿಗಾಗಿ ಧರ್ಮ ಹೊರತು ಧರ್ಮಕ್ಕಾಗಿ ಮನುಷ್ಯ ಅಲ್ಲ ಎನ್ನುವ ಪ್ರಗತಿಶೀಲ ವಾಕ್ಯವನ್ನು ನೀವು ಕೇಳಿಲ್ಲವೇ ? ಹಾಗೇ ಮನುಷ್ಯನಿಗಾಗಿ ಸತ್ಯವಿರಬೇಕೇ ಹೊರತು ಸತ್ಯಕ್ಕಾಗಿ ಮನುಷ್ಯ ಬಾಳಬೇಕೆಂಬುದರಲ್ಲಿ ಅರ್ಥವಿಲ್ಲ. ಸಕಾಲದಲ್ಲಿ ಹೇಳಿದ ಒಂದು ಸುಳ್ಳು ಮುಂದೆ ಬರುವ ಒಂಭತ್ತು ಸಂಕಟಗಳನ್ನು ತಪ್ಪಿಸಬಲ್ಲದು. ದಶರಥನ್ನ ನೋಡಿ. ಈ "ಸತ್ಯದ ತಗಹೀನ ಅವನೀನಾಥ" ತನ್ನ ಸತ್ಯಕ್ಕಾಗಿ ಮಗನನ್ನು ಮನಸ್ಸಿಲ್ಲದೆ ಕಾಡಿಗೆ ಅಟ್ಟಿದ. ಅವನು ತಾನೇ ಸಾಲದ್ದಕ್ಕೆ ಹೆಂಡತಿಯನ್ನೂ ಕರೆದೊಯ್ದ. ಚೆಲುವೆ ರಮಣಿಯರು ಕಾಡಿನಲ್ಲಿ ಅಲೆಯುವುದನ್ನು ಮೆಚ್ಚದಿದ್ದ ರಾವಣ ಅವಳನ್ನು ಒಯ್ದ. ಇದರ ಫಲವಾಗಿ ವಾಲಿ ಸಾಯಬೇಕಾಯಿತು. ಕಪಿಪಾಳ್ಯ ರಾಕ್ಷಸಪಾಳ್ಯಗಳು ಧ್ವಂಸವಾದವು. ಇದಾಗಿ ಎರಡು ಯುಗಗಳೆ ಸಂದುಹೋಗಿದ್ದರೂ ಇನ್ನೂ ಲಂಕಾ ದ್ವೀಪದವರು ಜಂಬೂ ದ್ವೀಪದವರಾದ ನಮ್ಮನ್ನು ಸಂದೇಹದಿಂದ ನೋಡುತ್ತಿದ್ದಾರೆ. ದಶರಥ ಸಕಾಲದಲ್ಲಿ ಒಂದು ಸುಳ್ಳು ಹೇಳಿ ಬಿಟ್ಟಿದ್ದರೆ ಇಷ್ಟೆಲ್ಲ ಅನಾಹುತಗಳು ತಪ್ಪುತ್ತಿರಲಿಲ್ಲವೆ ?.

ಅವನು ಕೈಕೇಯಿಗೆ ಪ್ರಾಮಿಸ್ ಕೊಟ್ಟಾಗ ಯಾವ ಸಾಕ್ಷಿಯೂ ಇರಲಿಲ್ಲ.

ಅವನು ವರ ಕೊಟ್ಟಿದ್ದನ್ನೇ ನೇರವಾಗಿ ನಿರಾಕರಿಸಿಬಿಡಬಹುದಾಗಿತ್ತು. ಅಥವಾ ಹನ್ನೆರಡು ವರ್ಷ ದಾಟಿ ಹೋಗಿದ್ದರಿಂದ ಪ್ರಾಮಿಸ್ಸಿಗೆ ಲಿಮಿಟೇಶನ್ ಬಾರ್ ಆಗಿ ಹೋಯಿತು ಎಂದು ಸಾಧಿಸಬಹುದಾಗಿತ್ತು ಅಥವಾ ರಾಮನ ಪಟ್ಟಾಭಿಷೇಕದ ಡಿಸೀಜನ್ನು ಆಗಲೇ ರಾಜ್ಯ ಸಭಾಸದರು ಕೈಕೊಂಡುಬಿಟ್ಟಿರುವುದರಿಂದಲೂ ಪಟ್ಟಾಭಿಷೇಕದ ತಯಾರಿಗಳು ಆಗಲೇ ತೀರ ಮುಂದುವರಿದುಬಿಟ್ಟಿರುವುದರಿಂದಲೂ ಈಗ ತನ್ನ ವರವನ್ನು ಪಾಲಿಸುವುದಕ್ಕೆ ಟೂ-ಲೇಟ್ ಆಗಿದೆಯೆಂದು ಸಾಧಿಸಬಹುದಾಗಿತ್ತು. ಅದೂ ಅಲ್ಲದಿದ್ದರೆ ಆ ಪ್ರಾಮಿಸ್ಸುಗಳನ್ನು ಕೊಟ್ಟಾಗ ತನ್ನ ಬುದ್ಧಿ ಸ್ವಾಧೀನದಲ್ಲಿ ಇದ್ದಿಲ್ಲವೆಂದೂ (ಇದು ಶತಸತ್ಯ) ಆದ್ದರಿಂದ ಅದು ತನಗೆ ಬಂಧಕವಲ್ಲವೆಂದೂ ಅಥವಾ ತನ್ನ ಪ್ರಾಮಿಸ್ಸುಗಳು ಪರ್ಸನಲ್ ಆಗಿದ್ದು ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅವುಗಳನ್ನು ಬಚಾಯಿಸುವುದಕ್ಕೆ ಕೈಕೇಯಿಗೆ ಅಧಿಕಾರವಿಲ್ಲವೆಂದೂ ಹೇಳಬಹುದಾಗಿತ್ತು. ತೊಂದರೆಯೆಂದರೆ ತ್ರೇತಾಯುಗದಲ್ಲಿ ವಕೀಲರಿದ್ದಿಲ್ಲ.

"ಸತ್ಯಮೇವ ಜಯತೇ" ಎನ್ನುವ ಋಷಿ ಕಾವ್ಯವನ್ನು ನಾವು ಒಂದೆರಡು ಚಮಚೆ ಮಸಾಲೆ ಸೇರಿಸಿಯೇ ನುಂಗುವುದೊಳಿತೆಂದು ನನಗೆ ತೋರುತ್ತದೆ. ಇತಿಹಾಸದಲ್ಲಿ ಮಾತ್ರ ಏಕೆ, ಪುರಾಣಗಳಲ್ಲಿಯೂ ಸತ್ಯವಂತರೇ ಗೆದ್ದರೆಂಬುದಕ್ಕೆ ನಿಖರವಾದ ಪ್ರಮಾಣಗಳು ಯಾವುದೂ ಸಿಗುವುದಿಲ್ಲ. ಬದಲಿಗೆ ಗೆದ್ದವರೇ ಸತ್ಯವಂತರೆನಿಸಿದರು ಎಂದು ಸಂಶೇಹಪಡುವುದಕ್ಕೆ ಸಾಕಷ್ಟು ಆಧಾರಗಳುಂಟು. "ಸತ್ಯವಂತರಿಗಿದು ಕಾಲವಲ್ಲ" ಅಂತ ದಾಸರು ಹಾಡಿ ನಾಲ್ಕು ಶತಮಾನಗಳು ದಾಟಿದವು. ಅವರಿಗಿಂತ ನಾಲ್ಕುನೂರು ಶತಮಾನಗಳ ಹಿಂದಿನವರೂ ಇದೇ ಹಾಡನ್ನು ಆಗಿನ ಭಾಷೆಯಲ್ಲಿ ಹಾಡುತ್ತಿದ್ದರೆಂದು ನನಗೆ ದೃಢವಾದ ನಂಬಿಕೆ ಇದೆ. ದಶರಥನಿಂದ ಹಿಡಿದು ಮಹಾತ್ಮಾಗಾಂಧಿಯವರ ವರೆಗೆ ಸತ್ಯ ಹೇಳಿದವರೆಲ್ಲರೂ ಸತ್ತೇ ಅಮರರಾದರು.

ಹೀಗೆಲ್ಲಾ ಹೇಳಿದೆನೆಂಬುದರಿಂದ ನಾನು ಸತ್ಯದ್ವೇಷಿಯೆಂದು ಯಾರೂ ತಿಳಿದುಕೊಳ್ಳಬಾರದು. ಸುಳ್ಳಿಗೊಂದು ಕಾಲವಿದ್ದಂತೆ ಸತ್ಯಕ್ಕೂ ಒಂದು ಕಾಲವಿದೆ—ಎಂದಷ್ಟೇ ನಾನು ಹೇಳುವುದು. ನಿಮ್ಮ ನಲ್ಲೆ ಒಂದು ಹೊಸ ಸೀರೆ ತರಬೇಕೆಂದು, ಅದರ ಬಣ್ಣ, ಅಂಚು, ಸೆರಗುಗಳ ಸ್ಪೆಸಿಫಿಕೇಶನ್ಸ್ ಎಲ್ಲಾ ಕೊಟ್ಟು ಕಳಿಸಿದ್ದಾಳೆ. ನೀವು ತಂದಿರುವುದಿಲ್ಲ. ಕಾರಣದ ವಿಚಾರಣೆ

ಆಗುತ್ತದೆ. ಮರೆತು ಹೋಯಿತು ಎಂಬ ಅಪ್ಪಟ ಸತ್ಯವನ್ನು ಹೇಳಿದಿರೋ ಕೆಟ್ಟಿರಿ. ನಿಮಗೆ ಕಡವಾಗಿ ಸೀರೆಗಳನ್ನು ಕೊಡುವ ಅಂಗಡಿಯವನ ಅಜ್ಜಿ ಸತ್ತದ್ದರಿಂದ ಅಂಗಡಿ ಮುಚ್ಚಿತ್ತೆಂದಾಗಲಿ, ಅವಳು ಕೊಟ್ಟ ಸ್ಪೆಸಿಫಿಕೇಶನ್ಸ್ ಉಳ್ಳ ಸೀರೆ ಸಿಗಲಿಲ್ಲವೆಂದಾಗಲಿ, ಸುಳ್ಳು ಹೇಳಿರಿ. ಈ ಸುಳ್ಳನ್ನು ನಿಮ್ಮ ಮನದನ್ನೆ ಕಂಡು ಹಿಡಿದರೂ ಅಂಥಾ ಅಪರಾಧವಾಗದು. ಅವಳ ಅಪ್ಪಣೆಯನ್ನು ಮರೆತುಬಿಟ್ಟಿದ್ದೇನೆಂದು ಸತ್ಯ ಹೇಳುವುದರಲ್ಲಿ ಅಡಕವಾದ ಇನ್‌ಸಲ್ಟಿಗಿಂತ ಈ ಸುಳ್ಳೇ ಸಹ್ಯವಾಗುತ್ತದೆ ಅವಳಿಗೆ. ಸುಳ್ಳು ಹೇಳಿದರೆ ನೀವಿನ್ನೂ ಅವಳಿಗೆ ಹೆದರಿಕೊಳ್ಳುತ್ತೀದ್ದೀರಿ ಎಂಬ ಸಮಾಧಾನವಾದರೂ ಅವಳಿಗಿರುತ್ತದೆ.

ಹಾಗಾದರೆ ನೀವು ಬೆಳಗಿನಿಂದ ಸಂಜೆವರೆಗೆ ಸುಳ್ಳೇ ಹೇಳುತ್ತ ತಿರುಗುತ್ತೀರಾ ಎಂದು ಕೇಳಿದರೆ ಇಲ್ಲ ಎಂದು (ಸತ್ಯವಾಗಿಯೂ) ಹೇಳುತ್ತೇನೆ. ಜೀವನದ ಹೆಚ್ಚಿನ ಸಂದರ್ಭಗಳಲ್ಲಿ ಸತ್ಯವನ್ನೇ ಹೇಳುವ ಪರಿಪಾಠವನ್ನಿಟ್ಟುಕೊಂಡಿದ್ದೇನೆ. ಪ್ರತಿಯೊಂದಕ್ಕೂ ಒಂದು ಸುಳ್ಳನ್ನು ಸೃಷ್ಟಿಸುವ ಬಾದರೇಶನ್ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿಲ್ಲ.

## ಮಂತ್ರದಿಂದ ಅಗ್ನಿ

ಇಂಗ್ಲೆಂಡಿನ ಪ್ರತಿಗಾಮಿ ಹಾಸ್ಯಗಾರನೊಬ್ಬ ರಶಿಯದ ವೈಜ್ಞಾನಿಕ ಸಾಧನೆಗಳ ಬಗ್ಗೆ ನಂಜು ಮಾತೊಂದು ಬರೆದಿದ್ದ. ರಶಿಯದ ಕೃಷಿ ವಿಜ್ಞಾನಿಗಳಿಗೆ ಕುಂಬಳಕಾಯಿ ಗಾತ್ರದ ಟೊಮ್ಯಾಟೊಗಳನ್ನು ಮತ್ತು ಟೊಮ್ಯಾಟೊ ಗಾತ್ರದ ಕುಂಬಳಕಾಯಿಗಳನ್ನು ಬೆಳೆಸಲು ಸಾಧ್ಯವಾಗಿದೆ. ಆದರೆ ಟೊಮ್ಯಾಟೊಗಾತ್ರದ ಟೊಮ್ಯಾಟೊಗಳನ್ನು ಮತ್ತು ಕುಂಬಳಕಾಯಿ ಗಾತ್ರದ ಕುಂಬಳಕಾಯಿಗಳನ್ನು ಮಾತ್ರ ಬೆಳೆಸುವುದು ಅವರಿಗೆ ಸಾಧ್ಯವಾಗಿಲ್ಲ. ವಾಸ್ತವಿಕವಾಗಿ ರಶಿಯನ್ನರಿಗೆ ಸಾಮಾನ್ಯ ಕೆಲಸಗಳನ್ನು ಅಸಾಮಾನ್ಯವಾಗಿ ಮಾಡಲಿಕ್ಕೆ ಮಾತ್ರ ಬರುತ್ತದೆ ಎಂದಾತ ಹೇಳಿದ್ದ. ಭಾರತೀಯರಿಗೆ ಅಥವಾ ಅವರಲ್ಲಿ ಕೆಲವರಿಗೆ ಕೂಡ ಸಾದಾ ಸಂಗತಿಗಳನ್ನು ಸಾದಾ ರೀತಿಯಲ್ಲಿ ಮಾಡಲು ಏನೂ ಇಷ್ಟವಿಲ್ಲವೆಂದು ಕಾಣುತ್ತದೆ. ಮೊನ್ನೆ ಮಹಾರಾಷ್ಟ್ರದಲ್ಲಿ ಯಾಜ್ಞಿಕರೊಬ್ಬರು ಮಂತ್ರಬಲದಿಂದ ಬೆಂಕಿಯನ್ನು ಮಾಡಿದರಂತೆ. ಯಜ್ಞ

ಕ್ಕಾಗಿ ಸಿದ್ಧಪಡಿಸಿದ ಪಂಚದ್ರವ್ಯಗಳನ್ನು ಸೇರಿಸಿ ತಣ್ಣಗಿನ ಯಜ್ಞಕುಂಡ ದಲ್ಲಿ ಸುರುವಿ, ಅವರು ಮಂತ್ರವನ್ನು ಉಚ್ಚರಿಸಿದರು. ಆಮೇಲೆ ಅಲ್ಲೀ ಬಾಬಾ "ಸೂಸಮ್ಮಾ ಸೂಸಮ್ಮಾ ಬೇಗ ಬಾಯ್ಬಿಚ್ಚು" ಅಂತ ಗುಹೆಯ ಬಾಗಿಲಿಗೆ ಹೇಳಿದೊಡನೆ ಅದು ಬಾಯಿ ತೆರೆದ ಹಾಗೆ, ಅವರು ಸಂಸ್ಕೃತದಲ್ಲಿ "ಜ್ವಲ ಜ್ವಲ ಪ್ರಜ್ವಲ!" ಎಂದದ್ದೇ ತಡ, ಕುಂಡದಲ್ಲಿ ಹೊಗೆಯಾಡಿತು. ಕಿಡಿ ಕೆದರಿತು, ಬೆಂಕಿ ಹೊತ್ತಿತು, ಸಮಿತ್ತು ಉರಿಯಿತು. ಸೇರಿದ ವಿಜ್ಞಾ ನಿಗಳು ಬೆರಳು ಕಚ್ಚಿದರು. (ತೀರ ನೋಯುವ ಹಾಗೆ ಕಚ್ಚಿಕೊಳ್ಳಲಿಲ್ಲ ಅನ್ನಿ!)

ಕಾಶೀನಾಥ ಶಿರೋದೆಯವರು ವಿಜ್ಞಾನಿಗಳನ್ನು ಮಂಕುಬಡಿಸಿ ತಮ್ಮ ಪೋಷಕರಾದ ಡಾ. ವರ್ತಕರನ್ನು ಉತ್ಸಾಹಗೊಳಿಸಿ ಎಬ್ಬಿಸಿದ ಈ ಬೆಂಕಿ ಯಿಂದ ಪಾಶ್ಚಾತ್ಯ ವಿಜ್ಞಾನಿಗಳು ಭಾರತದಿಂದ ಕಲಿಯತಕ್ಕದ್ದು ಎಷ್ಟು ಇದೆ ಎಂದು ತಿಳಿಯುತ್ತದೆ. ಭಾರತದ ಅನೇಕ ಗ್ರಂಥಗಳನ್ನು ಕದ್ದೊಯ್ದರೂ ಅವರಿನ್ನೂ ಮಂತ್ರದಿಂದ ಬೆಂಕಿ ಹಚ್ಚಲು ಕಲಿತಿಲ್ಲ. ಅವರಿಂದ ವಿಜ್ಞಾನ ವನ್ನು ಕಲಿತ ಭಾರತೀಯ ಅಜ್ಞಾನಿಗಳು ಒಂದು ಪರಮಾಣು ಹೊಟ್ಟಿಸಲು ಮೂರು ವರ್ಷ ಒದ್ದಾಡಿದರು. ಬದಲಿಗೆ ನಮ್ಮವೇ ಮಂತ್ರಗಳನ್ನು ಸರಿ ಯಾಗಿ ಉರು ಹೊಡೆದಿದ್ದರೆ ಭೂಮಿಯೊಳಗೆ ನೂರು ಮೀಟರ್ ಹೊಂಡ ತೋಡುವ ಗರಜಿ ಅವರಿಗೆ ಬರುತ್ತಲೇ ಇರಲಿಲ್ಲ.

ಆದರೆ ಮಂತ್ರದಿಂದ ಉರಿ ಹಚ್ಚುವ ಈ ವಿದ್ಯೆಯಿಂದ ಆಧುನಿಕ ಕಾಲ ದಲ್ಲಿ ಏನಾದರೂ ಪ್ರಯೋಜನವುಂಟೇ? ಯಾಕಿಲ್ಲ? ಬೆಂಕಿ ಪೆಟ್ಟಿಗೆ ತುಟ್ಟಿಯಾಗಿದೆ. ಒಮ್ಮೊಮ್ಮೆ ಸಿಗುವುದೂ ಇಲ್ಲ. ಒಲೆ ಹೊತ್ತಿಸಬೇಕಾ ದಾಗಲೆಲ್ಲಾ ನವದುರ್ಗೆಯನ್ನು ನೆನೆದು ಶಿರೋದೆಶಾಸ್ತ್ರಿಗಳ ಹಾಗೆ "ಜ್ವಲ ಜ್ವಲ ಪ್ರಜ್ವಲ" ಎಂದು ಬಿಟ್ಟರೆ ಕೆಲಸ ಆಗಿಬಿಡುತ್ತದೆ. ಹಸಿಕಟ್ಟಿಗೆ ಯಾದರೂ ಅದು ಹೊತ್ತಿ ಉರಿಯಲೇಬೇಕು. ಆದರೆ ಈ ಮಂತ್ರೋಚ್ಚಾ ರಣೆಯ ಅಧಿಕಾರ ಸ್ತ್ರೀಯರಿಗೆ ಇದೆಯೋ ಇಲ್ಲವೋ ಶಾಸ್ತ್ರಗಳು ನಮಗೆ ತಿಳಿಸಿಲ್ಲ. ಪುರುಷರೇ ಮಂತ್ರದಿಂದ ಅಗ್ನಿಪ್ರತಿಷ್ಠೆ ಮಾಡಬೇಕೆಂದಾದರೆ ಬಲು ಕಷ್ಟ. ಒಲೆ ಹೊತ್ತಿಸೋ ಕೆಲಸಾನೂ ಹೆಂಗಸರು ಗಂಡಸರಿಗೇ ತಗಲಿಸಿ ಬಿಡಬಾರದು. ಆದರೆ ಇನ್ನೊಂದು ಉಪಯೋಗವನ್ನು ಗಂಡಸರೇ ಮಾಡಿ

ಕೊಳ್ಳಲಿಕ್ಕೆ ಸಾಧ್ಯವಿದೆ. ಸಿಗರೇಟು ಬೀಡಿ ಸೇದುವವರು ಈಗ ಬೆಂಕಿಪೆಟ್ಟಿಗೆಯನ್ನಾಗಲಿ ಲೈಟರನ್ನಾಗಲಿ ಜೇಬಿನಲ್ಲಿಟ್ಟುಕೊಂಡೇ ತಿರುಗಬೇಕಾಗುತ್ತದೆ. ಕಡ್ಡಿಗೀರುವಾಗ ಗಾಳಿ ಬರುತ್ತಿದ್ದರೆ ಇಕ್ಕಟ್ಟಿನ ಪರಿಸ್ಥಿತಿ ಉಂಟಾಗುತ್ತದೆ. ಲೈಟರಿಗೆ ಪೆಟ್ರೋಲೂ ದುರ್ಲಭವಾಗಿದೆ. ಹೀಗಿರುವಾಗ ಮಂತ್ರ ಹೇಳಿ ಸಿಗರೇಟಿನ ತುದಿಯನ್ನೇ ನೋಡುತ್ತಾ "ಜ್ವಲ ಜ್ವಲ ಪ್ರಜ್ವಲ!" ಅಂದು ಬಿಟ್ಟರೆ ಅದು ಹೊತ್ತಿಸಿಕೊಳ್ಳುವುದಾದರೆ ಎಷ್ಟು ಸುಖ!

ಆದರೆ ಕಾಶಿನಾಥ ಶಿರೋದೆಯವರನ್ನು ಪ್ರಸಿದ್ಧಿಗೆ ತಂದ ಡಾಕ್ಟರ್ ವರ್ತಕರು ಈ ಮಂತ್ರವನ್ನು ಇಂಥಾ ಚಿಲ್ಲರೆ ಮತ್ತು ಅಬ್ರಹ್ಮಣ್ಯ ಕೆಲಸಗಳಿಗೆ ಉಪಯೋಗಿಸಿ ಹಗುರಮಾಡಲು ಬಯಸುವುದಿಲ್ಲ. ಅವರ ದೃಷ್ಟಿ ಬಹಳ ದೂರಗಾಮಿ. ಶಿರೋದೆಶಾಸ್ತ್ರಿಗಳ ಈ ಸಿದ್ಧಿಯನ್ನು ಅವರು ಯುದ್ಧದಲ್ಲಿ ಪ್ರಯೋಗಿಸಿ ಭಾರತ ಮಾತೆಗೆ ಜಯವನ್ನೂ ಕೀರ್ತಿಯನ್ನೂ ತಂದು ಕೊಡುವ ಅಪೇಕ್ಷೆಯುಳ್ಳವರಾಗಿದ್ದಾರೆ. ಉದಾಹರಣೆಗೆ ಶತ್ರುವಿನ ದೊಡ್ಡ ಮದ್ದಿನ ಉಗ್ರಾಣವಿದೆಯೆಂದುಕೊಳ್ಳಿ. ನಾವು ಪುಣೆಯಲ್ಲೇ ಕುಳಿತು ಮಂತ್ರ ಪಠಿಸಿ "ಜ್ವಲ ಜ್ವಲ ಪ್ರಜ್ವಲ!" ಎಂದುಬಿಟ್ಟರೆ ಸಾಕು. ಪಾಕಿಸ್ತಾನದ ಅಥವಾ ಚೀನದ ಮದ್ದು ಗುಂಡಿನ ರಾಶಿಯೆಲ್ಲ ಹೊತ್ತಿಕೊಂಡು ಸಿಡಿದು ಶತ್ರುಗಳನ್ನೇ ನಾಶಮಾಡಿಬಿಡುತ್ತೆ.

ಈ ಆಲೋಚನೆ ಬಂದಾಗ ನನಗೆ ಭಯವಾಗುತ್ತದೆ. ಭುಟ್ಟೋ ಸಾಹೇಬರು ಇದನ್ನು ಕೇಳಿ ಸುಮ್ಮನಿರುವರೇ! ಅವರು ಖಂಡಿತವಾಗಿ ಕೋಲಾಹಲ ಎಬ್ಬಿಸುವರು. ಪಾಕಿಸ್ತಾನಕ್ಕೆ ಬೊಮ್ಮನ್ ಕಾ ಮಂತರದಿಂದ ಘೋರ ವಿಪತ್ತು ಬರಲಿದೆ ಎಂದು ವಿಶ್ವಸಂಸ್ಥೆಗೆ ಅವರು ದೂರು ಕೊಡದೆ ಬಿಡರು. ಆಗ ಸಂಸ್ಥೆಯವರೆಲ್ಲ ಸೇರಿ ಭಾರತದ ಮೇಲೆ ಒತ್ತಾಯ ತರುವರು. ಮಂತ್ರ ಕಂಟ್ರೋಲ್ ಒಪ್ಪಂದವಾಗಬೇಕೆಂದೂ ಇಲ್ಲದಿದ್ದರೆ ಭಾರತಕ್ಕೆ ಯಾರೂ ಗೋದಿ ಜೋಳ ಕೊಡಬಾರದೆಂದೂ ಪ್ರಬಲ ರಾಷ್ಟ್ರಗಳು ಗೊತ್ತುವಳಿ ತರುವರು. ಮಂತ್ರದಿಂದ ಬೆಂಕಿ ಹಚ್ಚುವುದು ನಮಗೆ ಬರುತ್ತದೆ. ಆದರೆ ಮಂತ್ರದಿಂದ ಭತ್ತ ಗೋದಿ ಜೋಳ ಸೃಷ್ಟಿ ಮಾಡುವ ಮಂತ್ರ ಮಾತ್ರ ಇಲ್ಲಿ ಯಾರಿಗೂ ಗೊತ್ತಿಲ್ಲ. ಆದ್ದರಿಂದ ನಾವು ಬಗ್ಗಲೇ ಬೇಕಾಗುವುದು. ಮಂತ್ರದ ಗುಟ್ಟನ್ನು ಅಂತಾರಾಷ್ಟ್ರೀಯ ಸಮಿತಿಗೆ ಹೇಳಿ

ಕೊಡಬೇಕೆಂದು ಅವರು ಹೇಳಿದರೆ ನಿರಾಕರಿಸುವ ಸ್ಥಿತಿಯಲ್ಲಿ ನಾವು ಇಲ್ಲ. ಮಂತ್ರವನ್ನು ಅವರಿಗೆ ಬಿಟ್ಟುಕೊಟ್ಟರೆ ಆ ಕದೀಮರು ಅದರಲ್ಲಿ ನಮಗಿಂತಲೂ ಮುಂದೆ ಹೋಗುವ ಭಯವಿದೆ. ಭುಟ್ಟೋಗೇನಾದರೂ ಮಂತ್ರ ತಿಳಿದರೆ ಅವರು ನಮ್ಮ ಆಹಾರ ಇಲಾಖೆಯ ಕಡತಗಳಿಗೆ ದೂರದಿಂದ ಅಗ್ನಿಸ್ಪರ್ಶ ಮಾಡಬಹುದು.

ಇದಕ್ಕಿಂತಲೂ ದೊಡ್ಡ ಗಂಡಾಂತರ ಇನ್ನೊಂದು ಇದೆ. ಅಮೆರಿಕದ ಸಿ.ಐ.ಎ.ಯವರು ನಮ್ಮ ಮಂತ್ರದ ಶಾಸ್ತ್ರಗಳನ್ನೇ ಅಪಹರಿಸಿಕೊಂಡು ಹೋದರೆ ಏನು ಗತಿ! ಈಚೆಗೆ ನಮ್ಮ ಒಬ್ಬ ವಿಜ್ಞಾನಿ ಕಾಣೆಯಾಗಿದ್ದಾನೆಂದೂ ಅವನನ್ನು ವಿದೇಶೀ ಗುಪ್ತಚಾರರು ಅಪಹರಿಸಿ ಒಯ್ದಿರಬೇಕೆಂದೂ ಹುಳಲಾಗುತ್ತದೆ. ಇದೇ ಅವಸ್ಥೆ ನಮ್ಮ ಮಂತ್ರಜ್ಞರಿಗೂ ಬಂದರೆ ಮತ್ತು ಅವರಿಂದ ಈ ಕ್ರೂರ ವಿದೇಶೀಯರು ಮಂತ್ರವನ್ನು ಅಪಹರಿಸಿದರೆ ಪರಿಣಾಮ ದುರೂಹ್ಯವಾಗಿದೆ. ಕೈಲಿದ್ದ ಕತ್ತಿಯೂ ಹೋಯಿತು, ಕೇರಿಯಲ್ಲಿದ್ದ ಕಬ್ಬಿಣವೂ ಹೋಯಿತು ಅಂತ ಹರಿಜನನೊಬ್ಬ ಹಲುಬಿದನಂತೆ. ಹಾಗಾದೀತು ನಮ್ಮ ಸ್ಥಿತಿ.

ಈ ಭಯವನ್ನು ಬದಿಗಿಟ್ಟು ನಮ್ಮ ಶಾಸ್ತ್ರಗಳನ್ನು ರಕ್ಷಿಸಿಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡಿದರೆಂದುಕೊಳ್ಳಿ. ನಾವು ಶತ್ರು ಶಿಬಿರದಲ್ಲಿ ಬೇಕಾದ ಹಾಗೆ ಬೆಂಕಿ ಎಬ್ಬಿಸಲು ಸಮರ್ಥರಾದೆವೆಂದುಕೊಳ್ಳಿ. ಆಮೇಲೆ ನಮಗೆ ಬೇರೆ ಯಾವ ಅಸ್ತ್ರಗಳೂ ಬೇಕಾಗುವುದಿಲ್ಲ. ಬರೇ ಪಾಕಿಸ್ತಾನಿ ಸೈನ್ಯದ ಮದ್ದುಗುಂಡುಗಳಿಗೆ ಮಾತ್ರವಲ್ಲ, ಪಾಕಿಸ್ತಾನಿ ಸೈನಿಕರು ಹಾಕಿಕೊಂಡ ಯೂನಿಫಾರ್ಮುಗಳಿಗೇ ನಾವು ಕೂತಲ್ಲಿಂದ ಬೆಂಕಿ ಹಚ್ಚಿಬಿಡಬಹುದು. ಬಹಳ ಚೆನ್ನಾಯಿತು ಅನ್ನುತ್ತೀರಾ ? ಹೀಗಾದರೆ ನಾವು ಸೈನ್ಯವನ್ನು ಇಟ್ಟುಕೊಳ್ಳುವ ಅಗತ್ಯ ಉಳಿಯುವುದಿಲ್ಲ. ನಮ್ಮ ಜವಾನರೆಲ್ಲರೂ ಅನಾವಶ್ಯಕರಾಗುತ್ತಾರೆ. ಇವರನ್ನೆಲ್ಲ ಪುಕ್ಕಟೆಯಾಗಿ ಸಾಕಲು ನಾವೇಕೆ ಕರಕಂದಾಯ ಕೊಡಬೇಕು ಅಂತ ಜನರು ಕೂಗುತ್ತಾರೆ.

ಇಲ್ಲ ಸ್ವಾಮಿ. ಈ ಮಂತ್ರಾಸ್ತ್ರದ ಪರಿಣಾಮವನ್ನು ಎಣಿಸಿದರೇನೇ ನನಗೆ ಕಾಲುಗಳು ಕಂಪಿಸುತ್ತವೆ. ಕಡು ಬೇಸಗೆಯಲ್ಲೂ ಹಲ್ಲುಗಳು ಕಟಕಟ ಎನ್ನುತ್ತವೆ. (೧೯೭೪)

# ಗಗನಯುಗದಲ್ಲಿ ಜ್ಯೋತಿಷ್ಯ

ನಾನು ಹುಟ್ಟಿದ ಕೂಡ್ಲೇನೆ ನಮ್ಮ ತೀರ್ಥರೂಪರು ವೆಂಕಟಸುಬ್ಬಾಶಾಸ್ತ್ರಿಗಳನ್ನು ಕರೆಸಿ ಜಾತಕ ಮಾಡಿಕೊಡೋಕೆ ಹೇಳಿದರಂತೆ. ಶಾಸ್ತ್ರಿಗಳೋರು ಪಂಚಾಂಗ ತಗೊಂಡು, ಮಣೇಮೇಲೆ ಶ್ರೀಕಾರ ಬರೆದು ಗ್ರಹಗಳನ್ನೆಲ್ಲಾ ಅವರವರ ಮನೇಲಿ ಕೂಡಹಾಕಿ, ನೋಡ್ತಾ ನೋಡ್ತಾ ಚೇಳು ಕಡಿದವರ ಹಾಗೆ "ಅಯ್ಯಯ್ಯಯ್ಯಾ! ಏನನ್ಯಾಯ ಆಗಿಹೋಯ್ತು. ಛೆ ಛೆ" ಅಂತ ಆಕ್ರಂದನ ಮಾಡಿದ್ದು ಕೇಳಿ ನಮ್ಮಪ್ಪ ಘಬರಾಯಿಸಿ "ಏನು, ಏನು ಶಾಸ್ತ್ರಿಗಳೇ, ಏನಾಯಿತು? ಸಕ್ಕರೆ ಪಾನಕಾ ಮಾಡಿಸ್ಲ್ಯಾ? ಚೇಳಿನ ಅವುಷಧಾ ತರಿಸ್ಲ್ಯಾ?" ಅಂತ ಕೇಳಿದರಂತೆ. ಶಾಸ್ತ್ರಿಗಳು ತಲೆ ಅಲ್ಲಾಡಿಸ್ತಾ ಏನನ್ನೂ ಕೇಳಿಸಿಕೊಳ್ಳದವರ ಹಾಗೆ "ಛೆ ಛೆ ಅನ್ಯಾಯ, ಪರಮ ಅನ್ಯಾಯ! ಕೆಡಿಸ್ಬಿಟ್ಟ ಸ್ವಾಮಿ, ಚಂದ್ರ ಹಾಳ್ಮಾಡಿಬಿಟ್ಟ ಮುಠ್ಠಾಳ! ಎಂಥಾ ಜಾತಕಾನ ಹಾಳ್ಮಾಡಿಬಿಟ್ಟ!" ಅಂತ ಗೋಳಾಡಿದರಂತೆ. ಆಮೇಲೆ ನಮ್ಮಪ್ಪನ ಕಡೆ ತಿರುಗಿ ಹೇಳಿದರು: "ಏನಾಚಾರ್ರೇ, ಎಂಥಾ ಜಾತಕಾ ಅಂತೀರಾ ನಿಮ್ಮ-ಗಂದು ವಾಕ್‌ಸ್ಥಾನದಲ್ಲಿ ಸಾಕ್ಷಾತ್ ಬೃಹಸ್ಪತ್ಯಾಚಾರ್ಯರು ಕೂತಿದ್ದಾರೆ. ಗಜವಿದ್ವಾಂಸ ಆಗೋ ಯೋಗಕೇಂದ್ರದಲ್ಲಿ, ತ್ರಿಕೋಣದಲ್ಲಿ ಶುಭಗ್ರಹರು ಕಾಲು ಮುರುಕೊಂಡು ಬಿದ್ದಿದ್ದಾರೆ. ಪಾಪಗ್ರಹರೆಲ್ಲಾ ತೃತೀಯ ಷಷ್ಠ ಏಕಾದಶಗಳಲ್ಲಿ ಹೋಗಿ ಉತ್ತಮ ಫಲಪ್ರದರಾಗಿದ್ದಾರೆ. ಪೂರ್ಣ ಶತಮಾನ ಆಯುಸ್ಸು. ಇಲ್ಲಾ ಸ್ವಾಮಿ, ನಾನು ಅರ್ಧ ಶತಮಾನದಿಂದ ಸಹಸ್ರಾರು ಜಾತಕಗಳನ್ನು ನೋಡಿದೀನಿ. ಇಂಥಾ ಯೋಗಸಂಪನ್ನ ಜಾತಕಾ ಕಣ್ಣಿಗೆ ಬಿದ್ದಿಲ್ಲ. ಈತ ಚಕ್ರವರ್ತಿಯಾಗಬೇಕು. ಚತುಸ್ಸಮುದ್ರಾಂತ ಧರಿತ್ರೀ ಚಕ್ರವರ್ತಿ. ಆದರೆ ಆಚಾರ್ರೇ, ಈ ಚಂದ್ರ ಕೆಡಿಸಿಬಿಟ್ಟ ಸ್ವಾಮಿ, ಮುಠ್ಠಾಳ! ಶುದ್ಧ ಮುಠ್ಠಾಳ." ವೆಂಕಟಸುಬ್ಬಾಶಾಸ್ತ್ರಿಗಳಿಗೆ ಚಂದ್ರನ ಮೇಲೆ ಕ್ರೋಧ ಏರುತ್ತಲೇ ಇತ್ತು. "ದುರ್ಜನ ಸ್ವಾಮೀ, ಈ ಚಂದ್ರ ಮಹಾ ದುರ್ಜನ. ಎಷ್ಟಾದರೂ ಗುರುತಲ್ಪಗಾಮಿ ಅಲ್ಲವೇ?...." ನಮ್ಮ ತಂದೆಗೆ ಏನೂ ಅಂತ ಗೊತ್ತಾಗದೆ "ಸ್ವಲ್ಪ ಶಾಂತರಾಗಿ ಶಾಸ್ತ್ರಿಗಳೇ, ಸಮಾಧಾನವಾಗಿ ಹೇಳಿ. ಏನೇ ಆದರೂ ನನ್ನ ಮಗ ಹುಟ್ಟಿ ಆಗಿದೆ. ಇನ್ನು ಚಂದ್ರನ್ನ ಬೈದು ಏನು ಪ್ರಯೋಜನ?" ಅಂದರಂತೆ.

ಶಾಸ್ತ್ರಿಗಳು: "ನನ್ನ ಹಾಗೇ ನೀವು ಜ್ಯೋತಿಷ್ಯ ಓದಿದ್ರೆ ತಿಳೀತಿತ್ತು, ನನ್ನ ಸಂಕಟ ನಿಮಗೆ. ಎಂಥಾ ಕಲ್ಪಕ್ಕೊಂದು ಸಲ ಹುಟ್ಟೋ ಜಾತಕಾನ ಈ ಪಾಪಿಷ್ಠ ಕೆಡಿಸಿಬಿಟ್ರೆ ನಂಗೆ ಸಿಟ್ಟುಬಾರದೆ ಇದ್ದೀತೇ ಹೇಳಿ...."

ಹನುಮಂತನ ಬಾಲ ಕಟ್ ಮಾಡಿ ಹೇಳೋದಾದ್ರೆ, ನನ್ನ ಜಾತಕ ಮಾಡರ್ನ್ ಪಾರ್ಲೆನ್ಸ್‌ನಲ್ಲಿ ಹೇಳೋ ಹಾಗೆ ಐಡಿಯಲ್ ಆಗಿತ್ತು. ಆದರೆ, ಒಂದು ಸ್ನ್ಯಾಗ್. ಕೇಮದ್ರುಮಯೋಗ—ಅಂದರೆ ಚಂದ್ರನ ಹಿಂದೂ ಮುಂದೂ ಯಾರೂ ಇದ್ದಿಲ್ಲ, ನಾ ಹುಟ್ಟೋವಾಗ. ಚಂದ್ರ ಒಂದು ಮನೆ ಮುಂದೆ ಹೋಗಿದ್ದ ಅಂದರೆ ಶುಕ್ರ ದ್ವಿತೀಯದಲ್ಲಿ ಸಿಕ್ಕಿಬಿಡ್ತಿದ್ದ. ನಾನು ಚಕ್ರವರ್ತಿ ಆಗಿಬಿಡ್ತಿದ್ದೆ. ಆದರೆ ಚಂದ್ರನಿಗೆ ಏನು ಕಾಲು ಕುಂಟಾಗಿತ್ತೋ ಆತ ಜೋರಾಗಿ ಹೋಗಲಿಲ್ಲ. ಬೇಡ, ಸ್ವಲ್ಪ ಸುಮ್ಮನೆ ಬಿದ್ದಿದ್ದ ಅಂದರೆ ದ್ವಾದಶದಲ್ಲಿ ಬುಧ ಇರ್ತಿದ್ದ. ಆದರೆ ನನ್ನ ರಾಜಯೋಗ ಕೆಡಿಸಬೇಕೂಂತಾನೇ ಚಂದ್ರ ಎಲ್ಲಾರನ್ನೂ ತಪ್ಪಿಸಿ, ನಾನು ಹುಟ್ಟೋ ಹೊತ್ತಿಗೇ ಮೂರು ಖಾಲೀ ಮನೆಗಳ ಮಧ್ಯದ ಮನೇಲಿ ಹೋಗಿ ಕೂತ್ಬಿಟ್ಟ. ಅಂದರೆ ಶಾಸ್ತ್ರಿಗಳಿಗೆ ಸಿಟ್ಟು ಬಾರದೆ ಇರುತ್ತಾ ಹೇಳಿ? ಚಂದ್ರನಿಗೆ ಬಾಯಿಗೆ ಬಂದ ಹಾಗೆ ಬೈದು ಅವರು ಆಮೇಲೆ ದೇವತಾದೂಷಣ ಪ್ರಾಯಶ್ಚಿತ್ತಕ್ಕಾಗಿ ಹತ್ತು ಸಹಸ್ರ ಗಾಯತ್ರೀ ಜಪ ಮಾಡಿದರಂತೆ, ಪಾಪ.

ಹೀಗೆ ನೋಡಿ ಸ್ವಾಮಿ, ನಾನು ಚಕ್ರವರ್ತಿ ಆಗೋದು ಈ ಚಂದ್ರ ಒಬ್ಬನ ನಾನ್‌ಕೋಆಪರೇಷನ್‌ನಿಂದ ತಪ್ಪಿಹೋಯ್ತು. ರಾಜ ಆಗಿ ಮುದ್ರೆ ಉಂಗುರದಿಂದ ರಾಜಾಜ್ಞೆಗೆ ಅಂಕಿತಾ ಒತ್ತೋದು ಬಿಟ್ಟು, ಅಥವಾ ಯಾರಾದರೂ ಬಡ ಗೋಸ್ಟ್ ಕವೀ ಕೈಲಿ ಮಹಾಕಾವ್ಯ ಬರೆಸಿ "ಶ್ರೀಮತ್ ವೆಂಕಟಪತಿ ಮಹಾರಾಜಾಧಿರಾಜ ವಿರಚಿತಮಪ್ಪ ರತ್ನಸುಂದರೀ ಮಹಾಕಾವ್ಯದೊಳ್" ಎಂದು ನನ್ನ ಹೆಸರಲ್ಲಿ ಪ್ರಕಾಶನಪಡಿಸೋದು ಬಿಟ್ಟು, ಲೀಕ್ ಆಗೋ ಫೌಂಟನ್ ಪೆನ್ನಿನಲ್ಲಿ ಏನೇನೋ ಗೀಚಿ, ನೀವು ಪ್ರಿಂಟ್ ಮಾಡ್ತೀರಾ ನೀವು ಪ್ರಿಂಟ್ ಮಾಡ್ತೀರಾ ಅಂತ ಸಂಪಾದಕರಿಗೆ ಕಾಲು ಹಿಡೀತಾ ಹೊಟ್ಟೆ ಹೊರ ಕೊಳ್ಳೋ ಅವಸ್ಥೆ ಬಂದಿದೆ. ಒಂದು ಸಲ ಮಾತ್ರ ನನಗೆ ಕೆಮ್ಮಲು ಹತ್ತಿದಾಗ ಇದು ಟೀಬೀ ಅಂತ ಡಾಕ್ಟರು ಸಂದೇಹಪಟ್ಟದ್ದು ನೋಡಿ ಇದ್ದದ್ದರಲ್ಲೇ ನನಗೆ ಸಂತೋಷವಾಯಿತು. ರಾಜಯೋಗ ಇಲ್ಲದಿದ್ದರೆ ಹೋಗಲಿ, ರಾಜ

ರೋಗ ಆದ್ರೂ ಬಂತಲ್ಲ ನನಗೆ ಅಂತ. (ಟೀ. ಬೀ. ಗೆ ಆಯುರ್ವೇದದಲ್ಲಿ ರಾಜಯಕ್ಷ್ಮ ಅಂತ ಹೆಸರು ಅಲ್ವೆ?) ಆಮೇಲೆ ನೋಡಿದಾಗ ಅದು ಟೀಬೀ ಅಲ್ಲ, ಸಿಂಪಲ್ ಕಫ್ ಅಂತ ಗೊತ್ತಾಗಿ ನಿರಾಶೆ ಆಗಿಹೋಯ್ತು. ಚಂದ್ರ ಮುನಿದುಕೊಂಡ ಅಂದರೆ ರಾಜಯೋಗ ಬಿಡಿ, ರಾಜರೋಗ ಕೂಡ ಬರೋಲ್ಲ ನೋಡಿ. ಇನ್ನು ಎಲ್ಲಾ ಗ್ರಹರು ಸಿಟ್ಟಾಗಿ ಸುರು ಮಾಡಿಬಿಟ್ಟಿದ್ರೆ ನನ್‌ಗತಿ ಏನಾಗ್ತಿತ್ತೋ ಶಿವನೇ ಬಲ್ಲ.

ನನ್ನ ಹೆಂಡ್ತೀ ಜಾತಕಾನೂ ಅಷ್ಟೇ. ಲಾಭಾದಿಪತಿ ವ್ಯಯದಲ್ಲಿ ಇರೋದಲ್ಲದೇ ಹೋಗಿದ್ದರೆ, ಅವಳ ಕೈಹಿಡಿದವನು ಚಕ್ರವರ್ತಿ ಅಲ್ಲದಿದ್ದರೂ ಒಬ್ಬ "ಮಿಣಿಸ್ತರ" ಆದರೂ ಆಗೇಬಿಡ್ತಿದ್ದ ಅಂತ ಅವರ ಮನೇ ಜೋಯಿಸರು ಹೇಳ್ತಾ ಇದ್ದರಂತೆ. ನನ್ನ ಮಗನಿಗೆ ಯಂಬೀಬಿಯಸ್‌ನಲ್ಲಿ ಸೀಟು ಸಿಗದೇ ಇರಲಿಕ್ಕೆ ಬೃಹಸ್ಪತಿ ನೀಚದಲ್ಲಿದ್ದದ್ದು ಕಾರಣವಾಯಿತು. ಜನ್ಮದಲ್ಲಿ ಸೂರ್ಯ ಇದ್ದಿಲ್ಲಾದರೆ ನನ್ನ ಮಗಳ ಮೈ ಬಣ್ಣ ಸರಸ್ವತೀ ಹಾಗೆ ತುಷಾರಹಾರಧವಳ ಆಗಬಹುದಿತ್ತು.

ಒಂದು ಮಾತಿನಲ್ಲಿ ಹೇಳಬೇಕೂ ಅಂದರೆ, ನನ್ನ ಮತ್ತು ಕುಟುಂಬದವರ ಜೀವನವನ್ನೆಲ್ಲ ಒಬ್ಬೊಬ್ಬ ಗ್ರಹರು, ಹಿಂದುಸ್ತಾನೀಲಿ ಹೇಳ್ತಾರಲ್ಲಾ ಹಾಗೆ ಬರ್ಬಾದ್ ಮಾಡಿಟ್ಟಿದ್ದಾರೆ. ಇದಕ್ಕೆಲ್ಲ ಏನುಪಾಯ ಅಂತ ನಾನು ಬುದ್ಧಿ ತಿಳಿದು ಜ್ಯೋತಿಷ್ಯ ಓದಲು ಪ್ರಾರಂಭಿಸಿದಾಗಿನಿಂದ ಯೋಚಿಸ್ತಾ ಇದೀನಿ. ಈ ಗ್ರಹಗಳೆಲ್ಲ ದೂರ, ಆಕಾಶದಲ್ಲಿ ಲಕ್ಷಗಟ್ಟಳೆ ಮೈಲು ಆಚೆಗೆ ಹೋಗಿ ಕೂತಿರೋದ್ರಿಂದ ಏನೂ ಉಪಾಯ ಹೊಳೀಲೇ ಇಲ್ಲ. ನಾವು ಹುಟ್ಟೋ ವೇಳೇಲಿ ಎಲ್ಲಾದರೂ ತಪ್ಪು ಮನೇಲಿ ಹೋಗಿ ಸೇರಿಕೊಳ್ಳುವುದರಲ್ಲಿ ಅವರಿಗೆ ಏನು ತಾಮಸ ಆನಂದ ಸಿಗುತ್ತೋ ಏನೋ. ತ್ರೇತಾಯುಗದಲ್ಲಿ ರಾವಣ ಏನೋ ಈ ಗ್ರಹರನ್ನೆಲ್ಲ ದಬಾಯಿಸಿ, ಅವರವರ ಮನೇಲಿ ಅವರವರನ್ನು ಕೂಡಹಾಕಿ, ಬೀಗ ಜಡಿದು, ಹೊರಗೆ ಜಬರ್ದಸ್ತ್ ಪೊಲೀಸ್ ಬಂದೋಬಸ್ತ್ ಇಟ್ಟು "ಇನ್ನು ಹುಟ್ಟಯ್ಯಾ ನನ್ನ ಮಗನೇ" ಅಂತ ಇಂದ್ರಜಿತುವಿಗೆ ಲೈನ್ ಕ್ಲಿಯರ್ ಕೊಡುತ್ಲೂನೇ ಶನೈಶ್ಚರ ಒಬ್ಬ ಕಿಡಿಕಿಯಿಂದ ಒಂದು ಕಾಲು ಹೊರಗೆ ಚಾಚಿ ಬಿಟ್ಟನಂತೆ. ಆದ್ದರಿಂದ ಇಂದ್ರನ್ನ ಸೋಲಿಸಿದ ಮಗ ಕಡೆಗೂ ರಾಮಾಯಣ ಯುದ್ಧದಲ್ಲಿಸತ್ತುಹೋಗ ಬೇಕಾಯಿತು. ನೋಡಿ

ಗ್ರಹಚಾರದ ಮಹಿಮೆ.

ರಾವಣನಂಥಾ ರಾವಣನೇ ಹೀಗೆ ಬೇಸ್ತು ಬಿದ್ದ ಮೇಲೆ ನಿಮ್ಮ ನಮ್ಮಂಥಾ ಬಡಪಾಯಿಗಳ ಪಾಡೇನು ಹೇಳಿ. ಪುರೋಹಿತರು ಹೇಳಿದ ಹೋಮ-ದಾನ-ದಕ್ಷಿಣೆ ಕೊಟ್ಟು ಇಂಡೈರೆಕ್ಟ್ ಮೆಥಡ್‌ನಿಂದ ಉಪಶಮನ ಮಾಡಿಕೊಳ್ಳೋದಷ್ಟೇ ಉಳಿದಿತ್ತು. ಆದರೆ ಗ್ರಹರಿಗೂ ಅವರ ಏಜಂಟರಾದ ಪುರೋಹಿತರಿಗೂ ನಡುವೆ ಟೆಲಿಫೋನ್ ಸಂಪರ್ಕ ಇಲ್ಲದೇ ಇರೋದ್ರಿಂದ ನಾವು ಮಾಡಿಸಿದ ಶಾಂತಿ ಹೋಮವನ್ನ ದೃಢಪಡಿಸುವ ಸುದ್ದಿ ಅಥವಾ ರಿಟರ್ನ್ ತಲಪೋ ಮುಂಚೇನೇ ಆ ಗ್ರಹರು ನಮ್ಮ ಮೇಲೆ ಆಗ್ರಹದ ಅಮಲ್ದಾರಿ ತೆಗೆದೇಬಿಡುತ್ತಾರೆ ಅಂತ ನನ್ನ ಅನುಭವ.

ಹೀಗೆ ಈ ಗ್ರಹಪೀಡೆಗೆ ಪರಿಹಾರಾನೇ ಇಲ್ಲಾಂತ ಅಂದುಕೊಂಡು ಕೈ ಚೆಲ್ಲಿ ಕೂತಿದ್ದೆ. ಪೊಟೆನ್‌ಶಿಯಲ್ ಚಕ್ರವರ್ತಿಗಳು ದಿನದ ಕೂಳಿಗಾಗಿ ಚಕ್ರ ಹೊಡಿಯೋದೂ ಮಿಣಿಷ್ಟರಾಣಿಯರು ಅನಿಷ್ಟರಾಣಿಯರಾಗೋದೂ ಅನಿವಾರ್ಯ ಅಂತ ಅಂದ್ಕೊಂಡಿದ್ದೆ. ಆದರೆ ಈಗ ಕೆಲವು ವರ್ಷಗಳಿಂದ ನನಗೆ ಬಹಳ ಉತ್ಸಾಹ ಬಂದಿದೆ. ಅಮೆರಿಕದವರೂ ರಶಿಯದವರೂ ಚಂದ್ರಲೋಕಕ್ಕೆ ಹೋಗಿ ಬಂದಿದ್ದಾರೆ. ಚಂದ್ರ ಆದ ಮೇಲೆ ಶುಕ್ರ, ಮಂಗಳ ಎಷ್ಟು ದೂರ? ಬುಧ ಸೂರ್ಯನಿಗೆ ತೀರಾ ಹತ್ತಿರ, ಆದ್ರಿಂದ ಅಲ್ಲಿ ಹೋದ್ರೆ ರೆಕ್ಕೆ ಸುಟ್ಕೋಬೇಕಾದೀತು ಅಂತಾರೆ. ಆದರೆ ಬುಧ ನ್ಯೂಟ್ರಲ್‌ಗ್ರಹ. ಅವನ್ನ ಇಗ್‌ನೋರ್ ಮಾಡಿದ್ರೂ ನಡಿಯುತ್ತೆ. ಗುರು ಶನಿ ಬಹಳ ಕೋಲ್ಡ್ ಅಂತಾರೆ. ಸ್ವಲ್ಪ ದಪ್ಪ ಸೂಟ್ ಹಾಕ್ಕೊಂಡರಾಯಿತು ಅನ್ನಿ. ಅಂತೂ ಈ ಶತಮಾನ ಮುಗಿಯೋದ್ರೊಳಗೆ ನಾವು ಎಲ್ಲಾ ಗ್ರಹಗಳಿಗೂ ಅತ್ತೇಮನೇಗೆ ಹೋಗಿ ಬರೋ ಹಾಗೆ ಹೋಗಿಬರಬಹುದು.

ಆದರೆ ಇದೆಲ್ಲದಕ್ಕೂ ನನ್ನ ಅಥವಾ ನನ್ನ ಹೆಂಡತಿಯ ಅಥವಾ ನಿಮ್ಮ ಅಥವಾ ನಿಮ್ಮ ಮಗನ ಜಾತಕಕ್ಕೂ ಏನು ಸಂಬಂಧ ಅಂತ ನೀವು ಕೇಳ್ತೀರಿ ಅಲ್ಲವೆ? ಕೇಳಿ ಹೇಳ್ತೀನಿ.

೧೯೯೧ ಅಂತ ನೆನಸಿಕೊಳ್ಳಿ. ನಿಮ್ಮ ಕುಟುಂಬಕ್ಕೆ ಈ ಕುಟುಂಬ ಯೋಜನಾ ಯುಗದಲ್ಲೂ ಪ್ರಸವವೇದನೆ ಲಕ್ಷಣ ಇದೇ ಅಂತಿಟ್ಟುಕೊಳ್ಳಿ. ಈಗ ಪ್ರಸವವಾದರೆ ಅಷ್ಟಮದಲ್ಲಿ ಅಂಗಾರಕನೋ ಸಪ್ತಮದಲ್ಲಿ ಕೇತುವೋ

ಭಾಗ್ಯಾಧಿಪತಿ ದ್ವಾದಶದಲ್ಲೋ ಆಗುತ್ತಾನೆ ಅಂದುಕೊಳ್ಳಿ. ನೀವೇನು ಮಾಡುತ್ತೀರಿ? ನೀವು ಆ ಪುಣ್ಯಾತ್ಗಿತ್ತಿಯನ್ನು ಒಂದು ಸ್ಪೇಸ್ ಸೂಟ್ ತೊಡಿಸಿ ಒಂದು ಕ್ಯಾಪ್ಸೂಲಿನಲ್ಲಿ ಕೂಡ್ರಿಸಿ ಟಾಟಾ ಮಾಡಿ ಬರುತ್ತೀರಿ. ಅವರನ್ನ ತೆಗೆದುಕೊಂಡು ಸ್ಪೇಸ್ ಎಕ್ಸ್‌ಪ್ರೆಸ್ ಹಾರುತ್ತದೆ. ಅದು ಒಂದು ಗಂಟೆಗಿಂತಲೂ ಕಡಿಮೆ ವೇಳೆಯಲ್ಲಿ ಸುಮಾರು ೨೨ ಸಾವಿರ ಮೈಲು ದೂರ ಹೋಗಿ ಅಲ್ಲಿರುವ ಸ್ಪೇಸ್ ಸ್ಟೇಶನ್ನಿನಲ್ಲಿ ಇಳಿಸುತ್ತದೆ. ಆ ಸ್ಟೇಶನ್ನನ್ನು ನೀವು ಮೊದಲೇ ರೇಡಿಯೋ ಸಂದೇಶ ಕಳಿಸಿದ ಪ್ರಕಾರ ಷಷ್ಠದಲ್ಲಿ ಮಂಗಳ ಬರುವ ರೀತಿಯಲ್ಲಿ ನಿಲ್ಲಿಸಿದ್ದಾರೆ; ಅಥವಾ ಹೆರಿಗೆಗೆ ತಡವಿದ್ದರೆ ಅಂತೂ ಸಪ್ತಮದಲ್ಲಿ ಅಂಗಾರಕ ಬಾರದ ಹಾಗೆ ಅದನ್ನು ಓರಿಯಂಟ್ ಮಾಡ್ತಾ ಇರ್ತಾರೆ. ಹೀಗೆ ನಿಮ್ಮ ಮಗಳು ಸಪ್ತಮ ಕುಜ ದೋಷವಿಲ್ಲದೇನೇ ಹುಟ್ಟುತ್ತಾಳೆ. ಅವಳ ಗಂಡ ಆಮೇಲೆ ವಿಷ ಕುಡಿದರೂ ಸಾಯೊಲ್ಲ.

ಗ್ರಹಾಂತರಯಾನ ಪ್ರಾರಂಭ ಆದ ಕೂಡ್ಲೆ ನಮ್ಮ ಜ್ಯೋತಿಷಿಗಳು ಭರದಿಂದ ಹುಟ್ಟೋದಿಕ್ಕೆ ಅತ್ಯಂತ ಅನುಕೂಲವಾದ ಗ್ರಹ ಸಂಯೋಜನೆಗಳನ್ನು ಗಣಿತ ಹಾಕೋ ಕೆಲಸ ಪ್ರಾರಂಭಿಸ್ತಾರೆಂದು ನನ್ನ ಊಹೆ ಇದೆ. ಆಕಾಶದಲ್ಲೆಲ್ಲ ಬೇರೆ ಬೇರೆ ಮುಹೂರ್ತಗಳಲ್ಲಿ ಹುಟ್ಟಿದರೆ ಶುಭಫಲ ಕೊಡುವ ಹೆರಿಗೆ ಮನೆಗಳ ನೆಟ್‌ವರ್ಕ್ ನಿರ್ಮಾಣವಾಗಿಬಿಡೋದು, ನಿಮಗೆ ಬೇಕಾದ್ದನ್ನು ಆರಿಸಿ ನೀವು ನಿಮ್ಮ ಪತ್ನೀನ್ನ ಅಲ್ಲಿ ಕಳಿಸಿಬಿಡೋದು. ಖರ್ಚು ಮಾವಾ ಕೊಡಬೇಕೂಂತ ಕರಾರು ಮಾಡಿಕೊಳ್ಳಿ, ಅಂತ ಹೇಳಲೇಬೇಕಾಗಿಲ್ಲ ತಾನೆ?

ಹೀಗಾದ ಮೇಲೆ ಕೆಟ್ಟ ಜಾತಕಾ ಅನ್ನೋದೇ ಇರೋಲ್ಲ–ಸ್ಪೇಸ್ ಎಕ್ಸ್‌ಪ್ರೆಸ್ ಮತ್ತು ಸ್ಪೇಸ್ ಮೆಟರ್ನಿಟೀ ಹೋಂ ಫೀ ಕೊಡೋ ತಾಖತ್ತು ನಿಮ್ಮ ಮಾವನ ಕೈಲಿ ಇದ್ದರೆ ತೀರಿತು. ಒಂದೇ ಕಷ್ಟ. ಏಕಕಾಲಕ್ಕೆ ಬಹಳ ಜನ ಮಿನಿಷ್ಟರ್ ಯೋಗದವರು ಹುಟ್ಟಿಬಿಟ್ಟರೆ ಮಂತ್ರಿಮಂಡಲದ ಗಾತ್ರಾನ ಸ್ವಲ್ಪ ಹೆಚ್ಚಿಸಬೇಕಾಗುತ್ತೋ ಏನೋ.

ಆರ್ಕಿಮಿಡಿಸನೋ ಯಾರೋ ಹೇಳಿದ್ದರಂತಲ್ಲಾ–ಪೃಥ್ವಿಯ ಹೊರಗೆ ನಿಲ್ಲಲಿಕ್ಕೆ ಒಂದು ಸ್ಥಳ ಕೊಡಿ, ಸಾಕಷ್ಟು ಉದ್ದವಾದ ಒಂದು ಸಬಳ ಕೊಡಿ, ನಾನು ಪೃಥ್ವಿಯನ್ನೇ ಸ್ಥಳಾಂತರ ಮಾಡಿ ತೋರಿಸುತ್ತೇನೆ ಅಂತ. ಆರ್ಕಿಮಿಡಿಸ್ ಕೇಳ್ತಾ ಇದ್ದ ಕಾಲಾ ಈಗ ಬಂದಿದೆ ಅಂತ ಕಾಣಿಸುತ್ತೆ.

ಗ್ರಹಾಂತರ ಪ್ರಯಾಣಕ್ಕೆ ಸಾಧ್ಯವಾದ ಮೇಲೆ ನಮ್ಮ ಜ್ಯೋತಿಷ್ಯ ಶಿಖಾಮಣಿಗಳನ್ನು ಕೇಳಿ ಒಂದೆರಡು ಗ್ರಹಗಳನ್ನು ಕೆಲವು ಸಾವಿರ ಹೈಡ್ರೋಜನ್ ಬಾಂಬುಗಳ ಸಹಾಯದಿಂದ ಸ್ಥಳಾಂತರಿಸಿದರೆ ಹೇಗೆ ಅಂತ! ಈಗ ನೋಡಿ, ಬುಧ, ಬಹಳ ಒಳ್ಳೇ ಗ್ರಹ. ಎಲ್ಲಾ ಒಳ್ಳೇ ಮನುಷ್ಯರ ಹಾಗೇ ಅವನಿಗೂ ಸ್ವಂತ ಬುದ್ಧಿ ಇಲ್ಲ. ಒಳ್ಳೇ ಗ್ರಹರೊಟ್ಟಿಗೆ ಸೇರಿದರೆ ಒಳ್ಳೆ ಫಲಾ ಕೊಡ್ತಾನೆ, ಕೆಟ್ಟವರ ಸಂಗತಿ ಕೂಡಿಕೊಂಡರೆ ನಮ್ಮ ಸುಬ್ಬಾಶಾಸ್ತ್ರಿಗಳು ಹೇಳೋ ಹಾಗೆ ಮುತ್ಕಾಳ ಆಗ್ತಾನೆ. ಸಾಲದ್ದಕ್ಕೆ ಈತ ತನ್ನ ಹೆಚ್ಚಿನ ಸಮಯ ಪಾಪಗ್ರಹನಾದ ಸೂರ್ಯನ ಹತ್ತಿರ ಕಳೀತಾನೆ. ಹೀಗೆ ಅವನು ಶುಭ ಫಲ ಕೊಡೋ ಕಾಲ ಕೊಂಚ. ಈಗ ಅವನ್ನ ಸೂರ್ಯನಿಂದ ನಾಲ್ಕೈದು ಕೋಟಿ ಮೈಲು ದೂರ ತಳ್ಳಿದರೆ ಅವನ ಶುಭಫಲ ಕಾಲವನ್ನ ಸ್ವಲ್ಪ ಹೆಚ್ಚು ಮಾಡಬಹುದಲ್ಲವೆ?

ಗ್ರಹಾಂತರ ಪ್ರಯಾಣದ ಮಾತು ಬಂದಾಗ ನನಗೆ ಇನ್ನೊಂದು ಸಮಸ್ಯೆ ಹೊಳೀತಾ ಇದೆ. ಇದು ನಮ್ಮ ನಿಮ್ಮ ಭವಿಷ್ಯದ್ದಲ್ಲ, ಜ್ಯೋತಿಷ್ಯಶಾಸ್ತ್ರದ ಭವಿಷ್ಯದ್ದು. ಜನರೆಲ್ಲಾ ಕ್ರಿಸ್ಮಸ್ ರಜೇಲಿ, ಸಮ್ಮರ್ ವೆಕೇಶನ್‌ನಲ್ಲಿ ಶುಕ್ರ ಮಂಗಳ ಗ್ರಹಗಳಿಗೆ ಟ್ರಿಪ್ ಹೊರಡೋ ದಿನ ಬಹಳ ದೂರ ಇಲ್ಲ. ಹೊಸದಾಗಿ ಮದುವೆಯಾದವರು ತಮ್ಮ ಪ್ರೇಮತಾಪವನ್ನು ತಣಿಸಿಕೊಳ್ಳೋಕೆ ಅಂತ ಚಂದ್ರಾ ಎಕ್ಸ್‌ಪ್ರೆಸ್ ಹಿಡಿಯಬಹುದು. ಇಷ್ಟೆಲ್ಲ ಟ್ರಾಫಿಕ್‌ಗೆ ಕೇಟರ್ ಮಾಡೋಕ್ಕೆ ಆ ಗ್ರಹಗಳಲ್ಲಿ ಖಾಯಂ ವಸ್ತಿ ಆಗಬೇಕಾಗುತ್ತೆ. ಎಷ್ಟು ಕುಟುಂಬ ಯೋಜನೇ ಮಾಡಿದ್ರೂ ಏನಾದ್ರೂ ತಪ್ಪಾಗಿ ಅಲ್ಲಿ ಮಕ್ಳು ಹುಟ್ಟೋದೇ. ಈಗ ಚಂದ್ರಲೋಕದಲ್ಲಿ ಏಪ್ರಿಲ್ ಒಂದನೇ ತಾರೀಖು ೧೯೯೧ನೇ ದಿನ ಸೂರ್ಯೋದಯಕ್ಕೆ ಒಂದು ಮಗು ಹುಟ್ಟಿದರೆ ಅದರ ಜಾತಕಾ ಹೇಗೆ ಮಾಡಬೇಕು? ಈಗಿರೋ ಜೋತಿಷ್ಯ ಎಲ್ಲಾ ಈ ಭೂಲೋಕದಲ್ಲಿ ಹುಟ್ಟಿದವರ ಬಗ್ಗೆ ಬರೆದದ್ದು. ಚಂದ್ರಲೋಕದಲ್ಲಿ ಅದು ನಡೆಯೋ ನಾಣ್ಯ ಅಲ್ಲ. ಭೂಲೋಕದಲ್ಲಿ ಅಷ್ಟಮದಲ್ಲಿ ಕುಜ ಕೊಡೋ ಫಲಾನ ಚಂದ್ರಲೋಕದಲ್ಲೀನೂ ಕೊಡ್ತಾನೆ ಅನ್ನೋದು ಕಷ್ಟ. ಮಂಗಳಲೋಕದಲ್ಲೇ ಹೋಗಿ ಹುಟ್ಟಿದವರ ಗ್ರಹಗತಿ ನಿರ್ಧಾರ ಮಾಡೋದು ಇನ್ನೂ ಕಷ್ಟವಾಗುತ್ತೆ.

ಇಷ್ಟು ಮಾತ್ರವಲ್ಲ. ನಾನು ಭೂಮಿಯಲ್ಲೇ ಹುಟ್ಟಿದ್ದೇನೆ ಅನ್ನಿ. ಸಾಡೇಸಾತಿ ಮಧ್ಯದಲ್ಲಿ ಚಂದ್ರಲೋಕಕ್ಕೆ ಅಥವಾ ಶನಿಲೋಕಕ್ಕೇ ಮೈಗ್ರೇಟ್

ಮಾಡಿಬಿಡ್ತೀನಿ ಅನ್ನಿ. ಆಗ ನನ್ನ ಭವಿಷ್ಯ ಹೇಗೆ ಹೇಳ್ತೀರಿ? ಅಲ್ಲಿಂದ ಹೋದ ಮೇಲೂ ಇಲ್ಲೀ ಭವಿಷ್ಯನೇ ನಡಿಯುತ್ತೆ ಅನ್ನೋದು ಅಮೆರಿಕಾದಲ್ಲಿ ನಮ್ಮ ರೂಪಾಯಿ ನಡೆಯುತ್ತೆ ಅನ್ನುವಷ್ಟೇ ಮೂಢತನ. ಇದಲ್ಲದೆ ನಾನು ಶುಕ್ರ ಲೋಕಕ್ಕೂ ಪೃಥ್ವಿಗೂ ನಡುವೆ ಒಂದು ಸ್ಪೇಸ್ ಸ್ಟೇಶನ್‌ನಲ್ಲಿ ಠಾಣೆ ಹೂಡಿದರೆ ಈ ಗ್ರಹರೆಲ್ಲಾ ಏನು ಮಾಡುತ್ತಾರೆ? ಇಲ್ಲ—೧೯೭೦ರೊಳಗೆ ನಮ್ಮ ಜ್ಯೋತಿಷಿಗಳು ಅಂತರ್ಗ್ರಹಫಲ ಜ್ಯೋತಿಷ್ಯ ಹೇಳಲು ತಯಾರಾಗಲೇ ಬೇಕಾದೀತು ಮತ್ತು ಆ ಗ್ರಹರು ಕೂಡ ತಾವು ಈ ಫರಾರಿ ಕೈದಿಗಳಿಗೆ ಏನು ಫಲ ಕೊಡಬೇಕು ಅಂತ ಯೋಚನೆಗೆ ಬೀಳೋ ಪ್ರಸಕ್ತೀನೇ ಇದೆ. (೧೯೬೮)

## ಅದೃಷ್ಟ ಅಪ್ಪಳಿಸಿದರೆ

ಸಿಡಿಲು ಒಂದೇ ಕಡೆ ಎರಡು ಸಲ ಬಡಿಯುವುದಿಲ್ಲವಂತೆ. ಅದೃಷ್ಟವೂ ಎರಡು ಸಲ ಒಬ್ಬನಿಗೇ ಬಡಿಯಲಾರದೆಂದು ತೋರುತ್ತದೆ. ಆದರೆ ಮೈಸೂರಿನಲ್ಲಿ ಲಾಟರಿ ದೇವಿ ಎಸ್. ನಾರಾಯಣರಾಯರಿಗೆ ಎರಡು ಸಲ ಬಡಿದು ಅವರ ಮೇಲೆ ವಿಶೇಷ ಪ್ರೀತಿ ತೋರಿಸಿದ್ದಾಳೆ. ಕೆಲ ತಿಂಗಳ ಹಿಂದೆ ಲಾಟರೀ ಆಘಾತವಾಗಿ ಅದರಿಂದ ಪುನಶ್ಚೇತನಗೊಳ್ಳುತ್ತಿರುವಷ್ಟರಲ್ಲೇ ಅವರಿಗೆ ಮತ್ತೊಮ್ಮೆ ಬಂದು ಅಪ್ಪಳಿಸಿದಳು. ಆದರೆ ನನ್ನ ಮಿತ್ರರೊಬ್ಬರ ಹೇಳಿಕೆಯ ಪ್ರಕಾರ ಅದೃಷ್ಟವಂತ ಎಸ್. ನಾರಾಯಣರಾಯರು ಅಂಥಿಂಥಾ ಅದೃಷ್ಟಗಳಿಂದ ಸಹಸಾ ಕಂಗೆಡುವವರಲ್ಲ. ಅವರ ಪ್ರಥಮ ಶುಭೋದಯದಿಂದ ಬಂದ ಹಣದಲ್ಲಿ ಕೆಲವಂಶ ಸದ್ವಿನಿಯೋಗವಾಗಿ ಕೈ ಬಿಟ್ಟುಹೋಗಿತ್ತು. ಅದೃಷ್ಟ ಕೊಡಬೇಕೆಂದಾಗ ಹೆಟ್ಟಿ ಹೆಟ್ಟಿ ಕೊಡುತ್ತದೆ ಅಂತ ಒಂದು ಗಾದೆ ಉಂಟು. ನಾರಾಯಣರಾಯರ ಹತ್ತಿರ ಅಷ್ಟೇ ಹಣ ಉಳಿಯಬೇಕು ಅಂತ ಲಕ್ಷ್ಮೀ ಸಂಕಲ್ಪಿಸಿರಬೇಕು. ಹಾಗೆ ಎರಡನೇ ಸಲ ಲಕ್ಷ್ಮೀಕಟಾಕ್ಷ ವಿಕ್ಷೇಪ ಅವರ ಮೇಲಾಯಿತು.

ಎಲ್ಲರೂ ನಾರಾಯಣರಾಯರ ಹಾಗೆ ನಿರ್ಯೋಚನೆಯಿಂದ ಆಕಸ್ಮಿಕ ಅದೃಷ್ಟಗಳನ್ನು ಸ್ವಾಗತಿಸಲಾರರು. ಹೋಸಿಯಾರಪುರದ ಬೋಧರಾಜ ಥಾಪಾಗೆ ತಮಿಳುನಾಡಿನ ಹತ್ತು ಪಕ್ಷ ಬಂಪರ್ ಬಹುಮಾನ ಬಂದು

ತಲೆಯ ಮೇಲೆ ಎಷ್ಟು ಜೋರಾಗಿ ಬಂಪ್ ಮಾಡಿತೆಂದರೆ ಅವನು ಕೆಲ ಕಾಲ ಸ್ಟಂಪ್ ಆಗಿ ಹೋದನಂತೆ. ಎಷ್ಟೋ ರಾತ್ರಿ ಆ ಬಡ ಕಾರಕೂನನಿಗೆ ನಿದ್ರೆಯೇ ಬರಲಿಲ್ಲ. ತಮಿಳುನಾಡಿನ ದ್ರಾವಿಡ ಮುನ್ನೇಟ್ರ ಕಳಗಂ ಸರಕಾರ ಈ ದ್ರಾವಿಡೇತರನಿಗೆ ತನ್ನ ಬಹುಮಾನ ಸಿಗಲಾರದೆಂದು ಪಟ್ಟುಹಿಡಿದರೆ ಏನು ಗತಿ ಎಂದು ಯೋಚನೆಯಾಯಿತೋ ಅಥವಾ ಬೆಳಗಾಗುತ್ತಲೇ ನೆಲ ದಿಂದ ಎಲ್ಲ ಕಡೆ ಎದ್ದು ಬರಬಹುದಾದ ಈವರೆಗೆ ಅದೃಶ್ಯರಾಗಿದ್ದ ಬಂಧು ಮಿತ್ರರ ಹತ್ತಿರ ಹೇಗೆ ಪಾರಾಗುವುದೆಂಬ ಚಿಂತೆಯೋ ಅಥವಾ ಬರೇ ಹರ್ಷ ವಾಯುವಿನ ಉಪದ್ರವವೋ ಗೊತ್ತಿಲ್ಲ. ಕೊನೆಗೆ ಅವನು ದೇವರಿಗೆ ಒಂದು ಲಕ್ಷ ರೂಪಾಯಿ ಕೊಡುವುದಾಗಿ ಪ್ರಾಮಿಸ್ ಮಾಡಿ ತನ್ನ ನಿದ್ರೆಯನ್ನು ಮರಳಿಪಡೆದನಂತೆ. ಆ ಅದೃಷ್ಟಶಾಲಿ ದೇವರು ಯಾರೆಂದು ಮಾತ್ರ ಗೊತ್ತಾಗಿಲ್ಲ. ಮನುಷ್ಯನಿಗೆ ಒಳ್ಳೇದಾದರೆ ದೇವರಿಗೂ ಲಾಭವೇ ಎಂಬುದನ್ನು ದೇವರು ಇನ್ನಾದರೂ ತಿಳಿದುಕೊಳ್ಳಲಿ.

ಲಾಟರಿಯಲ್ಲಿ ಹತ್ತಿಪ್ಪತ್ತು ಲಕ್ಷ ಗೆದ್ದರೆ ನಿಮ್ಮಂಥ ಅದೃಷ್ಟಶಾಲಿ ನೀವೇ ಅಂತ ನೀವು ತಿಳಿದಿರಬಹುದು. ಆದರೆ ಅದು ಅಷ್ಟು ಸರಳ ವಿಚಾರವಲ್ಲ. ಸುದೈವವೂ ದುರ್ದೈವದ ಹಾಗೆ ಕೊಲ್ಲಬಲ್ಲದು, ಕಾಡಬಲ್ಲದು. ಈಚೆಗೆ ಒಂದು ಆಸ್ಪತ್ರೆಯಲ್ಲಿ ಕಠಿನ ರೋಗದಿಂದ ಬಳಲುತ್ತಿದ್ದವನಿಗೆ ಲಾಟರಿಯಲ್ಲಿ ಲಕ್ಷವೋ ಎರಡು ಲಕ್ಷವೋ ಬಂತಂತೆ. ಮೊದಲು ಈ ಶುಕ್ರದೆಸೆಯ ಸುದ್ದಿಯನ್ನು ರೋಗಿಯ ಬಂಧುಗಳು ಡಾಕ್ಟರಿಗೆ ತಿಳಿಸಿ, ಸುದ್ದಿ ಕೇಳಿ ಹಾರ್ಟ್‌ಫೇಲ್ ಆಗದ ಹಾಗೆ ಅವನಿಗೆ ಹೇಳಿ, ಎಂದರು. ಡಾಕ್ಟರರು ರೋಗಿಯ ಹತ್ತಿರ ಹೋಗಿ ಲಘುವಾಗಿ "ಏನ್ರೀ ನಿಮಗೆ ಲಾಟ್ರೀಲಿ ಲಕ್ಷ ಬಹುಮಾನ ಬಂದ್ರೆ ಏನು ಮಾಡುತ್ತೀರಿ?" ಅಂತ ಕೇಳಿದರು. ಆದರೆ ಆತನಿಗೆ ತನ್ನ ಅದೃಷ್ಟ ಹೀನತೆಯ ಬಗ್ಗೆ ಎಂಥಾ ಘನ ವಿಶ್ವಾಸ ಅಂದರೆ "ಹೋ! ಲಾಟರೀಲಿ ಬಂದರೆ ಪೂರ್ತಿ ಹಣ ನಿಮಗೇ ಕೊಟ್ಟುಬಿಡುತೀನಿ ಡಾಕ್ಟರ್. ತೊಗೊಳ್ಳಿ ಟಿಕೇಟು" ಅಂತ ಅವರ ಕೈಯಲ್ಲಿ ಆ ಅದೃಷ್ಟದ ಟಿಕೆಟ್ ಕೊಟ್ಟೇಬಿಟ್ಟ. ಡಾಕ್ಟರ್ ತಲೆ ತಿರುಗಿ ಅಲ್ಲೇ ಕುಸಿದುಬಿದ್ದು ಪ್ರಾಣಬಿಟ್ಟರು. ರೋಗೀ ಪುಣ್ಯ ಡಾಕ್ಟರರ ಪ್ರಾಣ ತಗೊಂತು ಅನ್ನೋದು ಇದಕ್ಕೇ ಅಲ್ಲವೆ?

ಇಂಗ್ಲೆಂಡಿನಲ್ಲಿ ನಾಯೀ ಷರತ್ತಿನಲ್ಲಿ ಲಕ್ಷಪೌಂಡ್ ಬಹುಮಾನ ಬಂದ

ಒಬ್ಬ ಬಡ ಕೂಲಿಕಾರ ತನ್ನ ಗೋಳನ್ನು ತೋಡಿಕೊಂಡು ಪತ್ರಿಕೆಗಳಲ್ಲಿ ಒಂದು ಸಂದರ್ಶನ ಪ್ರಕಟಿಸಿದ್ದ. ಆತನೇನೋ ಹಣ ಬಂತು, ಇನ್ನು ತುಸು ಆರಾಮಾಗಿ ಬಾಳಬಹುದು ಅಂತ ಕನಸು ಕಟ್ಟಿದ್ದ. ಕಾರಖಾನೆಯಲ್ಲಿದ್ದ ಕೆಲಸ ಬಿಡಬಾರದೂ ಅಂತಲೇ ಆತ ಎಣಿಸಿದ್ದ. ಆದರೆ ಮರುದಿನ ಅವನು ತನ್ನ ಕೊಳಕಂಗಿ ಹಾಕಿಕೊಂಡು ಕಾರಖಾನೆಗೆ ಹೋದಾಗ ಅಲ್ಲಿ ಮನುಷ್ಯರು ಮಾತ್ರವಲ್ಲ ಗೋಡೆಗಳು ಯಂತ್ರಗಳು ಕೂಡ ತನ್ನ ದರ್ಶನ ಮಾತ್ರದಿಂದಲೇ ಥಂಡಾ ಆಗಿ ಹೋದ ಹಾಗೆ ಕಾಣಿಸಿತು. ಅವನ ಸಹ ಕೆಲಸಗಾರರ ನಾಲಗೆಗಳಿಗೆಲ್ಲ ನರಸುಕ್ಕು ಬಿದ್ದಂತೆ ಅನಿಸಿತು. ಅವರೆಲ್ಲ ಹುಚ್ಚು ನಾಯಿಯನ್ನು ತಪ್ಪಿಸುವ ಹಾಗೆ ಅವನೆದುರಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದರು. ಫೋರ್‌ಮನ್ನನಿಗೆ ಒಮ್ಮಿಂದೊಮ್ಮೆ ಆತನ ಮೇಲೆ ಬ್ರಿಟಿಷ್ ರಾಣಿಯ ಗಂಡನೋ ಎಂಬಷ್ಟು ಗೌರವ ಹುಟ್ಟಿಬಿಟ್ಟಿತು. ಗಂಟು ಹುಬ್ಬಿನ ಮೆನೇಜರ್ ಕೂಡ ಅವನನ್ನು ಭಾರೀ ಗಿರಾಕಿಗಾಗಿ ಕಾದಿಟ್ಟ ನಗೆಯಿಂದ ಪೂಜಿಸಿದ. ಕಾರಖಾನೆಯ ವಾತಾವರಣ ಎಷ್ಟು ಕತ್ತು ಹಿಸುಕುವಂತಾಯಿತಂದರೆ ಅದೃಷ್ಟಶಾಲಿ ಅಂದೇ ಸಂಜೆ ರಾಜೀನಾಮೆ ಕೊಟ್ಟು ಮನೆಗೆ ಬಂದ.

ಮನೆಯಲ್ಲಿ ಆತನ ಹೆಂಡತಿಯೂ ಅದೇ ಕಥೆ ಹೇಳಿದಳು. ಅವಳ ಸಮಾನ ಸ್ಕಂಧ ಗೃಹಿಣಿಯರೆಲ್ಲ ಒಮ್ಮಿಂದೊಮ್ಮೆ ಅಮ್ನೇಶಿಯಾ ಬಡಿದವರ ಹಾಗೆ ಅವಳನ್ನು ಜನ್ಮದಲ್ಲೇ ಕಂಡಿಲ್ಲೆಂಬಂತೆ ಆಚೇ ಕಡೆ ನೋಡುತ್ತ ಸಾಗುತ್ತಿದ್ದರು. ಅವರ ವಸತಿಯ ಸುತ್ತಲ ಬಡವರೆಲ್ಲ ಯಾವುದೋ ವಿಚಿತ್ರ ರೋಗದಿಂದ ಆಕಸ್ಮಾತ್ತಾಗಿ ಯಾರೋ ಸತ್ತಿದ್ದಾರೆಂಬಂತೆ ವರ್ತಿಸಿದರು. ಈ "ಜಂಗುಳಿಯ ನಡುವೆ ಏಕಾಂತ"ವನ್ನು ತಾಳಲಾರದೆ ಅವಳು ಗಂಡನನ್ನು ಅಪ್ಪಿಕೊಂಡು ಅಳತೊಡಗಿದಳು.

ಅವರು ಅಲ್ಲಿಂದ ಮನೆ ಕಿತ್ತು ಸ್ವಲ್ಪ ಅನುಕೂಲವಂತರ ವಸತಿಯಲ್ಲಿ ಒಂದು ಬಿಡಾರ ಹೂಡಿದರು. ಆದರೆ ಈ ಹೊಸ ಜನ ಯಾವುದೋ ವಿಜಾತೀಯ ಪ್ರಾಣಿಗಳು ಮನುಷ್ಯವೇಷ ಹಾಕಿಕೊಂಡು ತಮ್ಮ ನಡುವೆ ಸೇರಿವೆ ಎಂಬ ಹಾಗೆ ಮೂಗು ಮುರಿಯುತ್ತ ಸಾಗುತ್ತಿದ್ದರು. ಮನುಷ್ಯನ ಸ್ಥಾನಮಾನ ಹಣದಿಂದ ಉಂಟಾಗುವುದಿಲ್ಲ ಎಂಬುದಾಗಿ ಅವರು ತಮ್ಮ ಮೌನದಿಂದ

ಸೂಚಿಸುತ್ತಿದ್ದರು.

ಇಷ್ಟೇ ಆದರೆ ಚಿಂತೆ ಇದ್ದಿಲ್ಲ. ಜೀವಮಾನದಲ್ಲೇ ಅವರು ಕಂಡಿರದ ಕೇಳಿರದ ಕೆಲ ಜನರು ಅವರನ್ನು ಹುಡುಕಿಕೊಂಡು ಬಂದರು. "ಹೋ! ಮರೆತಿರಾ? ನಾನು ನಿನ್ನ ಅಜ್ಜಿಯ ತಂಗಿಯ ಮೈದುನನ ಮಗಳ ಅಳಿಯ" ಅಂತೊಬ್ಬ. "ಅಲ್ಲಪ್ಪಾ, ನಿನ್ನ ಕಕ್ಕೀ ಮನೆಗೆ ನೀ ಬಂದಿದ್ದಾಗ ನನ್ನ ಕಕ್ಕೀ ಮನೆಗೆ ನಾನೂ ಬಂದಿದ್ದೆ, ಆಗ ಭೆಟ್ಟಿಯಾಗಿದ್ದು ಮರೆತೇಬಿಟ್ಟೆಯಾ?" ಅಂತೊಬ್ಬಳು.

ಇಲ್ಲ, ಆಕಸ್ಮಿಕ ಧನಲಾಭ ಸಂತೋಷದಷ್ಟೇ ಸಂತಾಪವನ್ನೂ ತರುತ್ತದೆ ಎಂದಾತ ಹೇಳಿದ್ದಾನೆ. ಹಣ ಬಂದರೆ ಸಾಲದು. ಅದು ಇದ್ದರೂ ಇಲ್ಲದಂತೆ ಇರಲು ಕಲಿಯಬೇಕು—ಬಿಸಿ ತುಪ್ಪ ಬಾಯಿಯಲ್ಲಿ ಸುರುವಿಕೊಂಡ ಹಾಗೆ. ಅದನ್ನು ಉಗುಳಿಬಿಟ್ಟವರು ಯಾರೂ ಇಲ್ಲ. ಆದರೆ ಬಾಯಿ ಗಂಟಲು ಕರುಳು ಸಹಿತ ಸುಟ್ಟುಕೊಳ್ಳದೆ ಉಳಿಯುವವರು ಕಡಮೆ. (೧೯೭೦)

## ನಾನು ಕಾಣದ ಭೂತಗಳು—೧

ಪ್ರಾಮಾಣಿಕವಾಗಿ ಹೇಳಬೇಕೆಂದರೆ, ನಾನು ಸ್ವತಃ ಯಾವ ಭೂತವನ್ನೂ ಕಂಡವನಲ್ಲ. ಆದರೆ ಭೂತವನ್ನು ಕಂಡಿದ್ದೇನೆ ಅಂತ ಹೇಳಿಕೊಳ್ಳುವವರನ್ನು ಕಂಡವರನ್ನು ನಾನು ಕಂಡಿದ್ದೇನೆ. ಭೂತದ ಸಪ್ಪಳ ಕೇಳಿದ್ದೇನೆ ಅಂತ ಹೇಳಿಕೊಳ್ಳುವವರಿಂದ ಸಂಗತಿಗಳನ್ನು ಕೇಳಿದ್ದೇನೆ. ಅವರೆಲ್ಲರ ಪ್ರಾಮಾಣಿಕತೆಯ ಬಗ್ಗೆ ನನಗೆ ಕಿಂಚಿತ್ತು ಸಂಶಯವಿಲ್ಲ. ಆದ್ದರಿಂದ ನನ್ನ ಕಣ್ಣು ಕಿವಿಗಳಲ್ಲಿ ಏನೋ ದೋಷ ಇರಬೇಕು ಅಂತ ನಾನು ತೀರ್ಮಾನಿಸಬೇಕಾಗಿದೆ. ಇದೇನೂ ಅಸಂಭವವಲ್ಲ. ಕೆಲವರು ಬಣ್ಣಗುರುಡರಾಗಿರುತ್ತಾರಂತೆ. ಅವರಿಗೆ ಬಣ್ಣಕ್ಕೂ ಬಣ್ಣಕ್ಕೂ ಭೇದವೇ ಕಾಣಿಸಲ್ಲಂತೆ. ವಧೂಪರೀಕ್ಷೆಗೆ ಹೋದ ತರುಣರಿಗೆ ಒಂದೊಂದು ಸಲ ಬಣ್ಣಗುರುಡು ಬರುತ್ತೆ ಅನ್ನೋಕೆ ಸಾಕಷ್ಟು ಆಧಾರಗಳು ಇವೆ. ಹಾಗೆಯೇ ಕೆಲವರು ಗಾನಗಿವುಡರಾಗಿರುತ್ತಾರೆ. ಅವರಿಗೆ ಸ-ಕ್ಕೂ ಪ-ಕ್ಕೂ ಭೇದವೇ ಗೊತ್ತಾಗಲ್ಲ. ಅದೇ ರೀತಿ, ನಾನು ಭೂತಗುರುಡನಾಗಿರಬೇಕು.

ಭೂತಗಳ ಅನುಭವವುಳ್ಳವರ ಸಾಕ್ಷ್ಯಗಳನ್ನು ಒರೆದುನೋಡಿ ನಾನು ಕೆಲ

ಖಚಿತ ತೀರ್ಮಾನಗಳಿಗೆ ಬಂದಿದ್ದೇನೆ. ಬಗೆ ಬಗೆಯ ಭೂತಗಳು ಈ ಪ್ರಪಂಚ ದಲ್ಲಿ ಅವೆ ಅನ್ನೋದರಲ್ಲಿ (ನನಗೆ) ಏನೂ ಅನುಮಾನ ಉಳಿದಿಲ್ಲ. ಶಾಸ್ತ್ರೀಯ ಅಧ್ಯಯನಕ್ಕಾಗಿ ಅವುಗಳನ್ನು ಭೂತ, ಪ್ರೇತ, ಪಿಶಾಚಿ, ಯಕ್ಷಿ, ಬೇತಾಳ, ರಾಕ್ಷಸ, ದೇವತೆ, ದೆವ್ವ ಮೊದಲಾಗಿ ವಿಂಗಡಿಸಬಹುದು. ಹೆಣ್ಣುಭೂತಗಳಿವೆ. ಗಂಡುಭೂತಗಳಿವೆ. ಕಪ್ಪುಭೂತಗಳಿವೆ; ಬಿಳೀಭೂತಗಳಿವೆ; ಉಪಕಾರಿ ಭೂತಗಳಿವೆ; ಕಿಡಿಗೇಡಿ ಭೂತಗಳಿವೆ. ಸೌಮ್ಯಭೂತಗಳಿವೆ; ಕ್ರೂರಭೂತ ಗಳಿವೆ. ಇರುಳಲ್ಲಿ ಹೊರಬೀಳೋ ಭೂತಗಳದ್ದೇ ಮೆಜಾರಿಟಿ ಆದರೂ ನಡು ಹಗಲಲ್ಲಿ ಓಡಾಡುವ ಅಲ್ಪಸಂಖ್ಯಾಕ ಭೂತಗಳನ್ನು ನಾವು ಅಲಕ್ಷ್ಯ ಮಾಡೋ ಹಾಗಿಲ್ಲ. (ಅಲ್ಪ ಸಂಖ್ಯಾಕರಿಗೆ ಈ ಕಾಲದಲ್ಲಿ ಬಹಳ ಮಹತ್ತ್ವ ಬಂದಿದೆ ನೋಡಿ!) ನಸುಕಿನಲ್ಲಿ ಹೊರಬೀಳುವ ಭೂತಗಳ ಸುದ್ದಿ ನಾನು ಈವರೆಗೂ ಕೇಳಿಲ್ಲವಾದರೂ ಮುಸ್ಸಂಜೆಯಲ್ಲಿ ತಿರುಗಾಡುವವುಗಳ ಅಸ್ತಿತ್ವ ದೃಢ ಪಟ್ಟಿದೆ.

ನಾನು ತಿಳಿದುಕೊಂಡ ಪ್ರಕಾರ ಕೆಲವು ಭೂತಗಳು ಹುಟ್ಟಾಭೂತಗಳೇ ಆಗಿರುತ್ತವೆ. ನಿಜವಾದ ಅಥೆಂಟಿಕ್ ಭೂತಗಳು ಅಂದರೆ ಇವುಗಳೇ. ಕೆಲವು ನಿಮ್ಮ ನಮ್ಮ ಹಾಗೇ ಬದುಕಿದ್ದು ಸತ್ತ ಮೇಲೆ ಭೂತಗಳಾಗುತ್ತವೆ. ಅವು ಗಳನ್ನು ಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ದೆವ್ವ ಇತ್ಯಾದಿಯಾಗಿ ವರ್ಗೀಕರಿಸ ಬಹುದು. ಬೇತಾಳಗಳು ಹುಟ್ಟುಭೂತಗಳೋ ಸತ್ತಭೂತಗಳೋ ಇನ್ನೂ ಖಂಡಿತವಾಗಿಲ್ಲ. ಆದರೆ ವರದಿಗಳ ಮೇಲಿಂದ, ಅವುಗಳು ಹೆಣಗಳಲ್ಲಿ ಹೊಕ್ಕು ಅವುಗಳನ್ನು ನಡೆಸುತ್ತವೆಂತಲೂ ನೀವು ಭೂತಗಣ್ಣುಗಳಿಂದ ಸುಸಜ್ಜಿತ ರಾಗಿದ್ದರೆ ನಿಮಗೆ ಅವು ಶ್ಮಶಾನದಲ್ಲಿ ಬನ್ನೀ ಮರದ ಟೊಂಗೆಗಳಿಂದ ತಲೆಕೆಳ ಗಾಗಿ ಜೋತಾಡುತ್ತ ಕಾಣಿಸಿಕೊಳ್ಳುತ್ತವೆಂತಲೂ ಹೇಳಬಹುದು. ಜಕಣಿ ಗಳು ಅನ್ನೋ ಇನ್ನೊಂದು ಉಪವರ್ಗ ದೇವತೆಗಳಿಗೂ ಮನುಷ್ಯರಿಗೂ ನಡುವೆ ನಿಲ್ಲುತ್ತದಂತೆ. ಇವಲ್ಲದೆ ಅಸ್ಸಾಮಿನಲ್ಲಿ ತೋಳ ಭೂತಗಳೂ ನಮ್ಮ ಪಶ್ಚಿಮ ಕರಾವಳಿಯಲ್ಲಿ ಹುಲಿಭೂತಗಳೂ ಇವೆ. ಸತ್ತಮೇಲೆ ಭೂತವಾದ ಒಂದು ರೈಲ್ವೆ ಎಂಜಿನ್ನಿನ ಸ್ವಾರಸ್ಯ ಪ್ರಕರಣ ವರದಿಯಾಗಿದೆ. ಅದು ತನ್ನ ಪ್ರತಿ ವರ್ಷಶ್ರಾದ್ಧದ ರಾತ್ರಿ ಹನ್ನೆರಡು ಗಂಟೆಗೆ ಸರಿಯಾಗಿ ತನಗೆ ಚಿರಪರಿಚಿತ ವಾದ ಒಂದು ರೈಲುಮಾರ್ಗದಲ್ಲಿ ಧಾವಿಸುತ್ತಿತ್ತು.

೨

ದಕ್ಷಿಣ ಕನ್ನಡದ ಕುರುಚಲು ಗಿಡ ಪೊದೆಗಳಿಂದ ಜಡಿತವಾದ ಗುಡ್ಡ ಗಾಡುಗಳಲ್ಲಿ ಒಂದು ಪೊದೆ ಇದೆ. ಬಹುಶಃ ನಮ್ಮ ಸಸ್ಯಶಾಸ್ತ್ರಜ್ಞರ ದಾಖಲೆಗೆ ಅದು ಸಿಕ್ಕಿಲ್ಲ. ಅದಕ್ಕೆ ವಿಜ್ಞಾನಿ ಲಿನಯಸ್ಸನ ನಾಮಕರಣ ಪದ್ಧತಿಯಲ್ಲಿ ಹೆಸರೂ ದೊರೆತಿಲ್ಲ. ಆದರೆ ಅದು ಇದೆ ಎಂಬುದು ನಿಶ್ಚಿತ. ಯಾಕೆಂದರೆ, ಅದರ ಹೆಸರು ಮತ್ತು ಗುಣಧರ್ಮ ಸಕಲ ಜನರಿಗೆ ಗೊತ್ತಿದೆ. ರಾಜಾರಸ್ತೆಯನ್ನು ಬಿಟ್ಟು, ಗುಡ್ಡಗಾಡಿನ ಒಳದಾರಿ ಹಿಡಿಯೋ ಜನ ಎಲ್ಲೆಲ್ಲಿಯೂ ಇದ್ದಾರಲ್ಲ. ಅಂಥವರು ಎಲ್ಲಿಯಾದರೂ ಈ ವಿಶಿಷ್ಟ ಪೊದೆಯನ್ನು ಮುಟ್ಟಿದರೆ ಸಾಕು, ಅದರು ಹೆಸರೇ 'ಕೊಲೆಸೊಪ್ಪು' ಅಥವಾ 'ಭೂತಗುಲ್ಮ' ಅಂದಮೇಲೆ ಕೇಳೋದೇನು, ಒಳದಾರಿ ಹಿಡಿಯಬೇಕೆಂದವನು, ಈ ಸ್ಪರ್ಶದ ಮಹಿಮೆಯಿಂದಾಗಿ ಮುಂದಿನ ಕವಲುದಾರಿಯಲ್ಲಿ ತಪ್ಪು ಜಾಡು ಹಿಡಿಯುತ್ತಾನೆ. ಅಲ್ಲಿಂದ ಮುಂದೆ ಅವನು ಪ್ರತಿ ಕವಲಿನಲ್ಲಿ ತಪ್ಪು ದಾರಿಯನ್ನೇ ಹಿಡಿದು ಗುಡ್ಡ ಸುತ್ತುತ್ತಾನೆ. ಆವನಿಗೆ ಕಡೆಗೆ ಏನಾಗುತ್ತೆ ಅಂತ ಯಾರಿಗೂ ಸರಿಯಾಗಿ ತಿಳಿಯದು. ಯಾಕೆಂದರೆ ಅದನ್ನು ಮುಟ್ಟಿದ ಯಾವಾತನೂ ತನ್ನ ಕಥೆ ಹೇಳೋಕೆ ತಿರುಗಿ ಬಂದ ದಾಖಲೆ ಇಲ್ಲ. ದೈನಂದಿನ ಜೀವನದಲ್ಲಿ ಇದಕ್ಕೆ ಸುಮಾರಾಗಿ ಸಮಾನವಾದ ಒಂದು ಉದಾಹರಣೆ ಅಂತಂದರೆ, ಕೆಟ್ಟಗಳಿಗೇಲಿ ಸಿವಿಲ್ ವ್ಯಾಜ್ಯಕ್ಕೆ ಕೈಹಾಕಿ, ಕೋರ್ಟು ಕಚೇರಿಗಳ ಅರಣ್ಯದಲ್ಲಿ ದಾರಿಗೆಟ್ಟು ಸುತ್ತುವ ದುರ್ದೈವಿ ವ್ಯಕ್ತಿಗಳದ್ದು. ಈ ನಿಗೂಢ ಪೊದೆಯನ್ನು ಸಸ್ಯವರ್ಗದ ಭೂತ ಅಥವಾ ಭೂತವರ್ಗದ ಸಸ್ಯ ಅನ್ನಬಹುದು.

ಸಸ್ಯಶಾಸ್ತ್ರಜ್ಞರು ಈ ಅಪರೂಪ ಸಸ್ಯವನ್ನು ತ್ವರಿತದಿಂದ ಶೋಧಿಸಬೇಕು ಅಂತ ಇಲ್ಲಿ ನಾನು ಒತ್ತಾಯಪಡಿಸುತ್ತೇನೆ. ಈಚೆಗೆ ಕನ್ನಡ ಜಿಲ್ಲೆಗಳಲ್ಲಿ ಗುಡ್ಡಗಳನ್ನು ಕೆತ್ತಿ "ಹೊಸಾಗಮೆ" ಅಂದರೆ ಪ್ಲಾಂಟೇಶನ್ ಮತ್ತು ಪ್ಲಾಟುಗಳನ್ನು ಮಾಡೋ ಕಾರ್ಯಕ್ರಮಗಳನ್ನು ವಿಸ್ತರಿಸುತ್ತಾ ಇವೆ. ಕೆಲವೇ ವರ್ಷಗಳಲ್ಲಿ ಭೂತಗುಲ್ಮಗಳು ಸಂಪೂರ್ಣ ನಾಶವಾಗಬಹುದು. ಅದಕ್ಕೆ ಮುಂಚಿತವಾಗಿಯೇ ವಿಜ್ಞಾನಿಗಳು ಕಾರ್ಯಪ್ರವೃತ್ತರಾಗಬೇಕು. ಆಕಸ್ಮಾತ್ತಾಗಿ ಈ ಸಸ್ಯವನ್ನು ಮುಟ್ಟಿದರೆ ಸಂಶೋಧಕರಿಗೆ ದಾರಿ ತಪ್ಪುವ ಅವಸ್ಥೆ ಬರೋ ಭಯ ಒಂದು ಇದೆ. ಅದಕ್ಕೆ ಪ್ರತಿಉಪಾಯ ಹುಡುಕೋದು ಮನುಷ್ಯ ಬುದ್ಧಿಗೆ

ನಿಲುಕದ್ದೇನೂ ಅಲ್ಲ. ಶೋಧಕ್ಕೆ ಹೊರಡೋ ವಿಜ್ಞಾನಿ ಕಾಲಿಗೊಂದು ಬಲವಾದ ಮತ್ತು ಉದ್ದವಾದ ದಾರವನ್ನು ಕಟ್ಟಿಕೊಂಡು ಅದರ ಇನ್ನೊಂದು ತುದಿಯನ್ನು ಒಬ್ಬ ಸಹಕಾರಿಯ ಕೈಗೆ ಕೊಡಬೇಕು. ನಿರೀಕ್ಷಿಸಿದ ಸಮಯದೊಳಗೆ ವಿಜ್ಞಾನಿ ವಾಪಸಾಗದೇ ಹೋದರೆ ಆ ಸಹಕಾರಿ ಸೂತ್ರ ಚಾಲನೆಯಲ್ಲಿ ತೊಡಗಬೇಕು. ಈ ಉಪಾಯದಿಂದ ಕಳೆದುಹೋದ ವಿಜ್ಞಾನಿಯನ್ನು ಎಳೆದು ತರೋದು ಸಾಧ್ಯ.

೩

ಕನ್ನಡ ಜಿಲ್ಲೆಯ ಒಂದು ಹಳೇ ಜನಪ್ರಿಯ ಭೂತದ ಹೆಸರು ಬಬ್ಬರ್ಯ. ಅವನ ಹೆಸರಿನಲ್ಲಿ ಉಡುಪಿಯಲ್ಲಿ ಒಂದು ಓಣಿ, ಒಂದು ದಿಬ್ಬ ಇರೋದರ ಮೇಲಿಂದಲೇ ಅವನ ಜನಪ್ರಿಯತೆ ಯಾವನೊಬ್ಬ ದೇಶಭಕ್ತನ ಜನಪ್ರಿಯತೆಗಿಂತ ಕಡಿಮೆ ಇಲ್ಲ ಅಂತ ನಿಮಗೆ ಮನವರಿಕೆಯಾಗಬೇಕು. ಅವನ ಗುಡಿಗಳು ಬೇರೆ ಊರುಗಳಲ್ಲಿಯೂ ಇವೆ, ಹೆಸರಿಂದಲೇ ಧ್ವನಿತವಾಗೋ ಹಾಗೆ, ಅವನು ಬಹಳ ಬೃಹದ್ ಗಾತ್ರದ ಭೂತ. ಆದ್ದರಿಂದಲೇ ಕೊಬ್ಬಿದವರನ್ನ ಬಬ್ಬರ್ಯನ ಹಾಗೆ ಇದ್ದಾನೆ ಅನ್ನೋದು ರೂಢಿ. ಅವನು ತುಂಬಾ ಅಪಾಯಕರ ಭೂತವೂ ಹೌದು. ಮಧ್ಯಾಹ್ನ ಬಿಸಿಲಿಗಾಗಲೀ ಮಧ್ಯರಾತ್ರಿಯ ಕತ್ತಲಲ್ಲಿ ಆಗಲೀ ಅವನು ನಿಮ್ಮ ಮುಂದೆ ಧುತ್ತೆಂತ ನಿಂತು ಬಿಡಬಹುದು. ನೀವು ಅವನನ್ನು ನೋಡಿಯೇ ಜ್ವರ ಬಂದು....

ಆದರೆ ಅವನನ್ನು ಒಲಿಸಿಕೊಂಡರೆ ಅವನು ತೀರ ಅನಿಷ್ಟಭೂತವಲ್ಲ. ನೀವು ಬಬ್ಬರ್ಯನ "ಕೋಲ" ಅಂದರೆ ಒಂದು ತರದ ನೃತ್ಯಪೂಜೆ ಮಾಡಿಸಬಹುದು. ತುಳು ಭಾಷೆಯಲ್ಲಿ ಅವನ ಮಹಿಮೇನ ಕೊಂಡಾಡೋ "ಪಾಡ್ದನ" ಇದೆ. ಅದನ್ನ ಅವನ ಪುರೋಹಿತರು ಹಾಡುತ್ತಾರೆ. ಅವನು ನಿಮ್ಮ ದನಕರುಗಳನ್ನು ರಕ್ಷಿಸೋಕೂ ಸಿದ್ಧನೇ. ಅದಕ್ಕೆ ನೀವು ಬಬ್ಬರ್ಯನ "ಅಡ್ಡೆ" ಅನ್ನೋ ಒಂದು ತರಹದ ಕುಚ್ಚಿದ ಕಡಬು ಮಾಡಿಸಿ ಅವನಿಗೆ ಅರ್ಪಿಸಬೇಕು. ನೈವೇದ್ಯವಾದ ಒಂದು ಕಡಬನ್ನು ಮೂರು ತುಂಡುಮಾಡಿ ಮೂರು ದಿಕ್ಕುಗಳಿಗೆ ಒಗೆಯಬೇಕು, ಇನ್ನೊಂದನ್ನ "ಹೊರಗಿನವರಿಗೆ" ದಾನ ಮಾಡಬೇಕು. ಮತ್ತೊಂದನ್ನ ದನಕರುಗಳಿಗೆ ಕೊಡಬೇಕು. ಈ ಪ್ರಸಾದ ಭಕ್ಷಣೆ ಮಾಡಿದ ದನಕರುಗಳು

ಹುಲಿಗಳಿಂದ ನಿರ್ಭಯ; ರೋಗಗಳಿಗೆ ಇಮ್ಯೂನ್; ಮತ್ತು ಸಂಜೆಯಾಗು ತ್ತಲೇ ಚೆನ್ನಾಗಿ ಸಾಕಿದ ಗಂಡನ ಹಾಗೆ ಅವುಗಳು ನೆಟ್ಟಗೆ ಮನೆಗೆ ಬಂದು, ಕೊಟ್ಟಿಗೇಲೇ ಸಗಣಿ ಹಾಕುತ್ತವೆ. ಒಂದೇ ಕಷ್ಟ ಅಂದರೆ, ಅವನ ಮಾಮೂಲು ಗೊತ್ತಾದ ಗಡುವಿಗೆ ಬಾರದೆ ಇದ್ದರೆ ನಿಮ್ಮ ದನಕರು ವಿಕ್ಷಿಪ್ತವಾಗಿ ವರ್ತಿ ಸೋಕೆ ತೊಡಗಬಹುದು. ಮಾಮೂಲು ಅರ್ಪಿಸೋಕೆ ನಿಮಗೆ ಒಂದು ತಿಂಗಳ ಗ್ರೇಸ್ ಮಾತ್ರ ಇದೆ. ತಿಳಿಯುವುದು.

ಕಲ್ಲುರ್ಟಿ ಅಥವಾ ಕಲ್ಲುಕುಟಿಗ ಭೂತವಾಗೋಕೆ ಮುಂಚೆ ಶಿಲ್ಪಿಯಾಗಿದ್ದ ನಂತೆ. ಭೂತವಾದ ನಂತರ ಅವನು ಕಲ್ಲು ಕೆತ್ತೋದು ಬಿಟ್ಟು ಕಲ್ಲು ಒಗೆ ಯೋದು ಆರಂಭಮಾಡಿದ. ಅವನು ಹೆಚ್ಚು ಮಟ್ಟಿಗೆ ನಮ್ಮ ಶಾಲೆ ಕಾಲೇಜು ಹುಡುಗರ ಹಾಗೆ ಅಪಾಯಕರವಲ್ಲದ ಕಿಡಿಗೇಡಿತನದಿಂದಲೇ ತೃಪ್ತನಾಗುವ ತುಂಟ. ನಿಮ್ಮ ಮನೇ ಮೇಲೆ ಮಾತ್ರವಲ್ಲದೆ ಮನೆಯೊಳಗೂ ಅವನು ಕಲ್ಲು ಬೀರಬಹುದು. ನಿಜವಾಗಿ ಸಿಟ್ಟಿಗೆದ್ದಾಗ್ಗ ಅವನು ಪೆಟ್ಟಿಗೆಯೊಳಗಿನ ಬಟ್ಟೆ ಮೊದಲಾದ ಜ್ವಲನಶೀಲ ಪದಾರ್ಥಗಳನ್ನು ಸುಟ್ಟು ಹೊಗೆಯೆಬ್ಬಿಸಬಹುದು. ನಮ್ಮ ಯುವಜನರಿಗೂ ಕಲ್ಲುಕುಟಿಗನಿಗೂ ಒಂದು ವ್ಯತ್ಯಾಸ ಮಾತ್ರ ಇದೆ. ಕಲ್ಲುಕುಟಿಗ ಸಾರ್ವಜನಿಕ ಆಸ್ತಿಗಳ ಮೇಲೆ "ಅತ್ಯಾಚಾರ" ಮಾಡಲ್ಲ. ಅವ ನದ್ದು ಖಾಸಗಿ ಸೇಡು. ನಿಮಗೆ ಉಪಟಳ ಕೊಡಬೇಕು ಅಂತ ಒಂದು ಸಲ ನಿಶ್ಚಯಿಸಿದಮೇಲೆ ಅವನು ಮಂತ್ರವಾದಿಗಳಿಗೆ ಸಹಿತ ಸುಲಭದಲ್ಲಿ ಮಣಿಯೋ ಗಿರಾಕಿ ಅಲ್ಲ. ನಾನು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಕೋರ್ಟಿ ನಲ್ಲಿ ಗ್ರಾಹ್ಯವಾಗಬಹುದಾದಷ್ಟು ಬಲವಾದ ಸಾಕ್ಷ್ಯಗಳ ಆಧಾರದಿಂದ ಒಬ್ಬಾನೊಬ್ಬ ಗೃಹಸ್ಥರ ಮನೇಲಿ ಕಲ್ಲುಕುಟಿಗ ನಡಸಿದ ಉಪದ್ರವಗಳನ್ನು ದೃಢಪಡಿಸಿಕೊಂಡಿದ್ದೇನೆ. ಅವರ ಮನೇಲಿ ದಿನದ ಯಾವ ಸಮಯದಲ್ಲೇ ಆದರೂ ಕಲ್ಲುಕುಟಿಗನ ಶಿಲಾವೃಷ್ಟಿ ಆಗುತ್ತಿತ್ತು. ಮಂತ್ರವಾದಿಗಳ ಆಶ್ರಯ ಪಡೆದ ಕೂಡಲೆ ಅವನು ಕಲ್ಲಿನಿಯಿಂದ ಒಂದು ಹೆಜ್ಜೆ ಮುಂದೆ ಹೋಗಿ ಒಲೆ ಯಲ್ಲಿ ಹೊರತು ಮತ್ತೆಲ್ಲ ಕಡೆ ಬೆಂಕಿ ಎಬ್ಬಿಸತೊಡಗಿದ. ಒಲೆಯಲ್ಲಿಟ್ಟ ಪಾತ್ರೆಪರಡಿ ನೋಡನೋಡ್ತಾ ಉರುಳಿ ಬೀಳೋದು ಪ್ರಾರಂಭವಾಯಿತು. ಕೆಲ ಪದಾರ್ಥಗಳು ಇದ್ದಕ್ಕಿದ್ದ ಹಾಗೆ ಮಂಗಮಾಯವಾದವು. ಕಟ್ಟಕಡೆಗೆ ಆ ಮಹನೀಯರು ಕಲ್ಲುಕುಟಿಗನಿಗೆ ಒಂದು ಗುಡಿ ಕಟ್ಟಿಸಿ ಪ್ರಸಂಗದಿಂದ

ಪಾರಾದರು. ಈ ಗುಡಿಯಲ್ಲಿ ಈಗ ಭರ್ಜರಿ ಭಕ್ತರೂ ಅವರ ಅಂಗಡಿಯಲ್ಲಿ ಅಷ್ಟೇ ಭರ್ಜರಿ ಗಿರಾಕಿಗಳೂ ತುಂಬಿರುತ್ತಾರೆ.

ಕಲ್ಲುಕುಟಿಗನ್ನ ಭಜನೆಮಾಡಿ ಒಲಿಸಿಕೊಳ್ಳಬಹುದು. ಅವನೊಮ್ಮೆ ವಶವಾದರೆ ನೀವು ಯಾವುದೇ ಎಮರ್ಜನ್ಸಿಯನ್ನು ಲೀಲಾಜಾಲವಾಗಿ ಎದುರಿಸಬಲ್ಲಿರಿ. ಕಲ್ಲುಕುಟಿಗನ ಭಜನೆ ಮಾಡಿದವರೊಬ್ಬರ ಸಮಾಚಾರ ಹೇಳುತ್ತೇನೆ. ಒಂದು ದಿನ ರಾತ್ರಿ ಅವರಲ್ಲಿಗೆ ಅಪರೂಪದ ನಂಟರು ಬಂದರು. ಅವರು ಬೆಳಗ್ಗೇನೆ ಹೊರಡುವವರಿದ್ದರು. ಅವರಿಗೆ ಔತಣ ಮಾಡದಿದ್ದರೆ ಇವರ ಆತ್ಮಗೌರವ ಉಳಿಯೋ ಹಾಗಿದ್ದಿಲ್ಲ. ಆದರೆ ಮನೇಲಿ ತತ್‌ಕ್ಷಣಕ್ಕೆ ಆಗಬಹುದಾದ ಯಾವ ಭಕ್ಷ್ಯಕ್ಕೂ ಸಾಮಗ್ರಿ ಇದ್ದಿಲ್ಲ. ಅವರು ಅಂಜಿದರೆ? ಅಳುಕಿದರೆ? ಇಲ್ಲ, ಕಲ್ಲುಕುಟಿಗನ್ನ ನೆನೆದರು. ಮರುಕ್ಷಣದಲ್ಲಿ ಅವರ ಅಡಿಗೇ ಮನೇಲಿ ಬೇಕೆಂಬಷ್ಟು ತಾಜಾ ಶಾವಿಗೆ ಬಂದು ಕೂತಿತ್ತು. ಮರ್ಯಾದೆ ಉಳಿಸಿದ ಕಲ್ಲುಕುಟಿಗ. ಅದೇ ಹಳ್ಳಿಯ ಇನ್ನೊಂದು ಮನೇಲಿ ಮುನ್ನಾರಾತ್ರಿ ಮಾಡಿ ಇಟ್ಟಿದ್ದ ಶಾವಿಗೆ ನೋಡುತ್ತಿದ್ದ ಹಾಗೆ ಮಾಯವಾಯಿತು ಅಂತ ಹಾಹಾಕಾರ ಮರುದಿನ ಊರಲ್ಲಿ ಹಬ್ಬಿತು. ಇದೇ ರೀತಿ ಅವರು ತುರ್ತು ಬಂದಾಗ ಸೀರೆ ಕುಪ್ಪಸ, ಕೈಗಡಿಯಾರ ಅಥವಾ ಮತ್ತೇನನ್ನು ಬೇಕಾದರೂ ತರಿಸಬಲ್ಲವರಾಗಿದ್ದರಂತೆ. ಪುಣ್ಯಕ್ಕೆ ಬೇರೊಬ್ಬರ ಹೆಂಡತಿಯ ಮೇಲೆ ಆ ಭಜಕೋತ್ತಮರಿಗೆ ಮನಸ್ಸಾಗಲಿಲ್ಲ: ಅವರ ಹೆಂಡತಿಗೆ ಅವರೂ ಅವರ ಕಲ್ಲುಕುಟಿಗನೂ ಸೇರಿಯೇ ಹೆದರಿ ನಡುಗುತ್ತಿದ್ದರು

೪

ದನಕರುಗಳಿಗೆ ತೊಂದರೆ ಕೊಡೋ ಹುಲಿ-ಚೌಡಿ ಮೊದಲಾದ ಇತರ ಭೂತಗಳ ಬಗ್ಗೆ ಹೆಚ್ಚೇನೂ ಹೇಳೋಕೆ ಇಲ್ಲಿ ಪುರುಸೊತ್ತು ಇಲ್ಲ. ಇನ್ನು ನಾನು ಗಂಡು ಭೂತಗಳಿಂದ ಹೆಣ್ಣು ಭೂತಗಳ ಕಡೆ ತಿರುಗುತ್ತೇನೆ. ಮನುಷ್ಯರಲ್ಲಿ ಹೇಗೋ ಹಾಗೆ ಭೂತಗಳಲ್ಲಿಯೂ ಪುಲ್ಲಿಂಗಕ್ಕಿಂತ ಸ್ತ್ರೀಲಿಂಗವೇ ಕುತೂಹಲಕರವೂ ಭಯಂಕರವೂ ಆಗಿದೆ. ಯಕ್ಷಿಣಿ ಅಥವಾ ಜಕಣಿಗಳನ್ನೇ ತೆಗೆದುಕೊಳ್ಳಿ. ಅವು ಹೆಚ್ಚಾಗಿ ತಾಳಿಮರಗಳನ್ನು ಆಶ್ರಯಿಸಿರುತ್ತವೆ. ಅವುಗಳ ಪ್ರತಾಪವನ್ನು ಕುರಿತು ಒಂದು ಸತ್ಯಕಥೆ ನಿಮಗೆ ಹೇಳುತ್ತೇನೆ.

ಈ ಶತಮಾನದ ಪ್ರಾರಂಭದಲ್ಲಿ ಒಂದು ದಿನ ಇಬ್ಬರು ತರುಣ ಬ್ರಾಹ್ಮಣರು ಎಲ್ಲಿಯೋ ಭೋಜನ ಹೊಡೆದು ಇಳಿಹೊತ್ತಿನಲ್ಲಿ ಕೆಲ ಮೈಲು ದೂರದ ತಮ್ಮ ಊರಿಗೆ ಹೊರಟರು. ಒಳದಾರೀಲಿ ಹೋದರೆ ಬೇಗನೆ ಮನೆ ಸೇರ ಬಹುದು ಅಂತ ಅವರು ಗುಡ್ಡದ ಕಾಲುದಾರಿ ಹಿಡಿದರು. ಅವರು ಎಲ್ಲಿ ಕೊಲೆ ಸೊಪ್ಪು ತಗಲಿಸಿಕೊಂಡರೋ ಗೊತ್ತಿಲ್ಲ. ಗುಡ್ಡ ಸುತ್ತಿದರು, ಬಯಲುಗಳಿಗೆ ಇಳಿದರು. ಭತ್ತದ ಗದ್ದೆಗಳ ಅಂಚುಗುಂಟ ಸಾಗಿ ತಿರುಗಿ ಗುಡ್ಡ ಹತ್ತಿ ಸುತ್ತಿದರು. ಕತ್ತಲಾಯಿತು. ಚುಕ್ಕಿಗಳು ಮಿನುಗಿದವು. ನಕ್ಷತ್ರ ನೋಡಿ ನಡೆದರು. ನಿರ್ಜನ ಗುಡ್ಡಗಳಲ್ಲಿ ಕಂಡಕಂಡ ಕಾಲುದಾರಿಯಲ್ಲಿ ಕಾಲು ಹಾಕಿದರು. ಎಲ್ಲಿಯೂ ಮನೆಮಾರುಗಳ ಲಕ್ಷಣವೇ ಇಲ್ಲ. ರಾತ್ರಿ ಹತ್ತರ ಸುಮಾರಿಗೆ ಸ್ವಲ್ಪ ದೂರದಲ್ಲಿ ಹತ್ತಿರ ಹತ್ತಿರವಾಗಿ ಎರಡು ಮಿಣುಕು ದೀಪಗಳು ಕಾಣಿಸಿದವು. ಮನೆಗಳೇ ಇರಬೇಕು ಅಂತ ಆ ದಿಕ್ಕಿಗೆ ಸಾಗಿದರು. ನಿಜಕ್ಕೂ ಮನೆಗಳು. ರಾತ್ರೀನ್ನ ಅಲ್ಲಿ ಕಳೆದು ನಸುಕಿನಲ್ಲಿ ತಮ್ಮೂರ ಕಡೆ ಹೋದರಾಯಿತು ಅಂದುಕೊಂಡರು.

ಎರಡೂ ಮನೆಗಳಲ್ಲಿ ಬಾಗಿಲಿಗೆ ಒರಗಿ ಒಬ್ಬೊಬ್ಬ ತರುಣಿ ನಿಂತಿದ್ದಳು. ಒಬ್ಬ ಈ ಮನೆಗೆ ಒಬ್ಬ ಆ ಮನೆಗೆ ಹೋಗಿ ಯಜಮಾನರು ಇದ್ದಾರೆಯೇ ಅಂತ ವಿಚಾರಿಸಿದರು. ಇಬ್ಬರೂ "ಇಲ್ಲ, ಇಲ್ಲೇ ಎಲ್ಲೋ ಹೋಗಿದ್ದಾರೆ. ಸ್ವಲ್ಪ ತಡೆದು ಬಂದಾರು. ಬನ್ನಿ, ಏನು ಕೆಲಸ?" ಅಂದರು. ಬ್ರಾಹ್ಮಣರು ತಮ್ಮ ಕಷ್ಟ ಹೇಳಿ, ಗಂಡಸರಿಲ್ಲ ಅಂದ ಮೇಲೆ ಇನ್ನೆಲ್ಲಾದರೂ ಆಶ್ರಯ ಹುಡುಕಬೇಕಾಯಿತು ಅಂತ ಬೆನ್ನು ತಿರುಗಿಸೋದರೊಳಗೆ ಆ ಹೆಂಗಸರು "ಛೇ ಛೇ, ಈ ರಾತ್ರಿ ಇನ್ನೆಲ್ಲಿ ಹೋಗುತ್ತೀರಿ, ಪಾಪ! ಹತ್ತಿರ ಎಲ್ಲಿಯೂ ಬೇರೆ ಮನೆ ಇಲ್ಲ. ನಮ್ಮವರು ಬಂದೇ ಬರುತ್ತಾರೆ. ನೀವು ಇಲ್ಲೇ ಚಾವಡೀಲಿ ಮಲಗಿಕೊಳ್ಳಿ. ಚಾಪೆ ಕೊಡುತ್ತೀವೆ. ಇನ್ನೂ ಸ್ವಲ್ಪ ದಾರಿ ನೋಡಿ. ಬಾರ ದಿದ್ದರೆ ನಾವೂ ಒಳಬಾಗಿಲು ಹಾಕಿಕೊಂಡು ಮಲಗುತ್ತೀವೆ" ಅಂತ ಮಧುರವಾದ ನಗುವಿನೊಡನೆ ಹೇಳಿದ ಮೇಲೆ ಅವರಿಗೆ ಜೀವದಲ್ಲಿ ಜೀವ ಬಂತು. ಒಬ್ಬನಂತೂ ಮನಸ್ಸಿನಲ್ಲೇ ಮಂಡಿಗೆ ತಿಂದ.

ಇನ್ನೊಬ್ಬ ಸ್ವಲ್ಪ ಕಮ್ಮಿ ರಸಿಕ. ಹೆಚ್ಚು ನೇಮನಿಷ್ಠೆಯವ. ಅವನು ಕೈ ಕಾಲು ತೊಳೆದುಕೊಂಡ. ತನ್ನ ಗಂಟಿನಲ್ಲಿದ್ದ ಓಲೆಗರಿ ಪುಸ್ತಕಾನ ಬಿಚ್ಚಿ

ದೀಪದ ಮುಂದೆ ಕೂತ.

"ಏನು ಅದು ?" ಮನೆಯವಳು ಕೇಳಿದಳು.

"ದೇವೀಮಹಾತ್ಮೆ. ನಿತ್ಯ ಇದರ ಪಾರಾಯಣ ಮಾಡದೆ ನಾನು ಮಲಗಲ್ಲ."

ತರುಣಿಯ ಮುಖ ಸ್ವಲ್ಪ ಕಪ್ಪಿಟ್ಟಂತೆ ಅವನಿಗೆ ತೋರಿತು. ಏನೋ ಅಂದುಕೊಂಡು ಅವನು "ಓಂ ಅಸ್ಯ ಶ್ರೀ ಚಂಡಿಕಾ ಸಪ್ತಶತೀ ಸ್ತೋತ್ರ ಮಹಾಮಂತ್ರಸ್ಯ ಮಾರ್ಕಂಡೇಯ ಋಷಿಃ" ಅಂತ ಪ್ರಾರಂಭಿಸುತ್ತಲೆ ಅವಳು ಬೆಚ್ಚಿ ಸ್ವಲ್ಪ ಹಿಂದೆ ಸರಿದ ಹಾಗೆ ಅನಿಸಿತು. ಹಚ್ಚಿಕೊಳ್ಳದೆ ಆತ ಪಾರಾಯಣ ಮುಂದುವರಿಸಿದ. ಒಂದಧ್ಯಾಯ ಮುಗಿಯುವಷ್ಟರಲ್ಲಿ ಅವಳು ಬಂದು "ಇನ್ನು ಮುಗಿಸಿ, ರಾತ್ರಿ ಬಹಳವಾಯಿತು ಮಲಕ್ಕೊಳ್ಳಿ, ಬೆಳಗ್ಗೆ ಬೇಗ ಏಳಬೇಕಲ್ಲವೆ ?" ಅಂದಳು.

"ಇಲ್ಲಮ್ಮಾ, ಇದನ್ನು ಮುಗಿಸದೆ ನಾನು ಮಲಗೋ ಹಾಗಿಲ್ಲ. ನೀವು ಬೇಕಾದರೆ ಕದ ಇಕ್ಕಿಕೊಂಡು ಮಲಗಿಬಿಡಿ" ಅಂದ ಬ್ರಾಹ್ಮಣ.

ಅವಳ ಗಂಡ ಬರಲೇ ಇಲ್ಲ. ಎರಡನೇ ಅಧ್ಯಾಯ ಮುಗಿಯೋದರಲ್ಲಿ ಅವಳು ಬಂದು ಮತ್ತೆ "ಮಲಕ್ಕೊಳ್ಳಿ" ಅಂತ ಒತ್ತಾಯ ಮಾಡಿದಳು. ಅವಳ ಮುಖದಲ್ಲಿ ಅಸಹನೆ, ಕಣ್ಣುಗಳಲ್ಲಿ ಹಸಿವು ಕಂಡರೂ ಕಾಣದ ಹಾಗೆ ಬ್ರಾಹ್ಮಣ ಓದು ಮುಂದುವರಿಸಿದ. ಅವಳು ಪದೇ ಪದೇ ಬಂದು ಹೆಚ್ಚು ಹೆಚ್ಚು ಕೋಪದಿಂದ "ಏನು ಇನ್ನೂ ಮಲಗಲ್ಲವೇ ? ಹುಡುಗಾಟವಾಗಿ ಹೋಯಿತಲ್ಲ. ನಿಮ್ಮ ಮಂತ್ರದ ಸದ್ದಿನಲ್ಲಿ ನನಗೂ ನಿದ್ದೆ ಬರಲ್ಲ. ಏಳಿ ಸಾಕು." ಅಂತ ದಬಾಯಿಸುತ್ತಿದ್ದಳು. ಬ್ರಾಹ್ಮಣನಿಗೆ ಸಂಶಯ ಬಲವಾಯಿತು. ಅವನು ಹೆಚ್ಚು ಸಾವಕಾಶವಾಗಿ ಹೆಚ್ಚು ಗಟ್ಟಿಯಾಗಿ ಪಠನೆ ಮುಂದುವರಿಸಿದ. "ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಸಂಜ್ಞಿತಾ" ಎಂಬಲ್ಲಿಗೆ ಬರುವಷ್ಟರಲ್ಲಿ ಅವಳು ಗಡುಸಾಗಿ "ಏನು ನೀವು ಪುಸ್ತಕ ಕಟ್ಟಿಟ್ಟು ತೀಪ ನಂದಿಸಿ ಮಲಗತೀರೋ ನಾನೇ ಊದಿ ನಂದಿಸಬೇಕೋ ?" ಅಂದಳು. ಅವನು, "ಹೌದಾ ? ನೋಡುವಾ !" ಅಂತ ಪುಸ್ತಕದ ರೇಶ್ಮೆ ದಾರದ ಒಂದು ತುದೀನ ಕಾಲು ದೀಪದ ಕಾಲಿಗೆ ಕಟ್ಟಿ ತನ್ನ ಭಯವನ್ನು ಕಡಿಮೆ ಮಾಡಿಕೊಳ್ಳಲಿಕ್ಕೆ ಮತ್ತಷ್ಟು ಗಟ್ಟಿಯಾಗಿ ಪಾರಾಯಣ

ಸಾಗಿಸಿದ. ಅವಳು ಹಿಂದಿನಿಂದ ಹಲ್ಲು ಮಸೆಯೋದು ಕೇಳಿಸುತ್ತಿತ್ತು. ಇವನ ಮೈ ಬೆವರುತ್ತಿತ್ತು.

ಅವನು ಕೊನೆ ಅಧ್ಯಾಯದ ಮಧ್ಯದಲ್ಲಿದ್ದಾಗ ಕೋಳಿ ಕೂಗಿದ್ದು ಕೇಳಿಸಿತು. ತತ್‌ಕ್ಷಣ ಮನೆ, ದೀಪ, ತರುಣಿ ಎಲ್ಲವೂ ಅಂತರ್ಧಾನ ಹೊಂದಿದವು. ನೋಡುತ್ತಾನೆ, ತಾನು ಒಂದು ತಾಳೀಮರದ ತುದಿಯಲ್ಲಿದ್ದಾನೆ. ಸಮೀಪದಲ್ಲೇ ಇನ್ನೊಂದು ತಾಳೀಮರ ಇದೆ. ಮರದ ಬುಡದಲ್ಲಿ ಮನುಷ್ಯನ ಹಸಿ ಎಲುಬುಗಳ ಒಂದು ರಾಶಿ. ರಸಿಕಮಿತ್ರನ ಸುಳಿವಿಲ್ಲ.

ಯಕ್ಷಿಣೀ ಕೈಯಿಂದ ಪಾರಾಗಿ ಬಂದ ಈ ಏಕಮಾತ್ರ ವ್ಯಕ್ತಿಯನ್ನು ಪ್ರತ್ಯಕ್ಷ ಕಾಣಬೇಕು ಅಂತ ನಾನು ಅವನ ಮನೆ ಹುಡುಕಿಕೊಂಡು ಹೋದಾಗ ಅವನು ತನ್ನ ಎಪ್ಪತ್ತನೇ ವಯಸ್ಸಿನಲ್ಲಿ ಮುಂಚಿನ ದಿನವೇ ತೀರಿಕೊಂಡದ್ದು ತಿಳಿಯಿತು. ಆದರೆ ಇತರರಿಗೆ ಅವನು ಹೇಳಿದ್ದ ವಿವರಗಳನ್ನ ಕಲೆ ಹಾಕಿ, ತಾಳೆ ನೋಡಿ, ಯಕ್ಷಿಣಿಗಳ ಕಾರ್ಯವಿಧಾನ ಅಥವಾ "ಮೋಡಸ್ ಆಪರೆಂಡಿ"ಯ ಮಾಹಿತಿ ಕೊಟ್ಟಿದ್ದೇನೆ. ರಾತ್ರಿ ಗುಡ್ಡಗಳಲ್ಲಿ ದೀಪಗೀಪ ಕಾಣಿಸಿದರೆ ಸ್ವಲ್ಪ ಎಚ್ಚರ ಇರಲಿ.

೫

ನಾನು ಸಂಶೋಧನೆ ಮಾಡಿದ ಇನ್ನೊಂದು ಹೆಣ್ಣು ಭೂತದ ಹೆಸರು ಕುಡು ಪಾಲ್ ಭೂತ ಅಂತ. ಪ್ರತ್ಯಕ್ಷದರ್ಶಿಗಳಿಂದ ನಾನು ಸಂಗ್ರಹಿಸಿದ ಮಾಹಿತಿ ಪ್ರಕಾರ, ಕುಡುಪಾಲ್ ಭೂತಕ್ಕೆ ಹುಬ್ಬುಗಳ ವರೆಗೂ ತಲೆಗೂದಲು ಇದೆ. ಮತ್ತು ಅದನ್ನು ಕೆದರಿಕೊಂಡೇ ಅವಳು ತಿರುಗುತ್ತಾಳೆ. ಇನ್ನುಳಿದ ಅಂಶಗಳಲ್ಲಿ ಅವಳು ಬಲು ಮಾಟಮೈಕಟ್ಟಿನ ಭೂತ. ತನಗೆ ಬೇಕಾದಾಗ ಅವಳು ತುಂಬಾ ವಯ್ಯಾರಿಯೂ ಆಗಬಲ್ಲಳು. ಕಾರಿರುಳಲ್ಲಿ ನೀವು ಒಬ್ಬರೇ ಹೊರಟಿದ್ದರೆ ಅವಳು ನಿಮ್ಮ ಹಿಂದೆ ಹಿಂದೆ ಬರತೊಡಗಬಹುದು ; ಮತ್ತು ನೀವು ಮಲ್ಲಿಗೆ ಹೂವಿನ ವಾಸನೆಯಿಂದ ಸೆಳೆಯಲ್ಪಟ್ಟವರಾಗಿ ಹಿಂತಿರುಗಿ ನೋಡಿದರೆ ಅವಳು "ಸ್ವಲ್ಪ ಸುಣ್ಣ ಕೊಡುತ್ತೀರಾ, ವೀಳ್ಯಕ್ಕೆ" ಅಂತ ಕೇಳುತ್ತಾಳೆ. ನೀವು ತರುಣರೂ ರಸಿಕ ಪ್ರವೃತ್ತಿಯವರೂ ಆಗಿದ್ದರೆ, ಮತ್ತು ಎಲೆ ಅಡಿಕೆ ಚಂಚಿ ಇಟ್ಟವರಾಗಿದ್ದರೆ, ಇಂಥ ಪ್ರಸಂಗದಲ್ಲಿ ಏನು ಮಾಡುವಿರೆಂಬುದು ನಿಮಗೇ ಚೆನ್ನಾಗಿ ಗೊತ್ತಿದೆ.

ಅದೇ ನಿಮ್ಮ ಕೊನೆ ಅಂತ ನಿಮ್ಮನ್ನು ಎಚ್ಚರಿಸುತ್ತೇನೆ. ಆವಳು ನಿಮ್ಮ ಕೈ ಹಿಡಿಯುತ್ತಾಳೆ ಮತ್ತು ತನ್ನ ಪತಿರಾಯನಾದ ಬಬ್ಬರ್ಯನ ಕಡೆ ನಿಮ್ಮನ್ನು ಎಳೆದೊಯ್ಯುತ್ತಾಳೆ. ಭೂತಗಳಿಗೂ ಸಂಸಾರ ಇದೆ ಅನ್ನೋದು ಸ್ವಾರಸ್ಯದ ವಿಷಯ. ಅಸ್ಸಾಂ ರಾಜ್ಯದ ಕೆಲ ಬುಡಕಟ್ಟಿನ ಜನಾಂಗಗಳಲ್ಲಿ ಹೆಂಡಂದಿರನ್ನು ಮೈಮುರಿ ದುಡಿಸಿ ಗಂಡಂದಿರು ಬೀಡಿ ಸೇದುತ್ತ ಕಾಲ ಕಳೆಯುತ್ತಾರಂತೆ. ಕುಡುಪಾಲ್ ಭೂತ ಜಾತಿ ಅಸ್ಸಾಮಿನಿಂದ ಯಾವುದಾದರೂ ಹಡಗಿನಲ್ಲಿ ಪಶ್ಚಿಮ ಕರಾವಳಿಗೆ ವಲಸೆ ಬಂದಿದ್ದರೂ ಇರಬಹುದು.

ಅಕಸ್ಮಾತ್ ಕುಡುಪಾಲ್ ಭೂತ ನಿಮ್ಮ ಬೆನ್ನು ಬಿದ್ದರೆ ನೀವು ಏನು ಮಾಡಬೇಕು? ನಾಚಿಗೆ ಗೀಚಿಗೆ ಕಳೆದೊಗೆದಾಚೆಗೆ ಬಿಸಾಡಿ ನಿಮ್ಮ ಅಂಡರ್ ವೇರ್ ಸಹಿತ ಸಮಸ್ತ ವಸ್ತ್ರಗಳನ್ನು ಕಳಚಿ ತಲೆಯ ಮೇಲಿರಿಸಿಕೊಂಡು, ಹಿಂತಿರುಗಿ ನೋಡದೆ ಓಡಬೇಕು. ಹೆಣ್ಣು ಭೂತವಾಗಿರೋ ಕಾರಣ, ಕುಡುಪಾಲವ್ವನಿಗೆ ನಿಮ್ಮನ್ನ ನಗ್ನಾವಸ್ಥೇಲಿ ಹಿಡಿಯೋಕೆ ನಾಚಿಕೆಯಾಗುತ್ತೆ. ಭೂತಗಳು ಕ್ರೂರವಾಗಿರಬಹುದು; ಆದರೆ ಅಸಂಸ್ಕೃತಗಳಲ್ಲ, ಕುಡುಪಾಲ್ ಭೂತ ನಿಮ್ಮನ್ನು ಬೆನ್ನಟ್ಟಬಹುದು; ಆದರೆ ಮುಟ್ಟಲಾರಳು. ನೀವು ಮನೆ ಸೇರಿದ ಮೇಲೆ ಆವಳು ನಿಮ್ಮ ಆಸೆ ಬಿಟ್ಟು ಹೊರಟುಹೋಗುವಳು.

ನೀವು ಎಂಟೆದೆಯ ಬಂಟರಾಗಿದ್ದರೆ ಈ ಭೂತವನ್ನು ನಿಮ್ಮ ಅತ್ಯಂತ ವಿಧೇಯ ಗುಲಾಮಳಾಗಿ ಮಾಡಿಕೊಳ್ಳಬಲ್ಲಿರಿ. ಆವಳು ಸುಣ್ಣ ಕೇಳುತ್ತಲೇ ಮೊದಲು ನೀವು ಬಟ್ಟೆ ಕಳಚಿ ಒಗೆದವರೇ ಗಕ್ಕನೆ ಹಿಂತಿರುಗಬೇಕು. ಕಣ್ಮುಚ್ಚಿ ಕಣ್ಣು ತೆರೆಯೋದರೊಳಗೆ ಆವಳ ಕೂದಲಿಗೆ ಕೈ ದುಡುಕಬೇಕು. ಕಾಸು ಹಿಡಿದ ಜಿಪುಣನದರಷ್ಟೇ ಬಿಗಿಮುಷ್ಟಿಯಿಂದ ಆವಳ ಕೂದಲನ್ನು ಹಿಡಿದುಕೊಳ್ಳಬೇಕು. ಮನುಷ್ಯರ ಹಾಗೇ ಭೂತಗಳಿಗೆ ಕೆಲ ಮರ್ಮಸ್ಥಾನಗಳಿವೆ. ತಲೆಗೂದಲು ಹಿಡಿದೆಳೆದರೆ ಈ ಭೂತಕ್ಕೆ ಪ್ರಾಣಾಂತಿಕ ವೇದನೆ. ಆವಳು ಕೂಗುತ್ತಾಳೆ; ನಿಮ್ಮನ್ನು ದಬಾಯಿಸೋಕೆ ನೋಡುತ್ತಾಳೆ; ನಿಮ್ಮ ಸಮೇತ ಆಕಾಶಕ್ಕೆ ನೆಗೆಯುತ್ತಾಳೆ. ನೀವು ಕೈ ಸಡಿಲಿಸಬಾರದು. ಆಮೇಲೆ ತನ್ನ ಮಧುರ ಕಂಠದಿಂದ ಅಂಗಲಾಚುತ್ತಾಳೆ. ಅಳುತ್ತಾಳೆ. ನೀವೇನಾದರೂ ಸ್ತ್ರೀ ದಾಕ್ಷಿಣ್ಯಕ್ಕೆ ಬಿದ್ದಿರೋ, ಕೆಟ್ಟಿರಿ. ನೀವು ಹಿಡಿದಪಟ್ಟು ಅಕ್ಷರಶಃ ಬಿಡದೇ ಹೋದರೆ, ಅವಳು ನೋವು ತಾಳಲಾರದೆ ನಿಮಗೆ ಒಂದೆರಡು ಕೂದಲನ್ನು

ಕಿತ್ತುಕೊಳ್ಳಕ್ಕೆ ಬಿಟ್ಟು ನಿಮ್ಮ ಕೈಯಿಂದ ಪಾರಾಗುತ್ತಾಳೆ. ಆ ಕೂದಲನ್ನು ನೀವು ಭದ್ರವಾಗಿ ಇಟ್ಟುಕೊಳ್ಳಿ. ಅಂದಿನಿಂದ ಅವಳು ನಿಮ್ಮ ಸಂಬಳವಿಲ್ಲದ ದಾಸಿ.

ಹೀಗೆ ಕುಡುಪಾಲವ್ವನ್ನ ವಶಮಾಡಿಕೊಂಡ ಭಟ್ಟರೊಬ್ಬರ ಸುದ್ದಿಯನ್ನು ನಾನು ಕೇಳಿದ್ದೆ. ಅವರು ಅವಳಿಂದ ಗದ್ದೆ ಕೆಲಸ ಮಾಡಿಸುತ್ತಿದ್ದರು. ಗೊಬ್ಬರ ಹೊರಿಸುತ್ತಿದ್ದರು. ಕಳೆ ಕೀಳಿಸುತ್ತಿದ್ದರು. ನಟ್ಟಿ ವೇಳೆಯಲ್ಲಿ ಸಂಜೆ ಹೊತ್ತಿಗೆ ಒಂದು ರಾಶಿ ಬತ್ತದ ಅಗೆಗಳನ್ನು ಗದ್ದೇ ಅಂಚಿನಲ್ಲಿ ಹಾಕಿಸಿಬಿಟ್ಟು, ಮಾದರಿಗಾಗಿ ಒಂದು ಅಗೆಯನ್ನ ಗದ್ದೇಲಿ ನಟ್ಟು ಹೊರಟು ಹೋಗುತ್ತಿದ್ದರು. ಮರುದಿನ ಬೆಳಗಾಗುವುದರೊಳಗೆ ಅವರ ಇಡೀ ಗದ್ದೆಯಲ್ಲಿ ಭೂತ ಸಸಿಗಳನ್ನು ನಟ್ಟು ಬಿಡುತ್ತಿತ್ತು. ಈ ಕ್ರಮದಿಂದ ಒಮ್ಮೊಮ್ಮೆ ತಮಾಷೆ ಪರಿಸ್ಥಿತಿ ಉಂಟಾಗುತ್ತಿತ್ತು. ಒಂದು ಸಂಜೆ ಭಟ್ಟರು ಹೀಗೆ ಮಾಡೆಲ್ ಅಗೆ ನಟ್ಟು ಹೊರಟು ಹೋದ ಬಳಿಕ, ಯಾವನೋ ಕಿಡಿಗೇಡಿ ಅದನ್ನು ಕಿತ್ತು ಬುಡಮೇಲಾಗಿ ನಟ್ಟು ಹೋಗಿಬಿಟ್ಟ. ಮರುದಿನ ಬೆಳಿಗ್ಗೆ ನೋಡುತ್ತಾರೆ. ಇಡೀ ಗದ್ದೆ ತುಂಬಾ ಸಸಿಗಳು "ಶೀರ್ಷಾಸನ" ಹಾಕಿ ನಿಂತಿವೆ.

ಆದರೆ ಈ ಸ್ವಾರಸ್ಯದ ಕಥೆ ವಿಷಾದಾಂತವಾಯಿತು. ಒಂದು ದಿವಸ ಭಟ್ಟರು ಯಾವುದೋ ಕೆಲಸಕ್ಕೆ ಗದ್ದೇ ಕಡೆ ಹೋಗಿದ್ದರು. ಅವರಿಲ್ಲದಾಗ ಒಬ್ಬಾಕೆ ಮನೆಗೆ ಬಂದು "ನಿಮ್ಮ ಗಂಡ ಹೇಳಿದರು. ದೇವರ ಕೋಣೇಲಿ ಪೀಠದ ಕೆಳಗೆ ಒಂದು ತಾಮ್ರದ ಕರಡಿಗೆ ಉಂಟಂತೆ. ಅದು ಈಗ ತುರ್ತು ಬೇಕಾಗಿದೆಯಂತೆ. ತಗಂಬಾ ಅಂದರು" ಅಂದಳು. ಭಟ್ಟರ ಹೆಂಡತಿ ನಂಬಿ ಕರಡಿಗೆ ತೆಗೆದುಕೊಟ್ಟಳು. ಬಂದವಳು ತನ್ನ ಕಳೆದುಕೊಂಡ ಕೂದಲನ್ನ ಮರಳಿ ದೊರಕಿಸಕ್ಕೆ ಹೊಂಚು ಕಾಯುತ್ತಿದ್ದ ಕುಡುಪಾಲವ್ವ ಅಂತ ಪಾಪ ಭಟ್ಟಿತಿಗೆ ಏನು ಗೊತ್ತು ! ಮತ್ತೈದು ನಿಮಿಷಕ್ಕೆ ಭಟ್ಟರ ಹೆಣ ಮನೆ ಕಡೆ ಹೊರಟಿತ್ತು. ಪಾಠ – ಗುಲಾಮಗಿರಿ ಒಡೆಯನಿಗೂ ಒಳ್ಳೇದಲ್ಲ.

ಭೂತಗಳ ಬಗ್ಗೆ ಇನ್ನೂ ಎಷ್ಟೊ ಬರೆಯಬಲ್ಲೆ. ಆದರೆ ಈಗ ಕೆಲ ಶತಮಾನಗಳಿಂದ ಭೂತಗಳು ಅವನತಿಗೆ ಇಳಿಯುತ್ತಾ ಇವೆ. ಬ್ರಾಹ್ಮಣರು ತಂದ ದೇವರುಗಳು ಇಲ್ಲಿ ತಳವೂರಿದ ಮೇಲೆ ಭೂತಗಳ ಸ್ವಾತಂತ್ರ್ಯ ಸಾವಕಾಶವಾಗಿ ಕಳೆದುಹೋಯಿತು. ಈ ಸಾಮ್ರಾಜ್ಯಶಾಹಿ ದೇವರುಗಳು ಸ್ಥಳೀಯ

ಭೂತಗಳನ್ನ ತಮ್ಮ ಅಂಕಿತಕ್ಕೊಳಪಡಿಸಿಕೊಂಡರು. ಹೀಗೆ ಬಬ್ಬರ್ಯ ಅನಂತೇಶ್ವರನ ಬಂಟನಾದ; ಕಲ್ಲುರ್ಟಿ, ರಕ್ತೇಶ್ವರಿ, ಪಂಜುರ್ಲಿ ಮೊದಲಾದ ಅನೇಕ ಭೂತಗಳಿಗೆ ಕೋಲ ಮೊದಲಾದ ಕಟ್ಟುಕಟ್ಟಳೆಗಳು ನಡೆಯುವಾಗಲೂ ಸಾಮ್ರಾಜ್ಯಶಾಹಿ ಶಿವ ವಿಷ್ಣು ಇತ್ಯಾದಿಗಳ ಅಧಿರಾಜತ್ವದ ಕೆಳಗೇ ನಡೆಯ ಬೇಕಾಗುತ್ತದೆ.

ಇನ್ನೊಂದೆಂದರೆ, ಮನುಷ್ಯರು ಭೂತಪ್ರೇತಗಳ ಕಾದಿಟ್ಟ ಪ್ರದೇಶಗಳಲ್ಲಿ ಕಾಲು ಚಾಚಿ ಠಾಣೆ ಹೂಡುತ್ತಿದ್ದಾರೆ. ಯಾವ ಪ್ರದೇಶಗಳಲ್ಲಿ ಮನುಷ್ಯರು ಹಗಲು ಕೂಡ ಭೂತಭಯದಿಂದ ಪ್ರವೇಶ ಮಾಡೋಕೆ ಅಂಜುತ್ತಿದ್ದರೋ ಅಂಥಲ್ಲಿ ಈಗ ರಾತ್ರಿಯಲ್ಲಿ ಕಾಣಿಸಿಕೊಳ್ಳೋಕೂ ಭೂತಗಳು ಅಂಜುತ್ತಿವೆ. ಭೂತಗಳಿಗೆ ಒಂದು ಕಾಲ, ಮನುಷ್ಯರಿಗೊಂದು ಕಾಲ–ಏನು ಮಾಡೋಣ ?

## ನಾನು ಕಾಣದ ಭೂತಗಳು–೨

ನಾನು ಭೂತಗಳ ಬಗ್ಗೆ ನಡೆಸಿದ ಅಧ್ಯಯನಗಳಿಂದ ತಿಳಿದು ಬಂದಿರುವ್ರ ದೇನೆಂದರೆ, ಭೂತಗಳು ಅಷ್ಟೇನೂ ಬುದ್ಧಿವಂತ ಜೀವಿಗಳಲ್ಲ. ಇದು ದೇಶೀ ಭೂತಗಳ ಹಾಗೆ ವಿದೇಶೀ ಭೂತಗಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ, ಜಿನ್ನಿ ಎಂಬ ಆ ಮಧ್ಯಪೂರ್ವದ ಭೂತವನ್ನೇ ತೆಗೆದುಕೊಳ್ಳಿ. (ಅದು ಅರಬರೊಡನೆ ಭಾರತಕ್ಕೂ ಬಂದಹಾಗಿದೆ. ಆದರೆ ಅದರ ಜನಪ್ರಿಯತೆ ಅಷ್ಟಾಗಿ ಹೆಚ್ಚಲಿಲ್ಲ. ಭಾರತೀಯರು ವಿದೇಶೀ ಫ್ಯಾಶನ್ನುಗಳಷ್ಟು ಇಷ್ಟದಿಂದ ವಿದೇಶೀ ಭೂತಗಳನ್ನು ಸ್ವೀಕರಿಸಲಿಲ್ಲ. ಅದು ಹೋಗಲಿ.)

ಈ ಜಿನ್ನಿಯ ಹೆಡ್ಡತನದ ಬಗ್ಗೆ ನಾನು ಕೇಳಿದ ಒಂದು ಕಥೆ ಹೇಳುತ್ತೇನೆ. ಯಾವನೋ ಒಬ್ಬ ಮಂತ್ರವಾದಿ ಒಂದು ಜಿನ್ನಿಯನ್ನು ಹಿಡಿದು ಅದನ್ನು ಒಂದು ಬಾಟಲಿಯಲ್ಲೋ ಬುರುಡೆಯಲ್ಲೋ ಹಾಕಿ ಗಪ್ಪಾಗಿ ಮುಚ್ಚಿ ಅದನ್ನು ಸಮುದ್ರಕ್ಕೆ ಚೆಲ್ಲಿ ಕೊಟ್ಟ. ಪಾಪ ಜಿನ್ನಿ ಬುರುಡೆಯೊಳಗೆ ಬಂಧಿಸಲ್ಪಟ್ಟು ತೇಲುತ್ತ ತೇಲುತ್ತ ಯಾವುದೋ ದೇಶದ ದಂಡೆಯಲ್ಲಿ ಹೋಗಿ ಬಿತ್ತು. ಪುಣ್ಯಕ್ಕೆ ಭೂತಗಳು ಮನುಷ್ಯರ ಹಾಗೆ ಸಾಯುವುದಿಲ್ಲ; ಸಾಧು ಸಂತರ ಕೈಲಿ ಸಿಕ್ಕಿದರೆ, ಮತ್ತು ಆವರಿಗೆ ದಯ ಬಂದರೆ, ಅವು ಕೆಲವೊಮ್ಮೆ ತಮ್ಮ

ಭೂತ ಜನ್ಮದಿಂದ ನಿವೃತ್ತಿಹೊಂದಿ....ಎಲ್ಲಿಗೆ ಹೋಗುತ್ತವೆ ಎಂದು ನನಗೆ ಗೊತ್ತಿಲ್ಲ. ಆದರೆ ಭೂತಗಳಿಗೆ ಸಾವಿಲ್ಲ ಎನ್ನುವುದು ಯಾವಾಗಲೂ ಅವುಗಳಿಗೆ ಸುಖಕರವಾಗಿರುವುದಿಲ್ಲ ಎಂದು ನೀವು ಗಮನಿಸಬೇಕು. ನಿಮ್ಮ ನಮ್ಮನ್ನು ಯಾರಾದರೂ ದೊಡ್ಡ ಬುರುಡೆಯಲ್ಲಿ ಹಾಕಿ ಸಮುದ್ರಕ್ಕೆ ಒಕ್ಕೊಟ್ಟರೆ ಕೆಲವೇ ನಿಮಿಷಗಳಲ್ಲಿ ನಾವು ಸತ್ತು ಪಾರಾಗಬಲ್ಲೆವು. ನಮ್ಮ ಜಿನ್ನಿಗೆ ಸಾವಿಲ್ಲದ್ದರಿಂದ ಅದು ಎಷ್ಟೋ ಕಾಲ, ಕೆಲವರು ಎಷ್ಟೋ ಸಾವಿರ ವರ್ಷ ಎನ್ನುತ್ತಾರೆ, ಬುರುಡಾಂತರ್ಗತವಾಗಿ ಅಲ್ಲೇ ಬಿದ್ದಿರಬೇಕಾಯಿತು.

ಕೊನೆಗೊಂದು ದಿನ ಜಿನ್ನಿಗೆ ಮುಕ್ತಿ ಕಾಲ ಬಂತು. ಯಾರೋ ಒಬ್ಬ ದಾರಿಹೋಕ ಆ ಬುರುಡೆಯನ್ನು ಹೆಕ್ಕಿದ; ಮನುಷ್ಯನಲ್ಲಿ ಇನ್ನೂ ಉಳಿದ ಮಂಗನ ಕುತೂಹಲದಿಂದ ಅದನ್ನು ತಿರುಗಿಸಿ ತಿರುಗಿಸಿ ನೋಡಿದ; ಅಲುಗಾಡಿಸಿ ನೋಡಿದ; ಕಡೆಗೆ ಮುಚ್ಚಳವನ್ನು ತೆಗೆದು ನೋಡಿದ; ಬದುಕಿದೆಯಾ ಬಡಜಿನ್ನಿಯೇ ಎಂದು ಜಿನ್ನಿ ಬುಸ್ಸೆಂದು ಬುರುಡೆಯಿಂದ ಹೊರಬಂತು. ಆಕಾಶದೆತ್ತರ ವ್ಯಾಪಿಸಿ ತನ್ನ ವಿಮೋಚಕನ ಮುಂದೆ ನಿಂತಿತು. ಅದಕ್ಕೆ ತುಂಬಾ ಹಸಿವಾಗಿತ್ತು. ಬಾಯಿ ತೆರೆದು ತನ್ನ ವಿಮೋಚಕನನ್ನು ನುಂಗಲು ಮುನ್ನುಗ್ಗಿತು.

ಮನುಷ್ಯ ಗಾಬರಿಯಾದ; ಆದರೆ ತೋರಿಸಿಕೊಳ್ಳಲಿಲ್ಲ. "ನನ್ನನ್ನು ನುಂಗಲೇ ಬೇಕಾಗಿದ್ದರೆ ನುಂಗು. ಆದರೆ ನನ್ನನ್ನು ಜೀರ್ಣಿಸಿಕೊಳ್ಳಬಯಸುವವರು ಯಾರು ಎಂದು ತಿಳಿದರೆ ನಾನು ಕೃತಾರ್ಥ" ಎಂದು ಹೇಳಿದ.

ಭೂತಗಳಿಗೂ ಸ್ವಾಹಂಕಾರವುಂಟು. ನಮ್ಮೀ ಜಿನ್ನಿಗೆ ತಾನು ಅನಾಮಧೇಯನಾಗಿರುವುದು ಇಷ್ಟವಾಗಲಿಲ್ಲ. ಅದು ತನ್ನ ವ್ಯಕ್ತಿತ್ವವನ್ನು ಹೊರಗೆಡಹಿ "ನಾನು ಜಿನ್ನಿ" ಎಂದಿತು.

ಮನುಷ್ಯ ಪಾಟೀಸವಾಲು ಪ್ರಾರಂಭಿಸಿದ. "ನೀನು ಎಲ್ಲಿಂದ ಪ್ರತ್ಯಕ್ಷವಾದಿ?"

"ಈ ಬುರುಡೆಯಲ್ಲಿದ್ದೆ. ನೀನು ಮುಚ್ಚಳ ತೆಗೆದೊಡನೆ ಹೊರಗೆ ಬಂದೆ, ಆಯಿತೆ? ಈಗ ಸಿದ್ಧನಾಗು. ನಿನ್ನನ್ನು ನುಂಗುತ್ತೇನೆ" ಎಂದು ಮತ್ತೊಂದು ಹೆಜ್ಜೆ ಮುಂದೆ ಬಂತು.

ಮನುಷ್ಯ ನಂಬಿಕೆ ತೋರಿಸಲಿಲ್ಲ. "ಹ್ಹೆಹ್ಹೆ! ನೀನು ಸುಳ್ಳು ಹೇಳುತ್ತಿ.

ಇಷ್ಟು ದೊಡ್ಡ ದೈತ್ಯ ನೀನು ಇಷ್ಟು ಸಣ್ಣ ಬುರುಡೆಯಲ್ಲಿ ಇದ್ದಿ ಅನ್ನೋದನ್ನ ನಂಬಲಿಕ್ಕೆ ನಾನೇನು ಭಾಂಗ್ ತಿಂದಿದ್ದೇನಂತ ಮಾಡಿದ್ದೀಯಾ ?" ಎಂದು ಕೇಳಿದ.

"ಏಯ್ ನರ ಹುಳುವೇ ! ನನ್ನ ಮಹಿಮೆ ನಿನಗೆ ಗೊತ್ತಿಲ್ಲ. ನಾನು ಆಕಾಶ ಪಾತಾಳಗಳನ್ನು ತುಂಬುವಷ್ಟು ದೊಡ್ಡದಾಗಬಲ್ಲೆ ! ಬುರುಡೆಯಲ್ಲಿ ಸೇರುವಷ್ಟು ಸಣ್ಣದಾಗಬಲ್ಲೆ."

"ಹೌದೇ ? ನೀನು ಬುರುಡೆ ಬಿಡ್ತಾ ಇದ್ದೀ. ನಿನ್ನ ಕೈಲಿ ಸಿಕ್ಕು ಇದೀಗ ಸಾಯಲಿರುವವನ ಕೈಲಿ ಹೀಗೆ ಸುಳ್ಳು ಹೇಳುವುದು ನಾಚಿಕೆಗೇಡು !" ಎಂದನಾ ಮನುಷ್ಯ.

ಭೂತಗಳು ಕ್ರೂರವಾಗಿರಬಹುದು ; ಆದರೆ ಸುಳ್ಳುಗಾರರೆಂದು ಸುಳ್ಳು ಸುಳ್ಳೇ ಆಪಾದನೆಗೆ ಒಳಗಾಗುವುದು ಅವಕ್ಕೆ ಸೊಗಸುವುದಿಲ್ಲ. ಜಿನ್ನಿಗೆ ಕೋಪ ಬಂತು. "ನಾನು ಸುಳ್ಳು ಹೇಳುತ್ತೇನೆಯೆ ! ನೋಡು ಬೇಕಾದರೆ ನನ್ನ ಮಹಿಮೆ. ಈ ಕ್ಷಣ ನಿನ್ನ ಮುಂದೆಯೇ ಆ ಬುರುಡೆಯಲ್ಲಿ ಹೋಗುತ್ತೇನೆ" ಎಂದಿತು.

"ಅಷ್ಟು ಮಾಡಿಬಿಡು ಮಹಾರಾಯಾ ! ಸಾಯುವ ಮುಂದೆ ಒಂದು ಅದ್ಭುತವನ್ನು ನೋಡಿಯಾದರೂ ಸಾಯುತ್ತೇನೆ."

ಸಂಕ್ಷೇಪದಲ್ಲಿ ಮುಗಿಸುವುದಾದರೆ ಜಿನ್ನಿ ಬುರುಡೆಯಲ್ಲಿ ಸೇರಿಕೊಂಡಿತು ; ಮತ್ತು ಮನುಷ್ಯ ಬಿರಡೆಯನ್ನು ಗಿಡಿದುಬಿಟ್ಟ. ಮನುಷ್ಯರಲ್ಲಿ ಕೂಡ ದೊಡ್ಡವರನ್ನು ಸಣ್ಣವರು ಹೇಗೆ ಬುರುಡೆಯಲ್ಲಿ ಹಾಕುತ್ತಾರೆ ಎಂದು ಈ ಪ್ರಕರಣ ತೋರಿಸಿಕೊಡುತ್ತದೆ.

೬

ಶ್ಮಶಾನ ಭೂತಗಳ ಪ್ರಿಯವಾದ ನಿವಾಸವೆಂದು ತಿಳಿದುಬಂದಿದೆ. ಸತ್ತವರನ್ನು ಸುಟ್ಟಿರಲಿ, ಹುಗಿದಿರಲಿ, ಶ್ಮಶಾನದಲ್ಲಿನ ಭೂತಗಳು ಸಂತೋಷಿಸುತ್ತವೆ. ಆದರೂ ಸುಡುವ ಹೆಣಗಳು ಕೆಲ ಭೂತಗಳಿಗೆ ಬಹಳ ಪ್ರಿಯವಾಗಿವೆ. ಅವು ತಮ್ಮ ಊಟವನ್ನು ಬಿಸಿಬಿಸಿಯಾಗಿಯೇ ಮೆಚ್ಚುತ್ತವೆ ; ಕನ್ನಡ ಕವಿ ನೇಮಿಚಂದ್ರ ತನ್ನ ಅರ್ಧನೇಮಿ ಪುರಾಣದಲ್ಲಿ ಈ ಬಿಸಿ ಭೂತಗಳಲ್ಲಿ ಕೆಲವನ್ನು ನಮಗೆ

ಪರಿಚಯ ಮಾಡಿಸಿಕೊಡುತ್ತಾನೆ. ಅವುಗಳು ನನಗೆ ತುಂಬಾ ಇಷ್ಟ ವಾದವು; ಯಾಕೆಂದರೆ ಅವು ತುಂಬಾ ಮಾನವಸದೃಶವಾಗಿವೆ. ನೇಮಿ ಚಂದ್ರನ ಶ್ಮಶಾನದ ಭೂತಗಳು ಮದುವೆಯಾಗಿ ಮಕ್ಕಳೊಂದಿಗವಾಗಿವೆ. ಆ ಮಕ್ಕಳು ನಮ್ಮ ಮಕ್ಕಳಂತೆಯೇ ತಾಯಂದಿರನ್ನು ಕಾಡುತ್ತವೆ. ಭೂ (ತ) ತಾಯಿಯರೂ ನಮ್ಮ ತಾಯಂದಿರಂತೆಯೇ ಕೆರಳಿ ಮಕ್ಕಳ ಕುಂಡೆಯನ್ನು ಬಿಸಿ ಮಾಡುತ್ತಾರೆ. ಇಷ್ಟಿದ್ದರೂ ಈ ಭೂತಗಳಾದರೂ ನಮಗಿಂತ ಬುದ್ಧಿಶಾಲಿ ಗಳಾಗಿ ಗಮನ ಸೆಳೆಯುವುದಿಲ್ಲ. ಸುಡುವ ಹೆಣದಿಂದ ಅಡುಗನ್ನು ಕಿತ್ತು ಕೊಂಡು ಬಾಯಲ್ಲಿ ತುರುಕಿ ಸುಡಿಸಿಕೊಂಡರೂ ಉಗುಳಲೊಲ್ಲದ ಆಸೆಬುರುಕ ಭೂತಗಳು ಅಲ್ಲಿವೆಯೆಂದು ನೇಮಿಚಂದ್ರನನ್ನೋದಿ ಊಹಿಸಬಹುದು.

ಸುಡುವ ಹೆಣಗಳ ಹೃದಯದ ಹಕ್ಕುಗಾತಿಯೆಂದರೆ ಶ್ಮಶಾನ ಕಾಳಿ. ಮಧ್ಯರಾತ್ರಿಯಲ್ಲಿ ಆವಳು ಬಂದು ತನ್ನ ಮೀಸಲು ನೈವೇದ್ಯವನ್ನು ಬಿಸಿಬಿಸಿ ಯಾಗಿ ಸ್ವೀಕರಿಸುತ್ತಾಳೆ. ಅವಳು ತುಂಬಾ ಕಾರಣಿಕದ ಭೂತ ಅಥವಾ ದೇವತೆ. ಆದರೆ ಎಲ್ಲಾ ಮನುಷ್ಯ ಮನುಷ್ಯೆಯರನ್ನೂ, ಅವರೆಷ್ಟೇ ಅಧಿಕಾರ ಸಂಪನ್ನ-ಸಂಪನ್ನೆಯರಾಗಿದ್ದರೂ ವಶಪಡಿಸಿಕೊಂಡು ಲೈಸನ್ಸನ್ನೋ ಪರ್ಮಿ ಟ್ಟನ್ನೋ ಗಿಟ್ಟಿಸುವುದು ಸಾಧ್ಯವಿರುವ ಹಾಗೆ ಶ್ಮಶಾನ ಕಾಳಿಯನ್ನೂ ವಶಪಡಿಸಿ ಕೊಳ್ಳುವ ಉಪಾಯಗಳಿವೆ. ಒಂದುಪಾಯ ಹೀಗಿದೆ:

ಯಾರಾದರೂ ಸತ್ತೊಡನೆ ಅವರನ್ನು ಸುಡುವುದಕ್ಕೆ (ಹೆಚ್ಚಾಗಿ ಮಾವಿನ) ಮರಕಡಿಯುತ್ತಾರೆ. ಹೀಗೆ ಕಡಿಯುವುದಕ್ಕೆ ಕೊಡಲಿಯೇಟು ಹಾಕಿದೊಡನೆ ಹಾರುವ ಮೊದಲನೇ ಚಕ್ಕೆಯನ್ನು ಅದು ನೆಲಕ್ಕೆ ಬೀಳುವ ಮೊದಲೇ ಅಂತರ ದಲ್ಲಿ ಕ್ಯಾಚ್ ಹಿಡಿಯಬೇಕು. ಒಂದು ವೇಳೆ ನೀವು ನಮ್ಮ ಕ್ರಿಕೆಟ್ ಪಟುಗಳ ಹಾಗೆ ಕ್ಯಾಚನ್ನು ಡ್ರಾಪ್‌ಮಾಡಿದರೆ ಇನ್ನೊಬ್ಬರು ಸತ್ತು ಇನ್ನೊಂದು ಮರ ಕಡಿಯುವವರೆಗೆ ಕಾಯಬೇಕಾಗುತ್ತದೆ, ಅಷ್ಟೇ. ಕ್ಯಾಚ್ ಸಕ್ಸೆಸ್‌ಫುಲ್ ಆದರೆ, ನೀವು ಅದನ್ನು ಎಲ್ಲಿಯೂ ನೆಲದ ಮೇಲೆ ಇಡದೆ ಹಾಗೇ ಕಟ್ಟಿಕೊಂಡು ಮಧ್ಯ ರಾತ್ರಿಯವರೆಗೆ ಕಾದು, ಅದರ ಸಂಗಡ ಬತ್ತಲೆಯಾಗಿ ಶ್ಮಶಾನಕ್ಕೆ ಹೋಗಬೇಕು. ಮತ್ತು ಯಾವ ಹೆಣಕ್ಕಾಗಿ ಕಡಿದ ಮರದ ಚಕ್ಕೆಯನ್ನು ಹಿಡಿದುಕೊಂಡಿದ್ದೀರೋ ಅದೇ ಹೆಣ ಸುಡುವಲ್ಲಿಗೆ ಹೋಗಬೇಕು. ಚಕ್ಕೆಯ ಮಹಿಮೆಯಿಂದ ನಿಮಗೆ ಅಲ್ಲಿ ಶ್ಮಶಾನ ಕಾಳಿ ತನ್ನ ಗೆಳತಿ ಹಾಗೂ ತೈನಾತಿ

ಗಳೊಡನೆ ಕುಣಿಯುತ್ತಿರುವುದು ಕಾಣಿಸುತ್ತದೆ. (ಈ ಭೂತಗಳು ನರ್ತನ ಪ್ರಿಯವಾಗಿವೆ; ಆದರೆ ಅದು ಭರತನಾಟ್ಯವೋ ಕಥಕ್ಕಳಿಯೋ ಕಥಕ್ಕೋ ಮಣಿಪುರಿಯೋ ಕುಚ್ಚಿಪುಡಿಯೋ ಗೊತ್ತಿಲ್ಲ.) ನೀವೂ ಸದ್ದಿಲ್ಲದೆ ಅವುಗಳೊಡನೆ ನರ್ತಿಸತೊಡಗಬೇಕು. ನೀವು ಧೈರ್ಯಶಾಲಿಗಳಾಗಿದ್ದರೆ ಫಾರೇನರ್ ಒಬ್ಬ ತಮ್ಮೊಂದಿಗೆ ಸೇರಿರುವುದು ಅವುಗಳಿಗೆ ತಿಳಿಯುವುದಿಲ್ಲ. ಕುಣಿಕುಣಿದು ಕಾಲು ಸೋತ ಮೇಲೆ ಶ್ಮಶಾನ ಕಾಳಿ ಖುದ್ದಾಗಿ ಉರಿಯುವ ಹೆಣದಿಂದ ಅಡಗನ್ನು ಕಿತ್ತು ಸ್ವಹಸ್ತದಿಂದ ಎಲ್ಲಾ ತೈನಾತಿಗಳಿಗೂ ಪ್ರಸಾದ ಹಂಚುತ್ತಾಳೆ. ನೀವೂ ನಿಮ್ಮ ಪಾಲು ಸ್ವೀಕರಿಸಬೇಕು, ಮತ್ತು ಅವರೆಲ್ಲ ತಿನ್ನುವಾಗ ನೀವೂ ತಿಂದ ಹಾಗೆ ನಟಿಸಬೇಕು. ಕೋಳಿ ಕೂಗುವ ಹೊತ್ತಿಗೆ ಅವೆಲ್ಲ ಮಾಯವಾಗುತ್ತವೆ. ನೀವು ಪ್ರಸಾದವನ್ನು ಭದ್ರವಾಗಿ ಕಟ್ಟಿಕೊಂಡು ಮರಳಬೇಕು. ಈ ಪ್ರಸಾದ ನಿಮ್ಮ ಕೈಲಿದ್ದಷ್ಟು ಕಾಲ ಶ್ಮಶಾನ ಕಾಳಿ ನೀವು ನೆನೆದೊಡನೆ ನಿಮ್ಮ ನೆರವಿಗೆ ಬರುತ್ತಾಳೆ. ನೀವು ಕೇಳಿದ ಪ್ರಶ್ನೆಗಳಿಗೆ ಕಿವಿಯಲ್ಲಿ ಉತ್ತರ ಹೇಳುತ್ತಾಳೆ— ಇತ್ಯಾದಿ ಇತ್ಯಾದಿ. ಓದದೇ ಪರೀಕ್ಷೆ ಪಾಸಾಗಬೇಕೆಂಬವರಿಗೆ ಎಂಥಾ ಸುಸಂಧಿ! ಆದರೆ ಇಂದಿನ ಕಾಲದಲ್ಲಿ ಒಂದೇ ಕಷ್ಟ. ನಾವೀಗ ಸತ್ತವರನ್ನು ಸುಡುವು ದಕ್ಕೆ ಮರ ಕಡಿಯದೇ ಕಟ್ಟಿಗೆ ಡಿಪೋವಿನಿಂದ ಕುಂಟೆಗಳನ್ನು ತರುತ್ತೇವೆ. ಹೆಣ ಸುಡುವುದಕ್ಕೆ ಮರ ಕಡಿಯುವಾಗ ಹಾರುವ ಮೊದಲನೆ ಚಕ್ಕೆಯನ್ನು ಹಿಡಿಯುವುದು ಇಂದು ವ್ಯವಹಾರ್ಯವಲ್ಲ. ಕೆಲವು ಕಡೆಗಂತೂ ವಿದ್ಯುತ್ ಚಿತೆ ಬಂದಿದೆ.

೭

ಇನ್ನು ಭೂತಗಳಿಂದ ದೆವ್ವ ಅಥವಾ ಕೊಲೆಗಳ ಕಡೆಗೆ ತಿರುಗೋಣ. ಜಾತಿ ಭೂತಗಳೆಂದರೆ ಹುಟ್ಟು ಭೂತಗಳೇ ಸೈ. ಆದರೆ ಇತರ ವರ್ಗಗಳ ಭೂತಗಳೂ ಇವೆ. ಮನುಷ್ಯರು ಸತ್ತು ದೆವ್ವ ಅಥವಾ ಕೊಲೆಗಳಾಗುವುದುಂಟು. ಇವುಗಳ ಭೂತಾಟಿಕೆಗಳೇನೂ ಕಮ್ಮಿ ಸ್ವಾರಸ್ಯವಾಗಿಲ್ಲ.

ಸತ್ತವರು ಅನೇಕ ಕಾರಣಗಳಿಂದ ಭೂತಗಳಾಗಬಹುದು. ಹೀಗೆ ದೆವ್ವಗಳಾಗುವವರಲ್ಲಿ ಹೆಂಗಸರೇ ಹೆಚ್ಚಾಗಿದ್ದರೂ ಗಂಡಸರನ್ನು ಅಲ್ಲಿ ಡಿಬಾರ್ ಮಾಡಿಲ್ಲ. ಪ್ರಪಂಚದ ಆಸೆ ಮುಗಿಯದೆ ಸತ್ತವರು ದೆವ್ವವಾಗುವ ಸಂಭವ

ಹೆಚ್ಚು. ಈಚೆಗೆ ಮಂಡ್ಯದಲ್ಲಿ ಒಬ್ಬ ಬಾಣಂತಿಯನ್ನು ಕಾಡುತ್ತಿರುವ ಒಂದು ದೆವ್ವ ಹೊಟ್ಟೆಗಿಚ್ಚಿನ ಸ್ವಭಾವದ ಮುದುಕಿಯದೆಂದು ಪತ್ರಿಕಾ ವರದಿಗಾರರು ಪರೀಕ್ಷಿಸಿ ವರದಿ ಮಾಡಿದ್ದಾರೆ. ಅವಳು ಸಿನೆಮಗಳ ಖಳನಾಯಿಕೆಯರ ಹಾಗೆ ಸೊಂಟದ ಮೇಲೆ ಕೈಯಿಟ್ಟುಕೊಂಡು ರುದ್ರಭಂಗಿಯಲ್ಲಿ ನಿಂತಹಾಗೆ ಭೂತಗ್ರಸ್ತಳಿಗಲ್ಲದೇ ಅವಳನ್ನು ಪರೀಕ್ಷಿಸ ಹೋದ ವಶೀಕರಣತಜ್ಞರಿಗೂ ಕಾಣಿಸಿಕೊಂಡಳು!

ಮೊದಲನೇ ಹೆಂಡತಿ ಸತ್ತಮೇಲೆ ಮಾಡಿಕೊಳ್ಳುವ ಎರಡನೇ ಹೆಂಡತಿಗೆ ಕಾನೂನಿನ ಪ್ರತಿಬಂಧ ಇಲ್ಲದಿದ್ದರೂ ಮೊದಲನೆಯವಳ ವಸ್ತ್ರ ವಡವೆಗಳನ್ನು ಇಟ್ಟುಕೊಂಡರೆ ಮೊದಲನೆಯವಳ ದೆವ್ವ ಅವಳ ಮೇಲೆ ಆವೇಶವಾಗುವುದನ್ನು ನಾನು ನೋಡಿದ್ದೇನೆ. ಹೆಣ್ಣು ದೆವ್ವಗಳು ಹೆಚ್ಚಾಗಿ ಈ ಬಗೆಯವೇ

ತರ್ಕಶಾಸ್ತ್ರ ಓದಿ ಸಭೆಯಲ್ಲಿ ಎದುರುವಾದಿಯ ಮಾನಖಂಡನೆ ಮಾಡಿದ ಗಂಡಸರು ಬ್ರಹ್ಮರಾಕ್ಷಸರಾಗಿ ಅಶ್ವತ್ಥ ವೃಕ್ಷಕ್ಕೆ ಜೋತುಬಿದ್ದುಕೊಂಡಿದ್ದು ದಾರಿ ಹೋಕರನ್ನು ಹಿಡಿಯುವುದುಂಟು. ಅವರು ಸಾದಾ ದೆವ್ವಗಳಾಗುವುದೂ ಉಂಟು. ಮದುವೆಯಾಗದ ಗಂಡಸರು ದೆವ್ವವಾಗುವುದು ಹೆಚ್ಚು ಕಡಿಮೆ ಖಂಡಿತ. ಹಾಗೆ ಸತ್ತ ಹೆಂಗಸರ ವಿಷಯ ಕೇಳಲೇಬೇಡಿ. ಆದರೆ ಇದಕ್ಕೆ ನಿವೃತ್ತಿ ಉಂಟು. ದುಡ್ಡುಕೊಟ್ಟು ಒಬ್ಬ ಪತಿಯನ್ನು ಹೆಣಕ್ಕೆ ಲಗ್ನ ಮಾಡಿಸಬಹುದು. ಬ್ರಹ್ಮಚಾರಿಯಾದರೆ ಒಂದು ಹಿಟ್ಟಿನ ಗೊಂಬೆಯನ್ನೊ ಕಡೆಗೊಂದು ಬಾಳೆಯ ಸಸಿಯನ್ನೊ ಹೆಣ್ಣೆಂದು ಮದುವೆ ಮಾಡಿಸಿದರೂ ಸಾಕು. ಭೂತಗಳು ತುಂಬಾ ಅಕಾಮೊಡೇಟಿವ್ ಅಥವಾ "ರಿಯಾಯತಿ ಮಂದ" ಆಗಿದ್ದು ಟೋಕನ್ ಪರಿಹಾರದಿಂದ ತೃಪ್ತವಾಗುತ್ತವೆ.

ದೆವ್ವವಾಗುವುದು ಗಂಡಸರು ಹೆಂಗಸರಿಬ್ಬರಿಗೂ ಸಾಧ್ಯವಿದ್ದರೂ ಹಿಡಿದುಕೊಳ್ಳುವುದು ತೊಂಭತ್ತು ಪಾಲು ಹೆಂಗಸರನ್ನೇ. ಸಾಮಾನ್ಯವಾಗಿ ಒಂದು ವ್ಯಕ್ತಿಯನ್ನೇ ಒಂದೇ ದೆವ್ವ ಗುತ್ತಿಗೆ ಹಿಡಿಯುತ್ತದೆ. ಆದರೆ ಒಬ್ಬಳನ್ನೇ ಅನೇಕ ದೆವ್ವಗಳು ಸವಾರಿಮಾಡುವುದುಂಟು.

ಸುಮಾರು ವರ್ಷಗಳ ಕೆಳಗೆ ನಾನು ಕನಿಷ್ಠ ಆರು ದೆವ್ವಗಳು ತೊಡರಿಕೊಂಡ ಭಾಮಕ್ಕ ಎಂಬ ಹೆಂಗಸನ್ನು ನೋಡಿದ್ದೆ. ಅವಳು ನಿರಕ್ಷರಿ. ಆದರೆ ಅವಳ ಮೈಮೇಲೆ ಅವಳ ಮೈದುನನ ದೆವ್ವ ಬಂದಾಗ ಅವಳು ಸಟಸಟನೆ ಸಂಸ್ಕೃತ

ಮಾತಾಡುತ್ತಿದ್ದಳು. ಆ ಮೈದುನ ತರ್ಕಶಾಸ್ತ್ರಿಯಂತೆ. ಸಭೆಯಲ್ಲಿ ಅನೇಕರನ್ನು ಸೋಲಿಸಿದ್ದನಂತೆ. ಅವನು ಅವಳಲ್ಲಿ ಆವೇಶವಾಗಿ "ಘಟಪಟತ್ವಾಭಾವೇನ ಕೋ ಭಾವಃ" ಇತ್ಯಾದಿಯಾಗಿ ಮಾರುದ್ದದ ವಾಕ್ಯಗಳನ್ನಾಡಿ ಆ ಮೇಲೆ ಅಳತೊಡಗುತ್ತಿದ್ದ. ತಾನು ತರ್ಕ ಓದಿ ದೆವ್ವವಾದೆ; ತನಗೆ ಗತಿಯಾಗಲಿಲ್ಲ ಎನ್ನುತ್ತಿದ್ದ. ಅವನ ಪ್ರವೇಶ ಮುಗಿದ ಮೇಲೆ ಆ ಹೆಂಗಸನ್ನು ಇನ್ನೊಬ್ಬ ಹೊಕ್ಕು ಮಾತಾಡುತ್ತಿದ್ದ. ಅವನು ಅಸಾಧ್ಯ ನಗೆಗಾರ. ಆತ ಮನುಷ್ಯಾವಸ್ಥೆಯಲ್ಲಿ ಈ ಹೆಂಗಸಿನ ನೆರಮನೆಯಲ್ಲಿದ್ದ ಒಬ್ಬ ಲಂಪಟ. ಅವನು ಸುತ್ತಲ ಯಾವ ಯಾವ ಗರತಿಯರೊಡನೆ ತಾನು ಏನೇನು ವಿಲಾಸ ಮಾಡಿದೆ ಎಂಬುದಾಗಿ ಕೊಚ್ಚಿಕೊಂಡು ನಗುತ್ತಿದ್ದ. ಸತ್ತು ದೆವ್ವವಾಗಿದ್ದರೂ ಅವನಿಗೆ ತನ್ನ ಕೃತ್ಯಗಳ ಬಗ್ಗೆ ಏನೇನೂ ಪಶ್ಚಾತ್ತಾಪವಾದ ಹಾಗೆ ತೋರಲಿಲ್ಲ. ಉಳಿದೆಲ್ಲ ದೆವ್ವಗಳನ್ನು ಬಿಡಿಸಬಹುದು. ಇವನನ್ನು ದಾರಿಗೆ ತರುವುದು ಕಷ್ಟ ಅಂತ ಮಂತ್ರವಾದಿಗಳು ಹೇಳುತ್ತಿದ್ದರು

ಅವಳಿಗೆ ಹತ್ತಿಕೊಂಡ ಆರು ದೆವ್ವಗಳಲ್ಲಿ ಅತಿ ಭಯಂಕರವಾದದ್ದು ಅವಳ ಅತ್ತಿಗೆಯದು. ಅದು ಯಾವಾಗಲೂ ಈ "ಕೊರಡನ್ನು" ಕೊಂದೇ ಸಿದ್ಧ ಎಂದು ಆರ್ಭಟಿಸುತ್ತಿತ್ತು. (ಕೊರಡು ಅಂದರೆ ಭೂತ ಅಂಟಿಕೊಂಡ ಜೀವ ಎಂದು ಪರಿಭಾಷೆ). ಅದು ಮೈಮೇಲೆ ಬಂದಾಗೆಲ್ಲ ಭಾಮಕ್ಕ ಆತ್ಮಹತ್ಯೆಗೆ ಪ್ರಯತ್ನಿಸುತ್ತಿದ್ದಳು. ಒಂದು ದಿನ ಆ ದೆವ್ವ ಅವಳ ಮೇಲೆ ಬಂದು, ನಾಳೆ ಬೆಳಗಾಗುವ ಮೊದಲೇ ಇವಳನ್ನು ಮುಳುಗಿಸಿ ಕೊಲ್ಲುವುದಾಗಿ ಪಂಥ ಕಟ್ಟಿತು. ಮತ್ತು ಅದು ತನ್ನ ಪಂಥವನ್ನು ಸಾಧಿಸಿಯೇ ಬಿಟ್ಟಿತು. ಸಂಜೆ ಒಮ್ಮೆ ಕೆರೆಯಲ್ಲಿ ಮುಳುಗಹೋದ ಅವಳನ್ನು ಯಾರೋ ಹೇಗೋ ಪಾರುಮಾಡಿದರು. ಆದರೆ ರಾತ್ರಿ ಎಲ್ಲರ ಕಣ್ಣು ತಪ್ಪಿಸಿ ಅದು ಅವಳನ್ನು ಬಾವಿಯಲ್ಲಿ ಮುಳುಗಿಸಿದ್ದು ಬೆಳಗಾತ ಹೆಣ ತೇಲುವುದನ್ನು ಕಂಡ ನಂತರ ತಾನೆ ಗೊತ್ತಾದ್ದು.

ಇದೆಲ್ಲಾ ಹಿಸ್ಟೀರಿಯ ಎಂಬುದಾಗಿ ಮನಶ್ಶಾಸ್ತ್ರಿಗಳು ಹೇಳುತ್ತಾರೆ. ನಿರಕ್ಷರಿಯಾದ ಭಾಮಕ್ಕ ಸಂಸ್ಕೃತ ಮಾತಾಡಿದ್ದು ದೆವ್ವಗಳ ಅಸ್ತಿತ್ವಕ್ಕೆ ಅಕಾಟ್ಯ ಪ್ರಮಾಣ ಅಂತ ನಾನೊಬ್ಬ ಹುಚ್ಚಾಸ್ಪತ್ರೆಯ ವೈದ್ಯರ ಹತ್ತಿರ ವಾದಿಸಿದೆ. ಅವರು ಅದೆಲ್ಲ ಬುಡುಬುಡಿಕೆಯೆಂದರು. ಚಿಕ್ಕಂದಿನಲ್ಲಿ ಆ ತರ್ಕಶಾಸ್ತ್ರಿ ತನ್ನ ಪ್ರಮೇಯಗಳನ್ನು ಉರು ಹೊಡೆಯೋದು ಕೇಳಿ ಕೇಳಿ

ಭಾಮಕ್ಕನ ಸುಪ್ತ ಮನಸ್ಸಿನಲ್ಲಿ ಅದರ ನೆನಪು ನಟ್ಟು ಹೋಗಿರಬೇಕು. ಹಿಸ್ಟೀರಿಯ ಸ್ಥಿತಿಯಲ್ಲಿ ಅವಳ ಸುಪ್ತ ಚಿತ್ತಕ್ಕೆ ಪ್ರಚೋದನೆ ದೊರೆತು ಅವಳು ಅದನ್ನು ಪುನರಾವರ್ತಿಸುತ್ತಿರಬೇಕು ಅಂತ ಅವರ ವಿವರಣೆ. ಏನು ಮಾಡೋಣ ಸ್ವಾಮಿ? ಈ ವಿಜ್ಞಾನಿಗಳು ನಮ್ಮ ಯಾವ ಪ್ರಿಯ ವಿಶ್ವಾಸ ವನ್ನೂ ಬತ್ತಲು ಮಾಡದೆ ಬಿಡುವವರಲ್ಲ. ಹೇಳಿಕೇಳಿ ಹುಚ್ಚಾಸ್ಪತ್ರೆ ಡಾಕ್ಟರ್! ಅಂತ ಬಾಯಿ ಮುಚ್ಚಿಕೊಂಡೆ.

೮

ಹೋದ ವರ್ಷ ನಾನು ಆಸ್ಪತ್ರೆಯಲ್ಲಿ ಸಾಯುತ್ತ ಮಲಗಿದ್ದಾಗ ಒಂದು ಹೃದಯಸ್ತಂಭಕ ಘಟನೆ ನಡೆಯಿತಂತೆ. ಕರ್ನಾಟಕ ಮೆಡಿಕಲ್ ಕಾಲೇಜ ಆಸ್ಪತ್ರೆಯ ಆವಾರದಲ್ಲಿ ಮಧ್ಯರಾತ್ರಿ ಒಂದು ರಿಕ್ಷಾ ನಿಂತಿತ್ತು. ಯಾರೋ ಒಬ್ಬ ರಿಕ್ಷಾ ಬಾಡಿಗೆಗೆ ಗೊತ್ತು ಮಾಡಿದ. ರಿಕ್ಷಾವಾಲ ಅವನನ್ನು ಕೂಡಿಸಿಕೊಂಡು ಅವನು ಹೇಳಿದಲ್ಲಿಗೆ ಒಯ್ದ. ರಿಕ್ಷಾ ನಿಲ್ಲಿಸಿ ಹಿಂದಿರುಗಿನೋಡುತ್ತಾನೆ, ಯಾರೂ ಇಲ್ಲ! ಬಡಪಾಯಿ ಬಾಡಿಗೆ ಕಳೆದುಕೊಂಡದ್ದಲ್ಲದೆ ನಡುಕ ಹತ್ತಿಸಿಕೊಂಡು ತಿರುಗಿ ಬಂದು ಆಸ್ಪತ್ರೆಯ ಹೊರಗೆ ನಿಂತಿದ್ದ. ಒಂದು ಕಾರಿನ ಡ್ರೈವರನಿಗೆ ಹೇಳಿದ. ನನ್ನ ವಿಚಾರ ಗೊತ್ತಿದ್ದ ಅವನಿಗೆ ಎದೆ ಝಲ್ಲೆಂದಿತು. ಆಸ್ಪತ್ರೆ ಕತೆಯಲ್ಲಿ ಅಂತ್ಯಾವಸ್ಥೆಯಲ್ಲಿದ್ದ ನನ್ನ ಕತೆ ಮುಗಿಯಿತೆಂದೇ ಎಣಿಸಿದನಂತೆ. ಆದರೆ ನಾನು ಸತ್ತಿರಲಿಲ್ಲ. ಆದರೂ ನನ್ನ ಜೀವ ರಿಕ್ಷಾದಲ್ಲಿ ಕುಳಿತುಹೋಗಿ ಆಮೇಲೆ ಮನಸ್ಸು ಬದಲಾಯಿಸಿ ವಾಪ್ಸು ಬಂದಿರಬೇಕೆಂದು ನಂಬುವವರಿ ದ್ದಾರೆ. ಇದು ಶುದ್ಧ ಭ್ರಾಂತಿ. ರಿಕ್ಷಾಬಾಡಿಗೆ ಕೊಡದೆ ಮಾಯವಾಗುವ ಧೈರ್ಯ ನನಗೆ ಸತ್ತರೂ ಬರುವುದು ಸಾಧ್ಯವಿದ್ದಿಲ್ಲ.

೯

ಹುಟ್ಟು ಭೂತಗಳ ಸತ್ತ ಭೂತಗಳ ಈ ಎಲ್ಲಾ ತಥ್ಯಗಳನ್ನು ಮೊನ್ನೆ ನಾನು ಒಬ್ಬರಿಂದ ಕೇಳಿದ "ಜೀತಾ ಬ್ರಹ್ಮೇತಿ"ಗಳ ಮುಂದೆ ನಿವಾಳಿಸಿ ಒಗೆಯಬೇಕು. ಇದು ಧಾರವಾಡ ಜಿಲ್ಲೆಯಲ್ಲೇ ನಡೆದದ್ದು. ಒಬ್ಬ ಆಢ್ಯರ ಮನೆಯಲ್ಲಿ ಅದ್ದೂರಿಯಿಂದ ಶ್ರಾದ್ಧ ಮಾಡುವುದು ಪದ್ಧತಿ. ಬ್ರಾಹ್ಮಣಾ

ರ್ಥಕ್ಕೆ ಐದು ಜನ ಬ್ರಾಹ್ಮಣರನ್ನು ಕರೆದು ಅವರಿಗೆ ಧಾರಾಳ ದಾನ ದಕ್ಷಿಣೆ ಕೊಟ್ಟು ಕಳಿಸುತ್ತಿದ್ದರು. ಬ್ರಾಹ್ಮಣರ ಆಯ್ಕೆ ಬೆಳಿಗ್ಗೆ ಹತ್ತು ಗಂಟೆಗೆ. ದಾನ ದಕ್ಷಿಣೆಗಳ ಕೀರ್ತಿ ಕೇಳಿ ಒಮ್ಮೆ ಅಣ್ಣೀಗೇರಿಯಿಂದ ಒಬ್ಬ ವೈದಿಕ ಬ್ರಾಹ್ಮಣ ಬಂದಿದ್ದ. ಆದರೆ ಅವನು ಬಂದದ್ದು ತಡವಾದ್ದರಿಂದ ಪಂಚ ಬ್ರಾಹ್ಮಣರಲ್ಲಿ ಅವನ ಸೇರ್ಪಡೆಯಾಗಲಿಲ್ಲ. ಮನೆಯ ಕಾರಭಾರಿ ಅವನಿಗೆ ಹಾಗೆ ತಿಳಿಸಿ "ಭೂರಿ ಭೋಜನ ಇದೆ. ಊಟ ಮಾಡಿಕೊಂಡು ಹೋಗಿರಿ" ಎಂದು ಹೇಳಿದ. ಆಸೆಯಿಂದ ಬಂದ ಬ್ರಾಹ್ಮಣನಿಗೆ ತುಂಬಾ ನಿರಾಶೆ ಯಾಯಿತು. ಸಣ್ಣ ಮೋರೆ ಮಾಡಿಕೊಂಡು ಒಂದು ಕಡೆ ಕುಳಿತ.

ಯಜಮಾನರಿಗೆ ಇದೊಂದೂ ಗೊತ್ತಿರಲಿಲ್ಲ. ಆದರೆ ಶ್ರಾದ್ಧಕ್ಕಾಗಿ ಅವರು ಸ್ನಾನಕ್ಕಿಳಿದಾಗ ಎಲ್ಲಿಂದಲೋ "ನಾನು ಅಣ್ಣೀಗೇರಿ ಬಂದಿದ್ದೇನೆ. ನನ್ನನ್ನು ನಿರಾಶೆ ಮಾಡಿದಿರಿ" ಎಂಬ ವಾಣಿ ಕೇಳಿಸಿತು. ಸುತ್ತು ನೋಡಿದರೆ ಯಾರೂ ಇಲ್ಲ. ಸ್ನಾನ ಮುಗಿಸಿ ಬಟ್ಟೆ ಹಿಂಡಿಕೊಳ್ಳುತ್ತಿರುವಾಗ ಮತ್ತೆ ಅದೇ ದನಿ. ಯಜಮಾನರು ಕಾರಭಾರಿಯನ್ನು ಕರೆಸಿದರು. ಅಣ್ಣೀಗೇರಿಯಿಂದ ಯಾರಾದರೂ ಬ್ರಾಹ್ಮಣಾರ್ಥಕ್ಕೆ ಬಂದಿದ್ದರೆ ಎಂದು ವಿಚಾರಿಸಿದರು. ಅವನು ಆಶ್ಚರ್ಯದಿಂದ ಇದ್ದದ್ದನ್ನು ಹೇಳಿದ. ಬ್ರಾಹ್ಮಣ ಕುಳಿತಿದ್ದ ಮನೆ ಫರ್ಲಾಂಗು ದೂರದಲ್ಲಿತ್ತು. "ಹಾಗಾದರೆ ಅವನನ್ನು ಕರೆಸು. ಅವನನ್ನೂ ಬ್ರಾಹ್ಮಣಾರ್ಥಕ್ಕೆ ಕೂಡ್ರಿಸಿ ದಾನ ದಕ್ಷಿಣೆಯ ಏರ್ಪಾಡು ಮಾಡು. ಇಲ್ಲದಿದ್ದರೆ ಅವನ ಬ್ರಹ್ಮೇತಿ ಏನು ಮಾಡೀತೋ ಹೇಳಲಾಗದು" ಎಂದರು. ಅವತ್ತಿನಿಂದ ಪ್ರತಿ ವರ್ಷ ಶ್ರಾದ್ಧಾ ದಿನ ಅವನು ಬರಲಿ ಬಿಡಲಿ ಅವನಿಗೊಂದು ಎಲೆ, ದಾನ ದಕ್ಷಿಣೆ ಏರ್ಪಾಡು ಆಗುತ್ತಿತ್ತು.

ಇನ್ನೊಂದು ಜೀತಾ ಬ್ರಹ್ಮೇತಿಯ ವಿಚಾರ ಇನ್ನೂ ಸೋಜಿಗದ್ದು. ಒಬ್ಬ ಶ್ರೀಮಂತ ಶಾನುಭಾಗರು. ಅವರ ಮನೆ ಯಾವಾಗಲೂ ದಾರಿಹೋಕರಿಗೆ ಧರ್ಮಶಾಲೆ. ಒಂದು ದಿನ ಅವರಲ್ಲಿ ಒಬ್ಬ ತರುಣ ಬ್ರಾಹ್ಮಣ ಊಟಕ್ಕಿದ್ದ ; ಶಾನುಭಾಗರ ಹೆಂಡತಿ ತುಂಬಾ ಸುಂದರಿ. ಬ್ರಾಹ್ಮಣ ಅವಳನ್ನು ಬಡಿಸು ವಾಗ ನೋಡಿದ. ಎದೆಯಲ್ಲಿ ಬಾಣ ನಾಟಿತು. ಮಾಡುವುದೇನು? ಊಟ ಮುಗಿಸಿ ಹೊರಟುಹೋದ.

ಅಂದಿನಿಂದ ಆ ಗೃಹಿಣಿ ಸೊರಗುತ್ತ ಹೋದಳು. ತಿಂಗಳೊಪ್ಪತ್ತಿನಲ್ಲಿ

ಕಡ್ಡಿಯಂತಾದಳು. ಮದ್ದು ಮಾಯ ಎಲ್ಲ ವ್ಯರ್ಥವಾಯಿತು. ಕಡೆಗೆ ಅವಳನ್ನು ಗೋಪ್ಯದಲ್ಲಿ ಶಾನುಭೋಗರು ವಿಚಾರಿಸಿದರು. ಮೊದಲು ಅವಳು ಹೇಳಲಿಲ್ಲ. ಬಹಳಷ್ಟು ಪುಸಲಾಯಿಸಿದ ನಂತರ ಅವಳು ಅಂದದ್ದು ಇಷ್ಟು: "ಆವೊತ್ತೊಂದು ದಿನ ಊಟಕ್ಕೆ ಬಂದಿದ್ದ ಬ್ರಾಹ್ಮಣ ನನ್ನನ್ನೇ ದಿಟ್ಟಿಸಿದ. ಆ ರಾತ್ರಿ ನನ್ನ ಕನಸಿನಲ್ಲಿ ಬಂದು ಅವನು ನಿನ್ನ ಮೇಲೆ ನನಗೆ ಮನಸಾಗಿದೆ. ನಿನ್ನ ಹೊಂದದೆ ನನ್ನ ಜೀವ ತಣಿಯದು, ಎಂದು ಅಲ್ಪರಿದ. ಅಂದಿನಿಂದ ದಿನಾ ರಾತ್ರಿ ಹಾಗೇ ಆಗುತ್ತಿದೆ. ನನ್ನ ಮನಸ್ಸು ಗಾಬರಿಯಾಗಿದೆ" ಎಂದಳು.

ಶಾನುಭೋಗರು ವಿಚಾರವಂತರು. ಅವರು ಬ್ರಾಹ್ಮಣನನ್ನು ಪತ್ತೆಮಾಡಿ ಕರೆಸಿದರು. ಒಂದು ರಾತ್ರಿ ಅವನಿಗೆ ಸುಗ್ರಾಸ ಭೋಜನ ಹಾಕಿಸಿದರು, ಆಮೇಲೆ ಹೆಂಡತಿಯನ್ನು ಕೋಣೆಯಲ್ಲಿ ಸಾಲಂಕೃತಳಾಗಿ ಕೂರಿಸಿ ಬ್ರಾಹ್ಮಣನನ್ನು ಅಲ್ಲಿಗೆ ಕರೆತಂದರು. "ಸ್ವಾಮಿ, ನಿಮಗೆ ಇವಳ ಮೇಲೆ ಮನಸಾಗಿದೆಯಂತೆ. ದಿನಾ ರಾತ್ರಿ ಇವಳ ಕನಸಿನಲ್ಲಿ ಬಂದು ಬೇಡಿಕೊಳ್ಳುತ್ತೀರಂತೆ. ಅಡ್ಡಿಯಿಲ್ಲ, ಈ ರಾತ್ರಿ ಇವಳು ನಿಮ್ಮ ಹೆಂಡತಿಯೆಂದೇ ತಿಳಿದು ಇವಳೊಡನೆ ಇದ್ದು ನಿಮ್ಮ ಬಯಕೆ ತಣಿಸಿಕೊಂಡು ಈ ಬಂಧನದಿಂದ ಬಿಡುಗಡೆ ಮಾಡಿ!" ಎಂದರು.

ಬ್ರಾಹ್ಮಣ ಬೆವೆತುಹೋದ. ತಪ್ಪಾಯಿತು, ಇನ್ನೆಂದಿಗೂ ಅವಳನ್ನು ಮನಸ್ಸಿನಲ್ಲಿಯೂ ನೆನೆಯುವುದಿಲ್ಲವೆಂದು ವಚನ ಕೊಟ್ಟು ಹೊರಟುಹೋದ. ಅಂದಿನಿಂದ ಶಾನುಭೋಗರ ಹೆಂಡತಿ ಸುಧಾರಿಸಿಕೊಂಡಳು.

ಈ ವೃತ್ತಾಂತ ಕೇಳಿ ಸಿಗ್ಮಂಡ್ ಫ್ರಾಯ್ಡ್ ಮಹಾಶಯ ಏನನ್ನಬಹುದಾಗಿತ್ತೋ ನಾನು ಹೇಳಲಾರೆ. ಆದರೆ ಜೀವಂತ ಮಾನವ ಭೂತಗಳು ಸತ್ತವುಗಳಿಗಿಂತ ಭಯಂಕರ ಎನ್ನುವುದು ಖಂಡಿತವಾಯಿತಲ್ಲವೇ? (೧೯೭೬)

## ಬೀಳುವ ಸುಖ

ಕೈಲಿದ್ದದ್ದು ಕಳೆಯುವ ವರೆಗೆ ಅದರ ಬೆಲೆ ತಿಳಿಯುವುದಿಲ್ಲ ಎನ್ನುವ ಗಾದೆಯೊಂದಿದೆ. ಅದಕ್ಕೆ ವಿರುದ್ಧವಾದ ಇನ್ನೊಂದು ಅನುಭವವಾಣಿಯೂ ಇರಬೇಕು. ಕಳೆದುಹೋಗುವವರೆಗೆ ಕಳೆದುಕೊಳ್ಳುವ ಸುಖ ತಿಳಿಯುವುದಿಲ್ಲ ಅಂತ.

ಈ ಅನುಭವ ನಮ್ಮ ಭೂತಪೂರ್ವ ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೆ ಬಂದಿದೆ. ಅಧಿಕಾರದಲ್ಲಿದ್ದಾಗ ಉಣ್ಣಲಿಕ್ಕೆ ಪುರಸೊತ್ತಿದ್ದಿಲ್ಲ, ನಿದ್ದೆ ಬರುತ್ತಿರಲಿಲ್ಲ—ಈಗಲೋ ಎರಡು ಹೊತ್ತು ಪಟ್ಟಾಗಿ ಊಟ ಹೊಡೆದು ಗಡದ್ದಾಗಿ ನಿದ್ದೆ ಮಾಡುತ್ತೇನೆ—ಎಂದು ಅವರು ಮೊನ್ನೆ ಹುಬ್ಬಳ್ಳಿಯಲ್ಲಿ ಹೇಳಿದರು. ಎಲ್ಲಾ ರಾಜಕಾರಣಿಗಳ ಹಾಗೆ ಕೈಬಿಟ್ಟು ಹೋದದ್ದೆ ಕೃಷ್ಣಾರ್ಪಣ ಎಂದು ವೀರೇಂದ್ರರು ಕೂಡ ಹೇಳುತ್ತಾರೆ ಅನ್ನಿ. ಆದರೂ ಅವರು ಹೇಳುವುದರಲ್ಲಿ ಸತ್ಯಾಂಶ ಉಂಟು. ಬಹುಕಾಲ ಒಂದು ಸುಖವನ್ನು ಅನುಭವಿಸಿದ ಮೇಲೆ ಒಮ್ಮೆಲೇ ಅದು ಕೈ ತಪ್ಪುವ ಹಾಗೆ ಕಂಡರೆ ಮನುಷ್ಯನ ಎದೆ ಝಲ್ಲೆನ್ನುತ್ತದೆ—ಪ್ರಾರಂಭದಲ್ಲಿ. ಅಯ್ಯೋ ಇದಿಲ್ಲದೆ ಹೇಗೆ ಬದುಕಬಹುದು ಎಂದು ಭಯವಾಗುತ್ತದೆ. ನೀವು ಅದನ್ನು ಬಿಗಿಯಾಗಿ ಹಿಡಿದುಕೊಳ್ಳಲು ಚಡಪಡಿಸುತ್ತೀರಿ. ಒಂದಂಗುಲವೂ ಬಿಡೆ ಎಂದು ಅರಚಿಕೊಳ್ಳುತ್ತೀರಿ. ಆದರೂ ಅದು ಕೈಬಿಟ್ಟು ಹೋಗುತ್ತದೆ. ಒಮ್ಮೆಲೇ ನಿಮಗೆ ನಿಮ್ಮ ಪ್ರಾಣ ಹೋಗುವ ಬದಲು ಏನೋ ಹಾಯೆನಿಸಿದಂತೆ, ಮೈ ಭಾರ ಇಳಿದಂತೆ, ತಲೆ ಹಗುರಾದಂತೆ ಅನುಭವವಾಗುತ್ತದೆ. ಕಳೆದುಕೊಳ್ಳುವುದರಲ್ಲಿಯೂ ಇಷ್ಟು ಸುಖವುಂಟೇ ಅನಿಸುತ್ತದೆ.

ಇದು ಮನುಷ್ಯ ಸ್ವಭಾವ. ಮನುಷ್ಯ ಸ್ವಭಾವಕ್ಕೆ ಬದುಕು ಮುಖ್ಯ ಹೊರತು ಬದುಕಿನ ಸಲಕರಣೆಗಳು ಮುಖ್ಯವಲ್ಲ. ಕಳೆದುಕೊಂಡ ಮೇಲೆ ಅದು ಅದಿಲ್ಲದ್ದರ ಸುಖವನ್ನು ಎಣಿಸತೊಡಗುತ್ತದೆ. ತಾನು ಕಳೆದುಕೊಂಡದ್ದು ತನಗೆ ಕೊಡುತ್ತಿದ್ದ ಕಷ್ಟಗಳನ್ನು ಲೆಕ್ಕಿಸತೊಡಗುತ್ತದೆ. ಒಂದು ಹೊಸ ಸ್ವಾತಂತ್ರ್ಯದ ಪ್ರತೀತಿ ಅದಕ್ಕೆ ಆಗತೊಡಗುತ್ತದೆ. ತಂದೆ ತಾಯಿಗಳನ್ನು ಕಳೆದುಕೊಳ್ಳುವುದನ್ನೇ ನೋಡಿ. ನೀವು ನಿಮ್ಮನ್ನು ಹಡೆದವರನ್ನು ನಿಜವಾಗಿ ಪ್ರೀತಿಸುತ್ತಿದ್ದರೆ ಅವರನ್ನು ಕಳೆದುಕೊಳ್ಳುವ ಸಂಭವ ನಿಮ್ಮನ್ನು ಯಾವಾಗಲೂ ಕಂಗೆಡಿಸುತ್ತಿರುತ್ತದೆ. ಅವರ ಹಣದಿಂದ, ಅವರ ಉಪದೇಶಗಳಿಂದ ನೀವು ಬಾಳುವೆ ಮಾಡುತ್ತಿದ್ದೀರಿ. ಈ ಮೂಲ ಒಮ್ಮೆಲೇ ಬರಡಾದರೆ ಏನು ಗತಿ? ಏನೇ ಆದರೂ ಒಂದು ದಿನ ಅವರು ಸತ್ತೇ ಹೋಗುತ್ತಾರೆ. ನಿಮ್ಮೊಳಗೆ ನೀವು ಎಂದೂ ಊಹಿಸದಿದ್ದ ಪರಿವರ್ತನೆ ಆಗುತ್ತದೆ. ನಿಮಗೆ ಹೇಳಲು ಇಷ್ಟವಿಲ್ಲದಿದ್ದರೂ ದೊಡ್ಡ ಸಂಕೋಲೆಗಳಿಂದ ಒಮ್ಮೆಲೇ ಮುಕ್ತರಾದಂತೆ ಅನ್ನಿಸು

ತ್ತದೆ. ತಂದೆ ತಾಯಿಗಳ ಪ್ರಭುಸಮ್ಮತಿಯ ಭಯವಿಲ್ಲದೆ ನಿಮ್ಮ ನಿರ್ಣಯ ಗಳನ್ನು ನೀವೇ ಮಾಡುವ ಉತ್ತೇಜನಕರವಾದ ಅನುಭವ ನಿಮಗಾಗುತ್ತದೆ. ಬಾಯಿಬಿಟ್ಟು ಹೇಳಲಾಗದಿದ್ದರೂ ತಂದೆ ಸತ್ತದ್ದೇ ಚೆನ್ನಾಯಿತು ಎಂದು ಅನ್ನಿಸಿಬಿಡುತ್ತದೆ. ಅವರ ಹಣವನ್ನು ನೀವು ಹಂಗಿಲ್ಲದೆ ವಿನಿಯೋಗಿಸಬಹು ದಲ್ಲ! ಆದರೆ ಅದೊಂದೇ ಅಲ್ಲ. ಅವಲಂಬನೆ ಹೋಯಿತು ಎಂಬುದೇ ಮುಖ್ಯ. ಮನುಷ್ಯ ಸ್ವತಂತ್ರನಾಗಿ ಹುಟ್ಟಿದ್ದಾನೆ. ಬಂಧನ ಅವನಿಗೆ ಸುಖ ಎನಿಸಲೂ ಬಹುದು. ಆದರೆ ಆದರಿಂದ ಮುಕ್ತವಾದ ಮೇಲೆ ಆ ಅನುಭವ, ತನ್ನ ದಾರಿಯನ್ನು ಹೊಸದಾಗಿ ಬಿಡಿಸಿಕೊಳ್ಳುವ ಸಂಭವ, ಅವನಿಗೆ ಹೊಸ ತೊಂದು ಆಯಾಮವನ್ನು ಒದಗಿಸಿಯೇ ತೀರುತ್ತದೆ.

ನನ್ನ ಲೇಖಕ ಮಿತ್ರರೊಬ್ಬರು ಇದೇ ಮಾತು ಹೇಳುತ್ತಾರೆ. ಅವರ ಪ್ರೀತಿಪಾತ್ರಳಾದ ಮಗಳು ದೀರ್ಘಕಾಲ ನರಳಿದಳು. ಡಾಕ್ಟರರು ಅವಳು ಉಳಿಯುವ ಸಂಭವ ದೂರವೆಂದು ಹೇಳಿದಾಗ ತಮ್ಮ ಹೃದಯ ಹೌವನೆ ಹಾರಿ ಬಾಯಿಗೇ ಬಂದಂತಾಯಿತಂತೆನಿಸಿತವರಿಗೆ. ಆದರೆ ಅವಳ ಕಣ್ಣು ಗಳನ್ನು ಮುಚ್ಚಿಸುತ್ತಿರುವಾಗ ಅವರಿಗೆ ಏನೋ ಒಂದು ಮುಕ್ತಿ ಪ್ರತೀತಿ ಯಾಯಿತಂತೆ. ಕಳೆದುಕೊಳ್ಳುವುದಲ್ಲ, ಕಳೆದುಕೊಳ್ಳುವ ಭಯ ಮನುಷ್ಯನಿಗೆ ನರಕವನ್ನು ತೋರಿಸುವಂಥಾದ್ದು.

ಸಾವಿನ ವಿಷಯ ಹೀಗಾದರೆ ಹವ್ಯಾಸ, ಅಭ್ಯಾಸಗಳ ಮಾತೂ ಹೀಗೆಯೇ. ಸಿಗರೇಟಿನ ಚಟ, ಕುಡಿಯುವ ಚಟ, ಪತ್ರಿಕೆಯ ಚಟ. ಸಿಗರೇಟಿನಿಂದ ಸಿಗರೇಟ್ ಹೊತ್ತಿಸಿ ಸೇದುತಿದ್ದ ನನ್ನೊಬ್ಬ ಗೆಳೆಯ ಒಂದು ದಿನ ಯಾವುದೋ ಜುಗುಪ್ಸೆಯಿಂದ—ಯಾವುದೊ ಯಾಕೆ, ಹೆಂಡತಿಯ ಕೆಡುಮಾತುಗಳಿಂದ— ರುಷ್ಟನಾಗಿ ಸಿಗರೇಟನ್ನು ಕೈಯಲ್ಲಿಯೂ ಹಿಡಿಯೆನೆಂದು ಪ್ರತಿಜ್ಞೆ ಮಾಡಿದ. ಎರಡೋ ಮೂರೋ ದಿನ ಹೇಗೋ ಹೇಗೋ ಆಯಿತು. ಆಮೇಲೆ ನಿರಂಬಳದ ಭಾವನೆ ಅವನನ್ನು ಆವರಿಸಿತು. ಈಗ ಅವನ ಮುಂದೆ ಸಿಗರೇಟು ಸೇದಿದರೂ ಅವನಿಗೆ ಯಾವ ಉದ್ರೇಕವೂ ಆಗುವುದಿಲ್ಲ.

ಮತ್ತೆ ಪತ್ರಿಕೆಗಳು. ನಾನು ದಿನಾ ಬೆಳಗ್ಗೆ ಆರರೊಳಗೆ ಪತ್ರಿಕೆ ಮನೆಗೆ ಬಾರದಿದ್ದರೆ ಕಂಗಾಲಾಗುತ್ತೇನೆ. ರೇಡಿಯೊ ತಿರುವುತ್ತೇನೆ. ಆರೂವರೆ ವರೆಗೆ ಕಾಯಬೇಕಲ್ಲ ಎಂದು ತರಾತುರಿಯಾಗುತ್ತದೆ. ಆಚೆ ಮನೆಗೆ ಹೇಳಿ

ಕಳುಹಿಸುತ್ತೇನೆ. ಪತ್ರಿಕೆ ಕೈಲಿ ಹಿಡಿಯದೆ ಕಾಫಿಗೆ ರುಚಿ ಇಲ್ಲ ಎನಿಸುತ್ತದೆ. ಕೆಲ ತಿಂಗಳ ಹಿಂದೆ ಪತ್ರಿಕೆಗಳು ಸಹಸಾ ಬಾರದ ಊರಿಗೆ ಹೋಗಬೇಕಾಯಿತು. ಇಂದಿನ ಪತ್ರಿಕೆಯ ಬದಲು ನಿನ್ನೆ ಮೊನ್ನೆಯದನ್ನು ಓದುವುದೆಂದರೆ ನನಗೆ ಹೆಂಡದ ಚಟ ಹತ್ತಿದವನಿಗೆ ನೀರಾ ಕುಡಿಸಿದಂತೆ. ಹೀಗಿರುವಾಗ ನಾ ಹೋದ ಊರಲ್ಲಿ ನಾಲ್ಕು ದಿನ ಪತ್ರಿಕೆಗಳೇ ಸಿಗಲಿಲ್ಲ. ಮೊದಲನೇ ದಿನ ಹಸಿವು ಸಹಿಸಲಾರದವನಂತೆ ಕಳೆದೆ. ಎರಡನೇ ದಿನ ಆತುರ ಉಳಿಯಲಿಲ್ಲ. ಬಂದರೆ ನೋಡುವ ಅನಿಸಿತಷ್ಟೇ. ಮೂರನೇ ದಿನ ನನಗೆ ಪತ್ರಿಕೆಯಿಲ್ಲದೆ ಬದುಕುವುದರಲ್ಲಿ ಅಮಿತ ಉತ್ಸಾಹ ತಲೆದೋರಿತು. ಎಷ್ಟು ಸುಖ! ಬಸ್ಸು ಪ್ರಪಾತದಲ್ಲಿ ಉರುಳಿ ೪೮ ಜನರ ಸಾವು, ೬೦ ಲಕ್ಷ ಅಪಹಾರ ಮಾಡಿದವನ ಬಂಧನ, ಪ್ರಿಯಕರನೊಡನೆ ಮಲಗಿದ್ದ ಹೆಂಡತಿಗೆ ಗಂಡನ ಕುಠಾರಪ್ರಯೋಗ, ಚಂದ್ರಲೋಕಕ್ಕೆ ಹೊರಟವರ ಯಂತ್ರ ಕೆಟ್ಟು ತ್ರಿಶಂಕು ಸ್ವರ್ಗ, ಬಫೆಲೋಲ್ಯಾಂಡ್ ಮಂತ್ರಿಮಂಡಲದ ಪತನ, ಕೇರಳ ಗಡಿಯಲ್ಲಿ ನಕ್ಸಲೀಯರ ಉತ್ಥಾನ, ನೆರೆಹಾವಳಿ, ಉಪವಾಸ ಸತ್ತವರ ಬಗ್ಗೆ ಮೊಸಳೆ ಕಣ್ಣೀರು, ಪ್ರಧಾನ ಮಂತ್ರಿಗಳ ವಿಮಾನದಲ್ಲಿ ಬಾಂಬು, ತಿಂಬಕ್ತೂ ಅಧ್ಯಕ್ಷರಿಗೆ ಹೃದಯಾಘಾತ, ಚುನಾವಣೆಯಲ್ಲಿ ಭ್ರಷ್ಟಾಚಾರಕ್ಕೆ ಕ್ಷಮಾದಾನ, ಪಾಕಿಸ್ತಾನದ ದಾಳಿಯ ಭಯ, ೪೮ ಗಂಟೆಗಳಲ್ಲಿ ೧೫೦ ಮೈಲಿನ ರಭಸದ ಬಿರುಗಾಳಿಯ ಭವಿಷ್ಯ, ಚೀನ ನಮ್ಮ ಮೇಲೆ ಪರಮಾಣು ಬಾಂಬು ದಾಳಿ ಮಾಡುವುದೇ? ಒಂದೇ ಎರಡೇ?–ಇದಾವುದರ ಚಿಂತೆ ಇಲ್ಲದೆ ಈ ಇಡೀ ಪ್ರಪಂಚದಲ್ಲಿ ಇದೊಂದೇ ಹಳ್ಳಿ, ಇಲ್ಲಿ ನಾನೊಬ್ಬನೇ ಮನುಷ್ಯ ಎಂಬಂತೆ ನನಗನಿಸತೊಡಗಿತು. ನನ್ನ ಸುತ್ತಲಿನ ಪ್ರಪಂಚದಲ್ಲಿ ಹೆಚ್ಚು ಅನುರಕ್ತಿ ಅನಿಸಿತು. ಹುಲ್ಲು ಹೆಚ್ಚು ಹಸುರಾಗಿ ಕಾಣಿಸಿತು, ಹಕ್ಕಿಯ ಹಾಡಿನಲ್ಲಿ ಹೊಸ ರಸ ಸುರಿಯಿತು, ನೆರೆಮನೆಯ ಮಗುವಿನ ಅಳುವಿನಲ್ಲಿ ಹೆಚ್ಚು ಕರುಣರಸಗೋಚರವಾಯಿತು. ಪದ್ಯ ಬರೆಯಬೇಕೆಂದು ಅನೇಕ ವರ್ಷಗಳನಂತರ ಸ್ಫೂರ್ತಿ ಬಂತು.

ನನಗೆ ಮೇಲಿಂದ ಮೇಲೆ ಬೀಳುವ ಕನಸೊಂದಿದೆ. ನಾನು ಚುಮು ಚುಮು ನಸುಕಿನಲ್ಲಿ ಸುರಗಿ ಹೂ ಕೊಯ್ಯಲು ಮರವನ್ನೇರಿದ್ದೇನೆ. ಮುಗುಳಾದ ಹೂಗಳನ್ನು ಕೊಯ್ಯುತ್ತ ಕೊಯ್ಯುತ್ತ ಮೇಲೆ ಮೇಲೆ, ಟೊಂಗೆಯ

ತುದಿ ತುದಿಗೆ ಹೋಗುತ್ತೇನೆ. ನಾನು ಕೊನೆಯ ಟಿಸಿಲನ್ನು ದಾಟಿ ಕೊನೆಯ ಎಲೆಯ ಮೇಲೆ ಕಾಲಿಡುತ್ತೇನೆ. ಪುಸಕ್ಕನೆ ಜಾರಿ ಕೆಳಗೆ ಬೀಳುತ್ತೇನೆ. ಹೋ! ಸತ್ತೆ! ಸತ್ತೆ! ಹೃದಯ ನಿಲ್ಲುತ್ತದೆ! ರಕ್ತ ಹೆಪ್ಪುಗಟ್ಟುತ್ತದೆ! ಬೆನ್ನು ಹುರಿಗುಂಟ ಭಯ ಹರಿಯುತ್ತದೆ! ಕೂಗಬೇಕೆನ್ನುತ್ತೇನೆ, ನಾಲಿಗೆ ಏಳುವುದಿಲ್ಲ! ಕೆಳಗೆ ಕೆಳಗೆ ಬೀಳುತ್ತೇನೆ. ಮುಗಿಯಿತು, ಮುಗಿಯಿತು! ಇನ್ನೇನು ಎಲುಬುಗಳು ನುಚ್ಚುನೂರಾಗುತ್ತವೆ. ಆಗ ನಾನು ನೆಲ ಮುಟ್ಟುತ್ತೇನೆ. ಎಲಾ! ಏನೂ ಆಗಲಿಲ್ಲ. ಎಷ್ಟು ಸುಖವಾಗಿ ಬಂದಿಳಿದಿದ್ದೇನೆ!

ಅಧಿಕಾರದ ಶಿಖರಕ್ಕೇರಿದವರಿಗೂ ಅದರಿಂದ ಕೆಳಗೆ ಬೀಳುವಾಗ ಈ ಬಗೆಯ ಅನುಭವವೇ ಆಗುತ್ತಿರಬೇಕು. ನೆಲ ಮುಟ್ಟಿದರೆ ಜಜ್ಜಿ ಮುದ್ದೆಯಾಗುತ್ತೇನೆ, ಅನಿಸುತ್ತಿರಬೇಕು. ಆದರೆ ನೆಲ ತಲಪುತ್ತಲೇ ಅವರಿಗೆ ಕಳೆದು ಕೊಂಡ ಸುಖದ ಅನುಭವ ಆಗುತ್ತಿರಬೇಕು. (೧೯೭೧)

## ಲಿಯಾಕತ್ ಅಲಿಯವರನ್ನು ಕಂಡೆ

ನಿನ್ನೆ ರಾತ್ರಿ ಲಾಂಗೂಲಾಚಾರ್ಯರು ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಕತ್ ಅಲಿ ಖಾನರ ಭೆಟ್ಟಿ ತೆಗೆದುಕೊಂಡರು. ಕನಸಿನಲ್ಲಿ ನಡೆಯುವ ಎಲ್ಲಾ ಭೇಟಿಗಳಂತೆ, ಈ ಭೇಟಿಯೂ ಪೂರ್ವಯೋಜಿತವಾಗಿರಲಿಲ್ಲ. ಒಮ್ಮೆಗೆಲೇ ಹೇಗೋ ಎಲ್ಲಿಂದಲೋ ಆಚಾರ್ಯರಿಗೆ ಕರಾಚಿಯಲ್ಲಿ ಲಿಯಾಕತರ ಭವನದಲ್ಲಿ ತಾವಿದ್ದುದು ಗೊತ್ತಾಯಿತು. ಲಿಯಾಕತರು ಮೇಜಿನ ಮೇಲೆ ದೊಡ್ಡ ನಕಾಶೆಯೊಂದನ್ನು ಬಿಡಿಸಿಟ್ಟು ಅದರ ಮೇಲೆ ಬಾಗಿದ್ದರು.

"ಅಸ್ಸಲಾಮಾಲೇಕುಂ" ಎಂದು ಆಚಾರ್ಯರು ತಮಗೆ ಅರ್ಧಮರ್ಧ ಗೊತ್ತಿದ್ದ ಮುಸ್ಲಿಂ ವಂದನೆಯನ್ನು ಸಲ್ಲಿಸಿದರು.

ಲಿಯಾಕತರು ಒಮ್ಮೆಲೇ ಬೆಚ್ಚಿಬಿದ್ದು ತಲೆ ಮೇಲಕ್ಕೆತ್ತಿದರು. ಕ್ಷಣಮಾತ್ರದಲ್ಲಿ ಅವರು ಧೃತಿಗೊಂಡು ಪ್ರತಿ ವಂದನೆಯ ಬದಲು ಬದ್ಧಮುಷ್ಟಿಯನ್ನೆತ್ತಿ ಎದ್ದು ನಿಂತರು!

ಅವರು ಕುಳಿತ ಕುರ್ಚಿ ಅವರ ಸಂಗಡವೇ ಸ್ವಲ್ಪ ಎದ್ದು ಬಂದು ಆ ಮೇಲೆ ಜಾರಿ ನಿಶ್ಶಬ್ದವಾಗಿ ನೆಲಕ್ಕೆ ಬಿತ್ತು.

"ಓ ಎಕ್ಸ್‌ಕ್ಯೂಸ್ ಮೀ" ಎಂದರು ಲಿಯಾಕತರು ಹಲ್ಲುಕಿರಿಯುತ್ತ. "ಈ ಕುರ್ಚಿ ಮೂರು ತಿಂಗಳ ಹಿಂದೆ ಮಾಡಿಸಿದ್ದು. ಅದು ದಿನ ಹೋದ ಹಾಗೆ ಸಣ್ಣದಾಗುತ್ತ ಹೋಗುತ್ತಿದೆ. ನಿಜವಾಗಿ ಪಾಕಿಸ್ತಾನ ಸ್ಥಾಪನೆಯಾದಂದಿನಿಂದ ಈ ಕುರ್ಚಿಗಳು ನನ್ನ ಮೇಲೆ ಒಳಸಂಚನ್ನೇ ನಡೆಸಿದಂತೆ ಕಾಣುತ್ತೆ. ನಾನು ಅಗಲವಾದ ಹೊಸ ಹೊಸ ಕುರ್ಚಿ ಮಾಡಿಸಬೇಕು, ತಿಂಗಳೊಪ್ಪತ್ತಿನಲ್ಲಿ ಅವು ಕುಗ್ಗಿ ನನ್ನ ಪಕ್ಕಗಳನ್ನು ಹಿಡಿದುಕೊಳ್ಳಬೇಕು. ನನಗೆ ಕುರ್ಚಿ ಮಾಡಿಕೊಡುವ ಬಡಗಿ ಹಿಂದೂಸ್ತಾನದ ಹಸ್ತಕನಿರಬೇಕೆಂದು ಸಂಶಯ ಬರುತ್ತಿದೆ."

"ಆದರೆ ಲಿಯಾಕತ್ ಸಾಹೇಬ್, ಸ್ವತಃ ನಿಮ್ಮ ಸುತ್ತಳತೆ ಹೆಚ್ಚಾಗುತ್ತಿರಬಹುದೆಂದು ನಿಮಗೆ ಹೊಳೆದಿಲ್ಲವೆ ?"

"ಆಂ ? ಹೌ ಡೇರ್ ಯೂ ?" ಲಿಯಾಕತರು ಗರ್ಜಿಸಿದರು. "ಪಾಕಿಸ್ತಾನದ ಪ್ರಧಾನ ಮಂತ್ರಿಯಾಗಿ ಬೊಜ್ಜು ಬೆಳಸಲಿಕ್ಕೆ ನನಗೆ ಸಮಯವಾದರೂ ಎಲ್ಲಿದೆ ? ಜಗತ್ತಿನ ಇಪ್ಪತ್ತೈದು ಕೋಟಿ ಮುಸ್ಲಿಮರ ಭಾರವೆಲ್ಲ ನನ್ನ ತಲೆಯ ಮೇಲೆ ಕೂತಿದೆ. ಇಟೀಸ್ ದ ಚೇರ್ಸ್ ದೆಟ್ ಆರ್ ಗ್ರೋಯಿಂಗ್ ನ್ಯಾರೋವರ್ ! ಮತ್ತು ಇದರಲ್ಲಿ ಭಾರತದ ಬ್ರಾಹ್ಮಣೀ ರಾಜ್ಯದ ಕುತಂತ್ರ ಖಂಡಿತಾ ಇದೆ !"

"ಇರಬಹುದು ಇರಬಹುದು" ಲಾಂಗೂಲಾಚಾರ್ಯರು ಬೇಗನೆ ಸಮ್ಮತಿಸಿದರು.

"ಇರಬಹುದೇನು, ಇದ್ದೇ ಇದೆ. ನನ್ನನ್ನು ಕುರ್ಚಿಯಿಂದ ಏಳದಂತೆ ಮಾಡಿದರೆ, ಪಾಕಿಸ್ತಾನವನ್ನು—ಕಾಶ್ಮೀರ ಸಹಿತ—ನುಂಗಿ ಬಿಡಬಹುದೆಂದು ಅವರ ಹೊಂಚು ಇದೆಯೆಂದು ತಿಳಿದು ಬಂದಿದೆ" ಎಂದು ಖಾನ್ ಸಾಹೇಬರು ಪೂರ್ವ ದಿಕ್ಕಿನತ್ತ ಮುಷ್ಟಿಯನ್ನು ಅಲುಗಿಸಿದರು.

"ಆದರೆ ಕಾಶ್ಮೀರವನ್ನು ನುಂಗುವ ಹೊಂಚು ಮಾಡಿದವರು ಮೊದಲು ನೀವೇ ಎಂದು ಆ ಮಂದಿ ಹೇಳುತ್ತಿದೆಯಲ್ಲ ?"

"ಇದನ್ನೇ ಹಿಂದುಸ್ತಾನದ ಹೇಡಿತನದ ಅಪಪ್ರಚಾರ ಎನ್ನುತ್ತಿರುವುದು ನಾನು. ಕಾಶ್ಮೀರ ಪಾಕಿಸ್ತಾನದಲ್ಲೇ ಇತ್ತು. PAKISTANದಲ್ಲಿ K ಅಂದರೆ ಕಾಶ್ಮೀರವೇ. ಪಾಕಿಸ್ತಾನದ ಹೆಸರಲ್ಲೇ ಕಾಶ್ಮೀರ ಸೇರಿದೆ ಅಂದ ಮೇಲೆ ನಾವು

ಅದನ್ನು ನುಂಗುವ ಪ್ರಶ್ನೆಯೇ ಇದ್ದಿಲ್ಲ."

"ಹಾಗಾದರೆ ಕಾಶ್ಮೀರ ದಾಳಿಯಲ್ಲಿ ನಿಮ್ಮ ಕೈ ಇಲ್ಲ ಅಂತ ಮೊದಲು ಏಕೆ ಹೇಳಿದಿರಿ ?"

"ಸತ್ಯವನ್ನೂ ರಾಜಕಾರಣವನ್ನೂ ಬೆರೆಸಿ ಕಿಚಡಿ ಮಾಡಲಿಕ್ಕೆ ನಾನೇನು ಗಾಂಧಿಯಲ್ಲ ತಿಳಿಯಿತೆ ? ಆಗ ಕಾಶ್ಮೀರ ನಮ್ಮದೇ ಅನ್ನೋದು ಅಷ್ಟು ಖಾತ್ರಿ ಇರಲಿಲ್ಲ. ಆಂಗ್ಲೊ-ಅಮೇರಿಕನ್ನರ ಬೆಂಬಲ ನಮಗೆ ದೊರಕುವುದು ನಿಶ್ಚಿತ ಇದ್ದಿಲ್ಲ. ಅವರ ಬೆಂಬಲ ಹೆಚ್ಚಿದ ಹಾಗೆ ಕಾಶ್ಮೀರ ನಮ್ಮದೇ ಅನ್ನುವುದು ನಮ್ಮ ಸಂಪೂರ್ಣ ಮನವರಿಕೆ ಆಗಿದೆ."

"ನೀವು ಕಾಶ್ಮೀರದಲ್ಲಿ ಯುದ್ಧ ನಿಲ್ಲಿಸಲು ಒಪ್ಪಿ ಈಗ ಪುನಃ ಜೆಹಾದದ ಭಯ ತೋರಿಸುವುದು ಸ್ವಲ್ಪ ವಿಸಂಗತವಲ್ಲವೇ ?"

"ಯುದ್ಧ ನಿಲ್ಲಿಸಲು ಒಪ್ಪಿದಾಗ ಯುದ್ಧದಿಂದಾಗುವ ಅಪಾರ ಹಾನಿಯನ್ನು ತಡೆಯುವ ಸದಿಚ್ಛೆ ನಮ್ಮದಾಗಿತ್ತು."

"ಯಾರಿಗೆ ?"

"ಯಾರಿಗೆ ? ನಮಗೇ ! ಆಗ ಜೆಹಾದ್ ಮುಂದುವರಿಸಿದ್ದರೆ ಆ ಕಾಫರ್ ಸೈನ್ಯ ನಮ್ಮನ್ನ ಕಾಶ್ಮೀರದಿಂದ ಪೂರ್ಣ ಹೊರಗೆ ಹಾಕಿಬಿಡುತ್ತಿತ್ತು. ಭಾರತಿಗಳು ಹೇಡಿಗಳು ಅಂತ ನಾವು ಹಗಲಿರುಳು ಪ್ರಚಾರ ಮಾಡಿದರೂ ಆ ಕಾಫರ್ ಭಾರತಿಗಳು ಅದನ್ನು ನಂಬಲಿಲ್ಲ. ಬರಬರುತ್ತ ನಮ್ಮ ಸೈನಿಕರಿಗೂ ಅಪನಂಬಿಕೆ ಉಂಟಾಗತೊಡಗಿತು. ಪಾಕಿಸ್ತಾನ ಸ್ಥಾಪನೆಯ ಈ ಒಂದು ಮೂಲಾಧಾರ ವನ್ನೇ ಕೆಡಿಸಿದ್ದಕ್ಕಾಗಿ ನಾವು ಈ ಭಾರತಿಗಳನ್ನು ಎಂದೂ ಕ್ಷಮಿಸೆವು."

"ನಮಗೆ ಶಾಂತಿ ಬೇಕು ಅಂತ ಪ್ರಚಾರ ಮಾಡುತ್ತ ಯುದ್ಧದ ತಯಾರಿ ನಡೆಸುತ್ತಿದ್ದೀರಲ್ಲ ?"

"ಹೌದು, ನಮಗೆ ಶಾಂತಿ ಬೇಕು—ಯುದ್ಧ ಇಲ್ಲದೆ ನಮಗೆ ಬೇಕಾದ್ದು ಸಿಗುವ ಹಾಗಿದ್ದರೆ. ನೋಡು, ೧೯೪೭ರಲ್ಲಿ ನಾವು ಕಾಶ್ಮೀರಕ್ಕೆ ನಮ್ಮ ಜನ ರನ್ನು ಕಳಿಸಿದೆವು. ಇನ್ನು ಕೆಲ ದಿನ ತಡೆದಿದ್ದರೆ ಶಾಂತಿಯಿಂದಲೇ ಕಾಶ್ಮೀರದ ಪ್ರಶ್ನೆ ತೀರುತ್ತಿತ್ತು. ಆದರೆ ಆ ಯುದ್ಧಾತುರ ಭಾರತಿಗಳು ಏಕಾ ಏಕಿ ನಮ್ಮ ವಿರುದ್ಧ ಏರಿಬಂದರು. ಶಾಂತಿಭಂಗವಾಯಿತು ಈಗಾದರೂ ನೋಡು. ನಾವು ಕಾಶ್ಮೀರದ ಪ್ರಶ್ನೆಯನ್ನು ಹೋರಾಟವಿಲ್ಲದೆ ತೀರ್ಮಾನಿಸುವ ಉದ್ದೇಶ

ದಿಂದಲೇ ಕಾಶ್ಮೀರ ಗಡಿಗೆ ಸೈನ್ಯ ಕಳಿಸಿದ್ದೇವೆ. ನಮ್ಮ ಸೈನ್ಯ ಗಡಿ ದಾಟಿ ಮುನ್ನಡೆದಾಗ ನಮಗೆ ಆತಂಕ ಮೂಡದಿದ್ದರೆ ಶಾಂತಿಯಿಂದಲೇ ಎಲ್ಲವೂ ಮುಗಿದು ಹೋಗುವುದು. ಆದರೆ ಹಿಂದುಗಳಿಗೆ ರಕ್ತಪಿಪಾಸೆ! ಅವರು ತಮ್ಮ ಸೈನ್ಯ ತಂದು ಗಡಿಗಳಲ್ಲಿ ನಿಲ್ಲಿಸಿದ್ದಾರೆ. ಯುದ್ಧ ಬೇಕಾಗಿರುವುದು ನಮಗೋ ಅವರಿಗೋ ಈಗ ಹೇಳು?"

"ನಿಮ್ಮ ತರ್ಕ ಬಹಳ ಬಲವತ್ತರವಾಗಿದೆ. ಆದರೆ ದಾಳಿ ಮಾಡುವುದೇ ನಿಮ್ಮ ಉದ್ದೇಶವಾದರೂ ಅದಕ್ಕೆ ಇಷ್ಟೆಲ್ಲ ಕೂಗಾಟ ಏಕೆ ಹೇಳಿರಿ? ಬಗುಳುವ ನಾಯಿ ಕಚ್ಚುವುದಿಲ್ಲ ಅನ್ನುತ್ತಾರಲ್ಲ!" ಎಂದರು ಆಚಾರ್ಯರು.

ಪಾಕಿಸ್ತಾನದ ಪ್ರಧಾನ ಮಂತ್ರಿಗಳು ನಸುನಕ್ಕರು. ಅವರು ತಮ್ಮ ಹೊಟ್ಟೆ ಬಗ್ಗಗೊಟ್ಟಷ್ಟೂ ಮುಂದೆ ಬಗ್ಗಿ ಪಿಸುಮಾತಿನಲ್ಲಿ ಹೇಳಿದರು:

"ನೋಡು, ಮಿಸ್ಟರ್ ಲಾಂಗೂಲ್! ನನಗಾದರೂ ಎಲ್ಲಿ ಬೇಕಾಗಿದೆ ಇದೆಲ್ಲ? ಈ ಇಸ್ಲಾಂ ರಾಜ್ಯ, ಈ ಜೆಹಾದ್—ನನಗೆ ಇದರಲ್ಲೆಲ್ಲ ನಂಬಿಕೆ ಉಂಟೆಂತ ಮಾಡಿದ್ದೀಯಾ? ಸ್ವಹಸ್ತದಿಂದ ಈ ವರೆಗೆ ನಾನೊಂದು ಹಕ್ಕಿಯನ್ನು ಕೂಡ ಕೊಂದಿಲ್ಲ. ಆದರೆ ನಾನೇನು ಮಾಡಲಿ? ನಮಗೆ ಪಾಕಿ ಸಿಗಲಿಕ್ಕೇ ಇಲ್ಲ ಎಂದು ಎಣಿಸಿದ್ದೆವು—ಬ್ರಿಟಿಷರು ಕೊಟ್ಟರು. ಕೊಟ್ಟಮೇಲೆ ಬಿಡಲಾದೀತೇ? ಕೊರಳಿಗೆ ಹಾಕಿಕೊಂಡೆವು. ಚಳವಳಿ ಕಾಲದಲ್ಲಿ ಏನೋ ಇಸ್ಲಾಂ ರಾಜ್ಯ, ಶರಿಯತ್ ಅಂತ ಕೂಗಿದ್ದೆವು. ಈಗ ನಮ್ಮ ರಾಜಕೀಯ ವಿರೋಧಿಗಳು ಆ ಮಾತನ್ನೇ ಹಿಡಿದು ನಮ್ಮ ವಿರುದ್ಧ ಕತ್ತಿ ಕಟ್ಟಿದ್ದಾರೆ. ಇಸ್ಲಾಂ ಹೆಸರಿನಲ್ಲಿ ಅವರು ನಮ್ಮ ವಿರುದ್ಧ ಪ್ರಚಾರ ಮಾಡುವಾಗ ನಾವೂ ಇಸ್ಲಾಂ ಅಭಿಮಾನದಲ್ಲಿ ಅವರಿಗಿಂತ ಕಡಮೆ ಇಲ್ಲವೆಂದು ತೋರಿಸದಿದ್ದರೆ ಜನ ನಮ್ಮನ್ನು ಒದ್ದು ಹೊರಗೆ ಹಾಕುತ್ತಾರೆ. ಅದರಿಂದ ನಾವು ಅವರಿಗಿಂತ ಹೆಚ್ಚು ಗರ್ಜಿಸುತ್ತೇವೆ, ಅವರು ನಮಗಿಂತ ಹೆಚ್ಚು ಗರ್ಜಿಸುತ್ತಾರೆ. ಜನ ಇದೆಲ್ಲ ನಿಜವೆಂದೇ ನಂಬುತ್ತೆ."

"ಆದರೆ ಇದೆಲ್ಲ ಎಲ್ಲಿಯ ತನಕ?"

"ಅದು ನನಗೂ ಗೊತ್ತಿಲ್ಲ. ಆದರೆ ಈ ನಾಟಕ ಚಾಲೂ ಇಡದೆ ಉಪಾಯ ಇಲ್ಲ. ಆಸ್ತಿಯೆಲ್ಲ ಬಿಟ್ಟು ಹಿಂದುಸ್ತಾನದಿಂದ ಇಲ್ಲಿಗೆ ಬಂದು, ಈಗ ಅಧಿಕಾರ ಕಳೆದುಕೊಂಡು ಎಲ್ಲಿ ಹೋಗಲಿಕ್ಕಾಗುತ್ತೆ ಹೇಳು?"

"ಛೀ ಛೀ !"

"ಇಷ್ಟು ನೋಡಪ್ಪ ಸತ್ಯ. ಯಾರ ಮುಂದಾದರೂ ಹೇಳೀಯೆ ಮತ್ತೆ !"

"ಉಂಟೆ ?" ಎಂದು ಲಾಂಗೂಲಾಚಾರ್ಯರು ಎದ್ದು ಹೊರಟರು. ಲಿಯಾಕತರು ರಾಜಕೀಯ ನಗೆಯೊಂದಿಗೆ ಬೀಳ್ಕೊಟ್ಟರು.

## ಉಪಕಾರ ಮಾಡಿ ನೋಡಿ !

ನೀವು ಎಂದಾದರೂ ಯಾರಿಗಾದರೂ ಉಪಕಾರ ಮಾಡಿ ನೋಡಿದ್ದೀರಾ? ಇಲ್ಲ? ಹಾಗಾದರೆ ನೀವು ಪುಣ್ಯವಂತರು; ಅಥವಾ ಕನಿಷ್ಠ ಪಕ್ಷ ಬುದ್ಧಿವಂತರು. ನಿಮಗೆ ಆಗಾಗ್ಗೆ ಯಾರಿಗಾದರೂ ಉಪಕಾರ ಮಾಡುವ ಅದಮ್ಯ ಆಕಾಂಕ್ಷೆ ಉಂಟಾಗುತ್ತದೆಯೆ ? ಇಲ್ಲ ? ಹಾಗಾದರೆ ನೀವು ಮಹಾ ಇಂದ್ರಿಯ ನಿಗ್ರಹಿಗಳು. ಈ ತೀರ್ಮಾನಕ್ಕೆ ನಾನು ಸ್ವಾನುಭವದಿಂದ ಬಂದಿದ್ದೇನೆ. ಉಪಕಾರ ಮಾಡಿ ನಾನು ಸಾಕಷ್ಟು ಸಲ ಕೈ ಸುಟ್ಟುಕೊಂಡಿದ್ದೇನೆ. ಉಪಕಾರ ಮನೋಭಾವವನ್ನು ಸಾಕಷ್ಟು ದೀರ್ಘವಾಗಿ ಚಿಂತಿಸಿ ಅನೇಕ ಸ್ವಾರಸ್ಯವಾದ ಅಂಶಗಳನ್ನು ಕಂಡುಕೊಂಡಿದ್ದೇನೆ. ಈ ಲೋಕದಲ್ಲಿ ಮನುಷ್ಯನು ಸೃಷ್ಟಿಸಿಕೊಂಡ ಅನೇಕ ಅನಿಷ್ಟ ಸಂಗತಿಗಳಲ್ಲಿ ಉಪಕಾರವೂ ಒಂದು; ಸರಕಾರ, ಬಂಡವಾಳಶಾಹಿ, ಯುದ್ಧ, ಪರಮಾಣು ಬಾಂಬು, ಅಧ್ಯಾತ್ಮ, ದಿಗ್ವಿಜಯ ಇತ್ಯಾದಿ ಅನಿಷ್ಟಗಳ ಸಾಲಿನಲ್ಲಿ ಉಪಕಾರವನ್ನೂ ಸೇರಿಸಬೇಕೆಂದು ನನ್ನ ಮತ. ವಾಸ್ತವಿಕವಾಗಿ ಉಪಕಾರ ಅನ್ನೋದು ಫ್ಯೂಡಲಿಜಂನ ಒಂದು ಸೈಡ್-ಪ್ರೊಡಕ್ಟ್ ಎಂತಲೂ ಬಂಡವಾಳಶಾಹಿಯಲ್ಲಿ ಅದು ವಿರಾಡ್ರೂಪ ತಾಳಿ ಮನುಷ್ಯಕುಲದ ಒಟ್ಟು ದುಃಖ ಸಂಕಟಗಳ ಮೊತ್ತವನ್ನು ಹೆಚ್ಚಿಸುತ್ತದೆಂದೂ ನನ್ನ ತೀರ್ಮಾನ.

ಉಪಕಾರ ಮಾಡಿದ ಪ್ರಥಮ ಅನುಭವ ಬಹುಶಃ ನನಗೆ ಹನ್ನೆರಡು ವರ್ಷದವನಾಗಿದ್ದಾಗ ಬಂದದ್ದು. ನಾನು ಶಾಲೆಯ ಆಟದ ಮೈದಾನದ ಪಕ್ಕದಲ್ಲಿ ನಿಂತು ಫುಟ್‌ಬಾಲ್ ಆಟ ನೋಡುತ್ತಿದ್ದೆ. ನನ್ನ ಕ್ಲಾಸ್‌ಮೇಟ್ ಕೇಶವ ಪೈ ಬಂದು "ಏ ಆಚಾರ್, ಒಂದುಪಕಾರ ಮಾಡೋ" ಎಂದ. ನನ್ನ ಕಿವಿ ನೆಟ್ಟಗಾಯಿತು. ಯಾಕಂದರೆ ಅವೊತ್ತೇ ಮಾಸ್ತರು "ಪರೋಪಕಾರಃ

ಪುಣ್ಯಾಯ, ಪಾಪಾಯ ಪರಪೀಡನಂ" ಎಂಬ ಶ್ಲೋಕವನ್ನು ಹೇಳಿಕೊಟ್ಟು ಮಹಾಭಾರತದ ಕಪೋತಾಖ್ಯಾನದ ಕಥೆಯನ್ನು ವರ್ಣಿಸಿದ್ದರು. ಅದರಲ್ಲಿ ಒಂದು ಕಪೋತ ಪಕ್ಷಿ ಅಡವಿಯಲ್ಲಿ ಮಳೆಯಲ್ಲಿ ಸಿಕ್ಕಿದ ಒಬ್ಬ ಬೇಡನ ಹಸಿವನ್ನು ಹಿಂಗಿಸುವುದಕ್ಕಾಗಿ, ತಾನು ಬೆಂಕಿಯಲ್ಲಿ ಬಿದ್ದು ಮಾಂಸವಾಗುತ್ತದೆ. ತನ್ನ ಜಾತಿಯನ್ನು ಕೊಂದು ತಿನ್ನುವ ಬೇಡನಿಗೆ ಉಪಕಾರ ಮಾಡಲು ತಾನೇ ಜೀವಕೊಟ್ಟ ಈ ಕಪೋತ ಪಕ್ಷಿಯನ್ನು ಮಾಸ್ತರರು ಎಷ್ಟು ಭಾವಪೂರ್ಣವಾಗಿ ಹೊಗಳಿದ್ದರೆಂದರೆ ಆ ಕ್ಷಣ ಯಾರಾದರೂ ಬಂದು ತನಗೆ ಹಸಿವಾಗಿದೆ ಎಂದು ಹೇಳಿದ್ದರೆ ನಾನೇ ಬೆಂಕಿಯಲ್ಲಿ ಬೀಳಲು ತಯಾರಾಗುತ್ತಿದ್ದೆ. ಪುಣ್ಯಕ್ಕೆ ನರಮಾಂಸ ತಿನ್ನುವಷ್ಟು ನಮ್ಮ ಕೇಶವ ಪೈಗೆ ಹಸಿವಾಗಿರಲಿಲ್ಲ. "ನಾನೊಂದು ಆಟ ಆಡಿ ಬರುವವರೆಗೆ ನನ್ನ ಕ್ಲಿಪ್‌ಫಿಕ್ಸ್ ಮಾಡಿದ ರಟ್ಟನ್ನು ಹಿಡಿದುಕೊಂಡಿರು" ಅಂತಷ್ಟೇ ಕೇಶವ ಪೈಯ ಕೇಳಿಕೆಯಾಗಿತ್ತು. ಇಷ್ಟು ಸುಲಭವಾಗಿ ಉಪಕಾರ ಮಾಡುವ ಛಾನ್ಸ್ ಯಾರು ಬಿಟ್ಟಾರು ಹೇಳಿ? ನಾನು ಒಪ್ಪಿದೆ. ರಟ್ಟೂ ಕ್ಲಿಪ್ಪೂ ತೆಗೆದುಕೊಂಡು ಹತ್ತಿರ ಇಟ್ಟುಕೊಂಡು ಆಟ ನೋಡ್ತಾ ಕೂತೆ. ಇತರ ಹುಡುಗರು ಬರುತ್ತಿದ್ದರು. ಹತ್ತಿರ ಕೂತು ಆಟನೋಡಿ ಎದ್ದು ಹೋಗುತ್ತಾ ಇದ್ದರು. ಅರ್ಧ ಗಂಟೆಯ ಮೇಲೆ ಆಟದ ಮೈದಾನದಿಂದ ಕಣ್ಣುಗಳನ್ನು ಪಕ್ಕ ತಿರುಗಿಸುತ್ತೇನೆ: ರಟ್ಟಿನಿಂದ ಕ್ಲಿಪ್ ಕಾಣೆಯಾಗಿದೆ. ಅಷ್ಟರಲ್ಲಿ ಕೇಶವ ಪೈ ಹರಹರ ಎನ್ನುತ್ತಾ ಬಂದು ತನ್ನ ರಟ್ಟೂ ಕ್ಲಿಪ್ಪೂ ಕೇಳಿದ. ನಾನೆಲ್ಲಿಂದ ಕೊಡಬೇಕು? ಇದಾಗಿ ಹದಿನೈದು ದಿನಗಳವರೆಗೆ ಅವನು ನನ್ನನ್ನು ಎಷ್ಟು ಪರಿಯಿಂದ ಪೀಡಿಸಿದ ಅಂದರೆ ಕಡೆಗೆ ನಾನು ನನ್ನ ತಾಯಿಯ ಕರಡಿಗೆಯಿಂದ ಎರಡಾಣೆ ನಾಣ್ಯವನ್ನು ಕದ್ದು ಉಪಕಾರದ ಫಲದಿಂದ ಕೈ ತೊಳೆದುಕೊಂಡೆ. ಅದು ನನ್ನ ಮೊದಲ ಕಳವಾಗಿತ್ತು.

ಆ ದಿನ ನಾನು ಇನ್ನೆಂದಿಗೂ ಪರೋಪಕಾರ ಮಾಡುವುದಿಲ್ಲ ಅಂತ ಪ್ರತಿಜ್ಞೆ ಮಾಡಿದೆ. ಆದರೆ ಮದುವೆ ಮಾಡಿಕೊಳ್ಳದಿರುವುದೂ ಉಪಕಾರ ಮಾಡದಿರುವುದೂ ನಮ್ಮೀ ಬಂಡವಾಳಶಾಹಿ ಸಮಾಜದಲ್ಲಿರುವವರಿಗೆ ಅಸಾಧ್ಯಪ್ರಾಯವಾದದ್ದು. ಸಾಮಾಜಿಕ ಒತ್ತಡಗಳು ನಮ್ಮ ವಿರುದ್ಧ ನಿರಂತರವಾಗಿ ಕೆಲಸ ಮಾಡುತ್ತವೆ. ಎಷ್ಟೋ ವೇಳೆ ಉಪಾಯವಿಲ್ಲದೆ, ಎಷ್ಟೋ ವೇಳೆ ಮಂತ್ರಮುಗ್ಧರಾಗಿ, ನಾವು ವಿವೇಕ ಪಥವನ್ನು ಮರೆತು ಉಪಕಾರದ

ಜಾರುವ ದಾರಿಯಲ್ಲಿ ಕಾಲಿಡುತ್ತೇವೆ. ಜಾರುವ ಅನುಭವ ಉನ್ಮಾದಕರ ವಾಗಿರುತ್ತದೆ. ದಾರಿಯ ಕೊನೆಯಲ್ಲಿರುವ ಹುದಲಲ್ಲಿ ಕಾಲು ತೊಡಸಿಕೊಂಡು ಒದ್ದಾಡುತ್ತಾ ಇನ್ನಾರಾದರೂ ಉಪಕಾರ ಮಾಡಿ ನಮ್ಮನ್ನು ಹೊರಗೆಳೆದರೆ ಸಾಕೆಂದು ಆಶಿಸತೊಡಗುತ್ತೇವೆ.

ಒಂದು ಸಲ ಹೀಗಾಯಿತು. ಸಂಜೆ ಹೊತ್ತು, ಏಕಾದಶಿ. ಅರುವತ್ತು ವರ್ಷದ ಒಬ್ಬ ಮುದುಕಿ ಹಳೇ ಬಟ್ಟೆಗಳ ಮೂಟೆ ಸಹಿತವಾಗಿ ನಮ್ಮ ಓಣಿ ಯಲ್ಲಿ ಬರುತ್ತಿತ್ತು. ನನ್ನ ಹೆಂಡತಿ ಹೀಗೇ ಮಗುವನ್ನು ಆಡಿಸುತ್ತಾ ಹೊರಗೆ ಜಗಲೀ ಮೇಲೆ ಕುಳಿತಿದ್ದಳು. ಉಪಕಾರ ಮಾಡುವ ಚಟವುಳ್ಳವರ ಮೈಯಿಂದ ಒಂದು ವಿಶಿಷ್ಟ ವಾಸನೆ ಹೊರಡುತ್ತಿರಬೇಕೆಂತಲೂ ಉಪಕಾರದ ಅಗತ್ಯವುಳ್ಳವರಿಗೆ ಒಂದೆರಡು ಫರ್ಲಾಂಗು ದೂರದಿಂದಲೇ ಆ ವಾಸನೆಯ ಜಾಡು ಸಿಗುತ್ತಿರಬೇಕೆಂತಲೂ ನನಗೆ ಸಂಶಯ ಇದೆ. ಆ ಮುದುಕಿ ಅತ್ತಿತ್ತ ನೋಡದೆ ನೇರವಾಗಿ ನನ್ನ ಹೆಂಡತಿಯಿದ್ದಲ್ಲಿಗೇ ಬಂದಳು—ವಾಸನೆಯಿಂದ ಆಕರ್ಷಿಸಲ್ಪಟ್ಟವರ ಹಾಗೆ. ಬಂದವಳೇ ಅರ್ಧ ಅರ್ಧ ಅರವ ಕನ್ನಡದಲ್ಲಿ ತಾನು ಉಡುಪಿಯಿಂದ ಬಂದವಳೆಂದೂ ಗೋಕರ್ಣಕ್ಕೆ ಹೋಗಬೇಕಾಗಿದೆ ಯೆಂದೂ ದಿನವಿಡೀ ಉಪವಾಸವೆಂದೂ ಹೇಳಿದಳು. ನನ್ನ ಹೆಂಡತಿಗೆ ಅರ್ಥ ವಾಗದೆ ನನ್ನನ್ನು ಕರೆದಳು. ನಾನು ದುಭಾಷಿಯಾಗಿ ಮುದುಕಿಯ ಹೇಳಿಕೆ ಯನ್ನು ನನ್ನ ಹೆಂಡತಿಗೆ ತಿಳಿಯುವ ಕನ್ನಡಕ್ಕೆ ಭಾಷಾಂತರ ಮಾಡಿ ಹೇಳಿದೆ. ರಾತ್ರಿ ಮಟ್ಟಿಗೆ ನಮ್ಮಲ್ಲಿ ಆಶ್ರಯ ಕೊಟ್ಟರೆ ನಮಗೆ ಇಂದ್ರಲೋಕ ಪ್ರಾಪ್ತಿ ಯಾಗುತ್ತದೆಂದು ಮುದುಕಿ ಆಶ್ವಾಸನ ಕೊಟ್ಟಳು. ಉಪಕಾರದ ಇಂಥಾ ಪ್ರಸಂಗವನ್ನು ನನ್ನ ಹೆಂಡತಿಯಾಗಲಿ ನಾನಾಗಲಿ ಕಳೆದುಕೊಳ್ಳಲು ಸಿದ್ಧರಿರ ಲಿಲ್ಲ. ಮುದುಕಿ ಬ್ರಾಹ್ಮಣಿ; ಏಕಾದಶಿ, ಸ್ನಾನ ಮಾಡದೆ ಇದ್ದರೆ ತಾನು ನರಕಕ್ಕೇ ಹೋಗುವುದು ಖಂಡಿತವಾದದ್ದರಿಂದ ನಾವು ಮರುದಿನಕ್ಕೆಂದು ತುಂಬಿಟ್ಟಿದ್ದ ನಲ್ಲೀ ನೀರಿನ ಡ್ರಂ ತೋರಿಸಿದೆವು. ಮುದುಕಿಗೆ ಜಲಪಿಶಾಚಿ ಹಿಡಿದಿತ್ತೋ ಏನೋ, ಸಾಕು ಸಾಕು ಅಂತ ನಾವು ಬಡಕೊಂಡದ್ದು ಕೇಳದೆ ಇಡೀ ಡ್ರಂ ಖಾಲಿ ಮಾಡಿದಳು. "ಅಯ್ಯೋ, ನಾನು ಕಾವೇರೀ ತೀರ ದಲ್ಲಿ ಹುಟ್ಟಿ ಬೆಳೆದವಳು. ಒಂದು ಬಕೀಟು ನೀರಿನಲ್ಲಿ ಸ್ನಾನ ಮಾಡಿದರೆ ಬಸ್ಸಿನ ಮೈಲಿಗೆ ಹೋದೀತೇ?" ಅಂತ ಅವಳ ವಾದ. ಸರಿ, ಗಜ ಸ್ನಾನ

ಮುಗಿಸಿದ್ದೇ ಒಳಗೆ ಬಂದು, ನೆಲದ ಮೇಲೆ ಅಂಗಾತ ಬಿದ್ದುಕೊಂಡು "ಅಯ್ಯೋ ದಾಹ ದಾಹ !" ಎಂದು ಪ್ರಾರಂಭ ಮಾಡಿದಳು ಮುದುಕಿ. ನನ್ನ ತಮಿಳಿನಲ್ಲಿ ನಾನು ಏನು ಬೇಕು ಎಂದು ಕೇಳಿದ್ದಕ್ಕೆ ಅವಳು ತನ್ನ ಕನ್ನಡ ದಲ್ಲಿ "ಚೊಲ್ಪ ನೋರು ಇದ್ದರೆ ಕೊಡುಂಗೋ. ಇಲ್ಲದಿದ್ದರೆ ನಾನು ಚತ್ತೇ ಓಗುತ್ತದೆ" ಎಂದಳು. ಇಷ್ಟರಲ್ಲೇ ನನ್ನ ಮಿದುಳಲ್ಲಿ ಉಪಕಾರದ ಮದ ಇಳಿದು ಹೋಗಿ ಅಪಾಯದ ಗಂಟೆ ಬಾರಿಸತೊಡಗಿತ್ತು. ಮುದುಕಿಯ ಗಾತ್ರವನ್ನೂ ಅವಳು ಸತ್ತರೆ ಸುಡುವುದಕ್ಕೆ ಬೇಕಾಗಬಹುದಾದ ಕಟ್ಟಿಗೆಯ ಬೆಲೆಯನ್ನೂ ಮಾನಸಿಕ ಲೆಕ್ಕದಿಂದ ಗುಣಿಸಿ ನಾನು "ಏನಾದರೂ ಮಜ್ಜಿಗೆ ಇದ್ದರೆ ಕೊಡು ಮಹಾರಾಯಳೇ" ಅಂತ ನನ್ನವಳಿಗೆ ಹೇಳಿದೆ. ಸುಮಾರು ಒಂದು ಸೇರು ಮಜ್ಜಿಗೆಯನ್ನು ಮುಗಿಸಿದ ಮೇಲೆ ಮುದುಕಿ ಪ್ರಾಣಾಪಾಯ ಸದ್ಯಕ್ಕೆ ತಪ್ಪಿತೆಂದು ಭರವಸೆ ಕೊಟ್ಟಳು. ಆಮೇಲೆ ಫಲಾಹಾರಕ್ಕಾಗಿ ಅರ್ಧ ಸೇರು ರವಾದ ಉಪ್ಪಿಟ್ಟನ್ನು ಬರಿದು ಮಾಡಿ ಮುದುಕಿ ಒಂದು ಬದಿಯಲ್ಲಿ ಮುದುಡಿ ಕೊಂಡು ಗೊರಕೆ ಹೊಡೆಯುತೊಡಗಿದಳು. ಅದರ ಸಪ್ಪಳಕ್ಕೆ ನಮಗಿಬ್ಬರಿಗೂ ನಿದ್ದೆ ಬರಲಿಲ್ಲ. ಮಧ್ಯ ರಾತ್ರಿಗೆ ನನ್ನ ಮಗು ಎದ್ದು ಯಾಕೋ ಕಿರುಚ ತೊಡಗಿತು. ಮುದುಕಿ ಕಣ್ಣು ತೆರೆದು "ಎಂದ ರಗಳೆಯಪ್ಪ ಇದಿ" ಅಂತ ಗೊಣಗಿ "ಈಗಿನ ಎಂಗಸರಿಗೆ ಕೊಳಂದೆಗಳನ್ನ ಸಾಕಲಿಕ್ಕೇ ತೆರಿಯಾದ್" ಅಂತ ಟೀಕೆ ಮಾಡಿದಳು. ಅವಳ ದನಿ ಕೇಳಿಯೇ ಮಗು ಬಾಯಿ ಮುಚ್ಚಿ ಕೊಂಡಿತು ನಮ್ಮ ಕಣ್ಣಿಗೆ ನಿದ್ದೆ ಹತ್ತಿತ್ತಷ್ಟೇ, ಮುದುಕಿ ಎದ್ದು ನಮ್ಮನ್ನ ಎಬ್ಬಿಸಿ ತಂಬಿಗೆ ಕೇಳಿದಳು. ಏಕಾದಶೀ ಉಪವಾಸದ ಅವಶೇಷಗಳನ್ನು ಖಾಲಿಮಾಡಿ ಬಂದು ಸ್ನಾನಕ್ಕೆ ನೀರು ಕೇಳಿದಳು. ನನ್ನ ಹೆಂಡತಿಗೆ ಅಷ್ಟಕ್ಕೇ ಸಾಕಾಗಿ ಹೋಗಿ ಹೇಗಾದರೂ ಮುದುಕಿಯನ್ನು ಕಳಿಸಿದರೆ ಬದುಕಿದೆ ಅಂತ ಬೇಗ ಅಡಿಗೆ ಮಾಡಿ ಮುದುಕಿಗೆ ಪಾರಣೆ ಮಾಡಿಸಿ "ಅಮ್ಮಾ, ಇನ್ನು ಹೋಗಿ" ಎಂದು ಸೂಚನೆ ಕೊಟ್ಟಳು ಮುದುಕಿಗೆ, ನನ್ನ ಹೆಂಡತಿಯ ಆತಿಥ್ಯ, ನಮ್ಮ ಮನೆಯ ವಾತಾವರಣ ಎಷ್ಟು ಮೆಚ್ಚಿಕೆಯಾಗಿತ್ತೆಂದರೆ ಅವಳು ಅಲ್ಲಿಂದ ಕದಲುವುದಕ್ಕೆ ಸಿದ್ಧಳೇ ಆಗಲಿಲ್ಲ. ಅವಳನ್ನು ಹೊರಡಿಸು ವುದಕ್ಕೆ ಅಂದು ಸಂಜೆಯವರೆಗೆ ನಾವು ಮಾಡಿದ ಸಾಮೋಪಾಯಗಳನ್ನು ವಿವರಿಸುವ ಅಪೇಕ್ಷೆ ನನಗೆ ಇಲ್ಲ. ಕೊನೆಗೆ ನಾವು ನಮ್ಮ ನೆರೆಮನೆಯಲ್ಲಿದ್ದವ

ರೊಬ್ಬರ ಸಹಾಯ ಕೇಳಬೇಕಾಯಿತು. ಅವರು ಯಾರಿಗೂ ಉಪಕಾರ ಮಾಡುವವರಲ್ಲವೆಂದು ನಾವು ಯಾವಾಗಲೂ ಅವರನ್ನು ಟೀಕಿಸುತ್ತಿದ್ದೆವು. ಈಗ ಅವರು ಮುದುಕಿಯನ್ನು ಹೊರಡಿಸುವ ಉಪಾಯ ಹುಡುಕಿ ನಮ್ಮನ್ನು ಪಾರುಗಾಣಿಸಿದರು. ಉಪಕಾರ ಮಾಡದ ನಿರ್ಧಾರಣೆಯಿಂದಲೂ ಒಮ್ಮೊಮ್ಮೆ ಉಪಕಾರ ಆಗಬಲ್ಲದು ಅಂತ ಆವೊತ್ತು ನನ್ನ ಪ್ರತೀತಿಗೆ ಬಂತು.

ಇಂಥ ಅನುಭವಗಳನ್ನು ಎಷ್ಟು ಬೇಕಾದರೂ ಬೆಳಸಬಹುದು. ಒಂದು ಕಷ್ಟ ವೆಂದರೆ ಯಾವ ಉಪಕಾರ ಉಪದ್ರವವಾಗಿ ಪರಿಣಮಿಸಬಹುದು ಅಂತ ಊಹಿಸಲಿಕ್ಕೇ ಸಾಧ್ಯವಾಗುವುದಿಲ್ಲ. ಪ್ರತಿ ಸಲವೂ ಹೊಸ ಹೊಸ ತರದ ಸರಳ ಉಪಕಾರಗಳಿಂದ ನಾವು ಹೊಸ ಹೊಸ ಫಜೀತಿ ಪಡುತ್ತೇವೆ. ಬಸ್ ಸ್ಟ್ಯಾಂಡಿನಲ್ಲಿ "ಸ್ವಾಮಿ, ಈ ಕೈಚೀಲ ಸ್ವಲ್ಪ ಹಿಡಕೊಂಡಿರಿ, ಈಗ ಬಂದು ಬಿಡುತ್ತೇನೆ" ಎಂತ ಯಾರೋ ಅಪರಿಚಿತ ನಿಮ್ಮ ಕೈಲಿ ಚೀಲ ಕೊಟ್ಟು ಹೋಗಬಹುದು. ಜೋಕೆ. ಅದನ್ನು ಸ್ವೀಕರಿಸಬೇಡಿ. ಅದರಲ್ಲಿ ಕದ್ದ ಮಾಲು ಇರಬಹುದು; ಕೊಲೆಯಾದವನ ರುಂಡ ಇರಬಹುದು; ಆರೋಪ ನಿಮ್ಮ ತಲೆಯ ಮೇಲೆ ಬರಬಹುದು. ನನ್ನ ಮಿತ್ರರೊಬ್ಬರು ಇಂಥ ಒಂದು ಪ್ರಕರಣದಲ್ಲಿ ಸಿಕ್ಕಿಕೊಂಡು ಪಾರಾಗಬೇಕಾದರೆ ಸಾಕೋ ಸಾಕಾಯಿತು. ನಿಮ್ಮ ಕಾರು ಖಾಲಿಯಾಗಿ ಹೋಗುತ್ತಿದ್ದರೆ, ಮತ್ತು ಸುಂದರಿ ಮಹಿಳೆ ಯೊಬ್ಬಳು ಕೈ ಮಾಡಿ ನಿಲ್ಲಿಸಿ, ನಿಮ್ಮ ದಾರಿಯಲ್ಲೇ ಇರುವ ಇಂಥಾ ಸ್ಥಳದ ವರೆಗೆ ತನ್ನನ್ನು ಒಯ್ಯಬಹುದೇ ಎಂದು ಕೇಳಿದರೆ ಒಮ್ಮೆಲೇ ಹೂಂ ಎನ್ನ ಬೇಡಿ. ಅವಳು ಆಮೇಲೆ ನಿಮ್ಮ ಮೇಲೆ ಏನಾದರೂ ಆರೋಪ ಹೊರಿಸ ಬಹುದು. ಇಂಥ ನಿರುಪದ್ರವಿಗಳಾಗಿ ಕಾಣುವ ಅವಕಾಶಗಳು ಮೂಲೆ ಮೂಲೆಯಲ್ಲೂ ನಿಮಗಾಗಿ ಈ ಜಗತ್ತಿನಲ್ಲಿ ಕಾಯುತ್ತಿರುತ್ತವೆ.

ಇವೆಲ್ಲಾ ಉಪಕಾರ ಮಾಡುವುದರಲ್ಲಿರುವ ಆಕ್ಯುಪೇಶನಲ್ ಹೆಜಾರ್ಡ್ಸ್ ಅನ್ನಬಹುದು. ಆದರೆ ಉಪಕಾರದಲ್ಲಿ ಇನ್ನೂ ಕೆಲ ತಮಾಷೆಯಾದ ಅಂಶ ಗಳಿವೆ. ನೀವು ಯಾರಿಗಾದರೂ ಉಪಕಾರ ಮಾಡಿದರೆ ನಿಮ್ಮ ವಿಷಯದಲ್ಲಿ ಅವರ ನಿಲುವು–attitude–ಹೇಗೆ ಬದಲಾಗುತ್ತದೆ ಎಂದು ನೀವು ಗಮನಿಸಿದ್ದೀರಾ? ಗಮನಿಸದೆ ಇದ್ದರೆ ಒಂದು ಚಿಕ್ಕ ಉಪಕಾರಮಾಡಿ ಪರಿಣಾಮವನ್ನು ಗಮನ ವಿಟ್ಟು ನೋಡಿ. ಯಾರಾದರೂ ತುಂಬ ಹಣದ ಸಂಕಷ್ಟದಲ್ಲಿರುವಾಗ ನಾಲ್ಕು

ಕಾಸು ಸಾಲಕೊಟ್ಟು ನೋಡಿ; ಅಥವಾ ಧರ್ಮಕ್ಕೆ ಕೊಟ್ಟು ನೋಡಿ. ನಿಮ್ಮಿಂದ ಸಾಲ ಇಸಿದುಕೊಂಡವನು ತೊಂಭತ್ತು ಪಾಲು ತಾನಾಗಿ ಅದನ್ನು ವಾಪಸು ಕೊಡುವುದಿಲ್ಲ. ಮಾತ್ರವಲ್ಲ, ನೀವು ಸಾಲ ಕೊಡುವ ಮೊದಲು ನಿಮ್ಮನ್ನು ಕಂಡಾಗ ಮಂದ ಮಧುರ ಸ್ಮಿತದಿಂದ ನಮಸ್ಕಾರ ಮಾಡುತ್ತಿದ್ದವನು ಒಮ್ಮಿಂದೊಮ್ಮೆ ಈಗ ನಿಮ್ಮ ಗುರುತನ್ನು ಮರೆಯುತ್ತಾನೆ. ಆಕಸ್ಮಾತ್ ಮುಖಾಮುಖಿಯಾದರೆ ಯಾವುದೋ ಪ್ರಬಲ ಶಕ್ತಿಯಿಂದ ತಳ್ಳಲ್ಪಟ್ಟ ಹಾಗೆ ಅವನ ಮುಖ ನಿಮ್ಮ ಮುಖದ ವಿರುದ್ಧ ದಿಕ್ಕಿಗೆ ತಿರುಗುತ್ತದೆ. ನಿಮಗೆ ನಮಸ್ಕಾರ ಮಾಡುವುದು ಮಹಾಪಾಪ ಎಂಬುದಾಗಿ ಅವನಿಗೆ ಅನಿಸತೊಡಗುತ್ತದೆ. ಇನ್ನೂ ನೀವು ನಿಮ್ಮ ಸಾಲವನ್ನು ತಿರುಗಿ ಕೇಳುವುದಕ್ಕೆ ಸುರುಮಾಡಿಲ್ಲ ಅನ್ನೋದನ್ನ ಗಮನಿಸಿರಿ. ತಿರುಗಿ ಕೇಳುವುದಕ್ಕೆ ಸುರುಮಾಡಿದಿರೋ ಆಗ ಅದರ ಸ್ವಾರಸ್ಯವೇ ಬೇರೆ. ಬಹಳ ಬೇಗ ನೀವು ಕನಕದಾಸರ ಹಾಗೆ "ಕೊಟ್ಟ ಸಾಲವ ತಿರುಗಿ ಕೇಳುವಾತನೆ ಹೊಲೆಯ" ಅಂತ ಮನಗಾಣುತ್ತೀರಿ. ಸೌಮ್ಯವಾಗಿ ಕೇಳಿದರೆ "ನೆನಪಿದೆ, ತಂದುಕೊಡುತ್ತೇನೆ" ಎಂದು ಉತ್ತರಬರುತ್ತದೆ. ಎರಡನೇ ಸಲ ಕೇಳಿದರೆ "ಮಹಾರಾಯರೆ, ನಿಮ್ಮ ಹಣ ಮುಳುಗಿಸುವುದಿಲ್ಲ" ಎಂದು ಉತ್ತರ ಬರುತ್ತದೆ. ಮೂರನೇ ಸಲ ಕೇಳಿದರೆ "ಏನು, ಕಂಡಲ್ಲೆಲ್ಲ ಕೇಳುತ್ತೀರಿ ? ನಾಲ್ಕು ಜನರ ಎದುರು ನನ್ನ ಮರ್ಯಾದೆ ಕಳೆಯುವುದನ್ನು ನಾನು ಸಹಿಸುವುದಿಲ್ಲ. ಹಾಗೇನಾದರೂ ಇದ್ದರೆ ಕೋರ್ಟಿಗೆ ಹೋಗಿ ವಸೂಲು ಮಾಡಿಕೊಳ್ಳಿ" ಎಂದು ಉತ್ತರ ಬರಬಹುದು. ಇಲ್ಲ. ನೀವು ಹಣ ವಾಪಸ್ಸು ಕೇಳಲಿಲ್ಲ ಎಂದಿಟ್ಟುಕೊಳ್ಳಿ. ಆಗ ನಿಮ್ಮನ್ನು ಅವರು ಹೆಡ್ಡನೆಂದಾಗಲಿ ಹೇಡಿಯೆಂದಾಗಲಿ ಕೆಲಸಕ್ಕೆ ಬಾರದವನೆಂದಾಗಲಿ ತಿಳಿದುಕೊಳ್ಳುತ್ತಾರೆ.

ಸಾಲದ ಮಾತು ಬಿಡಿ. ಹಾಗೇ ಮಾಡುವ ಉಪಕಾರದ ಅವಸ್ಥೆಯೂ ಬೇರೆ ಆಗುವುದಿಲ್ಲ. ನೀವು ಒಬ್ಬರಿಗೆ ಕಷ್ಟದಲ್ಲಿರುವಾಗ ಹತ್ತು ಸಲ ಸಹಾಯ ಮಾಡುತ್ತೀರಿ. ಹನ್ನೊಂದನೇ ಸಲ ನಿಮಗೆ ಸಾಧ್ಯವಾಗುವುದಿಲ್ಲ. ಅವರಿಗೆ ಆಗ ಭಯಂಕರವಾದ ಸಿಟ್ಟು ಬರುತ್ತದೆ. ಆಮೇಲೆ ಅವರು ನಿಮ್ಮ ಬೆನ್ನ ಹಿಂದೆ ನಿಮ್ಮನ್ನು ಟೀಕಿಸಲು ಪ್ರಾರಂಭಿಸುತ್ತಾರೆ. ನೀವು ಅವರ ಹಕ್ಕಿನ ಅಂಶವನ್ನೇನೋ ಕಸಿದುಕೊಂಡಿರಿ ಅಂತಲೇ ಅವರಿಗೆ ಅನಿಸುತ್ತದೆ.

ಹೀಗೆಲ್ಲಾ ಯಾಕೆ ಆಗುತ್ತದೆ ? ಮನುಷ್ಯರು ನಿಜವಾಗಿ ಅಂಥಾ ದುಷ್ಟ

ಪ್ರಾಣಿಗಳೇ ? ಹಾಗೇನೂ ಅಲ್ಲ. ನಿಜ ಎಂದರೆ ಯಾರಿಗೂ ಇನ್ನೊಬ್ಬರಿಂದ ಉಪಕಾರ ಮಾಡಿಸಿಕೊಳ್ಳುವುದು ಮನಸ್ಸಿಗೆ ಹಿತ ಎನಿಸುವುದಿಲ್ಲ. ಕೊಡುವವನ ಕೈ ಮೇಲೆ ಎಂಬ ಗಾದೆಯೇ ಉಂಟಲ್ಲ. ಪ್ರಸಂಗದ ಒತ್ತಾಯದಿಂದ ನಾವು ಇತರರಿಂದ ಸಹಾಯ ಪಡೆಯಬಹುದು. ಆದರೆ ಇದರ ಫಲವಾಗಿ ನಾವು ಅವರಿಗೆ ಋಣಿಯಾಗುತ್ತೇವೆ. ಅವರಿಗಿಂತ ನಾವು ಕೆಳಗೆ ಎಂದು ನಮ್ಮ ಅಹಂಕಾರ ನಮ್ಮನ್ನು ತಿವಿಯತೊಡಗುತ್ತದೆ. ಆ ವರೆಗೂ ಎಷ್ಟೋ ವಿಷಯದಲ್ಲಿ ನಾವು ನಮ್ಮ ಉಪಕಾರಿಗಿಂತ ಶ್ರೇಷ್ಠರು ಅಥವಾ ಆತನಿಗೆ ಸಮಾನರು ಅಂತ ತಿಳಿದುಕೊಂಡಿದ್ದವರು ಈಗ ಅವನಿಗಿಂತ ಕೀಳರು ಅನ್ನುವ ಭಾವನೆಯಿಂದ ಪೀಡಿತರಾಗುತ್ತೇವೆ. ಆಮೇಲೆ ನಮ್ಮನ್ನೇ ನಾವು ತಿರಸ್ಕರಿಸಿಕೊಳ್ಳುವುದಕ್ಕೆ ಆರಂಭಿಸುತ್ತೇವೆ. ಈ ತಿರಸ್ಕಾರ ಆತ್ಮಗ್ಲಾನಿ ನಮ್ಮ ಉಪಕಾರ ಕರ್ತನ ಮೇಲೆ ಸಹಜವಾಗಿ ತಿರುಗುತ್ತದೆ. ಉಪಕಾರವನ್ನಾದರೂ ಲೀಲಾ ಜಾಲವಾಗಿ ಮಾಡಿಬಿಡಬಹುದು; ಆದರೆ ಉಪಕಾರವನ್ನು ಸ್ಮರಿಸುವುದಕ್ಕೆ ಬಹಳ ದೊಡ್ಡ ಮನಸ್ಸು ಬೇಕಾಗುತ್ತದೆ.

ಇದನ್ನೆಲ್ಲಾ ವಿಚಾರಿಸಿದ ಮೇಲೆ ನನ್ನ ಆದರ್ಶ ಸಮಾಜದ ಕಲ್ಪನೆಯಲ್ಲಿ ಉಪಕಾರಕ್ಕೆ ಸ್ಥಾನ ಇರಬಾರದು ಎಂಬುದಾಗಿ ನಿರ್ಧರಿಸಿದ್ದೇನೆ. ಉಪಕಾರ ಮಾಡಿಸಿಕೊಳ್ಳುವ ಅಗತ್ಯ ಯಾರಿಗೂ ಬರಲೇಬಾರದು. ಉಪಕಾರ ಎಂಬುದರಲ್ಲಿ ಕೆಲವರು ದೀನರು, ಇತರರು ದೀನೋದ್ಧಾರಕರು ಎಂಬ ಎರಡೂ ಅಂಶಗಳು ಅಡಕವಾಗಿವೆ. ಉಪಕಾರ ಮಾಡುವವನು ಪುಕ್ಕಟ್ಟೆ ಮಾಡುತ್ತಾನೆಂದು ನೀವು ತಿಳಿದಿದ್ದೀರಾ ? ಇಲ್ಲ. ತನ್ನ ಅಹಂಕಾರಕ್ಕಾಗಿ ಮಾಡುತ್ತಾನೆ. ತನ್ನ ಶ್ರೇಷ್ಠತ್ವವನ್ನು ತನಗೇ ಸಿದ್ಧಮಾಡಿಕೊಳ್ಳಲು ಮಾಡುತ್ತಾನೆ. ಆದ್ದರಿಂದಲೇ ನನ್ನ ಸ್ನೇಹಿತರೊಬ್ಬರು ಹೇಳುವ ಹಾಗೆ ಉಪಕಾರ ಉಪ್ಪುಕಾರವಾಗುತ್ತದೆ. ಉಪಕಾರ ಮಾಡಿಸಿಕೊಂಡವನಿಗೆ ಉಪ್ಪುಪ್ಪು, ಮಾಡಿದವನಿಗೆ ಖಾರ ಖಾರ.

## ಸ್ನಾನಾಸ್ನಾನ ವಿವೇಕಂ

ನೀವು ಆಲಸಿಗರೇ ? ನಿಮಗೆ ಸ್ನಾನ ಮಾಡುವುದೆಂದರೆ ನಾಯಿಯನ್ನೊಯ್ದು ನೀರಿಗೆ ತಳ್ಳಿದಂತಾಗುತ್ತದೆಯೆ ? ಹಾಗಾದರೆ ವಿಜ್ಞಾನ ನಿಮ್ಮ

ಪಕ್ಷದಲ್ಲಿದೆ. ವ್ಯಾಸಾರುವ ವ್ಯಾಸಾರಿಟಿಗೆ ಸೇರಿದವರು ನೀವೆಂದು ಯಾರಾರಾದರೂ ಮೂಗು ಮುರಿದರೆ ನೀವು ನೇರವಾಗಿ ಅಮೆರಿಕದ ಡಾ|| ಓಸ್-ಬೋರ್ನ‍ರನ್ನು ತೋರಿಸಿರಿ. ಈ ವಿದ್ವಾನ್ ತೊಗಲತಜ್ಞರು, ಮೇಲಿಂದಮೇಲೆ ಸ್ನಾನ ಮಾಡುವವರು ಚರ್ಮರೋಗಗಳಿಗೆ ಆಗರವಾಗುವರೆಂದು ಎಚ್ಚರಿಕೆ ಕೊಟ್ಟಿದ್ದಾರೆ ಜಗತ್ತಿನಲ್ಲಿ ಅತಿ ಕಡಿಮೆ ಸ್ನಾನಮಾಡುವ ಜನಾಂಗಗಳೇ ಅತಿ ಕಡಿಮೆ ಚರ್ಮರೋಗವುಳ್ಳ ಜನಾಂಗಗಳೂ ಹೌದಂತೆ. ಸಾಬೂನಂತೂ ಚರ್ಮಕ್ಕೆ ಮೃತ್ಯುವೆಂದು ಅವರು ಕಂಡುಹಿಡಿದಿದ್ದಾರೆ.

ಇದು ಜಗತ್ತಿನ ಅರ್ಥಮಂತ್ರಿಗಳಿಗೆ ಉತ್ತಮ ಆಯುಧವಾಗಿದೆ. ಸಾಬೂನಿನ ಮೇಲೆ ತೆರಿಗೆ ಹೆಚ್ಚಿಸಬೇಕಾದಾಗೆಲ್ಲ ಅವರು ರಾಷ್ಟ್ರದ ಚರ್ಮವನ್ನು ಉಳಿಸುವುದೇ ತಮ್ಮ ಧ್ಯೇಯ ಹೊರತು ಆದಾಯ ಹೆಚ್ಚಿಸುವುದಲ್ಲವೆಂದು ಹೇಳಿಕೊಳ್ಳಬಹುದು. ಪ್ರತಿಯೊಬ್ಬನಿಗೂ ತನ್ನ ತನ್ನ ಚರ್ಮವನ್ನು ಉಳಿಸಿಕೊಳ್ಳುವ ಆಸಕ್ತಿ ಇರುವುದರಿಂದ ಪಾರ್ಲಿಮೆಂಟುಗಳಲ್ಲಿ ಅವರಿಗೆ ಸುಲಭವಾಗಿ ಮಂಜೂರಿ ದೊರೆತೇ ದೊರೆಯುತ್ತದೆ.

ಒಬ್ಬೊಬ್ಬನ ಕೈಬೆರಳ ಮುದ್ರೆಯೂ ಒಂದೊಂದು ತರಹ ಇರುವ ಹಾಗೆ ಪ್ರತಿಯೊಬ್ಬನ ವ್ಯಾ-ನಾರಿಟಿಯೂ ಅವನದೇ ಸ್ಪೆಶಲ್ ಆಗಿರುವುದರಿಂದಲೇ ನಾಯಿಗಳು ಮನುಷ್ಯರನ್ನು ಬೇರೆ ಬೇರೆಯಾಗಿ ಗುರುತಿಸುತ್ತವೆಯೆಂದು ಶುನಕ ತಜ್ಞರ ಹೇಳಿಕೆ. ಡಾ|| ಓಸ್‌ಬೋರ್ನ‍ರ ಶೋಧ ತನ್ನ ಇಚ್ಛಿತ ಪರಿಣಾಮ ಮಾಡಿದರೆ, ನಾಯಿಗಳು ಮಾತ್ರವೇ ಏಕೆ, ಮನುಷ್ಯರು ಕೂಡ ವಾಸನಾಬಲದಿಂದ ಮನುಷ್ಯರನ್ನು ಗುರುತು ಹಿಡಿಯಲು ಸಮರ್ಥರಾಗಬಹುದು. ನೀವು ಒಬ್ಬ ಹುಡುಗಿಯ ಅಥವಾ ಹುಡುಗನ ನಾತವನ್ನು ಮೆಚ್ಚಿದರೆ ಮಾತ್ರ ಅವಳನ್ನು ಅಥವಾ ಅವನನ್ನು ಮದುವೆಯಾಗಬಹುದು. ಇದನ್ನು ಮೂಗಿನ ಮೂಲಕ ಮದುವೆಯಾಗುವುದೆಂದು ಬೇಕಾದರೆ ಕರೆಯಿರಿ. ಜಾತಕದಲ್ಲಿ ಹೆಣ್ಣು ಗಂಡುಗಳ ಗ್ರಹಮಿತ್ರತ್ವದ ಹಾಗೆ ಇದನ್ನು "ವಾಸನಾಮಿತ್ರತ್ವ" ಎಂದು ಹೆಸರಿಸಬಹುದು. ಮನಸ್ಸು ಜನ್ಮಾಂತರದ "ವಾಸನೆ"ಯಿಂದ ಪ್ರಿಯ ಜನರನ್ನು ಗುರುತುಹಿಡಿಯುತ್ತದೆಂದು ಕಾಳಿದಾಸ ಹೇಳುತ್ತಾನೆ. ಓಸ್-ಬೋರ್ನ‍ರ ಉಪದೇಶವನ್ನು ನೀವು ಸ್ವೀಕರಿಸಿದರೆ ಜನ್ಮಾಂತರವೇಕೆ, ಇಹ ಜನ್ಮದ ವಾಸನೆಯಿಂದಲೇ ನೀವು ಈ ಕಾರ್ಯ ಮಾಡಬಹುದು. ಯಾಕಂದರೆ

ಇತರ ವಿಜ್ಞಾನಿಗಳ ತೀರ್ಮಾನದ ಪ್ರಕಾರ ವೈನಾರಿಟಿಯೆಂಬುದು ಬಹಳ ಪ್ರಬಲವಾದ ಕಾಮಪ್ರಚೋದಕ ಪದಾರ್ಥ. ಕೆಲ ಪುರುಷರ ವಾಸನೆಯ ಆಕರ್ಷಣೆಯನ್ನು ಸ್ತ್ರೀಯರು ಪ್ರತಿಭಟಿಸಲೇ ಆರರು.

ಡಾ॥ ಓಸ್‌ಬೋರ್ನರ ಸಾಬೂನುರಹಿತ ಜಗತ್ತನ್ನು ಸಾಬೂನು ಕಾರಖಾನೆಗಳು ಸ್ವಾಗತಿಸಲಿಕ್ಕೆ ಹಿಂಜರಿಯಬಹುದಾದರೂ ಮಕ್ಕಳು ಖಂಡಿತ ವಾಗಿ ಆ ಜಗತ್ತಿನಲ್ಲಿ ಬದುಕಲು ಆಶಿಸುವರು. ದೇವರು ಜೀವಿಗಳನ್ನು ಈ ಭೂಮಿಗೆ ಕಳಿಸುವಾಗ ಸರಿಯಾದ ಪ್ರವೃತ್ತಿಗಳನ್ನು ಇಟ್ಟೇ ಕಳಿಸಿರುತ್ತಾನೆ. ಇದು ನಾಯಿ ಬೆಕ್ಕುಗಳಿಗೆಷ್ಟೋ ಅಷ್ಟೇ ಮನುಷ್ಯರಿಗೂ ಅನ್ವಯಿಸುತ್ತದೆ. ಮಕ್ಕಳು ಎಂದೂ ಸ್ನಾನವನ್ನು ಮೆಚ್ಚುವುದಿಲ್ಲ. ಮುಖ್ಯವಾಗಿ, ಕಿವಿಯ ಹಿಂದೆ, ಕುತ್ತಿಗೆಯ ನೆರಿಗೆ ಮೊದಲಾದ ಸಂಧಿಪ್ರದೇಶಗಳನ್ನು, ಏಕೆ ತಿಕ್ಕಿ ತಿಕ್ಕಿ ತೊಳೆಯಬೇಕೆಂದು ಅವರಿಗೆ ಅರ್ಥವಾಗುವುದೇ ಇಲ್ಲ. ಆದರೆ ನಾಗರಿಕತೆಯ ಸಂಪರ್ಕ ಅವರನ್ನು ದೇವರು ಕೊಟ್ಟ ವಾಸನೆಯಿಂದ ಸೆಳೆದುಕೊಂಡು ಸಾಬೂನಿನ ವಾಸನೆಯ ಬೆನ್ನು ಹತ್ತಿಸುತ್ತದೆ. ಇವರನ್ನು ನಿರ್-ವಾಸಿತರು ಎನ್ನಬೇಕು.

ಭಾರತವಂತೂ ನಿರ್ವಾಸಿತರದೇ ರಾಜ್ಯ. ನಾವು ತ್ರಿಕಾಲಸ್ನಾನದ ಹುಚ್ಚರು. ಮುಸ್ಲಿಮರಿಗೆ ವಾರಕ್ಕೊಮ್ಮೆ ಸ್ನಾನಮಾಡಿದರೆ ಸಾಕೆಂದು ಅವರ ಧರ್ಮ ಪರವಾನಗಿ ಕೊಡುತ್ತದಂತೆ. ಹಿಂದುಗಳಲ್ಲಿಯೂ ಇಂಥ ಜಾಣರು ಇಲ್ಲವೆ ಇಲ್ಲ. "ಚರ್ಮವ ತೊಳೆದರೆ ಕರ್ಮವು ಹೋದೀತೆ?" ಎಂದು ದಾಸರು ಬಡಿದುಕೊಂಡಿದ್ದಾರೆ. ಆದರೆ ನಾವೆಲ್ಲಿ ಆಲಿಸುತ್ತೇವೆ? ತೊಳೆದೂ ತೊಳೆದೂ ಚರ್ಮವನ್ನು ಸವೆಸುತ್ತಲೇ ಇರುತ್ತೇವೆ. ನನ್ನ ಕೇಳಿದರೆ ನಾವು ಹಿಂದುಗಳು ಚರ್ಮವನ್ನು ತಿಕ್ಕೀ ತಿಕ್ಕೀ ಅದರ ಸಂವೇದನಶಕ್ತಿಯನ್ನು ಕಡಿಮೆ ಮಾಡಿಕೊಂಡು, ಸ್ನಾನಪ್ರಿಯವಾದ ಆ ಇನ್ನೊಂದು ಪ್ರಾಣಿಯಂತೆ "ದಪ್ಪಚರ್ಮ" ದವರಾಗಿಬಿಟ್ಟಿದ್ದೇವೆ. ಹಿಂದುಗಳಿಗೆ ಸಾಮಾನ್ಯವಾಗಿ ಯಾವ ಸಂಗತಿಯೂ ಚರ್ಮಕ್ಕೆ ನಾಟುವುದಿಲ್ಲ. ಸೂಕ್ಷ್ಮ ತೊಗಲಿನ ಮುಸ್ಲಿಮರಿಗಿಂತ ದಪ್ಪ ತೊಗಲಿನ ಹಿಂದುಗಳನ್ನು ಆಳುವುದು ಇದೇ ಕಾರಣದಿಂದ ಸುಲಭವಾಗಿರಬೇಕು. ಹಿಂದೂ ಕೋಡಿನ ಮೂಲಕ ಹಿಂದುಗಳು ಮಾಡಿಕೊಳ್ಳಬಹುದಾದ ಹೆಂಡಂದಿರನ್ನು ಮಿತಗೊಳಿಸಿದಂತೆ ಅವರು ಮಾಡಬಹುದಾದ ಸ್ನಾನಗಳಿಗೂ

ಮಿತಿ ಹೇರಿದರೆ ಒಳ್ಳೇದಾಗಬಹುದು.

ಸ್ನಾನದ್ವೇಷಿಗಳಲ್ಲಿ ಮಹಾ ಮಹಾ ಹೆಸರುಗಳು ಬರುತ್ತವೆ. ಇಂಗ್ಲಿಷ್ ಸಾಹಿತ್ಯದಲ್ಲಿ ಅಮರತ್ವಪಡೆದ ಡಾ|| ಸಾಮ್ಯುವೆಲ್ ಜಾನ್‌ಸನ್ನರು ತಮ್ಮ ತೊಗಲಿಗೆ ಮಾತ್ರವಲ್ಲ, ತಮ್ಮ ಅರಿವೆಗಳಿಗೂ ನೀರು ಸಾಬೂನು ತೋರಿಸುವುದಕ್ಕೆ ಏನೂ ಮಹತ್ತ್ವ ಕೊಟ್ಟವರಲ್ಲ. ಅವರ ಚಂಡಿ ಹೆಂಡತಿ ತುಂಬಾ ಸಿಟ್ಟಿಗೆದ್ದ ಸಂದರ್ಭಗಳಲ್ಲಿ ಅವರಿಗೆ ಮಾಡಿಸುತ್ತಿದ್ದ ಹೊಲಸುನೀರಿನ ಅಭಿಷೇಕದ ವೇಳೆಗಳಲ್ಲಿ ಮಾತ್ರ ಅವರ ಮೈ ನೀರಿನ ಸಂಪರ್ಕ ಪಡೆಯುತ್ತಿದ್ದದ್ದು. ಯಾವುದೋ ಸಮಾರಂಭದಲ್ಲಿ ಅವರ ಹತ್ತಿರ ಕುಳಿತಿದ್ದ ಮಹಿಳೆಯೊಬ್ಬಳು "ನಿಮ್ಮ ಮೈ ವಾಸನೆ ಬರುತ್ತದಲ್ಲ" ಎಂದಳಂತೆ. ಡಾ|| ಜಾನ್‌ಸನ್ ಸ್ವಲ್ಪವೂ ಮನಸ್ಸಿಗೆ ಹಚ್ಚಿಕೊಳ್ಳದೆ "ಇಲ್ಲ ತಾಯಿ, ನೀವು ವಾಸನೆ ಬರುತ್ತಿದ್ದೀರಿ, ನಾನು ನಾತ ಹೊಡೆಯುತ್ತಿದ್ದೇನೆ" ಎಂದರು. ಸ್ಪೇನಿನ ರಾಣಿ ಇಸಾಬೆಲ್ಲಾ ಜನ್ಮದಲ್ಲಿ ಮೂರೇ ಸ್ನಾನ ಕಂಡಿದ್ದಳಂತೆ. ಒಂದು, ಅವಳು ಹುಟ್ಟಿದಾಗ; ಎರಡು, ಲಗ್ನವಾದಾಗ; ಮತ್ತು ಮೂರು, ಸತ್ತಾಗ. ಪ್ರಸಿದ್ಧ ಪಾದ್ರಿಯಾದ ಥಾಮಸ್ ಬ್ಲಾಕೆಟ್ಟನ ಕೊಲೆಯಾದಾಗ ಅವನ ಅಂತ್ಯಕ್ರಿಯೆಗಾಗಿ ಅವನ ಉಡುಪು ಬಿಚ್ಚಿದರು. ಆಗವನು ಒಳಗೆ ತೊಟ್ಟಿದ್ದ ಉಣ್ಣೆಬಟ್ಟೆಯಲ್ಲಿ ಹುಳಗಳು ಮಿಜಿಮಿಜಿ ಮಿಡುಗುತ್ತಿದ್ದವು. ಬ್ಲಾಕೆಟ್ಟನು ತನ್ನ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ಎಷ್ಟೋ ವರ್ಷಗಳಿಂದ ಉಡುಪು ಬಿಚ್ಚದೆ ತಪಸ್ಸನ್ನು ತಪಿಸಿದ್ದನಂತೆ. ಇಂಗ್ಲಿಷರು ಸ್ನಾನಮಾಡಲು ಕಲಿತದ್ದು ಭಾರತಕ್ಕೆ ಬಂದ ಮೇಲೆಯೇ ಅಂತೆ. ಇದು ಭಾರತದಿಂದ ಅವರು ಕಲಿತ ಒಂದು ದುಶ್ಚಟ. ಸ್ನಾನದ ಚಟವೇ ಕಡೆಗೆ ಅವರ ಸಾಮ್ರಾಜ್ಯ ಉರುಳಲು ಕಾರಣವಾಗಿರಬಹುದೆ?

ಕ್ರೈಸ್ತ ಪಾದ್ರಿಗಳು ಸ್ನಾನವನ್ನು ಒಂದು ದುರಭ್ಯಾಸವೆಂದು ದಂಡಿಸುತ್ತಿದ್ದ ಕಾಲವೊಂದಿತ್ತು. ಚರ್ಮದ ಬಗ್ಗೆ ಕಾಳಜಿ ಹೆಚ್ಚಿದಂತೆ ಆತ್ಮದ ಬಗ್ಗೆ ನಿಷ್ಕಾಳಜಿ ಹೆಚ್ಚುತ್ತದೆಂದು ಅವರು ಭಾವಿಸಿದ್ದರು. ಆದರೆ ಸ್ನಾನ ವಿರೋಧಿಗಳು ಈ ದೇಶದಲ್ಲಿ ಇದ್ದಿಲ್ಲವೆಂದು ಮಾತ್ರ ತಿಳಿಯಬೇಡಿ. ಜೈನಮುನಿಗಳಲ್ಲಿ ಕೆಲವರು ಅಸ್ನಾನದ ವ್ರತ ತೊಟ್ಟವರಿದ್ದಾರೆ. ಅವರನ್ನು ಮಲಧಾರಿಗಳೆಂದು ಗೌರವಿಸಲಾಗುತ್ತದೆ.

ಸ್ನಾನದ ಚಟವನ್ನು ಆರ್ಯ ದ್ರಾವಿಡರಿಂದಲೇ ಅಂಟಿಸಿಕೊಂಡಹಾಗೆ ಕಾಣುತ್ತದೆ. ಮೊಹೆಂಜೋದಾರೋವಿನಲ್ಲಿ ಒಂದು ಮಹಾಕೆರೆಯಿತ್ತೆಂದು ಅವಶೇಷಗಳು ತೋರಿಸುತ್ತವೆ. ಕೆರೆಗಳು ಸ್ನಾನಕ್ಕಲ್ಲದೆ ಮತ್ತೇತಕ್ಕೆ—ಅದೂ ಪಟ್ಟಣದಲ್ಲಿ? ಅನಂತರ ನೀರು ಕಂಡಲ್ಲೆಲ್ಲ ತೀರ್ಥ ಸ್ಥಾಪಿಸಿ ಮುಳುಗು ಹಾಕುವ ದುರಭ್ಯಾಸ ನಮಗೆ ಅಂಟಿತು. ಗಂಗೆಯಲ್ಲಿ, ಯಮುನೆಯಲ್ಲಿ ಮುಳುಗುಹಾಕುವ ಸಲುವಾಗಿ ಸಾವಿರಾರು ಮೈಲು ಯಾತ್ರೆ ಮಾಡಲು ನಮ್ಮವರು ಸಿದ್ಧರಾದರು. ಎಂಥಾ ಹುಚ್ಚು. ಋಷಿಗಳು ಮುನಿಗಳು ಉಷಃ ಕಾಲದಲ್ಲೇ ನದೀ ಸ್ನಾನಮಾಡುವ ಅಭ್ಯಾಸಕ್ಕೆ ಬಿದ್ದರು. ಇದರಿಂದ ಎಷ್ಟು ಅನಾಹುತಗಳಾದವೋ ಗೊತ್ತಿಲ್ಲ. ಗೌತಮ ಋಷಿ ಬೆಳಗಿನ ಜಾವದಲ್ಲೆದ್ದು ನದಿಗೆ ಸ್ನಾನಕ್ಕಾಗಿ ಹೋಗಿದ್ದರಿಂದಲೇ ಅಲ್ಲವೆ ಇಂದ್ರನ ತೋಳಸೆರೆಯಲ್ಲಿ ಸಕ್ಕರೆ ನಿದ್ದೆ ಸವಿಯುವುದಕ್ಕೆ ಅವನ ಹೆಂಡತಿ ಅಹಲ್ಯೆಗೆ ಚಾನ್ಸ್ ಸಿಕ್ಕಿದ್ದು? ಶ್ರೀಕೃಷ್ಣನು ಸ್ನಾನ ಸಂಪ್ರದಾಯಕ್ಕೆ—ಏನಿಲ್ಲೆಂದರೂ ನದೀ ಸ್ನಾನಕ್ಕೆ—ಕೊನೆತರಲು ಒಂದು ಯತ್ನ ಮಾಡಿದಂತೆ ಕಾಣುತ್ತದೆ. ಯಮುನೆಯ ಮಡುವಿನಲ್ಲಿ ಸ್ನಾನ ಮಾಡುತ್ತಿದ್ದ ಲಲನೆಯರ ಸೀರೆಗಳನ್ನು ಅವನು ಕದ್ದದ್ದು ಇದೇ ಉದ್ದೇಶದಿಂದ. ಆದರೆ ಪುರಾಣಿಕರು ಅವನನ್ನು ಅಪಾರ್ಥ ಮಾಡಿಕೊಂಡರು. ಶರ್ಮಿಷ್ಠೆ ದೇವಯಾನಿಯರ ಜಗಳವೂ ಸ್ನಾನಕ್ಕೆ ಹೋದಲ್ಲೇ ಆಯಿತು. ಇದರ ಫಲವಾಗಿ ಬಡ ಯಯಾತಿ ರಾಜ ಅವರಿಬ್ಬರನ್ನೂ ಮದುವೆಯಾಗಬೇಕಾಗಿ ಬಂದು ಪಡಬಾರದ ಪಾಡು ಪಟ್ಟ. ಆದರೆ ಇದರಿಂದ ಯಾರೂ ಪಾಠ ಕಲಿತ ಹಾಗೆ ಕಾಣಲಿಲ್ಲ. ಮುಂದಿನ ಪುರಾಣಿಕರು ಸ್ನಾನವನ್ನು ಇನ್ನೂ ದೊಡ್ಡ ಹಿಂಸೆಯಾಗಿ ರೂಪಿಸಿದರು. ಅವರು ವೈಶಾಖ, ಕಾರ್ತಿಕ ಮತ್ತು ಮಾಘಮಾಸಗಳಲ್ಲಿ ಉಷಃಕಾಲ ಸ್ನಾನವನ್ನು ವಿಧಿಸಿದರು. ವೈಶಾಖದಲ್ಲೇನೋ ಬೆಳಗಿನ ಜಾವದ ಸ್ನಾನ ಸಹ್ಯವೂ ಇಷ್ಟವೂ ಆಗಬಹುದು. ಆದರೆ ಕಾರ್ತಿಕಸ್ನಾನ ಹಿಂಸೆಯೇ; ಮಾಘ ಸ್ನಾನವಂತೂ ಪುಣ್ಯದ ದುರಾಶೆಯಿಂದ ಅನುಭವಿಸುವ ಚಿತ್ರ ಹಿಂಸೆಯೇ. ಅಮಾನುಷಗಳಿಗೆಯಲ್ಲಿ ಅಮಾನುಷ ಹವೆಯಲ್ಲಿ ಕೊಡುವ ನದೀ ನೀರಿನಲ್ಲಿ ಸ್ನಾನ ಮಾಡಬೇಕೆಂಬ ಅಮಾನುಷ ವಿಧ್ಯೆಯೇ ಕುಂಭ ಮೇಳಗಳಲ್ಲಿ ಲೆಕ್ಕವಿಲ್ಲದ ಪ್ರಾಣಹಾನಿ ಮಾಡುತ್ತ ಬಂದಿದೆ. ತಣ್ಣೀರಿನ ಸ್ನಾನದಲ್ಲಿ ಕಡಿಮೆ ಅಮಾನುಷ ವಿಧಾನವೆಂದರೆ

ಮಧ್ಯಾಹ್ನದ ಹೊತ್ತಿಗೆ ಬಾವಿಯಿಂದ ನೀರು ಮೊಗೆದು ತಲೆಯ ಮೇಲೆ ಸುರಿದು ಕೊಳ್ಳುವುದು ಪಶ್ಚಿಮ ಕರಾವಳಿಯಲ್ಲಿ ಸಾಮಾನ್ಯವಾಗಿರುವ ಈ ಕ್ರಮ ಈಗ ಹೆಚ್ಚು ನಾಜೂಕಾಗಿ ಬಾತ್‌ರೂಮುಗಳಲ್ಲಿ "ಶವರ್‌ಬಾತ್" ರೂಪ ತಾಳಿ ಆಧು ನಿಕೀಕೃತವಾಗುತ್ತಿದೆ. ತಣ್ಣೀರು ಸ್ನಾನದ ಹಿಂಸೆಯನ್ನು ಅಮಾನುಷತೆಯ ಪರ ಮಾವಧಿಗೆ ಒಯ್ದವರೆಂದರೆ ಮಲೆಯಾಳಿಗಳು. ಅವರು ಇಂದು ಹುಟ್ಟಿದ ಮಗು ವನ್ನೂ ತಣ್ಣೀರಲ್ಲಿ ಮುಳುಗಿಸುತ್ತಾರೆ.

ಆದರೂ ಡಾ || ಓಸ್‌ಬೋರ್ನರು ಮಂಜೂರು ಮಾಡಬಹುದಾದ ಒಂದು ಸಂಗತಿಯೆಂದರೆ ಹಿಂದಿನ ಭಾರತೀಯರು ಸಾಬೂನನ್ನು ಅಷ್ಟಾಗಿ ಹಚ್ಚಿಕೊಳ್ಳಲಿಲ್ಲ. ಅವರು ತಣ್ಣೀರು ಸ್ನಾನದೊಡನೆ ಬಿಸಿನೀರ ಮೋಹವನ್ನು ಒಂದು ಲಲಿತಕಲೆಯಾಗಿ ರೂಪಿಸಿಕೊಂಡರು. ಇದೇ ಅಭ್ಯಂಜನ ಅಥವಾ ಅಭ್ಯಂಗ. ಅಭ್ಯಂಗ ಅವರ ಅಪೂರ್ವ ಸೊಗಸುಗಾರಿಕೆಗಳಲ್ಲಿ ಒಂದಾಗಿದೆ. ಅಭ್ಯಂಗ ಅಂದರೆ ಎಣ್ಣೆ-ನೀರು ಮೈಗೆ ಎಣ್ಣೆ ತೀಡಿಕೊಳ್ಳುವುದು, ಗ್ರೀಕರಿಗೂ ಇದ್ದ ಅಭ್ಯಾಸ. ಆದರೆ ಎಣ್ಣೆನೀರಿನ ಸ್ವಾರಸ್ಯ, ಅದೂ ಬಿಸಿನೀರಿನ ಸುಖ ಅವ ರೆಷ್ಟು ಅರಿತಿದ್ದರೊ ಹೇಳುವುದು ಕಷ್ಟ.

ಭಾರತೀಯರಿಗೆ ಎಣ್ಣೆ ಮಜ್ಜನದ ಹುಚ್ಚು ಎಂಥಾದ್ದೆಂದರೆ ಅವರು ಸತ್ತವ ರಿಗೂ ಒಳ್ಳೆಣ್ಣೆ ಹಚ್ಚಿ ಸ್ನಾನಮಾಡಿಸುತ್ತಾರೆ; ಶ್ರಾದ್ಧದಲ್ಲಿ ಪಿಂಡಗಳ ಮೇಲೆ ಎಳ್ಳುಹಿಂಡಿ ನೀರುಬಿಟ್ಟು "ಅಭ್ಯಂಜಂತಾಂ ಪಿತರಃ" ಎನ್ನುತ್ತಾರೆ. ಇನ್ನು ಮನುಷ್ಯರನ್ನು ಬಿಟ್ಟಾರೆಯೆ? ಪ್ರತಿ ಹಬ್ಬಕ್ಕೂ ಬಿಸಿನೀರಿನ ಅಭ್ಯಂಜನವೇ ಇವರಿಗೆ ಮಂಗಲಾಚರಣೆ. "ಎಣ್ಣೆ ಸಿಕ್ಕಲ್ಲಿ ಹಬ್ಬ, ಸಂಕ (ಸೇತುವೆ) ಮುಂದಲ್ಲಿ ಸ್ನಾನ" ಅಂತ ಒಂದು ಗಾದೆಯೇ ಹುಟ್ಟಿದೆ. ಎಣ್ಣೆ ಹಚ್ಚಿಕೊಳ್ಳುವುದರಲ್ಲಿ ಮಲೆಯಾಳಿಗಳು ನಿಸ್ಸೀಮರು. (ಅವರ ವೈದ್ಯರ ಕೈಲಿ ಎಲ್ಲಾ ರೋಗಗಳಿಗೂ ಒಂದೊಂದು ತೈಲ ಇದೆ.) ಅವರು ಇದೀಗ ಎಣ್ಣೆಗುಡಾಣದಿಂದ ಎದ್ದುಬಂದ ವರ ಹಾಗೆ ನೆತ್ತಿಯಿಂದ ಪಾದದವರೆಗೆ ಎಣ್ಣೆ ಹಚ್ಚಿಕೊಂಡು, ಅವನ್ನು ಮೈಯಲ್ಲಿ ಆರಲು ಬಿಡುತ್ತಾರೆ. ಕಡೆಗೆ ತಣ್ಣೀರಲ್ಲಿ ಸ್ನಾನ ಮಾಡಿ ಅದರ ಸೊಗಸನ್ನೆಲ್ಲ ಕೆಡಿಸಿಬಿಡುತ್ತಾರೆ.

ಆದರೆ ನಿಜವಾದ ಸುಖ ಸ್ನಾನಕ್ಕೆ ಬಿಸಿನೀರೇ ಬೇಕು. ಅದು ಉಗುರು ಬೆಚ್ಚಗಿರಬೇಕು. ಏಕಾಂತ ಬಚ್ಚಲಲ್ಲಿ ನಿಮ್ಮ ಪ್ರಿಯ ಕರಗಳು ಅದನ್ನು

ಹಂಡೆಯಿಂದ ಮೊಗೆದು ತಲೆಯಮೇಲೆ ಸುರಿಯಬೇಕು. ಮೈಯನ್ನ ಕಡಲೆ ಹಿಟ್ಟಿನಲ್ಲೋ ಹೆಸರ ಹಿಟ್ಟಿನಲ್ಲೊ ತೊಳೆದುಕೊಂಡರೆ ಸಾಕು. ಸಾಬೂನೇ ಬೇಕೆಂದಿದ್ದರೆ ನಾನು ಗಂಧದ ಸಾಬೂನಿಗಿಂತ ಗ್ಲಿಸರಿನ್ ಸಾಬೂನನ್ನು ಮೆಚ್ಚುತ್ತೇನೆ. ಮೈತೊಳೆದುಕೊಂಡ ಮೇಲೆ ಮೈಯಿಂದ ನೀರು ಪೂರಾ ಜಾರಿಹೋಗುವಷ್ಟು ಜಿಡ್ಡು ಉಳಿಯಬಾರದು, ಒಣಮರವನ್ನು ನೀರಲ್ಲಿ ಮುಳುಗಿಸಿದ ಹಾಗೆ ನೀರು ಅಂಟಿಕೊಳ್ಳಲೂಬಾರದು; ಮೈಮೇಲೆ ಕೆಲ ಕೆಲ ಬಿಂದು ನೀರು ನಿಂತಿರಬೇಕಷ್ಟೇ. ತಲೆ ಒರೆಸಿಕೊಂಡರೂ ಮೈ ಒರಸಿಕೊಳ್ಳಬೇಕಾದ ಗರಜಿ ಉಳಿದಿರಬಾರದು. ಇದು ರಸಿಕರ ಸ್ನಾನ, ಸುಖಸ್ನಾನ. ತೀರ ಬಿಸಿಬಿಸಿ ನೀರು ಹುಯ್ದುಕೊಂಡು ಕೆಂಪುಕೆಂಪಾಗಿ ತೇಕುತ್ತ ಹೊರಬಂದು ಮಲಗಬೇಕಾಗುವಂಥ ಸ್ನಾನ ಅಜ್ಜಯ್ಯಗಳಿಗೆ ಮೆಚ್ಚು. ಅದನ್ನು ಮೊಮ್ಮಕ್ಕಳ ಮೇಲೂ ಹೊರಿಸಲಿಕ್ಕೆ ಅವರು ಯತ್ನಿಸುತ್ತಾರೆ; ಮತ್ತು ಮೊಮ್ಮಕ್ಕಳು ನ್ಯಾಯವಾಗಿಯೆ ಅಂಥಾ ಅಭ್ಯಂಜನವನ್ನು ಬಿಟ್ಟು ಓಡುತ್ತಾರೆ. ಅದು ಅಭ್ಯಂಗವಲ್ಲ; ಸಕತ್ ಶಿಕ್ಷೆ.

ಸುಖಸ್ನಾನ, ಉಗುರುಬೆಚ್ಚನ್ನ ನೀರು, ಅಂದೆನಲ್ಲ, ಆ ಬಗ್ಗೆ ಒಂದು ಸ್ವಾರಸ್ಯ ಕಥೆ ಇದೆ. ನಾರದರು ಒಮ್ಮೆ ರಾವಣನ ಹತ್ತಿರ ಬಂದಿದ್ದರು. ರಾವಣ ಕೇಳಿದ: “ಸ್ವಾಮಿ, ನಾರದರೆ ನಾನು ಜಗತ್ತನ್ನೆಲ್ಲ ಗೆದ್ದೆ. ದೇವತೆಗಳನ್ನು ಕಾಲಿಗೆರಗಿಸಿದೆ. ಆದರೂ ಸುಖ ಅನಿಸಲೊಲ್ಲದು. ಏನು ಮಾಡಿದರೆ ನನಗೆ ಸುಖ ಆದೀತು?”

“ಅದಕ್ಕೆ ಯಾಕೆ ಚಿಂತೆ?” ಅಂದರು ನಾರದರು. “ಇಕೋ ಇವು ಸುಖದ ಬೀಜಗಳು. ಇವುಗಳನ್ನು ಬಿತ್ತು. ಕಾಯಿಗಳನ್ನು ಚೆನ್ನಾಗಿ ಬೆಳೆಯಲಿಕ್ಕೆ ಬಿಟ್ಟು ಆಮೇಲೆ ಪಲ್ಯಮಾಡಿ ತಿನ್ನು. ಪರಮಸುಖ ಸಿಗುತ್ತೆ” ಎಂದು ಉಪದೇಶಿಸಿದರು.

ಬಿತ್ತಿದ. ಬೆಳೆಯಿತು. ಬದನೇಕಾಯಿ ಆಯಿತು. ಬೆಳೆಯಲು ಬಿಟ್ಟು ತಿಂದ. ಇನ್ನೊಮ್ಮೆ ನಾರದರು ಬಂದಾಗ “ತಿಂದೆ ನಾರದರೆ, ಏನೂ ಸುಖವಾಗಲಿಲ್ಲ” ಎಂದು ದೂರಿದ. “ಅವಸರ ಬೇಡ, ಎಲ್ಲ ಸರಿಹೋಗುತ್ತೆ” ಎಂದರು.

ಕೆಲ ದಿನಗಳಲ್ಲಿ ರಾವಣನ ಮೈತುಂಬ ಕಜ್ಜಿ ಆಯಿತು. ತುರಿಕೆಯೋ ತುರಿಕೆ. ನಾರದರು ಮತ್ತೆ ಬಂದರು. ರಾವಣ “ಏನಿದು ನಾರದರೆ, ಭಯಂ

ಕರ ತುರಿಕೆ. ಇದೇ ಏನು ಸುಖ ನೀವು ಹೇಳಿದ್ದು?" ಎಂದು ದೂರಿದ.

"ಅಲ್ಲ, ಸುಖ ಆಗಬೇಕಾದರೆ ಇನ್ನೊಂದು ಪ್ರಯೋಗ ಆಗಬೇಕು. ಬಚ್ಚಲಿಗೆ ಹೋಗಿ ಹದ ಬಿಸಿನೀರನ್ನು ಮೈಗೆ ಹಾಕಿಸಿಕೋ, ಸಂಗಡಲೇ ಸ್ವಲ್ಪ ಸ್ವಲ್ಪ ತುರಿಸಿಕೋ! ಅದಕ್ಕೆ ಮೀರಿದ ಸುಖ ಇಲ್ಲ ಅಂತ ನಿನಗೇ ಗೊತ್ತಾಗುತ್ತೆ" ಎಂದರು ನಾರದರು.

ರಾವಣ ಹಾಗೇ ಮಾಡಿದ.

"ಆ-ಹಾ-ಹಾ-ಹಾ" ಎಂದು ಸುಖಪಟ್ಟ.

ಸ್ನಾನಸುಖ ಮಾತ್ರವಲ್ಲ, ಪ್ರಪಂಚದ ಹೆಚ್ಚಿನ ಸುಖವೆಲ್ಲ ಇದೇ ಬಗೆ ಯದಲ್ಲವೆ?

## ಮೈಸೂರು ದರ್ಶನ

ಲಾಂಗೂಲಾಚಾರ್ಯರು ಮೈಸೂರಿಗೆ ಹೋದರು.

ನೇಪಲ್ಸ್ ನೋಡಿ ಸಾಯಿರಿ ಅಂತ ಯುರೋಪಿಯನ್ನರು ಹೇಳುವ ಹಾಗೆ ಮೈಸೂರು ನೋಡಿ ಸಾಯಿರಿ ಅಂತ ಕನ್ನಡಿಗರು ಹೇಳುತ್ತಾರೆ. ಸಾವು ಬಂದು ಬಾಗಿಲಲ್ಲಿ ಭಿಕ್ಷಾಂ ದೇಹಿ ಅನ್ನುವ ಮುಂಚೆ ಮೈಸೂರು ನೋಡದಿದ್ದರೆ ಇದರ ಸಲುವಾಗಿಯೇ ಇನ್ನೊಮ್ಮೆ ಹುಟ್ಟಬೇಕಾದೀತು ಅಂತ ಹೆದರಿ ಮೈಸೂರಿಗೆ ಹೋಗುವ ಛಾನ್ಸ್ ಬಂದೊಡನೆ ಜಿಗಿದು ಛಾನ್ಸನ್ನು ಹಿಡಿದುಕೊಂಡೆ.

ಮೈಸೂರು ಸೇರಿದೊಡನೆಯೇ ಸುತ್ತು ಕಣ್ಣು ಹಾಯಿಸಿದೆ. ಮತ್ತು ಆಶ್ಚರ್ಯಚಕಿತನಾದೆ. ಒಂದು ಟ್ಯಾಕ್ಸಿ ಮಾಡಿ ಹೋಟೆಲ್ಲಿಗೆ ಹೋದೆ. ನನ್ನ ಆಶ್ಚರ್ಯ ಇನ್ನಷ್ಟು ಹೆಚ್ಚಾಯಿತು. ಈ ಮಹಿಷೂರಿನಲ್ಲಿ ಒಂದೇ ಒಂದು ಮಹಿಷ ವನ್ನಾದರೂ ಮಹಿಷಿಯನ್ನಾದರೂ ನಾನು ಕಾಣಲಿಲ್ಲ. ಎರಡು ದಿನ ತಿರುಗಾಡಿ ದರೂ ನನಗೆ ನಮ್ಮ ನಾಡಿನ ಅಭಿಮಾನಿ ಪ್ರಾಣಿಯ ದರ್ಶನವಾಗಲಿಲ್ಲ. ನಮ್ಮ ಹುಬ್ಬಳ್ಳಿಯಲ್ಲಾದರೆ ದಿನದ ಯಾವುದೇ ಕಾಲದಲ್ಲಿ ಯಾವುದೇ ರಸ್ತೆ ಯಲ್ಲಿ ಒಂದು ಫರ್ಲಾಂಗು ನಡೆಯುವುದರೊಳಗಾಗಿ ನಿಮಗೆ ನಮ್ಮ ದುಗ್ಧ ದಾತ್ರಿಯ ಅಥವಾ ಅವಳ ಪತಿರಾಯನ ದರ್ಶನ ಆಗಿಯೇ ತೀರುತ್ತದೆ. ಮೈಸೂರಲ್ಲೆ ಮಹಿಷದರ್ಶನ ದುರ್ಲಭವಾದರೆ?

ಆದರೆ ಎಲ್ಲಾ ಮಹಿಷ ಮಹಿಷಿಗಳು ಎಲ್ಲಿ ಹೋಗಿವೆ? ಮೈಸೂರು ಕೆರೆಗಳ ಪಟ್ಟಣ ಎಂದು ನೆನಪಾಯಿತು. ದೊಡ್ಡ ಕೆರೆ, ಸಣ್ಣ ಕೆರೆ, ಹದ ಕೆರೆ, ಆ ರಾಯನ ಕೆರೆ, ಈ ರಾಯನ ಕೆರೆ ಇತ್ಯಾದಿಗಳೆಲ್ಲಾ ಇರುವಾಗ ಮಹಿಷ ಪ್ರಪಂಚ ಈ ಕೆರೆಗಳಲ್ಲಿ ಜಲಕೇಳಿಯಲ್ಲಿ ಮಗ್ನವಾಗಿರಬಹುದೆಂದು ಕೆರೆಗಳನ್ನು ಅನ್ವೇಷಿಸುತ್ತ ಹೊರಟೆ. ಯಾವ ಕೆರೆಯಲ್ಲಿಯೂ ಮೊಸಳೆಗಳು ಇಳಿಸಿದ ಒಂದು ಬಿಂದು ಕಣ್ಣೀರು ಕೂಡ ಇರಲಿಲ್ಲ. ರಾಜಕಾರಣಿಗಳು ಹೆಚ್ಚಾಗಿ ಬೆಂಗಳೂರಿನಲ್ಲಿರುವುದರಿಂದ ಸಹಾನುಭೂತಿಪರ ಕಣ್ಣೀರು ಹರಿದು ಬಂದು ಈ ಕೆರೆಗಳನ್ನು ತುಂಬುವ ಹಾಗಿರಲಿಲ್ಲ. ಎಲ್ಲವೂ ಒಣಗಿ ನಿರ್ಜಲಾಂಬುಧಿಗಳಾಗಿವೆ. ಅಮೆರಿಕದ ಆಸ್ಟ್ರೊನಾಟುಗಳು ನೀರಿಲ್ಲದ ಅಂಬುಧಿಗಳನ್ನು ಹುಡುಕುತ್ತ ಚಂದ್ರಲೋಕಕ್ಕೆ ಯಾಕೆ ಹೋದರು, ಮೈಸೂರಿಗೇ ಬರಬಾರದಿತ್ತೇ ಎಂದುಕೊಂಡೆ.

ಮತ್ತೆ ಮಹಿಷ ಪ್ರಶ್ನೆ ತಲೆ ತಿನ್ನತೊಡಗಿತು. ಎರುಮೈನಾಡು ಎಂದು ಕ್ರಿಸ್ತಪೂರ್ವದ ತಮಿಳು ಬರಹಗಳು ಹೆಸರಿಟ್ಟ ಮೈಸೂರಿನ ಎಮ್ಮೆಗಳು ಎಲ್ಲಿ ಹೋದವು? ಮಹಿಷಾಸುರಮರ್ದಿನಿಯು ನೆನಪಾಯಿತು. ಎಲ್ಲಾ ಮಹಿಷಗಳನ್ನು ಮರ್ದಿಸಿ ಚಾಮುಂಡೀ ಬೆಟ್ಟವೇರಿ ಕುಳಿತಳೇ? ಅಥವಾ ಮೈಸೂರಿಗರು ತಮ್ಮ ನಾಡಿನ ಅಭಿಮಾನಿಯನ್ನು ಎಲ್ಲಾದರೂ ಬಚ್ಚಿಟ್ಟು ಅವಳ ಹಾಲನ್ನು ಮಾತ್ರ ಕುಡಿಯುತ್ತಾರೆಯೆ? ತಿಳಿಯಲೇ ಇಲ್ಲ. ಈಗ ನನ್ನ ಮತ-ಬಲದಿಂದ ಆರಿಸಿ ಬಂದ ಎಂಎಲ್‌ಗೆ ಪತ್ರ ಬರೆದು ಹುಬ್ಬಳ್ಳಿಗೆ ಮೈಸೂರೆಂಬ ಹೆಸರಿಡಬೇಕೆಂದೂ ಮೈಸೂರಿಗೆ ಬೇರೇನಾದರೂ ಹೆಸರು ಹುಡುಕಿಕೊಳ್ಳಲು ಹೇಳಬೇಕೆಂದೂ ಒಂದು ಮಸೂದೆಯನ್ನು ಅಸೆಂಬ್ಲಿಯಲ್ಲಿ ತರುವಂತೆ ಸೂಚಿಸಲಿದ್ದೇನೆ.

ಮೈಸೂರಿನಲ್ಲಿ ಕೇ. ಆರ್. ಅದು, ಕೇ. ಆರ್. ಇದು ಎಂದು ಎಲ್ಲೆಲ್ಲಿಯೂ ಏನೇನೋ ಇವೆ. ಇದೇನು ಕೇರು ಎಂದು ಹತ್ತಿರ ಹೋಗುವವನನ್ನು ಕೇಳಿದೆ. ಅತ್ಯಂತ ಅಜ್ಞಾನಿಯಾದ ಬಸವನ ಹುಳವನ್ನು ನೋಡುವಂತೆ ನನ್ನನ್ನು ನೋಡಿ ಆತ ಕೇ. ಆರ್. ಎಂದರೆ ಕೃಷ್ಣರಾಜೇಂದ್ರ ಎಂದು ಹೇಳಿದ. ಈಗ ಕೇ. ಆರ್. ಮಿಲ್ಲು, ಕೇ. ಆರ್. ಆಸ್ಪತ್ರೆಗಳ ರಹಸ್ಯ ತಿಳಿಯಿತು. ಆದರೆ ಕನಿಷ್ಠ ನಾಲ್ವರು ಕೃಷ್ಣರಾಜೇಂದ್ರರಾದರೂ ಇದ್ದರಂತಲ್ಲ ಯಾವ ಕೃಷ್ಣ

ರಾಜೇಂದ್ರ ಅಂತ ಕೇಳಬೇಕೆಂದು ಮಾಡಿದ್ದೆ. ಕೇಳಿದರೆ ಆತ ನನ್ನನ್ನು ಹೊಸೆದು ಹಾಕಿಬಿಡಬಹುದೆಂದು ಹೆದರಿಕೆಯಾಯಿತು. ಕೇ. ಆರ್. ಆಸ್ಪತ್ರೆ ಎಷ್ಟು ವಿಶಾಲ, ಎಷ್ಟು ಸುಂದರವಾಗಿ ಕಾಣಿಸಿತೆಂದರೆ ಅದರೊಳಗೆ ಹೋಗಬೇಕೆನಿಸಿತು. ಆದರೆ ಯಾವ ಟ್ಯಾಕ್ಸಿಯುವನೂ ನನ್ನನ್ನು ಕೆಡವಲಿಲ್ಲವಾಗಿ ನನ್ನ ಆಸೆ ಫಲಿಸಲಿಲ್ಲ.

ರಾಜೇಂದ್ರ ವಿಚಾರ ಬಂದ ಮೇಲೆ ಅರಮನೆಯ ವಿಚಾರ ಬಾರದಿರುತ್ತ್ತೆಯೆ? ನಾನು ಮೈಸೂರರಮನೆಯನ್ನು ನೋಡಲು ಹೋದೆ. ಅದರೊಳಗಿನ ಈಗಿನ ನಿವಾಸಿಗಳು ಮಹಾರಾಜರಲ್ಲ. ಕೇವಲ ಶ್ರೀಸಾಮಾನ್ಯರೆಂದು ತಿಳಿದು ಖೇದವಾಯಿತು. ಬಡ ರಾಜಮಹಾರಾಜರು! ಅರಮನೆ ಗೇಟಿನ ಬಳಿ ಹಣಕುತ್ತಿರುವಾಗ ಒಂದು ದನಿ "ಹೇಯ್ ! ಎಲ್ಲಿ ಹೋಗುತ್ತೀ ?" ಎಂದು ಕೇಳಿತು. ಅಡ್ಡಿಯಿಲ್ಲ, ರಾಜರು ಹೋದರೂ ರಾಜದರ್ಪ ಹೋಗಿಲ್ಲ. ಅಂತ ಆ ಧ್ವನಿಯ ಮಾಲಿಕನ ಕಡೆ ತಿರುಗಿ "ಬರೀ ನೋಡುತ್ತಿದ್ದೆ ಇದೇ ಮೈಸೂರರಮನೆಯೊ ?" ಎಂದು ಹಳ್ಳೀಮುಕ್ಕನ ಹಾಗೆ ಪ್ರಶ್ನಿಸಿದೆ. "ಹೌದೌದು. ಒಳಗೆ ಪ್ರವೇಶವಿಲ್ಲ!" ಎಂದು ರಾಜಠೀವಿಯ ಕಾವಲುಗಾರ ಹೇಳಿದ. ಆದರೆ ತಲಾ ೬೦ ಪೈಸಾ ಕೊಟ್ಟು ಪರ್ಮಿಶನ್ ತೆಗೆದುಕೊಂಡು ಹೋಗಬಹುದು—ಎಂದು ಅಪ್ಪಣೆಯಾಯಿತು. ನಾನು ಮೆಲ್ಲಗೆ ಸೈಡ್ ಗೇಟಿನೊಳನೆ ನುಸುಳಿದೆ. ಅಲ್ಲಿದ್ದ ಇನ್ನೊಬ್ಬ ನನ್ನ ಮತ್ತು ನನ್ನ ಸಂಗಡಿಗನ ಕೈಯಿಂದ ಒಟ್ಟು ೧.೨೦ ಪೈಸಾ ತೆಗೆದುಕೊಳ್ಳುವಾಗ ಪೋಲೀಸಪ್ಪ ಆಚೆ ಕಡೆ ನೋಡುತ್ತಿದ್ದ. ನಾನು ರಶೀದಿ ಕೇಳಿದೆ. ಅರಮನೆಗಳ ಪರಿಸರದಲ್ಲಿ ಹಣದಷ್ಟು ವಿನಯ ಪ್ರಚೋದಕ ಔಷಧಗಳು ಬೇರೆ ಇಲ್ಲ. "ಸಾರ್, ರಶೀದಿ ಎಲ್ಲೀದೂ ಸಾರ್? ಇದೆಲ್ಲಾ ಅನ್ ಅಫೀಶಿಯಲ್ಲು. ನೀವು ಹೀಗೇ ಫುಟ್‌ಪಾತಿನ ಮೇಲೆ ಸುತ್ತು ಹಾಕುತ್ತಾ ಕುದುರೆ ಲಾಯ, ದರ್ಬಾರ್ ಹಾಲ್ ...ಎಲ್ಲಾ ನೋಡಿಕೊಂಡು ಆಚೇ ಗೇಟಿನಿಂದ ಹೊರಬಿದ್ದು ಉದ್ದಕ್ಕೆ ಹೋದರೆ ಝೂ ಸಿಕ್ಕುತ್ತೆ" ಎಂದು ನನ್ನ ನಿಜವಾದ ಸ್ಥಾನ ಝೂನೇ ಎಂಬ ಹಾಗೆ ನನ್ನನ್ನು ನೋಡಿದ. ಆತ ಹೇಳಿದ ಹಾದಿಯಲ್ಲಿ ಹೋದರೆ ಯಾವುದೇ ಕಟ್ಟಡಕ್ಕೆ ೨೦೦ ಅಡಿಗಿಂತ ಹತ್ತಿರವಾಗುವ ಹಾಗಿರಲಿಲ್ಲ. ದರ್ಬಾರ್ ಹಾಲ್ ಎದುರುಗಡೆ ಇರುವ ಮಹಾದ್ವಾರದ ಬಳಿ ಹೋದಾಗ ಆ ಚೊಕ್ಕಟ ಕಾಂಪೌಂಡಿನಲ್ಲಿ ಡೆಮಾಕ್ರಸಿ ತನ್ನ ಸ್ಫುಟವಾದ

ಹೆಜ್ಜೆಗಳನಿಟ್ಟ ಗುರುತುಗಳು ಸಿಕ್ಕಿದವು. ಒಂದು ಪುಟ್ಟ ತರಗೆಲೆ ರಾಶಿ, ಕಾಗದದ ಚೂರುಗಳು. ಪ್ರಜಾಸತ್ತೆ ದೀರ್ಘಾಯುವಾಗಲಿ ಎಂದುಕೊಂಡು ಆಚೇ ಗೇಟಿನ ಮೂಲಕ ಝೂ ಕಡೆ ಸಾಗಿದೆ.

ಮೈಸೂರು ಝೂವಿನಲ್ಲಿ ಪ್ರವೇಶಿಸಿದರೆ ದಿನ್ನೇ ಬಲಗಡೆಗೆ ನಿಮ್ಮನ್ನು ಮೊಸಳೆಗಳೂ ಆದರಾಚೆಗೆ ಜಿರಾಫೆಗಳೂ ಸ್ವಾಗತಿಸುತ್ತವೆ. ಹಿಂದಿನ ಜನ್ಮದಲ್ಲಿ ಇವು ಸರಕಾರಿ ನೌಕರರೂ ದಫೇದಾರರೂ ಆಗಿದ್ದವೆಂದು ನನ್ನೊಡನೆ ಇದ್ದವರು ಸ್ಥಳಪುರಾಣ ಹೇಳಿದರು. ಈ ಝೂವಿನಲ್ಲಿ ಅಸಂಖ್ಯ ಮೃಗಪಕ್ಷಿಗಳಿವೆ. ಆದರೆ ದೇಶಿ ಮತ್ತು ಕನ್ನಡ ಪಶುಪಕ್ಷಿಗಳಲ್ಲಿ ಹೆಚ್ಚಿನವುಗಳಿಗೆ ತಮ್ಮ ಸ್ವಭಾಷೆ ಮರೆತು ಹೋಗಿರುವುದರಿಂದ ಅವುಗಳ ಇಂಗ್ಲಿಷ್ ಹೆಸರನ್ನೇ ಕನ್ನಡ ಅಕ್ಷರಗಳಲ್ಲಿಯೂ ಬರೆಯಲಾಗಿದೆ. ಕನ್ನಡ ಮಾಧ್ಯಮ ಈ ಪ್ರಾಣಿಗಳಿಗೂ ಬೇಡವಾದಾಗ ನಾಡಿನ ದ್ವಿಪಾದಿಗಳಿಗೆ ಬೇಕಾದೀತೇ ಎಂದುಕೊಂಡೆ.

ಮೈಸೂರಿನಲ್ಲಿ ನಾನು ನೂರಡಿ ರಸ್ತೆಯನ್ನೂ ನೋಡಿದೆ. "ಈ ರಸ್ತೆ ಎಲ್ಲಿಂದ ಎಲ್ಲೀ ವರೆಗಿದೆ?" ಎಂದು ನನ್ನ ಹತ್ತಿರ ಇದ್ದವರನ್ನು ಕೇಳಿದೆ. ಅವರು ಕೈ ಬೀಸಿ ತೋರಿಸಿದರು. "ಏಳೆಂಟು ನೂರು ಅಡಿ ಇರಬಹುದಲ್ಲವೇ" ಎಂದೆ. "ಹೌದು ಹುಟ್ಟುವಾಗ ಅದು ನೂರೇ ಅಡಿ ಇತ್ತು. ಈಗ ಬೆಳೆದಿದೆ" ಎಂದರು.

ಮೈಸೂರು ದರ್ಶನ ಮಾಡಿ ನಾನು ಬಸ್ಸು ಹತ್ತಿದೆ. (೧೯೭೦)

# ಸನಾತನ ಧರ್ಮ ಮತ್ತು ಸೈಕಲ್

ನಮ್ಮ ಪತ್ರಿಕೆಗಳಿಗೆ ರಾಜಕೀಯದ ಹುಚ್ಚು ತಗಲಿದೆ. ರಾಜಕೀಯ ಜನರ ಭಾಷಣಗಳನ್ನು ವರದಿ ಮಾಡುವುದೇನೋ ಸರಿ. ಆದರೆ ಅವರ ಒಳಜಗಳಗಳನ್ನು ರಂಗುರಂಗಾಗಿ ವರ್ಣಿಸುವುದು, ದೇಶದಲ್ಲಿರುವ ಕೊಳೆಗೇ ಮಹತ್ತ್ವ ಕೊಟ್ಟು ರಾಜಕಾರಣಿಗಳನ್ನು ಹುರಿದುಂಬಿಸುವುದೇ ಮೊದಲಾದ ಅಯೋಗ್ಯ ಕೆಲಸಗಳಲ್ಲೇ ಅವುಗಳು ಮಜಾ ಕಾಣುತ್ತವೆ ಹೊರತಾಗಿ ಇತರ ಧಾರ್ಮಿಕ ಸಾಮಾಜಿಕ ಮಹತ್ತ್ವದ ಪ್ರಶ್ನೆಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಆದರೆ ಕೆಲವು ಪತ್ರಿಕೆಗಳಾದರೂ ಇಂಥ ಕ್ಷಣಿಕ ವಸ್ತುಗಳಿಗೆ ಮರುಳಾಗದೆ ಶಾಶ್ವತ ಪ್ರಶ್ನೆಗಳ ಚರ್ಚೆಗೆ ಎಡೆಕೊಡುತ್ತಿವೆಯೆಂಬುದರಿಂದ ಭಾರತವನ್ನು ಇನ್ನಾದರೂ

ಉಳಿಸುವ ಆಸೆ ಉಂಟೆಂದು ವ್ಯಕ್ತವಾಗುತ್ತದೆ. ಉದಾಹರಣೆಗೆ ಬ್ರಾಹ್ಮಣರು ಮಡಿಯಲ್ಲಿರುವಾಗ ಸೈಕಲ್ ಹತ್ತಬಹುದೆ? ಎಂಬುದು ಶಾಶ್ವತ ಮಹತ್ತ್ವದ ಪ್ರಶ್ನೆಯಾಗಿದೆ. ಇಂಥಾ ಪ್ರಶ್ನೆಯ ಚರ್ಚೆಗೆ ಅವಕಾಶ ಕೊಟ್ಟ ಕಾರವಾರದ ಮರಾಠಿ ಪತ್ರಿಕೆಯೊಂದು ಪ್ರಶಂಸಾರ್ಹವಾದ ಸಾಮಾಜಿಕ ಸೇವೆ ಮಾಡಿದೆ. ಅನೇಕ ಶಾಸ್ತ್ರಾಧಾರಗಳ ಸಹಾಯದಿಂದ ಸೈಕಲ್ ಸವಾರಿ ಧರ್ಮ ಸಮ್ಮತ ವಾಗಿದೆಯೆಂದು ಲೇಖಕರು ಅದರಲ್ಲಿ ಶ್ರುತಪಡಿಸಿದ್ದಾರಂತೆ.

ಮೇಲ್ಕಾಣಿಸಿದ ಲೇಖಕರು ಯಾವ ಯಾವ ಯುಕ್ತಿಗಳಿಂದ, ಶ್ರುತಿ ಸ್ಮೃತಿ ಪುರಾಣಗಳ ಆಧಾರದಿಂದ ಸೈಕಲ್ಲಾರೋಹಣದ ಸಶಾಸ್ತ್ರೀಯತೆಯನ್ನು ಪ್ರಮಾಣೀಕರಿಸಿದ್ದಾರೆಂಬುದು ಮರಾಠಿಗೆ ಅಪರಿಚಿತರಾದ ನಮಗೆ ತಿಳಿಯದು. ಆದರೆ ನಮ್ಮ ಶಾಸ್ತ್ರಗಳಲ್ಲಿ ಅವರಿಗೆ ಸಾಕಷ್ಟು ಆಧಾರಗಳು ದೊರೆತಿರಲೇ ಬೇಕೆಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಪಾಶ್ಚಾತ್ಯರು ಈಚೆಗೆ ತಾವು ಕಂಡು ಹಿಡಿದಿದ್ದೇವೆಂದು ಹೇಳಿಕೊಳ್ಳುವ ಯಂತ್ರಗಳ ವಿಚಾರವೆಲ್ಲವೂ ನಮ್ಮ ಅಥರ್ವಣ ವೇದದಲ್ಲಿ ಸಾಂಗೋಪಾಂಗವಾಗಿ ವಿವರಿಸಲ್ಪಟ್ಟಿದೆಯೆಂಬ ದೃಢ ವಿಶ್ವಾಸ ಲಾಂಗೂಲಾಚಾರ್ಯರಿಗಿದೆ. ವಿಮಾನ, ಪರಮಾಣುಬಾಂಬಾದಿ ಸರ್ವ ವಿಚಾರಗಳೂ ನಮ್ಮ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆಯೆಂದಾದ ಮೇಲೆ ನಮ್ಮ ಪೂರ್ವಜರು ಸೈಕಲ್ಲಿನಂಥ ಯಃಕಶ್ಚಿತ ವಾಹನದ ಸಂಗತಿಯನ್ನು ಬಿಟ್ಟಿರಲು ಶಕ್ಯವೇ ಇಲ್ಲ. ಹಾಗೆ ಕೇಳಿದರೆ ನಮ್ಮ ಒಡ್ಡರ ಬಂಡಿಯ ಎರಡು ಚಕ್ರಗಳನ್ನೇ ಒಂದರ ಮುಂದೆ ಒಂದನ್ನು ಹಚ್ಚಿದರೆ ಅದೇ ಸೈಕಲ್ ಅಲ್ಲವೆ? ಮೊನ್ನೆ ಮೊನ್ನೆ ಸ್ಥಾಪಿತವಾದ ನಮ್ಮೂರಿನ ದೇವಾಲಯದ ಮಹಿಮೆ ಕೂಡಾ ಸ್ಕಂದ ಪುರಾಣದ ಸಹ್ಯಾದ್ರಿಖಂಡದಲ್ಲಿ ಸಿಗುತ್ತದೆಂದಾದ ಮೇಲೆ, ಸೈಕಲ್ಲು ಆಧುನಿಕ ವೆಂದು ಒಪ್ಪಿದ ಪಕ್ಷದಲ್ಲಿ ಕೂಡ, ಅದರ ಉಲ್ಲೇಖ ಶಾಸ್ತ್ರಗಳಲ್ಲಿ ಇದ್ದೇ ತೀರ ಬೇಕು. ನಮ್ಮ ಶಾಸ್ತ್ರಕಾರರು ತ್ರಿಕಾಲದರ್ಶಿಗಳು.

ನಮ್ಮ ಸನಾತನ ಧರ್ಮದ ರಕ್ಷಣೆಗಾಗಿ ನಾವು ಯಾವ ಕಲ್ಲನ್ನೂ ತಿರುಗಿಸದೆ ಬಿಡಬಾರದು; ಅಂದ ಮೇಲೆ ಸೈ-ಕಲ್ಲನ್ನಂತೂ ತಿರುಗಿಸಿಯೇ ತೀರುವೆವು. ನಮ್ಮ ಸನಾತನ ಧರ್ಮದ ಆಧಾರಸ್ತಂಭಗಳೆಂದರೆ ನಮ್ಮ ಪುರೋಹಿತ ವರ್ಗ. ಅವರಿಗೆ ಸೈಕಲ್ಲುಗಳಿಂದಾಗುವ ಪ್ರಯೋಜನ ಅಷ್ಟಿಷ್ಟಲ್ಲ. ಈ ಆಪದ್ಬಾಂಧವ ವಾಹನದ ಸಹಾಯವಿದ್ದರೆ ಹನ್ನೆರಡು ಹರದಾರಿ ಸುತ್ತಳತೆಯಲ್ಲಿ ಒಂದೇ ದಿನ

ಎಷ್ಟೇ ಶ್ರಾದ್ಧ ಪಕ್ಷ ವಿವಾಹ ಉತ್ತರಕ್ರಿಯೆಗಳಿದ್ದರೂ ಒಬ್ಬನೇ ಪುರೋಹಿತನು ಪೂರೈಸಿಕೊಡಬಲ್ಲನು. ಇದರಿಂದ ಹಳ್ಳಿಗೊಬ್ಬ ಪುರೋಹಿತನನ್ನು ಇಟ್ಟು ಕೊಳ್ಳುವ ಅಗತ್ಯ ಉಳಿಯುವುದಿಲ್ಲ. ಇದು ಮಾನವ ಶಕ್ತಿಯ ಉಳಿತಾಯ ವನ್ನು ಮಾಡುತ್ತದೆ. ಯಜಮಾನರ ಮೇಲಿನ ಭಾರವನ್ನೂ ಕಡಮೆಮಾಡು ತ್ತದೆ. ಏಕೆಂದರೆ ಒಂದೇ ದಿನ ಒಬ್ಬನೇ ಪುರೋಹಿತನಿಗೆ ಹಲವು ಶ್ರಾದ್ಧ ವಿವಾಹಗಳನ್ನು ಮಾಡಿಸಲು ಸಾಧ್ಯವಾಗುವುದಾದರೆ ದಕ್ಷಿಣೆಯ ಪ್ರಮಾಣ ಸಹಜವಾಗಿ ಇಳಿಯುವುದೆಂಬುದು ಸಾಮಾನ್ಯ ವ್ಯಾಪಾರ ನಿಯಮಗಳನ್ನರಿತ ವರಿಗೂ ಗೊತ್ತಿದೆ. ಇದರಿಂದ ಯಜಮಾನರಲ್ಲಿ ನಿತ್ಯನೈಮಿತ್ತಿಕಗಳ ಲೋಪ ಮಾಡುವ ಪ್ರವೃತ್ತಿ ಕಡಮೆಯಾಗುವದು ಮತ್ತು ತನ್ಮೂಲಕ ಸನಾತನ ಧರ್ಮದ ರಕ್ಷಣೆಯಾಗುವುದು. ಪಟ್ಟೇ ಮಡಿಯನ್ನುಟ್ಟು ಅದನ್ನೇ ಎಳೆದು ಗಂಡುಗಚ್ಚೆ ಹಾಕಿ (ಸೈಕಲ್ ಕಚ್ಚೆ ಎಂದೂ ಇದಕ್ಕೆ ಅಪರನಾಮವಿದೆ) ಬಕ್ಕ ಎದೆಯಲ್ಲಿ ಸವಾರಿ ಮಾಡುವ ಪುರೋಹಿತ ಭಟ್ಟರು ಸಾಕ್ಷಾತ್ ಸಂಚಾರಿ ಸನಾತನ ಧರ್ಮದಂತೆ ತೋರುವರು. ಆಮೂಲಾಗ್ರ ಲೋಹಮಯವಾಗಿರು ವುದರಿಂದ ಸೈಕಲ್ಲು ಶುದ್ಧ ಮಡಿಯಾದ ವಾಹನ. ಆದರ ಸೀಟಿನ ಮೇಲೆ ಮಾತ್ರ ಯಾವ ಪ್ರಾಣಿಯದೆಂದು ಸರಿಯಾಗಿ ತಿಳಿಯದ ಮತ್ತು ಆ ಕಾರಣ ದಿಂದ ಮೈಲಿಗೆ ಎನಿಸಬಹುದಾದ ಚರ್ಮದ ಹೊದಿಕೆ ಇರುತ್ತದೆ. ಕೃಷ್ಣಾಜಿನದ ಹೊದಿಕೆಯನ್ನು ಅದರ ಮೇಲೆ ಆಚ್ಛಾದಿಸುವ ಮೂಲಕ ಈ ಮೈಲಿಗೆ ಸಮಸ್ಯೆ ಯನ್ನು ತೃಪ್ತಿಕರವಾಗಿ ನಿವಾರಿಸಬಹುದು. ಬಿಲಾರ್ರವರ ಹಿಂದುಸ್ತಾನ್ ಸೈಕಲ್ಲು ಚಿಗರೆಯ ಹಿಂದೆ ಓಡುವುದನ್ನು ನೀವು ರೈಲ್ವೇ ಸ್ಟೇಶನ್ನುಗಳಲ್ಲಿ ಬರೆಸಿದ ಜಾಹೀರಾತುಗಳಲ್ಲಿ ನೋಡಿದ್ದೀರಿ. ತಮ್ಮ ಸೀಟುಗಳಿಗಾಗಿ ಮಡಿ ಚರ್ಮವನ್ನು ಪಡೆಯಲಿಕ್ಕೆಂದೇ ಆ ಸೈಕಲ್ಲು ಚಿಗರೆಯ ಬೆನ್ನಟ್ಟುತ್ತಿದೆಯಂತೆ! ಹೇಗೇ ಇದ್ದರೂ ಬಿಲಾರ್ರವರಿಗೆ ಒಂದು ಸೂಚನೆ ಕೊಟ್ಟರೆ ಅವರು ಸ್ಪೆಷಲ್ ಪುರೋಹಿತ ಬ್ರಾಂಡ್ ಕೃಷ್ಣಾಜಿನ ಚರ್ಮಾಚ್ಛಾದಿತ ಶುದ್ಧ ಮಡಿ ಸೈಕಲ್ಲು ಗಳನ್ನು ತಯಾರಿಸದಿರರು.

# ಮಾದರಿ ಮಡದಿ ಬೇಕೆ?

ಮದುವೆ ಅನ್ನೋದು ಯಾವೊತ್ತು ಆರಂಭವಾಯಿತೋ ಆವೊತ್ತಿನಿಂದ ಮನುಷ್ಯ ಮಾದರಿ ಮಡದಿಯನ್ನು ಕುರಿತು ಕನಸು ಕಾಣುತ್ತ ಬಂದಿದ್ದಾನೆ. ಈ ಕನಸುಗಾರರಿಗೆ ಬೇಕಾದ ಮಡದಿ ಎಂದಾದರೂ ಸಿಕ್ಕಿದಳೋ ಅಂತ ನನಗೆ ಗೊತ್ತಿಲ್ಲ. ನನ್ನೊಬ್ಬ ಮಿತ್ರ ಮಾದರಿ ಮಡದಿಯ ಅನ್ವೇಷಣೆ ಮಾಡುತ್ತ ಇನ್ನೂ ಮಾದರಿ ಬ್ರಹ್ಮಚಾರಿಯಾಗಿಯೇ ಇದ್ದಾನೆ. ಹಿಂದಿನ ಕಾಲದಲ್ಲಿ ಕೆಲವರು ಮಾದರಿ ಮಡದಿಯ ಅನ್ವೇಷಣೆಯಲ್ಲಿ ಇತಿಹಾಸವನ್ನೇ ಬದಲಾಯಿಸಿದರು. ಇಂಗ್ಲೆಂಡಿನ ಎಂಟನೇ ಹೆನ್ರಿ ದೊರೆಯನ್ನೇ ತೆಗೆದು ಕೊಳ್ಳಿ. ಅವನು ಒಬ್ಬಳ ನಂತರ ಒಬ್ಬಳಂತೆ ಆರು ಹೆಂಡಂದಿರನ್ನು ಮಾಡಿ ಕೊಂಡ. ಹಿಂದಿನವರಲ್ಲಿ ಕೆಲವರನ್ನು ಡೈವೋರ್ಸು ಮಾಡಿ ಒಬ್ಬಿಬ್ಬರ ತಲೆ ಯನ್ನೂ ಕಡಿದ. ಇದನ್ನೆಲ್ಲಾ ಇತಿಹಾಸಕಾರರು ಸ್ವಲ್ಪ ಅಸಮಾಧಾನ ದಿಂದಲೇ ವಿಮರ್ಶಿಸಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ, ಆ ಬಡ ದೊರೆ ಉದ್ದಕ್ಕೂ ಮಾದರಿ ಮಡದಿಯನ್ನು ಹುಡುಕುತ್ತ ಇದ್ದ, ಅಷ್ಟೇ ಹೊರತು ಬೇರೆ ದುರುದ್ದೇಶವೇನೂ ಅದರಲ್ಲಿ ಇರಲಿಲ್ಲ. ಈ ಮಾದರಿ ಮಡದಿಯ ಹುಡುಕಾಟದಲ್ಲಿ ಅವನಿಗೂ ಪೋಪನಿಗೂ ಮತಭೇದವಾಗಿ ಇಂಗ್ಲೆಂಡು ಪೋಪನ ಸಲ್ತುಂ ಹರಿದುಕೊಂಡು ಪ್ರೊಟೆಸ್ಟೆಂಟ್ ಪಂಥಕ್ಕೆ ಸೇರಿತು.

ನಮ್ಮ ದಶರಥ ಮಹಾರಾಜನೂ ಅಷ್ಟೇ. ಅವನು ಎಂಟನೇ ಹೆನ್ರಿಯಷ್ಟು ಮುಂದುವರಿಯಲಿಲ್ಲ. ನನಗೆ ತಿಳಿದ ಮಟ್ಟಿಗೆ ಅವನು ಯಾವ ಹೆಂಡತಿಯ ತಲೆಯನ್ನೂ ಕಡಿಯಲಿಲ್ಲ. ಅವನ ಆದರ್ಶದ ಮಾಪಲೆಗೆ ಹತ್ತದೇ ಇದ್ದವ ರನ್ನು ಅವನು ಹಾಗೇ ಇಟ್ಟುಕೊಂಡು ಹೊಸ ಪ್ರಯತ್ನಗಳನ್ನು ಮಾಡಿದ. ಅವನ ಮೂವರು ರಾಣಿಯರು ಈ ಪ್ರಯತ್ನಗಳ ಫಲವೇ. ಅವರಲ್ಲಿ ಕೊನೆ ಯವಳು ಅವನನ್ನು ಪರಲೋಕಕ್ಕೆ ಕಳಿಸಿದಳು.

ಶ್ರೀಕೃಷ್ಣನು ಮಾದರಿ ಮಡದಿಯರ ಅನ್ವೇಷಣೆಯಲ್ಲಿ ಸಂಗ್ರಹಿಸಿದ ಹೆಂಡಂದಿರ ಬರೇ ಕಾರ್ಡ್ಸೈಜ್ ಫೋಟೋಗಳನ್ನು ಶೇಖರಿಸಿದರೆ ಒಂದು ದೊಡ್ಡ ಮ್ಯೂಜಿಯಮ್ಮನ್ನೇ ತುಂಬಬಹುದು. ಕೃಷ್ಣನ ಕಾಲದಲ್ಲಿ ಫೋಟೋ ಗ್ರಾಫರರು ಇದ್ದಿಲ್ಲವಾಗಿ ನಮಗೆ ಅವನ ಮಾದರಿಗಳು ಲಭ್ಯವಾಗುತ್ತ ಇಲ್ಲ.

ಆದು ಹಾಗಿರಲಿ. ಯಾವ ಪೀಳಿಗೆಯವರೂ ಹಿಂದಿನವರ ಅನುಭವದಿಂದ

ಪಾಠ ಕಲಿಯುವುದಿಲ್ಲ. ನೀವು ನಾನೂ ಈ ಅನ್ವೇಷಣೆಯನ್ನು ಮುಂದುವರಿಸಿದವರೇ. ಆದರೆ ನೀವು ಎಂದಾದರೂ ಮಾದರಿ ಮಡದಿ ಹೇಗೆ ಇರಬೇಕು ಅಂತ ಖಚಿತವಾಗಿ ತೀರ್ಮಾನ ಮಾಡಿಕೊಂಡಿದ್ದುಂಟೇ ? ನನ್ನ ಹಾಗೆ ನೀವು ಆಗಿದ್ದರೆ ಸ್ಪಷ್ಟವಾದ ಕಲ್ಪನೆ ನಿಮಗೆ ಇದ್ದಿರಲಿಕ್ಕಿಲ್ಲ, ಇರಲಿಕ್ಕಿಲ್ಲ. ಇದೂ ಎಲ್ಲಾ ಕನಸುಗಳ ಹಾಗೆ ಅಸ್ಪಷ್ಟವಾದದ್ದೇ. ಆದರೆ ಗಟ್ಟಿಯಾಗಿ ಕೂತು ಇದರ ಬಗ್ಗೆ ಪೂರ್ಣ ತೀರ್ಮಾನ ಮಾಡಿಕೊಂಡವರೂ ಇದ್ದಾರೆ. ಒಬ್ಬ ಸಂಸ್ಕೃತ ಕವಿಯ ಪ್ರಕಾರ, ಮಾದರಿ ಮಡದಿಯಲ್ಲಿ ಐದು ಲಕಾರಗಳು ಇರಬೇಕು. "ಅನುಕೂಲಾಂ ವಿಮಲಾಂಗೀಂ ಕುಲಜಾಂ ಕುಶಲಾಂ ಸುಶೀಲಸಂಪನ್ನಾಂ ಪಂಚಲಕಾರಾಂ ಭಾರ್ಯಾಂ" ಅಂತ ಅವನು ಐದು ಬೆರಳುಗಳನ್ನು ಮಡಚಿದ್ದಾನೆ. ಅವಳು ಅನುಕೂಲೆಯಾಗಿರಬೇಕು, ಚಂದವಾಗಿರಬೇಕು. ಒಳ್ಳೇ ವಂಶದಲ್ಲಿ ಹುಟ್ಟಿದವಳಾಗಿರಬೇಕು, ಕೆಲಸಗಳಲ್ಲಿ ಚುರುಕಾಗಿರಬೇಕು, ಮೇಲೆ ಒಳ್ಳೇ ಶೀಲವೂ ಅವಳಿಗಿರಬೇಕು. ಇನ್ನೊಬ್ಬ ಕವಿಗೆ ಈ ಐದು ಲಕಾರಗಳಿಂದ ತೃಪ್ತಿಯಿಲ್ಲ. ಅವನು ಬಹಳ ಮಜಬೂತಾಗಿ ತನ್ನ ಆದರ್ಶ ಹೆಂಡತಿಯಲ್ಲಿ ಇರಬೇಕಾದ ಆರು ಗುಣಗಳನ್ನು ಡಿಫೈನ್ ಮಾಡಿದ್ದಾನೆ. ಅವನು ಹೇಳುವುದನ್ನು ಕೇಳಿ :

ಕಾರ್ಯೇಷು ದಾಸೀ ಕರುಣೇಷು ಮಂತ್ರೀ
ರೂಪೇಚ ಲಕ್ಷ್ಮೀ ಕ್ಷಮಯಾ ಧರಿತ್ರೀ
ಭೋಜ್ಯೇಷು ಮಾತಾ ಶಯನೇಷು ರಂಭಾ
ಷಾಡ್ಗುಣ್ಯ ಯುಕ್ತಾ ಕುಲಧರ್ಮಪತ್ನೀ

ಕೆಲಸ ಮಾಡೋದರಲ್ಲಿ ಅವಳು ದಾಸಿಯ ಹಾಗಿರಬೇಕು, ಗಂಡನಿಗೆ ಆಲೋಚನೆ ಹೇಳೋದರಲ್ಲಿ ಮಂತ್ರಿಯ ಹಾಗಿರಬೇಕು. ರೂಪದಲ್ಲಿ ಸಾಕ್ಷಾತ್ ಲಕ್ಷ್ಮೀದೇವಿಯೇ ಆಗಿರಬೇಕು. ಗಂಡನ ತಪ್ಪುಗಳನ್ನು ಕ್ಷಮಿಸೋದರಲ್ಲಿ ಭೂದೇವಿಯ ಹಾಗಿರಬೇಕು. ಅಡಿಗೆ ಮಾಡಿ ಬಡಿಸೋದರಲ್ಲಿ ತಾಯಿಯಂತಿರಬೇಕು. ಮಲಗುವ ಮನೆಯಲ್ಲಿ ರಂಭೆಯ ಡ್ಯೂಪ್ಲಿಕೇಟ್ ಆಗಿರಬೇಕು.

ಈ ಇಬ್ಬರು ಕವಿಗಳ ಪಟ್ಟಿಗಳಲ್ಲಿ ನೀವು ಯಾವುದನ್ನಾದರೂ ಒಪ್ಪಿಕೊಳ್ಳಬಹುದು ಅಥವಾ ಅವುಗಳಿಗಿಂತಲೂ ಉದ್ದವಾದ ಯಾದಿಗಳನ್ನು ಮಾಡಬಹುದು ನಿಮ್ಮ ನಿಮ್ಮ ಅಭಿರುಚಿಗಳಿಗೆ ಅನುಸಾರವಾಗಿ ನಿಮ್ಮ ಕಲ್ಪನಾ-

ಶಕ್ತಿ ಹೆಚ್ಚಾಗಿದ್ದಷ್ಟೂ ನಿಮ್ಮ ಪಟ್ಟಿ ಬೆಳೆಯುತ್ತದೆ. ಪಟ್ಟಿ ಮಾಡುವುದರಲ್ಲಿ ಅಂಥ ಕಷ್ಟವೇನೂ ಇಲ್ಲ. ಕಷ್ಟಗಳು ಪ್ರಾರಂಭವಾಗುವುದು ನಿಮ್ಮ ಮಾದರಿಯ ಅನ್ವೇಷಣೆಯಲ್ಲಿ ನೀವು ತೊಡಗಿದ ಮೇಲೆ.

ಉದಾಹರಣೆಗೆ, ನಮ್ಮ ಮೊದಲನೇ ಕವಿ ಹೇಳುವ ವಿಮಲಾಂಗೀಂ ಅನ್ನೋದನ್ನೇ ತೆಗೆದುಕೊಳ್ಳಿ. ಚಂದದ ಹೆಂಡತಿ ಬೇಕು ಅಂತ ಯಾವ ಅಷ್ಟಾವಕ್ರ ತಾನೇ ಬಯಸೋದಿಲ್ಲ. ನೀವೂ ನಾನೂ ಅದನ್ನು ಆದರ್ಶ ವಾಗಿಟ್ಟುಕೊಂಡವರೇ ಅಲ್ಲವೇ ? ಆದರೆ ಚಂದ ಅಂದರೇನು ? ನಾನು ಸಣ್ಣವ ನಾಗಿದ್ದಾಗ ನೆರೆಮನೆಯ ಅಜ್ಜಮ್ಮನನ್ನು ಬಹಳ ಚಂದ ಅಂದುಕೊಂಡಿದ್ದೆ. ಅವಳನ್ನೇ ಮದುವೆಯಾಗುತ್ತೇನೆಂತ ವಚನ ಸಹಿತ ಕೊಟ್ಟಿದ್ದೆ. ಪುಣ್ಯಕ್ಕೆ ನಾನು ಪ್ರಾಯಕ್ಕೆ ಬರುವ ಮುಂಚೆಯೇ ಅವಳು ಇಹಲೋಕಯಾತ್ರೆ ಮುಗಿಸಿದ್ದಳು. ಪ್ರಾಯ ಬರುತ್ತ ಬರುತ್ತ ನಾನು ಒಂದು ಸಿನೆಮ ನೋಡಿ ಅದರ ಮುಖ್ಯ ತಾರೆಗೆ ಮನಸೋತೆ. ಆದರೆ ಅಂಥವಳನ್ನೇ ಆಗಬೇಕು ಅಂದುಕೊಂಡೆ. ಇಪ್ಪತ್ತಮೂರು ತುಂಬುವುದರೊಳಗೆ ಬೇರೆ ಬೇರೆ ಸಿನೆಮ ಗಳನ್ನು ನೋಡಿ ನನ್ನ ಸ್ತ್ರೀಸೌಂದರ್ಯದ ಆದರ್ಶವನ್ನು ಏನಿಲ್ಲೆಂದರೂ ಒಂದು ಡಜನ್ ಸಾರೆ ಬದಲಾಯಿಸಿರಬೇಕು.

ಈಗ ನೋಡಿ ನಾನು ಒಬ್ಬ ಸಿನೆಮಾ ನಾಯಿಕೆಯನ್ನು ವಿಮಲಾಂಗಿ ಅಂತ ನಂಬಿಕೊಂಡಿದ್ದಾಗ ನನ್ನ ಅದೃಷ್ಟದಿಂದ ಅವಳ ಪ್ರತಿರೂಪದ ಹುಡುಗಿ ಎಲ್ಲಾದರೂ ಸಿಕ್ಕಿದ್ದರೆ ಮತ್ತು ಅವಳ ತಂದೆ ಅವಳನ್ನು ನನಗೆ ಕೊಡಲಿಕ್ಕೆ ಒಪ್ಪಿ ಮದುವೆ ಆಗಿ ಹೋಗಿತ್ತು ಅಂತ ಇಟ್ಟುಕೊಳ್ಳಿ. ನಾನು ನೋಡಿದ ಇನ್ನೊಂದು ಸಿನೆಮದ ಸ್ಟಾರ್ ಹೆಚ್ಚು ವಿಮಲಾಂಗಿಯಾಗಿ ನನಗೆ ಕಂಡಿದ್ದ ಪಕ್ಷದಲ್ಲಿ ಏನು ಗತಿ ? ಅದು ಹೋಗಲಿ, ಚಂದ ಅಂದರೇನು ? ಕಪ್ಪು ಹುಡುಗಿ ಚಂದವೊ ಬಿಳಿಯವಳೊ ? ಕಪ್ಪಿನವಳು ಚಿನ್ನ ಇಟ್ಟುಕೊಂಡಾಗ ಬಿಳಿ ಹುಡುಗಿ ಬಾವೀ ಹಾರಿಕೊಂಡಳು ಅಂತ ಒಂದು ಗಾದೆಯೇ ಉಂಟಲ್ಲ. ಚೆಲುವಿನ ಬಗ್ಗೆ ನಮ್ಮ ಕಲ್ಪನೆ ಬದಲಾದ ಹಾಗೆ ಹೆಂಡಂದಿರನ್ನು ಬದಲಾ ಯಿಸಲಿಕ್ಕೆ ಸಾಧ್ಯವೇ ?

ಇಷ್ಟೇ ಅಲ್ಲ. ಸೌಂದರ್ಯವನ್ನೇ ಮೆಚ್ಚದೇ ಇರುವ ಅನುಭವಶಾಲಿ ಆದರ್ಶವಾದಿಗಳು ಇದ್ದಾರೆ. "ಭಾರ್ಯಾ ರೂಪವತೀ ಶತ್ರುಃ" ಅಂತ ಒಬ್ಬ

ಹೇಳಿದ್ದಾನೆ. ಶೇಕ್ಸ್‌ಪಿಯರ್ ಕವಿ ಕೂಡ ತನ್ನ ನಾಯಕ ಒಥೆಲ್ಲೋ ಬಾಯಲ್ಲಿ "ಆಲ್‌ಮೋಸ್ಟ್ ಡ್ಯಾಮ್ಡ್ ಇನ್ ಎ ಫೇರ್ ವೈಫ್"—ರೂಪಸಿ ಹೆಂಡತಿಯ ದೆಸೆಯಿಂದ ಹಾಳಾಗಿ ಹೋದ ಅನ್ನಿಸುತ್ತಾನೆ.

ಚಂದ ಹೆಂಡತಿಯ ಮಾತು ಇಷ್ಟಾಯಿತು. ನಮ್ಮ ಮೊದಲನೇ ಕವಿಯ ಪಟ್ಟಿಯಲ್ಲಿ ಅನುಕೂಲಾಂ ಅನ್ನೋದಕ್ಕೆ ಪ್ರಥಮ ಸ್ಥಾನ ಇದೆ. ಅನುಕೂಲೆ ಅಂದರೇನು? ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರುವವಳು ಅಂತಲೇ? ಗಂಡ ರಾತ್ರಿ ಹನ್ನೆರಡು ಮಾಡಿಕೊಂಡು ಬಂದರೂ ಟೈಂ ಎನ್ನದೇ ಬಾಗಿಲು ತೆಗೆದು ಬಿಸಿಬಿಸಿ ಅನ್ನ ಸಾರು ಬಡಿಸಿ, ಅವನು ಮಲಗಿದ ಕೂಡಲೆ ಕಾಲು ನುಪ್ಪುತ್ತ ನಿದ್ದೆಬರಿಸಿ ಆಮೇಲೆ ಹೋಗಿ ಕಸಮುಸುರೆ ಮಾಡುವವಳು ಅಂತಲೋ? ಅಥವಾ ತವರು ಮನೆಯವರಿಂದ ಕಾಡಿ ಬೇಡಿ ತಂದು ಮನೆ ನಡೆಸೋದಕ್ಕೆ ಅನುಕೂಲ ಮಾಡಿಕೊಡುವವಳು ಅನುಕೂಲೆಯೋ? ಅಥವಾ ನಿಮ್ಮ ಮನಸ್ಸಿನಲ್ಲಿ ಏನುಂಟು ಅಂತ ನೀವು ಬಾಯಿ ಬಿಡೋ ಮೊದಲೇ ಊಹಿಸಿ ಅದನ್ನು ಮಾಡುವವಳೇ ಅನುಕೂಲೆಯೋ? ಬಹುಶಃ ನಾವೆಲ್ಲರೂ ಇಂಥಾ ಅನುಕೂಲೆ ಹೆಂಡತಿ ಬೇಕಂತ ಆಶಿಸುವವರೇ. ವಿಶೇಷವಾಗಿ, ನಮ್ಮ ಹೆಂಡಂದಿರು ಹೊಸ ಸೀರೆಗಾಗಿಯೋ, ಬಂಗಾರಕ್ಕಾಗಿಯೋ, ಸಿನೆಮಾ ಕ್ಕಾಗಿಯೋ ನಮ್ಮನ್ನು ಪೀಡಿಸುವ ಮೂಲಕ ಅಮಾದರಿ ಮಡದಿಯರ ಹಾಗೆ ವರ್ತಿಸಿದಾಗೆಲ್ಲಾ ನಾವು ಅನುಕೂಲೆ ಹೆಂಡತಿಗಾಗಿ ಪರಿತಪಿಸು ತ್ತೇವೆ. ನಮ್ಮ ಎರಡನೇ ಕವಿ ಇದನ್ನೇ ಜಳಜಳವಾಗಿ "ಕಾರ್ಯೇಷು ದಾಸಿ" ಅನ್ನೋದು ಅಂತ ತೋರುತ್ತೆ. "ಸಂಬಳ ಕೇಳದ ದಾಸಿ" ಅನ್ನೋ ವಿಶೇಷಣ ವನ್ನು ನಾವು ಅಧ್ಯಾಹಾರವಾಗಿ ಇಟ್ಟುಕೊಳ್ಳಬೇಕಷ್ಟೆ.

ಅವನಿಗೆ ಕಾರ್ಯೇಷು ದಾಸೀ ಮಾತ್ರ ಸಾಲದಂತೆ. ಕರಣೇಷು ಮಂತ್ರಿಯೂ ಬೇಕು ಅನ್ನುತ್ತಾನೆ. ಅವಳು ಅರ್ಧ ರಾತ್ರಿ ವರೆಗೆ ದುಡಿದು ಬಂದು ತೆಪ್ಪಗೆ ಮಲಗಿದರೆ ಮಾತ್ರ ಸಾಲದು. ಅವನ ಅರನಿದ್ದೆಯ ಕಿವಿ ನೆಟ್ಟಗಾಗುವ ಹಾಗೆ ಅವಳು ಅವನ ಕಿವಿ ಕಚ್ಚಬೇಕು. ಅದರಿಂದ ನೋವು ಮಾತ್ರ ಆಗಬಾರದು. ಊರಿನ ಅಪ್ರಾಯಮಾನ ಸುದ್ದಿಗಳನ್ನು ಅವನಿಗೆ ಪಿಸುಮಾತಿನಲ್ಲಿ ಉಸುರಬೇಕು. ಇದನ್ನೇ ಕಾಂತಾ ಸಮ್ಮಿತಿ ಅನ್ನೋದು. ಆಫೀಸಿನಲ್ಲಿ ಕೆಲಸ ಮಾಡದೇ ಬಡತಿ ಪಡೆಯುವ ವಿಷಯದಲ್ಲಿ

ಅವಳು ಆತನಿಗೆ ಅಮೂಲ್ಯ ಸಲಹೆಗಳನ್ನು ನೀಡಬೇಕು. ಮನೆಗೆ ಬಂದು ಝುಂಡಾ ಹೊಡೆದು ಕದಲೋ ಲಕ್ಷಣಾನೇ ತೋರಿಸದೇ ಇರೋ ಸಂಬಂಧಿಕರ ಆರಿಷ್ಟವನ್ನು ತೊಲಗಿಸುವ ಉಪಾಯಗಳ ಬಗ್ಗೆ ಮಂತ್ರಾಲೋಚನೆ ಕೊಡ ಬೇಕು. ಉದಾಹರಣೆಗೆ, ಮರುದಿವಸ ಬೆಳಿಗ್ಗೆ ಎದ್ದ ಕೂಡಲೆ ಆವಳು "ಸಕ್ಕರೆ ಖರ್ಚಾಗಿದೆ" ಅನ್ನಬೇಕು "ಇಷ್ಟು ಬೇಗ ಹೇಗೆ ಖರ್ಚಾಯಿತು? ಮುಕ್ಕಿ ದಿಯಾ?" ಅಂತ ಅವನು ರೇಗಬೇಕು. ಅವಳು ಅತಿಥಿಗಳಿಗೆ ಕೇಳಿಸೋ ಹಾಗೆ "ಮನೆಯಲ್ಲಿ ಕಾಫಿಗೆ ಎಷ್ಟು ಜನ ಇದ್ದಾರೇಂತ ನಿಮಗೇನಾದರೂ ಪರವೆ ಉಂಟೆ?" ಅಂತ ಕುಟುಕಬೇಕು. "ನೀನು ಹಾಳುಗೇಡಿ. ಇದ್ದದ್ದರಲ್ಲೇ ವಿತರಣೆಯಾಗಿ ಸಂಸಾರಮಾಡಲಿಕ್ಕೆ ಗೊತ್ತಿಲ್ಲ" ಅಂತ ಕೂಗಾಡಿ ಅವನು ಟೋಪಿ ಹಾಕಿಕೊಂಡು ಹೊರಡಬೇಕು. ಆವಳು "ನನ್ನ ಹಣೇಬರ" ಅಂತ ಸುರುಸುರು ಅಳಲಿಕ್ಕೆ ಆರಂಭ ಮಾಡಬೇಕು. ನಿಮ್ಮ ಅತಿಥಿಗಳ ತಲೆಯಲ್ಲಿ ಬುದ್ಧಿ ಅನ್ನೋದು ಇದ್ದರೆ ಅವರು ಅರ್ಥ ಮಾಡಿ ಕೊಂಡು ಗಂಟುಮೂಟೆ ಕಟ್ಟುತ್ತಾರೆ. ಅಷ್ಟಕ್ಕೆ ಬಗ್ಗದ ಕಠಿಣ ಕೇಸಾಗಿದ್ದ ಪಕ್ಷದಲ್ಲಿ ಇದಕ್ಕಿಂತಲೂ ಡ್ರಾಸ್ಟಿಕ್ ಉಪಾಯಗಳನ್ನು ಹುಡುಕಿ ತೆಗೆಯೋ ಮಿದುಳು ಮಾದರಿ ಮಡದಿಗೆ ಇರಬೇಕು. ಇದನ್ನೇ ಅಲ್ಲವೇ "ಪ್ರತ್ಯುತ್ಪನ್ನ ಮತಿಃ ಸ್ತ್ರೀಣಾಂ" ಅನ್ನೋದು? ಅಷ್ಟು ಬುದ್ಧಿ ಇಲ್ಲದಿದ್ದರೆ ಆವಳೆಂಥ ಕರಣೇಷು ಮಂತ್ರೀ?

ನಮ್ಮ ಕವಿಗೆ ಭೂದೇವಿಯಷ್ಟೇ ಕ್ಷಮಾಶೀಲಳಾದ ಮಡದಿ ಬೇಕಂತೆ. ದಿನಾ ಬೆಳಗ್ಗೆ ಎದ್ದು ನಾವು ಮೆಟ್ಟಿದರೂ ಭೂದೇವಿ ಪ್ರೊಟೆಸ್ಟ್ ಮಾಡುತ್ತಾಳೆಯೆ? ನಾವು ಬೇರೆ ಹೆಂಗಸರೊಡನೆ ಸರಸವಾಡಿದರೆ ಅವಳು ಜಗಳ ತೆಗೆಯಬಾರದು. ಆಫೀಸಿನಲ್ಲಿ ಮೇಲಿನವರಿಂದ ಒದೆಸಿಕೊಂಡದ್ದನ್ನು ಮನೆಯಲ್ಲಿ ಮಡದಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ನಮಗೆ ಸ್ವಾತಂತ್ರ್ಯ ಇರಬೇಕು.

ಅಷ್ಟೇ ಮಹತ್ತ್ವದ್ದೆಂದರೆ ಮಾದರಿ ಮಡದಿ ನಮ್ಮ ತಾಯಿಯ ಹಾಗೆ ಅಡಿಗೆ ಮಾಡುವವಳಾಗಿರಬೇಕು. ಚಿಕ್ಕಂದಿನಿಂದ ನಮ್ಮ ನಾಲಗೆಯನ್ನು ಪಳಗಿಸೋವಳು ನಮ್ಮ ತಾಯಿ, ಅವಳ ಅಡಿಗೆಗೆ ಉಪ್ಪು ಹೆಚ್ಚಾದರೂ ಹುಳಿ ಕಡಮೆಯಾದರೂ ಖಾರ ಮೂಗಿನಲ್ಲಿ ಗಂಗಾಜಯಂತಿ ಮಾಡಿಸಿದರೂ ನಾವು ಅದಕ್ಕೆ ಒಗ್ಗಿ ಹೋಗಿರುತ್ತೇವೆ. ಆ ಮೇಲೆ ಹೆಂಡತಿ ಬರುತ್ತಾಳೆ.

ಅವಳ ಕೈ ಮಾಸಲೆ ನಮ್ಮ ತಾಯಿಯ ಕೈ ಮಾಸಲೆಯ ಹಾಗೇ ಇರೋದು ಸಾಧ್ಯವೇ ? ನಾವು ಎಷ್ಟಾದರೂ ಅಮ್ಮನ ಹಾಗೆ ಸಾರು ಮಾಡೋಕೆ ನಿನಗೆ ಬರಲ್ಲ ಅಂತ ಅಂದು ತೋರಿಸೋದುಂಟು. ಗಂಡಸರ ಹೃದಯದ ಹೆಬ್ಬಾಗಿಲು ಅವರ ಹೊಟ್ಟೇಲಿದೆ ಅಂತ ಮಾದರಿ ಮಡದಿಗೆ ಗೊತ್ತಿರಬೇಕು, ಖರೇ. ಆದರೆ ಅಮ್ಮನ ಹಾಗೆ ಅಡಿಗೆ ನಿನಗೆ ಬರಲ್ಲ ಅಂತ ಬಿಚ್ಚಿ ಹೇಳೋ ಹುಚ್ಚು ಧೈರ್ಯನ ಎಂಥಾ ಮಾದರಿ ಮಡದಿಯ ಮುಂದೆ ಕೂಡ ತೋರಿಸಬೇಡಿ ಅಂತ ನನ್ನ ವಿನಮ್ರ ಸಲಹೆ ನಿಮಗೆ. ಹೆಂಡಂದಿರು ಏನನ್ನು ಬೇಕಾದರೂ ಸಹಿಸಬಹುದು. ಆದರೆ ಇತರ ಹೆಂಗಸರ ಸಂಗಡ ಅದೂ ನಿಮ್ಮ ತಾಯೀ ಸಂಗಡ ತಮ್ಮನ್ನು ಹೋಲಿಸೋದನ್ನ ಕ್ಷಮಿಸಲಾರರು. ಹಾಗೆ ಮಾಡಿದರೆ ಕ್ಷಮಾಮೂರ್ತಿ ಧರಿತ್ರಿಯೂ ಬಿರುಕು ಬಿಟ್ಟು ಭೂಕಂಪವಾದೀತು. ನನ್ನ ಅಭಿಪ್ರಾಯದಲ್ಲಿ ನಿಮ್ಮ ಹೆಂಡತಿಯ ಅಡಿಗೆಗೆ ನೀವು ಆದಷ್ಟು ಬೇಗ ಮತ್ತು ಸಲೀಸಾಗಿ ಒಗ್ಗಿಕೊಂಡು ಈ ಒಂದು ವಿಷಯದಲ್ಲಾದರೂ ಮಾದರಿ ಗಂಡ ಅನಿಸೋದು ಕ್ಷೇಮ.

ಮೇಲೆ ನಾವು ಚರ್ಚಿಸಿದ ಮಾದರಿಯ ಮಡದಿಯ ಕ್ವಾಲಿಫಿಕೇಶನ್ ಲಿಸ್ಟು ಅಷ್ಟೇನೂ ಪರಿಪೂರ್ಣವಲ್ಲ. ನನ್ನ ಕೇಳಿದರೆ ಈ ಕವಿಗಳು ಅಷ್ಟೇನೂ ರಸಿಕರಲ್ಲ. "ಶಯನೇಷು ರಂಭಾ" ಅನ್ನೋವಷ್ಟಿಗೆ ಅವರ ರಸಿಕತನ ಮುಗಿದು ಹೋಗುತ್ತೆ. ಸಂಗೀತದ ವಿಷಯ ಏನು ? ನನಗಂತೂ ನನ್ನ ಹೆಂಡತಿ ಗಾನ ಸರಸ್ವತಿಯೇ ಆಗಿರಬೇಕೆಂಬ ತವಕ ಇತ್ತು. ಹಾಡಿದರೆ ನನಗೆ ರೋಮಾಂಚ ಆಗಬೇಕು, ಪ್ರಪಂಚವೆಲ್ಲ ಮರೆತುಹೋಗಿ ಸ್ವರ್ಗದಲ್ಲೋ ಅದರ ಹತ್ತಿರವೋ ಎಲ್ಲೋ ಇದ್ದಂತೆ ಅನಿಸಬೇಕು. ಹಾಗೇನೇ ಸಾಹಿತ್ಯದಲ್ಲಿ ನನ್ನ ಸ್ವಂತ ಕವಿತೆಗಳಿಗೆ ಒಳ್ಳೇ ಅಂದರೆ ಆಕಳಿಸದೇ ಇರೋ ಶ್ರೋತೃವಾಗಬೇಕು ಅಂತ ನನ್ನ ಅಭಿಲಾಷೆಯಾಗಿತ್ತು. ಅವಳೇ ಸ್ವತಃ ಕವಿತೆ ಬರೆಯುವವಳಾಗಬೇಕೆಂದೇನೂ ನನಗೆ ಇಷ್ಟ ಇರಲಿಲ್ಲ. ನನ್ನ ಮನೆಯಲ್ಲೇ ನನ್ನ ಸಂಗಡ ಕಾಂಪಿಟೇಶನ್ ಮಾಡೋ ಮಾದರಿ ಮಡದಿ ನನಗೆ ಬೇಕಾಗಿರಲಿಲ್ಲ.

ಹೀಗೆ ಮಾದರಿ ಮಡದಿಯ ಚಿತ್ರವನ್ನು ನಾನು ಎಷ್ಟು ಬೇಕಾದರೂ ವಿಸ್ತರಿಸುತ್ತ ಹೋಗಬಲ್ಲೆ. ಆದರೆ ಏನು ಪ್ರಯೋಜನ? ನೀವು ಮಾದರಿ ಮಡದಿಯನ್ನು ಅರಸುತ್ತ ಹೊರಟಾಗ ನಿಮ್ಮ ಆದರ್ಶ ಹಿಂದೆ ಹಿಂದೆ ಸರಿಯು

ವುದನ್ನು ಕಾಣುತ್ತೀರಿ. ಆದರ್ಶ ಅಂದರೆ ಕನ್ನಡಿ ಅಂತ ಒಂದು ಅರ್ಥ. ಮಾದರಿ ಮಡದಿಯೂ ಕನ್ನಡಿಯೊಳಗಿನ ಗಂಟೇ. ಮಾದರಿ ಮಡದಿಯಲ್ಲಿರ ಬೇಕಾದ ಎಲ್ಲಾ ಗುಣಗಳನ್ನು ಬಿಡಿ, ಒಂದೇ ಗುಣವನ್ನು ಹೊಂದಿದ ಹೆಂಡತೀನ ಹುಡುಕೋದೆಂದರೆ ಹಾರೋ ಹಕ್ಕಿಗೆ ಓಡೋ ಗಾಡಿಯಿಂದ ಗುರಿ ಹೊಡೆದ ಹಾಗೆ. ಒಂದೇ ಹುಡುಗೀಲಿ ಎಲ್ಲಾ ಗುಣಗಳು ಕೂಡಿರೋದು ಅಷ್ಟಗ್ರಹಯೋಗದ ಹಾಗೆ ದುರ್ಲಭಯೋಗ. ಒಂದು ಗುಣವನ್ನು ಕಂಡು ನೀವು ಒಬ್ಬಳ ಕೈ ಹಿಡಿದರೆ ಆವಳಲ್ಲಿ ನೀವು ಊಹಿಸಿರದ ನಾಲ್ಕು ಅವಗುಣ ಗಳನ್ನು ಆಮೇಲೆ ಕಂಡು ಬೆರಗಾಗುತ್ತೀರಿ. ನೀವು ವಿಮಲಾಂಗಿ ಅಂತ ವಧೂಪರೀಕ್ಷೆಯಲ್ಲಿ ತೀರ್ಮಾನಿಸಿ ಒಪ್ಪಿಕೊಂಡ ಮಡದಿಗೆ ನಿದ್ದೆಯಲ್ಲಿ ಬಾಯಿ ತೆರೆದುಕೊಂಡು ಅಟ್ಟಾ ಸೊಟ್ಟಾ ಮಲಗುವ ಚಾಳಿ ಇದೆ ಅಂತ ಆ ಮೇಲೆ ನೀವು ಕಂಡುಹಿಡಿಯಬಹುದು. ಅರಮನೆಯಲ್ಲಿ ಇಂಥಾ ಭಂಗಿಯಲ್ಲಿ ಮಲಗಿದ ಸುಂದರಿಯರನ್ನ ನೋಡಿಯೇ ಗೌತಮ ಬುದ್ಧನಿಗೆ ಸಂಸಾರದಲ್ಲಿ ವಿರಕ್ತಿ ಹುಟ್ಟಿತಂತೆ. ಇನ್ನೊಬ್ಬಳು ಮಾದರಿ ಮಡದಿ ಸಂಗೀತದಲ್ಲಿ ನಿಮ್ಮನ್ನು ಒಲಿಸಿರಬಹುದು. ಆದರೆ ಅವಳ ಗೊರಕೆ ಏನೇನೂ ಕರ್ಣಾನಂದಕರವಾಗಿಲ್ಲ ಅಂತ ನಿಮಗೆ ಟೂ ಲೇಟ್ ಆಗಿ ಗೊತ್ತಾಗುವ ಸಂಭವ ಇದೆ. ವ್ಯಾಪಾರಿ ಗಳ ಹಾಗೆ ಹೆಂಗಸರೂ ವ್ಯಾಪಾರ ಕುದುರುವ ವರೆಗೂ ತಮ್ಮ ಸರಕಿನ ಅವ ಗುಣಗಳನ್ನು ಮರೆಸಿಡೋದರಲ್ಲಿ ಪ್ರವೀಣರು. ಇಷ್ಟೆಲ್ಲ ಹೇಳಿದ ಮೇಲೆ ನೀವು ಮಾದರಿ ಮಡದಿಯ ಅನ್ವೇಷಣೆಯಲ್ಲಿ ಇರೋ ಹಾಗೆ ಹೆಂಗಸರೂ ಮಾದರಿ ಗಂಡನ ಕನಸು ಕಾಣುತ್ತಿರುತ್ತಾರೆ ಅನ್ನೋದನ್ನ ಮರೆಯಬೇಡಿ.

ಯಾರೋ ಒಬ್ಬ ಸಿನಿಕ, ಆದರ್ಶ ಪತಿ ಬೇಕಾದ ಹುಡುಗಿ ಕನಿಷ್ಠ ಪಕ್ಷ ಆರು ಜನ ಗಂಡಂದಿರನ್ನು ಮಾಡಿಕೊಳ್ಳಬೇಕಾದೀತು—ಅಂದಿದ್ದಾನೆ. ಮಾದರಿ ಮಡದಿಯನ್ನು ಹುಡುಕುವವನು ಕೃಷ್ಣನ ಹಾಗೆ ಸಾವಿರಾರು ಹೆಂಡಂದಿರನ್ನು ಮಾಡಿಕೊಳ್ಳಬೇಕಾದೀತು. ಆದರೆ ಯಾರೋ ಒಬ್ಬ ಹೇಳಿ ದ್ದಾನಲ್ಲ—

ಒಬ್ಬ ಹೆಂಡತಿಯೇನೆ ಸಾಕೊ ಸಾಕಪ್ಪ
ಇಬ್ಬರಾದರೆ ಹೇಗೆ ತಾಳಬೇಕಪ್ಪ !

ಆದ್ದರಿಂದ ನಿಮಗೆ ಆದರ್ಶ ಮಡದಿ ಸಿಗಲಿಲ್ಲ ಅಂತ ಹಳಹಳಿಸಬೇಡಿ.

ಮಾದರಿ ಮಡದಿ ಅನ್ನೋದು ಒಳ್ಳೇ ಕನಸು ನಿಜ. ಮನುಷ್ಯನಿಗೆ ಕನಸು ಅಗತ್ಯವಾಗಿ ಬೇಕು. ಕನಸಿನಲ್ಲಿ ನೀವು ಬೇಕಾದಷ್ಟು ಮಂಡಿಗೆ ತಿನ್ನಿ. ಏನೂ ನಷ್ಟ ಇಲ್ಲ. ಎಚ್ಚರದಲ್ಲಿ ಅದರ ಅರ್ಧ ತಿಂದರೂ ನೀವು ಆಸ್ಪತ್ರೆ ಸೇರಬೇಕಾದೀತು. ಕೆಲವೇ ದಿನಗಳಲ್ಲಿ ಆದರ್ಶ ಮಡದಿ ನಿಮಗೆ ಅಸಹನೀಯಳಾಗುತ್ತಾಳೆ. ಯಾಕೆಂದರೆ ಮಾದರಿ ಮಡದಿಗೆ ತಕ್ಕ ಮಾದರಿ ಗಂಡ ಆಗೊ ನೈತಿಕ ಜವಾಬ್ದಾರಿ ನಿಮ್ಮ ಮೇಲೆ ಬೀಳುತ್ತದೆ. ಅದು ಬಹಳ ಅಸಹನೀಯ ಜವಾಬ್ದಾರಿ. ನಿಮ್ಮ ಆತ್ಮಸಾಕ್ಷಿ ನಿಮ್ಮನ್ನು ಕೊರೆದು ಕೊರೆದು ಸಣ್ಣ ಮಾಡಿಬಿಡುತ್ತದೆ.

ಮತ್ತೆ ಮಾದರಿ ಮಡಡಿ ಅನ್ನೋ ಪದಾರ್ಥದಲ್ಲಿ ಏನೂ ಸ್ವಾರಸ್ಯ ಇಲ್ಲ. ಅದು ಶುದ್ಧ ಬೋರು. ಒಂದಿಷ್ಟು ಅತೃಪ್ತಿ, ಒಂದಿಷ್ಟು ಚಿಟುಕುಮುಳ್ಳಾಟ, ಒಂದಿಷ್ಟು ಜಗಳ, ಒಂದಿಷ್ಟು ರಾಜಿ ಇವೆಲ್ಲ ದಾಂಪತ್ಯಕ್ಕೆ ಉಪ್ಪಿನಕಾಯಿ ಇದ್ದ ಹಾಗೆ. ಇವು ಇಲ್ಲದಿದ್ದ ದಾಂಪತ್ಯ ಅಂದರೆ ಇಡೀ ದಿನ, ಇಡೀ ವರ್ಷ ಬರೇ ಸಿಹಿ ತಿಂಡಿ ತಿನ್ನುತ್ತ ಇದ್ದಹಾಗೆ. ಒಂದು ಸಿಹಿ ತಿಂಡಿಯಿಂದ ನೇರ ಇನ್ನೊಂದಕ್ಕೆ ಬದಲಾಯಿಸಿದರೆ ಅದು ಸಪ್ಪಗಾಗಿ ತೋರುತ್ತದೆ, ನಡು ನಡುವೆ ಚಕ್ಕುಲಿಯೋ ಖಾರಾಬುಂದಿಯೋ ಇದ್ದರೆ ಮುಂದಿನ ಸಿಹಿ ತಿಂಡಿಗೆ ನಾಲಿಗೆ ಚುರುಕಾಗುತ್ತದೆ. ಸೀತೆಯನ್ನು ರಾಮ ಯಾಕೆ ಕಾಡಿಗೆ ಕಳಿಸಿದ ನಿಮಗೆ ಗೊತ್ತೇ? ಅವಳು ಮಾದರಿ ಮಡದಿಯಾಗಿದ್ದಳು. ಮಡದಿ ಎಂಬವಳಲ್ಲಿ ಒಂದಿಷ್ಟಾದರೂ unpredictablity—"ದೇವೋನಜಾನಾತಿ" ಗುಣ ಇರಬೇಕು. ಅವಳ ಮೇಲೆ ನಿಮಗೆ ಪ್ರೀತಿ ಇದ್ದ ಹಾಗೆ ಒಂದಿಷ್ಟು ಭಯವೂ ಇರಬೇಕು.

"ಮ್ಯಾರೇಜಸ್ ಆರ್ ಮೇಡ್ ಇನ್ ಹೆವೆನ್" ಅಂತ ಇಂಗ್ಲಿಷ್ ಗಾದೆ ಇದೆ. ಮದುವೆ ಅನ್ನೋದು ದೈವಾಯತ್ತವಂತೆ. ಮಡದಿಯಿಂದ ನೀವು ಏನು ಪಡೆಯುತ್ತೀರಿ ಅನ್ನೋದು ಯಾವಾಗಲೂ ಅನಿಶ್ಚಿತವೇ. ಬುದ್ಧಿವಂತರಾದವರು ಮಾದರಿ ಮಡದಿಯ ಕನಸಿನಿಂದ ಬೇಗ ಎಚ್ಚತ್ತು ಪಾಲಿಗೆ ಬಂದ ಮಡದಿಯೇ ಮಾದರಿ ಎಂದುಕೊಂಡು ಸುಖವಾಗಿ ಬದುಕುತ್ತಾರೆ. ಅತೃಪ್ತ ಜೀವಿಗಳು ಆ ಫ್ರೆಂಚ್ ಸಿನಿಕ ಡಿ ಲಾ ರೋಪ್‌ಫುಕೋ ಹಾಗೆ "ಹಿತದಾಂಪತ್ಯಗಳು ಇರಬಹುದು. ಆದರೆ ಸುಖದಾಂಪತ್ಯವೆಂಬುದು ಇಲ್ಲವೇ

ಇಲ್ಲ" ಅಂತ ಗೊಣಗುಟ್ಟುತ್ತಾರೆ. ತೀರ ಆದರ್ಶವಾದಿಗಳು ಡ್ರೈಡನ್ ಕವಿ ತನ್ನ ಹೆಂಡತಿಯ ಗೋರಿಗಾಗಿ ಬರೆದಿಟ್ಟ ದ್ವಿಪದಿಯನ್ನು ಅನುಸರಿಸಿ ಹೆಂಡಂದಿರನ್ನು ಶಪಿಸುತ್ತಾರೆ. ಡ್ರೈಡನ್ ಹೆಂಡತಿಗಾಗಿ ಬರೆದಿಟ್ಟ ದ್ವಿಪದಿ ಹೀಗಿತ್ತು :

ಇವಳಿಲ್ಲಿ ಮಲಗಿಹಳು ಮಲಗಿರಲಿ ಹಾಗೇ !
ಅಂತೂ ಬಂತು ಶಾಂತಿ ಅವಳಿಗೆ, ನನಗೆ (೧೯೭೩)

# ಮನೆಗೊಂದು ಹೆಸರು

ಮನೆಗಳಿಗೂ ಮನುಷ್ಯರ ಹಾಗೆ ಹೆಸರು ಬೇಕು ಅನ್ನುವ ಗುಂಗೀಹುಳ ಮೊದಲು ಯಾರ ತಲೆಯಲ್ಲಿ ಹೊಕ್ಕಿತೋ ನಾನರಿಯೆ. ಆದರೆ ಮನೆಗಳಿಗೆ ನಾಮಕರಣ ಮಾಡುವುದು ಕೆಲ ಶತಮಾನಗಳ ಕಾಲದಿಂದ ನಡೆದು ಬಂದಿದೆ. ರಾಜರೂ ಸರದಾರರೂ ತಮ್ಮ ಮನೆಗಳಿಗೆ ಹೆಸರು ಬೇಕೆಂದು ಭಾವಿಸಿದವರಲ್ಲಿ ಮೊದಲಿಗರೆಂದು ತೋರುತ್ತದೆ. ಮೈಸೂರು ಮಹಾರಾಜರ ಅರಮನೆಯೊಂದು "ಜಗನ್ಮೋಹನ" ಅರಮನೆಯೆಂದು ಹೆಸರಾಗಿದೆ. ನಮ್ಮ ರಾಜರು ಎಂದೂ ಇಡೀ ಜಗತ್ತಿಗಿಂತ ಸಣ್ಣದಾದ ಯಾವ ಪದಾರ್ಥದಿಂದಲೂ ತೃಪ್ತರಾದ ಹಾಗೆ ಕಾಣಲಿಲ್ಲ. ನಮ್ಮ ಎಲ್ಲ ರಾಜರೂ "ಸಮುದ್ರಾಂತಕ್ಷಿತೀ ಪಾಲ"ರೇ. ಅವರ ರಾಜ್ಯ ಸಮುದ್ರದ ವರೆಗೂ ಚಾಚದೆ ಇದ್ದರೆ ಅವರು ತಮ್ಮ ರಾಜ್ಯದ ಯಾವುದಾದರೊಂದು ಕೆರೆಗೆ ಸಮುದ್ರ ಅಂತ ಹೆಸರಿಟ್ಟು ಸಂತುಷ್ಟರಾಗುತ್ತಿದ್ದರು. ನಮ್ಮ ಮುಸ್ಲಿಂ ರಾಜರಾದರೂ ಹಿಂದುಳಿಯಲಿಲ್ಲ. ಅವರು ತಮಗೆ ಜಹಾನ್-ಗೀರ್, ಶಾಹ-ಜಹಾನ್ ಆಲಮ್-ಗೀರ್ (ಜಗಜ್ಜೇತಾ, ಜಗತ್ ಪ್ರಭು) ಇತ್ಯಾದಿ ಹೆಸರುಗಳನ್ನಿಟ್ಟುಕೊಂಡದ್ದಲ್ಲದೆ ತಮ್ಮ ರಾಣಿಯರಿಗೆ ನೂರ್-ಜಹಾನ್ (ಜಗಜ್ಜ್ಯೋತಿ) ಎಂದು ಮೊದಲಾಗಿ ಹೆಸರಿಟ್ಟರು. ತಮ್ಮ ಅರಮನೆಗಳಿಗೂ ಹೀಗೆ ಬಾಯಿ ತುಂಬಾ ಹೆಸರಿಡುವ ಚಪಲ ರಾಜರಿಗೆ ಬಂದದ್ದು ಆಶ್ಚರ್ಯವಲ್ಲ.

ರಾಜರಿಂದ ಈ ಚಪಲ ಸರದಾರರಿಗೂ ಉಚ್ಚಾಧಿಕಾರಿಗಳಿಗೂ ದಾಟಿತು. ಪ್ರಜಾಸತ್ತೆಯ ಯುಗದಲ್ಲಿ ನವಪ್ರಭುಗಳಾದ ಜನಸಾಮಾನ್ಯರಿಗೂ ತಮ್ಮ ಮಕ್ಕಳಿಗೆ ಹೇಗೋ ಹಾಗೆ ತಮ್ಮ ಮನೆಗಳಿಗೂ ಹೆಸರುಗಳು ಬೇಕೆಂದು

ಅನಿಸಿದ್ದು ಅಸ್ವಾಭಾವಿಕವಲ್ಲ. ಈ ಹೆಸರುಗಳನ್ನಿಡುವಲ್ಲೇ ತುಂಬಾ ಅರ್ಥವಿರುವುದು-ಸ್ವಾರಸ್ಯವೂ ಕೂಡ. ಇಲ್ಲಿಯೇ ಈಗ ತಿಪ್ಪೆ ಉಪ್ಪರಿಗೆಯಾಗುವುದು. ಉಪ್ಪರಿಗೆ ತಿಪ್ಪೆಯಾಗುವುದು.

ದೇಶಾಭಿಮಾನಿ ಮಹನೀಯರೊಬ್ಬರು ಮೂರಂತಸ್ತಿನ ಮನೆ ಕಟ್ಟಿ ಅದಕ್ಕೆ "ಪರ್ಣ ಕುಟೀರ"ಎಂದು ಹೆಸರಿಟ್ಟಿದ್ದಾರೆ. ಅವರ ಮನೆಯಲ್ಲಿದ್ದ ಪರ್ಣಗಳೆಂದರೆ ಇಸ್ಪೇಟಿನವು ಮಾತ್ರ. ಅವರು ಹೆಸರನ್ನಾರಿಸುವುದಕ್ಕೆ ಪ್ರೇರಣೆ ಬಂದದ್ದು ಅವರಿಗೆ ಪ್ರಿಯವಾದ ತ್ರಿಪರ್ಣ ಎಂದು ಹೆಸರಾದ ಮೂರೆಲೆ ಆಟದಿಂದಲೇ ಎಂದು ನನಗೆ ಸಂಶಯವಿದೆ. ಅಥವಾ ಪುಡಾರಿತನದಿಂದ ರಿಟೈರ್ ಆಗುವ ಮುಂಚೆ ಅವರು ಸಂಗ್ರಹಿಸಿದ ಹಸುರು ನೋಟಗಳೇ ಪರ್ಣಗಳಾಗಿರಬಹುದು. ತದ್ವಿರುದ್ಧವಾಗಿ ಇಂದಿನ ಗರೀಬಿ ಹಠಾವೋ ಕಾಲದ ಮತದಾರನೊಬ್ಬ ತನ್ನ ಹರಕು ತಗಡಿನ ಮನೆಗೆ "ಇಂದ್ರಭವನ" ಎಂದು ಹೆಸರಿಟ್ಟಿದ್ದಾನೆ. ಏನು ತಪ್ಪಾಯಿತು ! ನಾನಿರುವುದೇ ನನಗೆ ಭವನ. ಮೊಂಡು ಜಡೆಯ ಹುಡುಗಿಗೆ ನೀವು ನಾಗವೇಣಿ ಎಂದು ಹೆಸರಿಡಬಹುದಾದರೆ ನನ್ನ ಈ ಶೆಡ್ಡಿಗೆ ಇಂದ್ರಭವನ ಎಂಬ ಹೆಸರೇಕೆ ಸಲ್ಲ? ಎಂದು ಅವನ ವಾದ.

ಭವನಗಳನ್ನೂ ಕುಟೀರಗಳನ್ನೂ ಬಿಟ್ಟರೆ ನಿಮಗೆ ವಿಲಾಸಗಳು ಎಲ್ಲೆಲ್ಲಿಯೂ ಕಾಣಸಿಗುತ್ತವೆ. ಬೆಂಗಳೂರಿನ ಪ್ರಸಿದ್ಧ ಲಾಯರೊಬ್ಬರ ಮನೆಯಲ್ಲಾದ ಹತ್ಯಾಕಾಂಡದಿಂದಾಗಿ "ರಂಗವಿಲಾಸ"ವೆಂಬ ಹೆಸರು ಭಾರತದ ಅಪರಾಧೇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ. ರಾಮವಿಲಾಸಗಳಿವೆ, ಕೃಷ್ಣವಿಲಾಸಗಳಿವೆ. (ಇದಕ್ಕೂ ಕಪ್ಪು ಪೇಟಿಯಲ್ಲಿ ಗಳಿಸಿದ ಹಣಕ್ಕೂ ತಳಕು ಹಾಕುವ ಅಗತ್ಯವಿಲ್ಲ.) ಮ್ಯಾಟ್ರಿಕ್‌ನಲ್ಲಿ ಎಂಟು ಸಲ ಗೋತಾ ಹೊಡೆದ ಮಹನೀಯರೊಬ್ಬರು ಲಕ್ಷ್ಮೀಕಟಾಕ್ಷ ಪಾತ್ರರಾಗಿ, ದೊಡ್ಡ ಮನೆ ಕಟ್ಟಿಸಿದಾಗ ಅದಕ್ಕೆ "ಸರಸ್ವತೀ ವಿಲಾಸ"ವೆಂದು ಹೆಸರಿಟ್ಟರು. ಇದರಿಂದ ಲಕ್ಷ್ಮಿಗೆ ಸಿಟ್ಟು ಬಂತೋ ಏನೋ, ಕೊನೆಗೆ ಅದನ್ನು ಮಾರಬೇಕಾಯಿತು. ಹೈಸ್ಕೂಲು ಕಾಲೇಜುಗಳಿಗೆ ನೋಟ್ಸು ಗೈಡುಗಳನ್ನು ಬರೆದು ಹಣಗಳಿಸಿದವರೊಬ್ಬರು ಈಗ ಅದರಲ್ಲಿ ವಾಸಿಸುತ್ತಾರೆ. ಅವರು ಅದರ ಹೆಸರನ್ನು "ಸರಸ್ವತೀ ಪ್ರಸಾದ" ಅಂತ ಬದಲಾಯಿಸಿದ್ದಾರೆ. ತುಂಬ ಅನ್ವರ್ಥಕವಾಯಿತು ಎಂದೆ ನಾನು.

ಅಂದರೆ ನಾವೀಗ "ಪ್ರಸಾದ"ಕ್ಕೆ ಬಂದ ಹಾಗಾಯಿತು. ನಾನು ನಾನಾ ದೇವರುಗಳ ಪ್ರಸಾದಗಳನ್ನು ಮನೆಗಳ ಹಣೆಗಳ ಮೇಲೆ ಕಂಡಿದ್ದೇನೆ: ಜಗದಂಬಾಪ್ರಸಾದಗಳು, ಗುರುಪ್ರಸಾದಗಳು, ಶಿವಪ್ರಸಾದಗಳು, ದೇವೀ ಪ್ರಸಾದಗಳು. ಪ್ರಸಾದಗಳದ್ದೇ ಇನ್ನೊಂದವತಾರ "ಕೃಪಾ"ಗಳು. ನನ್ನ ಮಿತ್ರರೊಬ್ಬರು ಎಲ್ಲಾ ದೇವರನ್ನು ಬಿಟ್ಟು "ಪಾಟೀಲಕೃಪಾ" ಅಂತ ತಮ್ಮ ಮನೆಗೆ ಹೆಸರಿಟ್ಟಿದ್ದು ನೋಡಿ ಆಶ್ಚರ್ಯಪಟ್ಟೆ. ಪಾಟೀಲ ಎಂಬವರ ಕೃಪೆಯಿಂದ ಹೌಸಿಂಗ್ ಬೋರ್ಡಿನವರು ಅವರಿಗೆ ಆ ಮನೆ ಅಲಾಟಿಸಿದ್ದರಂತೆ. "ನನಗೆ ದೇವರಲ್ಲಿ ನಂಬಿಕೆ ಹೋಗುತ್ತಿದೆ ; ಮನುಷ್ಯರಲ್ಲಿ ಹೆಚ್ಚುತ್ತಿದೆ" ಎಂದರವರು. ಅವರ ಕೃತಜ್ಞತಾಬುದ್ಧಿಗೆ ನಾನು ಮಾರುಹೋದೆ. ಇದಾದ ಮೇಲೆ ನನ್ನ ಇನ್ನೊಬ್ಬ ಮಿತ್ರನಿಗೆ ವರದಕ್ಷಿಣೆಯ ಅಂಶವಾಗಿ ಬಂದ ಹೊಸ ಮನೆಗೆ "ಶ್ವಶುರ ಕೃಪಾ" ಎಂದು ನೀನೇಕೆ ಹೆಸರಿಡಬಾರದೆಂದು ಕೇಳಿದೆ. "ಈ ಮನೆಯೊಂದಿಗೆ ಆತ ಕೊಟ್ಟಿರುವ ಕನ್ಯೆಯೊಡನೆ ಒಂದೆರಡು ವರ್ಷ ಬಾಳುವೆ ಮಾಡಿದ ಮೇಲೆಯೆ ನನಗೆ ಇದು ಕೃಪೆಯೋ ಶಾಪವೋ ತಿಳಿಯಬೇಕಷ್ಟೇ. ಈಗಲೇ ಏನವಸರ?" ಅಂತ ಕೇಳಿದ.

ಕೆಲವರು ತುಂಬಾ ಮುಂಜಾಗ್ರತೆಯವರು ತಮ್ಮ ಮನೆಗಳಿಗೆ ನಾನ್ ಕಮಿಟಲ್ ಆಗಿ ಬರೀ—ಇಂಥಾ "ನಿವಾಸ", ಅಂಥಾ "ನಿವಾಸ" ಇತ್ಯಾದಿ ಯಾಗಿ ಹೆಸರಿಡುತ್ತಾರೆ.ಅವರಿಗೆ ಕುಟೀರ, ಭವನ ಎರಡೂ ಹೇಳಲು ಧೈರ್ಯವಿಲ್ಲ.

ಈಚೆಗೆ ಫ್ಯಾಶನ್ ಆಗುತ್ತಿರುವುದೆಂದರೆ ಛಾಯೆ. "ಮಾತೃಛಾಯೆ" ಗಳು "ಪಿತೃಚ್ಛಾಯೆ"ಗಳು ಎಲ್ಲೆಲ್ಲಿಯೂ ಹುಟ್ಟಿವೆ. ಒಬ್ಬರಂತೂ ಛಾಯೆ ಪಾಯೆ ಯಾವುದನ್ನೂ ಹಚ್ಚಿಕೊಳ್ಳದೆ "ತಾಯಿ ಸೆರಗು" ಅಂತ ಸುದ್ದಗನ್ನಡ ದೋಳ್ ಬರೆದಿದ್ದಾರೆ. ತಾಯಿಯ ಸೆರಗನ್ನು ಇನ್ನೂ ಅಪೇಕ್ಷಿಸುವ ಪ್ರಬುದ್ಧ ಇವರು.

ಕೆಲವರಿಗೆ ಕೇವಲ ಭಾರತೀಯ ಹೆಸರುಗಳಿಂದ ತೃಪ್ತಿಯಾಗುವುದಿಲ್ಲ. ಅವರು ಇಂಗ್ಲಿಷೋ, ಫ್ರೆಂಚೋ ಅಪೇಕ್ಷಿಸುತ್ತಾರೆ. ಕೆಲವರು ಕೇವಲ ಹೌಸ್ ಸಾಕೆನ್ನಬಹುದು. ಉದಾಹರಣೆಗೆ "ಪೆದ್ದು ಹೌಸ್." ಇನ್ನುಳಿದವರಿಗೆ ಹೌಸಿನಲ್ಲಿರುವ ಹೌಸ್ ಸಾಲದೆಂದು ಅನಿಸುತ್ತದೆ. ಅವರು "ವಿಲ್ಲಾ"ವನ್ನು ಆರಿಸಿಕೊಳ್ಳುತ್ತಾರೆ. ಆದ್ದರಿಂದ ನೀವು ಕೆಲ ಮನೆಗಳ ಮೇಲೆ "ವಿವೇಕವಿಲ್ಲಾ"

ಇತ್ಯಾದಿ ಹೆಸರುಗಳನ್ನು ಕಾಣುತ್ತೀರಿ. ನಿಮಗೆ ಇಂಗ್ಲಿಷು ಇತ್ಯಾದಿ ಸರಿಯಾಗಿ ಬಾರದಿದ್ದರೆ ಈ ಮನೇ ಯಜಮಾನ ಇಷ್ಟು ಪ್ರಾಂಜಲವಾಗಿ ತನಗೆ ವಿವೇಕವಿಲ್ಲ ಅಂತ ಒಪ್ಪಿಕೊಳ್ಳುತ್ತಾನಲ್ಲಾ ಅಂತ ಆಶ್ಚರ್ಯವಾಗುತ್ತದೆ. ಇದೀಗ ಹಳೇ ಜೋಕು ಆಗಿಹೋಗಿದೆ ಅನ್ನಿ.

ನಾನು ತುಂಬಾ ಮೆಚ್ಚಿರುವ ಮನೆ ಹೆಸರೆಂದರೆ "ಮಂಜಿಲ್" ಅನ್ನುವುದು. "ಅಬ್ದುಲ್ಲಾ ಮಂಜಿಲ್" ಇತ್ಯಾದಿ. ಮಂಜಿಲ್ ಅಂದರೆ ಮನೆಯೂ ಆಗಬಹುದು, ಛತ್ರ, ಧರ್ಮಶಾಲೆ, ಅರವಟಿಗೆ ಅಂತಲೂ ಆಗಬಹುದು. ಅಬ್ದುಲ್ಲಾ ಮಂಜಿಲ್ಲಿನ ಒಡೆಯರಿಗೆ ಈ ಪ್ರಪಂಚ ಒಂದು ಮನೆ ಅಲ್ಲ—ಅದೊಂದು ಛತ್ರ; ಯಾರಿಗೂ ಇಲ್ಲಿ ಶಾಶ್ವತ ಪದವಿಲ್ಲ ಎಂಬ ಪ್ರಜ್ಞೆ ಇದೆ ಎಂದು ಅರ್ಥವಾಗುತ್ತದೆ. ಅವರು ನಿಜಕ್ಕೂ ತತ್ತ್ವಜ್ಞಾನಿಯಾಗಿರಬೇಕು. (೧೯೭೩)

## ಭಾಷೆ ಮತ್ತು ಮುಖ

ಭಾಷೆಯ ಬೆಳವಣಿಗೆಯಲ್ಲಿ, ಅದಕ್ಕೆ ಅಭಿವ್ಯಂಜನ ಶಕ್ತಿ ಬರುವುದರಲ್ಲಿ ಉಪಯೋಗಬೀಳುವ ಸಲಕರಣೆಗಳನ್ನು ನೋಡಿದರೆ ಸೋಜಿಗವೆನಿಸುತ್ತದೆ. ನಮ್ಮ ವೃತ್ತಿಗಳು, ನಮ್ಮ ಉಪಕರಣಗಳು ಭಾಷೆಯಲ್ಲಿ ಹಾಸುಹೊಕ್ಕಾಗಿರುತ್ತವೆ. ಹಾಸು-ಹೊಕ್ಕು ಎನ್ನುವುದೇ ಬಟ್ಟೆ ನೇಯುವ ವೃತ್ತಿಗೆ ಸಂಬಂಧಿಸಿದ್ದು. ಬಟ್ಟೆ ನೇಯ್ಗೆಯನ್ನು ಕಾಣದವನಿಗೆ ಈ ಜೋಡಿ ಪದದ ಪೂರ್ಣ ತಾತ್ಪರ್ಯ ಪ್ರತೀತಿಗೆ ಬರಲಾರದು. ಅವುಗಳನ್ನಾತ ಮಂದಿಯ ಮಾತಿನಿಂದ ಹೆಕ್ಕಿಕೊಂಡು ಪ್ರಯೋಗಿಸುತ್ತಾನಷ್ಟೇ.

ಆದರೆ ಭಾಷೆಯ ಅಭಿವ್ಯಂಜನ ಶಕ್ತಿಗೆ ಕಾವನ್ನೂ ಹರಿತವನ್ನೂ ಕೊಡುವ ಇನ್ನೊಂದು ಉಗಮ ಸರ್ವವಿದಿತವಾದದ್ದು. ಅದೇ ನಮ್ಮ ಶರೀರ ಮತ್ತು ಅದರ ಅವಯವಗಳು. ನಖಶಿಖಾಂತವಾಗಿ ನಮ್ಮ ಶರೀರವೆಲ್ಲ ಭಾಷೆಗೆ ಕಸುವುಕೊಡಲು ಉಪಯೋಗಕ್ಕೆ ಬಂದಿದೆ. ಈ ಕಾರ್ಯದಲ್ಲಿ ಒಂದೇ ಒಂದು ಅವಯವವೂ ಅಪ್ರಯೋಜ್ಯವಾಗಿ ಉಳಿದಿಲ್ಲವೇನೋ.

ನಖಶಿಖಾಂತ ಎಂದೆ. ಶಿಖೆಯಿಂದಲೇ ಪ್ರಾರಂಭಿಸೋಣ. ಶಿಖೆ ಎಂದರೆ ತಲೆಗೂದಲು ಗಂಟು. ಕೂದಲಿನೊಡನೆ ಎಷ್ಟೆಲ್ಲ ಅರ್ಥ ಶಬ್ದವೈಖರಿ ಹೆಣೆದು

ಕೊಂಡಿದೆ. ಬಹಳ ನಾಜೂಕಾಗಿ ತರ್ಕಮಾಡುವುದನ್ನು ಕೂದಲು ಸೀಳು ವುದು ಎನ್ನುತ್ತೇವೆ. ಆದರೆ ನೋಡಿ "ಸೂಕ್ಷ್ಮ ತರ್ಕ" ಎಂಬ ಶ್ರೀಮದ್ಗಂಭೀರ ಮಾತಿನಿಂದ ಪ್ರತೀಯಮಾನವಾದ ಅರ್ಥಕ್ಕಿಂತ "ಕೂದಲು ಸೀಳುವುದು" ಎಷ್ಟು ವಿಶಾಲವಾದ ತಾತ್ಪರ್ಯವನ್ನು ಕೊಡುತ್ತದೆ! ತಲೆಯಲ್ಲಿರುವ ಕೂದಲ ನ್ನಾದರೂ ಎಣಿಸಬಹುದು, ಈ ಕೆಲಸ ಆಗದು ಎನ್ನುವುದು ಇನ್ನೊಂದು ಪದ ಪುಂಜ. ಕೂದಲೆಳೆಯಷ್ಟರಿಂದ ಜೀವ ಉಳಿಯಿತೆಂದು ಸ್ವಲ್ಪದರಲ್ಲಿ ಬದುಕಿ ಕೊಂಡದ್ದನ್ನು ಉತ್ಪ್ರೇಕ್ಷಿಸುತ್ತೇವೆ. ನಿನ್ನ ಕೂದಲು ಕೊಂಕದ ಹಾಗೆ ನೋಡಿ ಕೊಳ್ಳುತ್ತೇನೆ ಎಂದು ಅಭಯಕೊಡುತ್ತೇವೆ. ಆದರೆ ಕೂದಲಿನಿಂದ ಕೊರಳು ಕೊಯ್ಯುವವ ಎಂಬ ಕನ್ನಡ ಪ್ರಯೋಗದಷ್ಟು ಚೆನ್ನಾದದ್ದು ಇಂಗ್ಲಿಷಿನಲ್ಲಿ ಎಲ್ಲಿಯೂ ಇಲ್ಲ.

ಗಂಡಸರು ಜುಟ್ಟುಬಿಡುವ ಫ್ಯಾಶನ್ ಈಗ ಲುಪ್ತವಾಗಿದೆ. ಆದ್ದರಿಂದ ಜುಟ್ಟಿಗೆ ಸಂಬಂಧಪಟ್ಟ ಪದಸರಣಿಗಳು ಈಗ ಅನುಭವಸಾಮ್ಯವನ್ನು ಕಳೆದು ಕೊಂಡಿವೆ. ಆದರೂ ಅವನ ಜುಟ್ಟು ಅವನ ಹೆಂಡತಿಯ ಕೈಯಲ್ಲಿದೆ ಎನ್ನು ವುದು ಇಂದಿಗೂ ಚಾಲ್ತಿ ನಾಣ್ಯವಾಗಿ ಉಳಿದಿದೆ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಮುಡಿಯುವ ಪುರುಷರು ಈಗ ಅಪರೂಪ. ವಸಿಷ್ಠ ಜುಟ್ಟು ಅಪ್ಪಳಿಸಿ ಭೈರವನನ್ನೇ ಸೃಷ್ಟಿಸಿದನಂತೆ. ಆದರಿಂದ "ಜುಟ್ಟು ಅಪ್ಪಳಿಸುವ" ಶಬ್ದವೇ ಭಾಷೆಯ ಭಂಡಾರದಲ್ಲಿ ಸೇರಿಕೊಂಡಿದೆ.

ಕೂದಲು ತಲೆಯಮೇಲಿದ್ದರೆ ಚಂದ. ಅಲ್ಲಿಂದ ಬಿದ್ದ ಮೇಲೆ ಅದು ಸ್ವರ್ಗದಿಂದ ಬಿದ್ದ ಸೈತಾನನಾಗುತ್ತದೆ. ಮೊದಲ ತುತ್ತಿಗೇ ಕೂದಲು ಬರು ವುದು ಮೊದಲ ತುತ್ತಿಗೆ ಹರಳು ಬರುವುದಕ್ಕಿಂತ ಅತ್ತತ್ತ. ಆದರೆ ಬಿಚ್ಚಿದ ಕೂದಲು ಅದಕ್ಕಿಂತಲೂ ಭಯಂಕರ ಅರ್ಥವನ್ನು ಕೊಡುತ್ತದೆ. ಚಾಣಕ್ಯನ ಬಿಚ್ಚಿದ ಜಡೆ, ದ್ರೌಪದಿಯ ಬಿಚ್ಚಿದ ತುರುಬು ಎರಡೂ ರಾಜವಂಶಗಳನ್ನೇ ನಿರ್ವಂಶಗೊಳಿಸಿ ಭಾಷೆಯಲ್ಲಿ ತನ್ನ ಅಚ್ಚು ಒತ್ತಿಹೋಗಿದೆ.

ಸಕಾಲಕ್ಕೆ ಕ್ಷೌರವಾಗದಿದ್ದರೆ ಕೂದಲು ಕಿವಿಮಾತು ಹೇಳುತ್ತದಂತೆ. ನೀವು ಹಿರಿಯರ ಸದುಪದೇಶಕ್ಕೆ ಕಿವಿ ಕೊಡದೆ ಇರಬಹುದು. ಅವರು ಹೇಳಿದ್ದು ಈ ಕಿವಿಯಿಂದ ಹೊಕ್ಕು ಆ ಕಿವಿಯಿಂದ ಹೊರಟುಹೋಗುವುದೇ ಹೆಚ್ಚು. ಒಳ್ಳೆಯ ಮಾತು "ಪಿರಿದೆನಿಸುವ ಕರ್ಣಶೂಲೆಯಂ ಪುಟ್ಟಿಸುಗುಂ" ಎಂದು

ಕರ್ನಾಟಕ ಕಾದಂಬರಿಕಾರ ಹೇಳಿಲ್ಲವೇ. ಆದರೆ ಹೆಂಡತಿಯಿಂದ ಕಿವಿ ಹಿಂಡಿಸಿ ಕೊಳ್ಳುವುದು ನಿಮಗೆ ತಪ್ಪಲಾರದು. ಕಿವಿ ಹಿಂಡದಿದ್ದರೂ ಅವಳು ಹೊತ್ತು ನೋಡಿ ನಿಮ್ಮ ಕಿವಿ ಊದದೇ ಬಿಡುವುದಿಲ್ಲ. ಕಿವಿ ಕಚ್ಚುವ ಕೆಲಸಕ್ಕೆ ಹಿಂಜರಿಯುವ ಹೆಂಗಸರು ವಿರಳ. ಶೇಕ್ಸ್‌ಪಿಯರ್ ತನ್ನ ಒಂದು ಪಾತ್ರದ ಬಾಯಲ್ಲಿ "Lend me your ears" ಎನ್ನಿಸುತ್ತಾನೆ. ತೊಂದರೆಯೆಂದರೆ, ಒಮ್ಮೆ lend ಮಾಡಿದ ಕಿವಿ ತಿರುಗಿ ಬರುವುದು ಬಲು ಅಪರೂಪ. ಪ್ರಭುಗಳಿಗೆ ಹೆಚ್ಚಾಗಿ ಹಿತ್ತಾಳೆ ಕಿವಿಯಂತೆ. ದೇವರು ಮನುಷ್ಯನ ಕಿವಿಗಳನ್ನು ಅಚಲವಾಗಿ ಮಾಡಿದ್ದರೂ ಲಾಭದ ವಿಚಾರ ಬಂದರೆ ನಮ್ಮ ಕಿವಿಗಳು ನೆಟ್ಟಗಾಗಿಯೇ ಆಗುತ್ತವೆ. ಆದರೆ ಅಕ್ಕಸಾಲಿಗನ ಹತ್ತಿರ ಕಿವಿ ಚುಚ್ಚಿಸಿಕೊಳ್ಳದಿದ್ದವರು ಯಾರು ?

ಮುಖ ಅನ್ನುವ ಶಬ್ದದ ಉತ್ಪತ್ತಿಯ ಬಗ್ಗೆಯೇ ವಿವಾದ ಇದೆ. ದ್ರಾವಿಡ ಭಾಷಾ ತಜ್ಞರು ಕೆಲವರ ಅಭಿಪ್ರಾಯದಲ್ಲಿ ಮುಖ ಶಬ್ದ ಮುನ್-ಮುಂದೆ, ಎದುರಿಗೆ ಅನ್ನುವ ಶಬ್ದದಿಂದ ಬಂದಿರಬಹುದು. ಮುಖ ಶಬ್ದ ಎಲ್ಲಿಂದಲೇ ಬಂದಿರಲಿ, ಅದು ನಮ್ಮನ್ನು ಮುಖಹೇಡಿಗಳಾಗುವುದರಿಂದ ರಕ್ಷಿಸುವುದಿಲ್ಲ. ಎಷ್ಟೇ ಗಹನ ಆಲೋಚನಾಶಕ್ತಿ ಇದ್ದರೂ ಮುಖಾಮುಖಿಯಾಗಿ ವಿಷಯಗಳನ್ನು ಮಾತಾಡಲಾರದೆ ಹೋಗುವವರಿದ್ದಾರೆ. "ಮುಖಹೇಡಿ" ಎಂಬ ಶಬ್ದ ಕೊಡುವ ಅರ್ಥವನ್ನು ಬೇರೆ ಶಬ್ದಗಳಲ್ಲಿ ವಿವರಿಸುವುದಕ್ಕೆ ನಾವು ಎಷ್ಟು ಪ್ಯಾರಾಗಳನ್ನು ಬರೆದರೂ ಅದು ತೃಪ್ತಿಕರವಾಗಲಾರದು. ಮುಖದ (ಅಥವಾ ಮೋರೆಯ) ನೀರು ಇಳಿಸಿಬಿಡುವುದು ಕೂಡ ಅರ್ಥಪೂರ್ಣವಾದ ನುಡಿಕಟ್ಟು. ಮುಖ ನೋಡಿ ಮಣೆ ಹಾಕುವುದು, ಮುಖಕ್ಕೆ ತಕ್ಕಂತೆ ಮಾತಾಡಿ ಕಳಿಸುವುದು, ಮುಖಕ್ಕೆ ಹೊಡೆದಂತೆ ಮಾತಾಡುವುದು— ಮುಖಕ್ಕೂ ಸಮಾಜದಲ್ಲಿರುವ ಗೌರವಕ್ಕೂ ಇರುವ ಸಂಬಂಧವನ್ನು ತೋರಿಸಿದರೆ "ಇವ್ಮೊಗ" ಧೋರಣೆ ನಮ್ಮ ದಂಭಾಚಾರಕ್ಕೆ ಕನ್ನಡಿ ಹಿಡಿಯುತ್ತದೆ. ಯಾವುದಾದರೂ ಕೆಲಸಕ್ಕೆ ಹಿರಿತನ ಮಾಡುವವನು "ಮುಖಿ" ಯಾಗುತ್ತಾನೆ.

ಇಂಗ್ಲಿಷಿನಲ್ಲಿ ಮುಖಕ್ಕೆ ಇಷ್ಟೆಲ್ಲ ವೈವಿಧ್ಯಪೂರ್ಣ ಅರ್ಥವಿಕಾಸ ಆದ ಹಾಗೆ ಕಾಣುವುದಿಲ್ಲ. ಮುಖ ಅಲ್ಲಿ ಧೈರ್ಯದ ಪ್ರತೀಕವಾಗಿರುವಂತೆ ಕಾಣು

ತ್ತದೆ. Facing a situation ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಕನ್ನಡದಲ್ಲಿ "ಮುಖಹೀನ" ಎಂಬ ಶಬ್ದ "ಮುಖಹೇಡಿ" ಎಂಬರ್ಥವನ್ನೇ ಕೊಡುತ್ತದೆ. ಆದರೆ ಇಂಗ್ಲಿಷಿನಲ್ಲಿ faceless ಎಂದು ಈಚೆಗೆ ಹುಟ್ಟಿಕೊಂಡ ಶಬ್ದ ಸಂಕೋಚಶೀಲವನ್ನು ಸೂಚಿಸದೆ, ಆಧುನಿಕ ಯಂತ್ರಯುಗದ ನಿರ್ವಿಶಿಷ್ಟ ವ್ಯಕ್ತಿಗಳ ವ್ಯಕ್ತಿತ್ವವಿಹೀನತೆಯನ್ನು ಅಭಿವ್ಯಂಜಿಸುವ ಶಕ್ತಿಶಾಲಿ ಪದವಾಗಿದೆ. ನಮ್ಮಲ್ಲಿ ಸಿಟ್ಟಿನಿಂದ ಮುಖ ಕೆಂಪಾದರೆ ಅವರಲ್ಲಿ green with rage ಆಗುವುದು ಸೋಜಿಗ.

ಹಣೆಗೆ ಭಾರತದಲ್ಲಿ ದೊರಕಿದ ಅರ್ಥವತ್ತಾದ ಸ್ಥಾನ ವಿದೇಶಗಳಲ್ಲಿ ದೊರಕಿಲ್ಲ. ಹಣೇಬರಹದಲ್ಲಿ ಅವರಿಗೆ ವಿಶ್ವಾಸವಿಲ್ಲದಿರುವುದು ಇದಕ್ಕೆ ಕಾರಣವಾಗಿರಬಹುದು. ಅವರು ಎಂದೂ ಹಣೆಹಣೆ ಘಟ್ಟಿಸಿಕೊಳ್ಳುವುದಿಲ್ಲವೇನೋ ? ಅವರಲ್ಲಿ ಯಾವ ದೇವತೆಗೂ ಹಣೆಯಲ್ಲಿ ಕಣ್ಣಿದ್ದಹಾಗಿಲ್ಲ. ಮುಖದಲ್ಲಿ ಬೆವರಿಳಿಯುವುದಕ್ಕೂ ಹಣೆಯ ಬೆವರನ್ನು ಒರಸಿಕೊಳ್ಳುವುದಕ್ಕೂ ಎಷ್ಟು ವ್ಯತ್ಯಾಸವಿದೆ! ಒಂದು ಗಾಬರಿಯನ್ನು ದ್ಯೋತಿಸಿದರೆ ಇನ್ನೊಂದು ಪರಿಶ್ರಮವನ್ನು ಸೂಚಿಸುತ್ತದೆ.

ಹುಬ್ಬಿಗೂ ಇಂಗ್ಲಿಷಿನಲ್ಲಿ ಅರ್ಥವ್ಯಾಪ್ತಿ ಬೆಳೆದಿಲ್ಲವೆನಿಸುತ್ತದೆ. ನಾವು ಹಣೆಯ ಬೆವರು ಎನ್ನುವುದು ಅದರಲ್ಲಿ sweat of the brow ಆಗುತ್ತದೆ. ಅವರೂ ನಮ್ಮಂತೆ ಆಗ್ರಹವನ್ನು ಹುಬ್ಬುಗಂಟಿಕ್ಕಿ–frown–ತೋರಿಸುತ್ತಾರೆ. ಆದರೆ ಹುಬ್ಬಿನಿಂದಲೇ ಮಾತಾಡುವುದು ನಮ್ಮ ಬಿನ್ನಾಣಗಿತ್ತಿಯರಿಗೆ ಮಾತ್ರ ಸಾಧ್ಯ. ಹುಬ್ಬೇರಿಸುವುದು ಪ್ರಶ್ನಾರ್ಥಕವಾದರೆ ಹುಬ್ಬು ಹಾರಿಸುವುದು ಹೆಣ್ಣಿನ ಆಮಂತ್ರಣವಾಗಬಲ್ಲದು. ಹುಬ್ಬಿನ ಬಿಲ್ಲಿನಲ್ಲಿ ನೋಟದ ಬಾಣ ಹೂಡಿ ಹೃದಯಕ್ಕೆ ಗುರಿ ಹೊಡೆದು ಕೊಲ್ಲದೆ ಕಾಡುವುದು ಭಾರತೀಯ ಕವಿಗಳ ಸೃಷ್ಟಿಯೇ ಸೈ.

ತಿರ್ಯಕ್ ಪ್ರಾಣಿಗಳಿಗೆ ಕಿವಿ, ಮೂಗುಗಳೇ ಪ್ರಧಾನ ಜ್ಞಾನದ್ವಾರಗಳೆಂದು ಪ್ರಾಣಿಶಾಸ್ತ್ರಗಳು ಹೇಳುತ್ತಾರೆ. ಮನುಷ್ಯನಿಗೆ ಕಣ್ಣು ಪ್ರಧಾನ. ಚಕ್ಷುರ್ವೈಸತ್ಯಂ. ಮನುಷ್ಯನ ಮಿದುಳಲ್ಲಿ ಕಣ್ಣಿನಿಂದ ಬಂದ ಜ್ಞಾನಕ್ಕೆ ಮೀಸಲಾದ ಪ್ರದೇಶ ಬಹಳ ದೊಡ್ಡದಂತೆ. ಹೆಚ್ಚಿನ ಮೃಗಗಳು ಬಣ್ಣಗಳೇ ಇಲ್ಲದ ಬಿಳಿ ಕಪ್ಪುಗಳ ದೃಶ್ಯಸಾಮ್ರಾಜ್ಯದಲ್ಲಿ ವಿಹರಿಸುತ್ತವೆ. ಪಕ್ಷಿಗಳು ಬಣ್ಣ

ಗಳನ್ನು ಕಾಣಬಲ್ಲವಾದರೂ ಅವು ಗುರುತಿಸುವ ಬಣ್ಣಗಳು ಮನುಷ್ಯ ಗುರುತಿಸಬಲ್ಲಷ್ಟು ಇಲ್ಲ. ಮನುಷ್ಯರಲ್ಲಿ ಮೂರು ಸಾವಿರದಷ್ಟು ವರ್ಣಭೇದ ಗಳನ್ನು ಗುರುತಿಸಬಲ್ಲವರಿದ್ದಾರಂತೆ. ಆದ್ದರಿಂದ ಕಣ್ಣುಗಳು ನಮ್ಮ ನುಡಿ ಕಟ್ಟಿಗೆ ಬಣ್ಣಗಳನ್ನು ಕೊಟ್ಟಿರುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಕಣ್ಣುಹಾಕು ವುದು, ಕಣ್ಣು ಹೊಡೆಯುವುದು, ಕಣ್ಣಿಗೆ ಕಣ್ಣು ತಾಕಿಸುವುದು, ತಪ್ಪಿಸುವುದು, ಕಣ್ಣಲ್ಲಿ ಕಣ್ಣಿಟ್ಟು ನೋಡುವುದು, ಕಣ್ಣು ತಪ್ಪಿಸುವುದು, ಕಣ್ಣು ಮಿಟುಕಿಸುವುದು, ಕಣ್ಣು ಹಾಯಿಸುವುದು, ಕಣ್ಣು ಕಣ್ಣು ಬಿಡುವುದು, ಕಂಗೆಡುವುದು, ಕಣ್ಗೊಳಿಸುವುದು—ಎಷ್ಟು ಬೇಕು ನಿಮಗೆ! ಕಣ್ಣಿಗೆ ಸಂಬಂಧಿಸಿದ ಕೆಲ ನುಡಿಕಟ್ಟುಗಳು ಸಾಂಸ್ಕೃತಿಕ ಮೂಲದವೂ ಆಗಿವೆ. ಕಣ್ಣು ಬೀಳುವುದು ಅಥವಾ ಕಣ್ಣು ತಾಗುವುದು ಈ ವರ್ಗಕ್ಕೆ ಸೇರಿದ ಪದ ಗಳು. ಸ್ವಲ್ಪ ವ್ಯತ್ಯಾಸದಿಂದಲೂ ಕಣ್ಣಿಗೆ ಸಂಬಂಧಿಸಿದ ಪದಪುಂಜಗಳು ತುಂಬಾ ಅರ್ಥ ವ್ಯತ್ಯಾಸವನ್ನು ಕೊಡಬಹುದು. "ಕಣ್ಣಿಗೆ ಬೀಳು"ವುದಕ್ಕೂ "ಕಣ್ಣು ಬೀಳು"ವುದಕ್ಕೂ ಎಷ್ಟು ಅಂತರ. ಕಣ್ಣು ಮುಚ್ಚಿಕೊಳ್ಳುವುದಕ್ಕೂ ಕಣ್ಮುಚ್ಚುವುದಕ್ಕೂ ಎಷ್ಟು ದೂರ!

ಕಣ್ಣುಗಳ ಶಕ್ತಿಯ ಬಗ್ಗೆ ನಮ್ಮವರಿಗೆ ಅಪಾರವಾದ ನಂಬಿಕೆ ಇತ್ತು. ಹಣೆಗಣ್ಣು ತೆರೆದು ಶಿವ ಮನ್ಮಥನನ್ನು ಸುಟ್ಟೇ ಹಾಕಿದ. ಇದೇನು ಶಿವನೊಬ್ಬ ನದೇ ಪವಾಡವಲ್ಲ. ಸಾಮಾನ್ಯ ತಪಸ್ವಿಯೊಬ್ಬ ಕಣ್ಣುಬಿಟ್ಟು ಒಂದು ಹಕ್ಕಿ ಯನ್ನೇ ಸುಟ್ಟು ಹಾಕಿದ ಕಥೆ ಮಹಾಭಾರತದಲ್ಲಿ ಬರುತ್ತದೆ. ಆದ್ದರಿಂದ ಕಣ್ಣಲ್ಲಿ ಕೆಂಡ ಕಾರುವುದು ನಮಗೆ ಸಹಜ ನುಡಿಕಟ್ಟಾಗಿದೆ. ಮಂತ್ರ ದಿಂದಲೋ ಮಾಯಕದಿಂದಲೋ ಕಣ್ಣು ಕಟ್ಟಬಹುದೆಂದು ನಾವು ನಂಬು ತ್ತೇವೆ. ಆದ್ದರಿಂದ ಕಣ್ಣುಕಟ್ಟಿನ ದುಃಖವನ್ನು ಪ್ರದರ್ಶಿಸಲಿಕ್ಕೂ ನಮಗೆ ಸಾಧ್ಯವಿದೆ.

ಕವಿಗಳಿಗೆ ಕಣ್ಣುಗಳು ಪ್ರಿಯವಾದವು. ಕಣ್ಣುಗಳು ಕಮಲಗಳಾಗುತ್ತವೆ. ಮೀನುಗಳಾಗುತ್ತವೆ. ತಾರೆಗಳಾಗುತ್ತವೆ. ಬಾಣಗಳಾಗುತ್ತವೆ. ಪ್ರೇಮದ ಸಂವಾದ ಕಣ್ಣುಗಳಿಂದಲೇ ಆಗುತ್ತದೆ. ನೇಮಿಚಂದ್ರ ಕವಿಯ ಈ ಪದ್ಯ ನೋಡಿ :

> ಅಂಗಜಮಂತ್ರ ಸಿದ್ಧಿ ವಡೆದಂತಿರೆ ಮೀಂಬೊಣರಾಗಿ ಜಾಳ್ವ ಜಾ
> ಳಂಗಳ ಸಿಲ್ಕುಗಂಡುವು ಕುಮಾರಿಯ ಕಣ್, ಮರಿದುಂಬಿಯಾಗಿ ಸೊ
> ರ್ಕಿಂಗೆ ಸರೋಜದೊಂದು ಸವಿಗಂಡುವು, ಬಾಳಚಕೋರಮಾಗಿ ಬೆ
> ಳ್ದಿಂಗಳ ಸುಗ್ಗಿಗಂಡವು ಕುಮಾರನ ಕಾಂತಿ ಮುಖೇಕ್ಷಣಂಗಳೊಳ್

ಹೊಸದಾಗಿ ಲಗ್ನವಾದ ಗಂಡು ಹೆಣ್ಣಿನ ಚೆಲುವನ್ನು ಕಂಡಷ್ಟೂ ತೃಪ್ತಿ ಗಾಣದ ಪರಿಯನ್ನು ಆತ ಬಣ್ಣಿಸುತ್ತಿದ್ದಾನೆ. ಅವಳ ಕಣ್ಣುಗಳು ಮೀನು ಜೋಡಿಯಾಗಿ ಅವನ ಕಣ್ಣ ಬಲೆಯಲ್ಲಿ ಸಿಕ್ಕಿಕೊಂಡವಂತೆ; ಮರಿದುಂಬಿ ಗಳಾಗಿ ಅವನ ಮುಖಕಮಲದಲ್ಲಿ ಮಗ್ನವಾದವಂತೆ; ಚಕೋರ ಪಕ್ಷಿಗಳಾಗಿ ಅವನ ಪ್ರೈಯ ಬೆಳ್ದಿಂಗಳಲ್ಲಿ ವಿಹರಿಸಿದವಂತೆ! ನವ ವಧುಗಳು ತಮ್ಮ ಕೌಮಾರಹರಣ ಮಾಡಿದ ಗಂಡಂದಿರನ್ನು ನೋಡುವ ಬಗೆಯನ್ನು ಕಂಡವ ರಾರೂ ನೇಮಿಚಂದ್ರನ ಈ ಮಾತುಗಳಲ್ಲಿ ಬಹಳ ಅತಿಶಯೋಕ್ತಿ ಇದೆ ಎನ್ನಲಾರರು. ಇಂಥ ಹೆಣ್ಣುಗಳನ್ನೇ ಕವಿಗಳು ಮದಿರಾಕ್ಷಿಯರು ಎನ್ನುವುದು. ಅವರಿಗೂ ಅವರ ನೋಟಕ್ಕೆ ಗುರಿಯಾದವರಿಗೂ ಅವು ಕಳ್ಳು ಕುಡಿಸು ವವೇ.

ಮೂಗು ಮನುಷ್ಯನ ಸಂವೇದನಾಪ್ರಪಂಚದಲ್ಲಿ ಅಷ್ಟು ಮಹತ್ತ್ವ ಹೊಂದಿಲ್ಲವೆಂದು ಹೇಳಿದೆ. ಆದರೂ ಅದು ಕೆಲ ಸಾಭಿಪ್ರಾಯವಾದ ವಾಕ್ ವಿಭ್ರಮಗಳಿಗೆ ಜನ್ಮ ಕೊಟ್ಟಿದೆ. ಇಂಗ್ಲಿಷಿನಲ್ಲಿರುವ leading by the noseಗೆ ಸಮಾನವಾದ ಕನ್ನಡ ಪದ ಇಲ್ಲ. Poking one's nose ಕೂಡ ಕನ್ನಡದಲ್ಲಿ ಕಾಣಿಸದು. (ಇದರ ಅರ್ಥ ನಾವು ಇತರರ ವಿಚಾರಗಳಲ್ಲಿ ಮೂಗನ್ನು poke ಮಾಡುವುದಿಲ್ಲ ಎಂದಲ್ಲ!) ನಾವು smelling a rat ಮಾಡುವುದೂ ಇಲ್ಲ. ಆದರೆ ಇಂಗ್ಲಿಷಿನವರು "ಮೂಗು ಕೊಯ್ಯು"ವುದಿಲ್ಲ. ಅವರಿಗೆ ಜನ್ಮಾಂತರ "ವಾಸನೆ"ಯೂ ಇಲ್ಲ. ಮದುವೆ ಮಾಡುವುದೆಂದರೆ ಮೂಗುದಾಣ ಹಾಕುವುದೆಂದು ನಾವು ಅವರಿಗಿಂತ ಚೆನ್ನಾಗಿ ಬಲ್ಲೆವು. ಮೂಗು ತುರಿಸಿ ಜಗಳಕ್ಕೆ ನಾಂದಿ ಹಾಕುವುದು ಅವರಿಗೆ ತಿಳಿಯದೇ ತಿಳಿ ಯದು.

ಹೋಳಿಗೆ ಮಾಡುವವನಿಗೆ ಮೀಸೆ ತಿಕ್ಕಲಿಕ್ಕೆ ಇಬ್ಬರು ಬೇಕಂತೆ—ಅಂತ ಒಂದು ಗಾದೆ ಇದೆ. ಮೀಸೆಗಳು ಹೆಂಗಸರಲ್ಲಿ ಕಾಮೋತ್ತೇಜನವುಂಟು

ಮಾಡಲು ಸಹಾಯ ಮಾಡುತ್ತವೆಂದು ಫ್ರೆಂಚ್ ಕತೆಗಾರ ಮೋಪಾಸಾ ಹೇಳುತ್ತಾನೆ. ನಮ್ಮಲ್ಲಿ ಮೀಸೆ ಕಾಮುಕ್ಕಿಂತಲೂ ಶೌರ್‍ಯದ, ಗೌರವದ ಸಂಕೇತವಾಗಿದೆ. ಮೀಸೆಹೊತ್ತ ಗಂಡಸರು ನಾವು, ಮೀಸೆಯ ಮೇಲೆ ಕೈ ಯಾಡಿಸಿ ಪರಾಕ್ರಮ ತೋರಿಸುತ್ತೇವೆ. ಮೀಸೆ ಮೂಡುವಾಗ ದೇಶ ಕಾಣಿಸು ವುದಿಲ್ಲವಂತೆ. ಈ ಕೆಲಸ ಮಾಡದಿದ್ದರೆ ಮೀಸೆ ಬೋಳಿಸಿಕೊಳ್ಳುತ್ತೇನೆ ಎಂದು ಪಂಥ ಕಟ್ಟುತ್ತೇವೆ. ಮನುಷ್ಯನ ಫ್ಯಾಶನ್ನುಗಳು ಮೀಸೆ ಇಡುವುದು ಮತ್ತು ಮೀಸೆ ತೆಗೆಯುವುದನ್ನು ಪರ್‍ಯಾಯವಾಗಿ ಬದಲಿಸುತ್ತಾ ಇವೆ. ಈಗ ಕ್ಲೀನ್ ಶೇವಿನ ಯುಗ. ಮೀಸೆಗಳು ಅರ್ಥವನ್ನು ಕಳೆದುಕೊಳ್ಳುತ್ತಿವೆ.

ಸಂಸ್ಕೃತದಲ್ಲಿ ಮೋರೆಗೂ ಬಾಯಿಗೂ ಸೇರಿಯೇ ಮುಖ, ವದನ ಶಬ್ದಗಳು ಬಳಕೆಯಲ್ಲಿವೆ. ಬಾಯಿ ಇದ್ದದ್ದೇ ಮುಖ ಅಂತ ಭಾರತೀಯಾರ್‍ಯರು ಭಾವಿಸಿ ದ್ದರೋ ಏನೋ? ಮುಖಿ, ಮುಖಿಯಾ ಎನ್ನುವ ಭಾರತೀಯಾರ್‍ಯ ಪದ ಗಳು ಎಲ್ಲರ ಪರವಾಗಿ ಮಾತಾಡುವವ—ಅರ್ಥಾತ್ ಜನತೆಯ ಬಾಯಿ ಎಂಬರ್ಥದಲ್ಲೇ ಪ್ರಚಾರಕ್ಕೆ ಬಂದಿರಬಹುದು. ಆದರೆ ದ್ರಾವಿಡ "ಬಾಯಿ" ಬಹುಮುಖವಾದ ಅರ್ಥಗಳನ್ನು ಬಳಸಿಕೊಂಡಿದೆ. "ಬಾಗಿಲು" ಎಂಬುದೇ ಬಾಯ್-ಇಲ್ ಮನೆ (ಇಲ್)ಯ ಬಾಯಿ ಎಂಬುದಾಗಿ ನಿಷ್ಪನ್ನವಾಗಿದೆ. "ಬಿನ್ನಹಕೆ ಬಾಯಿಲ್ಲವಯ್ಯ" ಎಂದು ಪುರಂದರದಾಸರು ಪಶ್ಚಾತ್ತಾಪಪಟ್ಟಿ ದ್ದಾರೆ. ಎಷ್ಟು ತಪ್ಪು ಮಾಡಿದರೂ "ಬಾಯಾಳ"ರು ದಕ್ಕಿಸಿಕೊಳ್ಳುತ್ತಾರೆ ಅನ್ನಿ. ಸತ್ಯ ಹೇಳುವವರನ್ನೂ ಬಾಯ್‌ಬಡಿದು ಸುಮ್ಮನೆ ಕೂಡ್ರಿಸಬಹುದು. ಇವರೇ ಬಾಯ್ಬಡಕರು. ಸಣ್ಣ ಬಾಯಲ್ಲಿ ದೊಡ್ಡ ಮಾತು ಬರುವುದು ಹೆಚ್ಚು. ಬಾಯ್‌ಬಡಿವಾರಕ್ಕೆ ಏನೂ ಖರ್ಚು ತಗಲುವುದಿಲ್ಲ. ಆದರೆ ಬಾಯಲ್ಲಿ ಸಿಹಿ ಹಾಕುವುದು ಈ ತುಟ್ಟಿದಿನಗಳಲ್ಲಿ ವೆಚ್ಚದ ಕೆಲಸ. ಬಾಯಿ ಸತ್ತವರು ಇಂದು ಏನೂ ಸಾಧಿಸಲಾರರು. ಬಾಯಿಬಿಡಿಸುವುದು ಹೇಗೆಂದು ಪೋಲೀಸರಿಗೆ ಗೊತ್ತು. ಎದುರಾಳಿಯ ಬಾಯಿ ಕಟ್ಟುವಂತೆ ನೀವು ವಾದಿಸು ತ್ತೀರಿ; ಆದರೆ ನಿಮ್ಮ ಬಾಯಿ ಮುಚ್ಚಿಸುವುದಕ್ಕೆ ಅವನು ಬೇರೆ ಪ್ರಯೋಗ ಮಾಡಬಹುದು. ಬಾಯಿ ಹೊಲಿದುಕೊಂಡಿದ್ದೀರಾ ಅಥವಾ ಬಾಯಿಗೆ ಬೀಗ ಹಾಕಿಕೊಂಡಿದ್ದೀರಾ? ಅಂದರೆ ನಿಮಗೆ ಮಾತಾಡಲು ಏನು ಧಾಡಿ ಅಂತ. ಬಾಯಿ ಬಿಟ್ಟರೆ ಬಣ್ಣಗೇಡು ಅಂತ ನಿಮಗೆ ಗೊತ್ತು. ಅದಕ್ಕೇ ನೀವು ಮಾತಾ

ಡುವುದಿಲ್ಲ. ಇಂಗ್ಲಿಷಿನವರು ಮೂಗು ಹಾಕುವಲ್ಲಿ ನಾವು ಬಾಯಿ ಹಾಕುತ್ತೇವೆ. ಆದರೆ ಇದೆಲ್ಲ ಬಾಯಿ ಕೆಡಿಸಿಕೊಳ್ಳೋ ವ್ಯಾಪಾರ, ಅಷ್ಟೇ. ಕಣ್ಣು ಮತ್ತು ಕಿವಿ ತೆರೆದಿರಬೇಕು ಬಾಯಿ ಮುಚ್ಚಿರಬೇಕು ಎಂಬ ಹಿರಿಯರ ವಾಕ್ಯದಲ್ಲಿ ಜಾಣ್ಮೆ ಇದೆ. ಆದರೆ ಕೆಲವರ ಕಿವಿಯಲ್ಲಿ ಹೊಕ್ಕದ್ದು ಬಾಯಲ್ಲಿ ಹೊರ ಬಾರದೆ ಬಿಡದು ಬಾಯಿಗೂ ಬಾಯಿಗೂ ಹತ್ತುವುದಕ್ಕಿಂತ ಕೈಗೂ ಬಾಯಿಗೂ ಹತ್ತುವುದು ವಾಸಿಯಲ್ಲವೆ ?

## ಇಡಲೀ ಶಾಸ್ತ್ರ

ಇಡಲಿಗೆ ಭಾರತದ ತಿಂಡೀ ಮಂಡಲಿಯಲ್ಲಿ ಅಧಿಕೃತ ಸ್ಥಾನ ಸಿಕ್ಕಿದ್ದು ೧೯೫೦ರ ಆವಡಿ ಕಾಂಗ್ರೆಸ್ಸಿನಲ್ಲಿ. ಮರಣೋತ್ತರ ಭಾರತ ರತ್ನ ಪ್ರಶಸ್ತಿ ವಿಜೇತರೂ ಮದ್ರಾಸಿನ ಕಿಂಗ್ ಮೇಕರರೂ ಕಾಮರಾಜ ಸೂತ್ರದ ಜನಕರೂ ಆದ ದಿವಂಗತ ಕೆ. ಕಾಮರಾಜ ನಾಡಾರರು ಅಲ್ಲಿ ದಿಕ್ಕುದಿಕ್ಕುಗಳಿಂದ ಬಂದ ಕಾಂಗ್ರೆಸ್ ಪ್ರತಿನಿಧಿಗಳಿಗೆ ಇಡಲೀ-ಸಾಂಬಾರ ಸಮಾರಾಧನೆ ಮಾಡಿಸಿದರು. ಉತ್ತರ ಭಾರತದವರು ದಕ್ಷಿಣದವರ ದ್ರಾವಿಡ ಕಳಗವನ್ನಾಗಲಿ, ದಕ್ಷಿಣದವರ ಆರಂಭಶೂರತ್ವ (ಆರಂಭ ಶೂರಾಃ ಖಲು ದಾಕ್ಷಿಣಾತ್ಯಾಃ) ವನ್ನಾಗಲಿ, ದ್ರಾವಿಡರ ಪ್ರಾಣಾಯಾಮವನ್ನಾಗಲಿ, ಅವರ ನಾಲ್ಕು ಮೊಳದ ಲುಂಗಿಯನ್ನಾಗಲಿ, ಅವರು ರಚಿಸಿದ ಆಣಕ ರಾಮಾಯಣವನ್ನಾಗಲಿ, ಅವರ ಬುದ್ಧಿ ಚಮತ್ಕಾರವನ್ನಾಗಲಿ ಮೆಚ್ಚದಿರಬಹುದು; ಆದರೆ ಸಾಂಬಾರ ಸಮುದ್ರದಲ್ಲಿ ದ್ವೀಪಪ್ರಾಯವಾಗಿ ಕಾಣಿಸುವ ಇಡಲಿಯನ್ನು ಮಾತ್ರ ಅವರು ಮೆಚ್ಚದಿರಲು ಸಾಧ್ಯವೇ ಇರಲಿಲ್ಲ. ಪಾಲ್ಘಾಟಿನ ಹೆಸರನ್ನು ಭಾರತದ ನಕಾಸೆಯಲ್ಲಿ ಪ್ರತಿಷ್ಠಿತಗೊಳಿಸಿದ ಸಾಂಬಾರ ಸಹಿತವಾದ ಇಡಲಿ ಉತ್ತರ ಭಾರತವನ್ನು ಗೆದ್ದುಬಿಟ್ಟು, ಲಕ್ಷ್ಮಣ ಸಮೇತನಾದ ರಾಮನು ದಕ್ಷಿಣ ಭಾರತವನ್ನು ಗೆದ್ದದ್ದಕ್ಕೆ ಪ್ರತೀಕಾರ ಮಾಡಿಬಿಟ್ಟಿದೆ. ಎಲ್ಲಿ ದಿಲ್ಲಿ, ಎಲ್ಲಿ ಕಾನಪುರ, ಎಲ್ಲಿ ಮುಂಬಯಿ—ಎಲ್ಲಾ ಕಡೆ ಜನರು ತಮ್ಮ ಪಿತ್ರಾರ್ಜಿತವಾದ ರೋಟಿಗಳನ್ನು ಕೈ ಬಿಟ್ಟು ಇಡಲಿಗೆ ಶರಣಾಗತರಾಗಿದ್ದಾರೆ.

ಈ ದ್ರಾವಿಡ ಕೀರ್ತಿಪತಾಕೆಗೆ ದೊರೆತ ಅಹಿಂಸಾತ್ಮಕ ವಿಜಯ ನ್ಯಾಯವೂ

ಸಾರ್ಥಕವೂ ಆದದ್ದೇ. ಮಲ್ಲಿಗೆಯ ದಂಡೆಯಂತೆ, ಶಿವನ ನಗೆಯಂತೆ, ನಮ್ಮ ಪುರಾತನ ರಾಜರ ಕೀರ್ತಿಯಂತೆ ಬೆಳ್ಳಗಾಗಿರುವ ಇಡಲಿ, ಕಾಶಿಯ ವಿದ್ವಾಂಸರಿಂದ ತಲೆವಾಗಿಸಿಕೊಂಡ ದ್ರವಿಡಸಾಧು ಅಪ್ಪಯ ದೀಕ್ಷಿತರಷ್ಟೇ ಸಾತ್ತ್ವಿಕವಾದದ್ದು, ಮತ್ತು ಸತ್ತ್ವಶೀಲವಾದದ್ದು. ಅದನ್ನು ಉಗಿಯಲ್ಲಿ ಬೇಯಿಸುವುದರಿಂದ ಅದರೊಳಗಿನ ಯಾವ ವಿಟಾಮೀನುಗಳೂ (ವಿಟರಿಗಾಗಲಿ ಮೀನುಗಳಿಗಾಗಲಿ ಇವು ಸಂಬಂಧಿಗಳಲ್ಲ) ನಷ್ಟವಾಗುವುದಿಲ್ಲೆಂದು ಆಹಾರಪಂಡಿತರು ಅದಕ್ಕೆ ಪ್ರಶಸ್ತಿ ಕೊಟ್ಟಿದ್ದಾರೆ. ಅದರ ಚರಿತ್ರೆ ಬಹಳ ಪ್ರಾಚೀನವಾದದ್ದು. "ವಡ್ಡಾರಾಧನೆ"ಯಲ್ಲಿ ಜೈನ ಮುನಿಗಳಿಗೆ "ಇಡ್ಡಲಿಗೆ"ಯನ್ನು ಬಡಿಸಿದ್ದಾಗಿ ಹೇಳಿದೆ. ಅಂದರೆ ಏನಿಲ್ಲೆಂದರೂ ಸಾವಿರ ವರ್ಷಗಳ ಹಿಂದಿನಿಂದ ಕನ್ನಡಿಗರು ಅದನ್ನು ಬಲ್ಲರು. ಜೈನಮುನಿಗಳೇ ಅದನ್ನು ಮೆದ್ದಿದ್ದಾರೆಂದಮೇಲೆ ಅದರ ಪಾವಿತ್ರ್ಯದ ಬಗ್ಗೆ ಪ್ರಶ್ನಿಸುವಂತೆಯೆ ಇಲ್ಲ.

ಚಾಲುಕ್ಯ ಸೋಮೇಶ್ವರನು ಇಡ್ಡಲಿಗೆಯನ್ನು ಕೇವಲ ಉದ್ದಿನ ರುಬ್ಬಿದ ಹಿಟ್ಟಿನಿಂದ ಮಾಡುತ್ತಾರೆಂದು ಹೇಳಿದ್ದಾನೆ. ಸೋಮೇಶ್ವರನ ಅನಂತರ ಬರೇ ಉದ್ದಿಗಿಂತ ಅಕ್ಕಿ ನುಚ್ಚಿನೊಡನೆ ಬೆರೆಸಿ ಇಡ್ಡಲಿಗೆ ಮಾಡಿದರೆ ಇನ್ನೂ ಶ್ರೇಷ್ಠವೆಂಬುದಾಗಿ ಯಾವನೋ ಅಥವಾ ಯಾವಳೋ ಕಂಡುಹಿಡಿದು ಕ್ರಾಂತಿ ಮಾಡಿರಬೇಕು. ನಿಮಗೆ ಮಧುಮೇಹವಿದ್ದರೆ ಗೋದಿ ರವಾ ಕೂಡ ಅಕ್ಕಿ ನುಚ್ಚಿಗೆ ಸರಿಮಿಗಿಲೆನಿಸುವ ಸಬ್‌ಸ್ಟಿಟ್ಯೂಟ್ ಅಥವಾ ಬದಲಿ ಆಗಬಲ್ಲದು.

ಇಡಲಿಯ ಆಕೃತಿ ಹದವಾಗಿ ನಯನಮನೋಹರವಾಗಿದೆ. ಅದರ ಆಕೃತಿಯಲ್ಲಿ ಒಂದು ತರಹದ ಕಾಸ್ಮಿಕ್ ಅಥವಾ ಬ್ರಹ್ಮಾಂಡಿಕ ಲಕ್ಷಣ ಇದೆ. ನಮ್ಮ ಆಕಾಶಗಂಗೆ, ಅದರ ನೆರೆಯ ಆಂದ್ರೋಮಿದಾ ಮೊದಲಾದ ಬ್ರಹ್ಮಾಂಡಗಳನ್ನು ಸೃಷ್ಟಿಕರ್ತನು ಇಡಲಿಯ ಆಕೃತಿಯಲ್ಲಿ ನಿರ್ಮಿಸಿದ್ದಾನೆಂದು ವಿಜ್ಞಾನಿಗಳು ಹೇಳುತ್ತಾರೆ. ಮತ್ತ ಪ್ರತಿ ಬ್ರಹ್ಮಾಂಡದಲ್ಲಿ ಚದರಿದ ನಕ್ಷತ್ರಗಳ ನಿಬಿಡತ್ವ ಸುಮಾರಾಗಿ ಇಡಲಿಯೊಳಗಿನ ನುಚ್ಚಿನ ಕಣಗಳ ಸಾಂದ್ರತೆಯಷ್ಟೇ ಇರಬಹುದು. ಬ್ರಹ್ಮಾಂಡಗಳ ಸೃಷ್ಟಿ ಯಾವಾಗ ಮೊದಲು ಅವು ಬಂಗಾಲಿಗಳ ರಸಗುಲ್ಲಾ, ಅಥವಾ ಕೊನೆಯ ಮರಾಠಿ ಪೇಶ್ವೆ ಬಾಜೀರಾಯನನ್ನು ಅಜರಾಮರನನ್ನಾಗಿ ಮಾಡಿದ ಉಂಡಿಯ (ಅವನಿಗೆ ಉಂಡೀ ಬಾಜೀರಾಯನೆಂದೇ ಹೆಸರು ಬಿದ್ದಿತ್ತು) ಆಕಾರದಲ್ಲಿದ್ದು ಬರಬರುತ್ತ

ಇಡಲಿಗಳನ್ನು ಹೆಚ್ಚುಹೆಚ್ಚಾಗಿ ಹೋಲಿ, ಕಟ್ಟಕಡೆಗೆ ದಕ್ಷಿಣದ ಇನ್ನೊಂದು ಖಾದ್ಯವಾದ ದೋಸೆಯ ಚಪ್ಪಟೆ ಆಕಾರಕ್ಕೆ ಬರುತ್ತವಂತೆ. ಬ್ರಹ್ಮಾಂಡಗಳು ಈ ಸ್ಥಿತಿಗೆ ಬಂದ ಕೂಡಲೆ, ದೋಸೆಗಳನ್ನು ಬಹುವಾಗಿ ಮೆಚ್ಚುವ ಮಹಾ ವಿಷ್ಣು ವಿಶ್ವರೂಪವನ್ನು ಧರಿಸಿ ಅವುಗಳನ್ನು ಹರಿದು ತಿಂದುಹಾಕು ತ್ತಾನೆ.

ಇಡಲಿಯ ಹದವಾದ ಗಾತ್ರ, ಸುಂದರವಾದ ಆಕೃತಿ ಅದನ್ನು ಜನಾನು ರಾಗದ ಉನ್ನತ ಸ್ಥಾನಕ್ಕೆ ಏರಿಸಿದೆ. ಅಲ್ಲದಿದ್ದರೆ, ಇಡಲಿಗೂ ದಕ್ಷಿಣ ಕನ್ನಡ ದಲ್ಲಿ "ಮೂಡೆ", "ಕಡುಬು", "ಅಡ್ಡೆ", "ಗುಂಡ" ಇತ್ಯಾದಿ ಹೆಸರುಗಳಿಂದ ಪ್ರಚಲಿತವಾದ ಇಡಲಿಯ ಅಣ್ಣನಿಗೂ ಒಳಸತ್ತ್ವದಲ್ಲಿ ಭೇದವಿಲ್ಲ. ಎರಡಕ್ಕೂ ಬೇಕಾದ್ದು ಉದ್ದಿನಹಿಟ್ಟು, ಅಕ್ಕಿನುಚ್ಚು ಮಿಶ್ರಣವೇ. ಕೇವಗೆ ಜಾತಿಯ ಮುಂಡಗೆಯೆಂಬ ಸಸ್ಯದ ಮುಳ್ಳೆಲೆಯನ್ನು ಕಂಟಕ ಮುಕ್ತಗೊಳಿಸಿ, ಸುರುಳಿ ಯಾಗಿ ಸುತ್ತಿ, ಮಿಲ್ಲಿನ ಹೊಗೆ ನಳಿಗೆಯ ಹಾಗೆ ಕೊಳವೆ ಮಾಡಿ, ಅದರೊಳಗೆ ಇಡಲಿ ಹಿಟ್ಟನ್ನು ಹೊಯ್ದು ಉಗಿಯಲ್ಲಿ ಬೇಯಿಸಿದರೆ ಅದೇ "ಮೂಡೆ" ಅಥವಾ "ಕಡುಬು." ಬೆಂದ ಮೇಲೆ ಮೂಡೆಯನ್ನು ಬೇರ್ಪಡಿಸಿದರೆ ಅದು ನೆಟ್ಟಗೆ ಮಾಡಿದ ಪೀಸಾದ ಗೋಪುರವನ್ನು ಹೋಲುತ್ತದೆ. ಹಲಸಿನೆಲೆಗಳನ್ನು ಒಂದಕ್ಕೊಂದು ಹೆಟ್ಟಿ ತಯಾರಿಸಿದ "ಕೊಟ್ಟೆ"ಯಲ್ಲಿ ಅದೇ ಹಿಟ್ಟನ್ನು ಹೊಯ್ದು ಬೇಯಿಸಿದ್ದೇ "ಗುಂಡ." ಅದು ವಿಪರೀತ ಕೊಬ್ಬಿದ ಹೆಣ್ಣಿನಂತಾ ಗುವುದರಿಂದ ರಸಿಕರಿಗೆ ಗ್ರಾಹ್ಯವಾಗುವುದಿಲ್ಲ. ಆದ್ದರಿಂದ ಉಡುಪಿ ಹೋಟೆಲು ಗಳಲ್ಲಿ ಅವರ ಸ್ವದೇಶ ವಿಶೇಷವಾದ ಮೂಡೆ, ಗುಂಡಗಳು ಕಾಣಿಸದೆ ಹದ ಮಿದು ಸುಂದರ ಇಡ್ಲಿಗಳ ಪ್ರಸ್ಥವೇ ನಡೆಯುತ್ತದೆ. ಉಡುಪಿ ಪಾಲಿಸಿಗೆ ಸೋತ ಒಂದೇ ಒಂದು ಉದಾಹರಣೆಯೆಂದರೆ ಇಡಲಿಯದು.

ಇಡಲಿ ಬೇಯಿಸುವಾಗ ಅದರಲ್ಲಿ ಕೆಲ ಕಡಲೇಬೇಳೆಗಳನ್ನೋ ಹಸಿಶುಂಠಿಯ ಚೂರುಗಳನ್ನೋ ಹಸಿಮೆಣಸಿನಕಾಯಿಯ ತುಣುಕುಗಳನ್ನೋ ಹಾಕುವವ ರಿದ್ದಾರೆ. ಆದರೆ ಇದು ಪ್ರಶಸ್ತವಲ್ಲ. ಉತ್ತಮ ಇಡಲಿಯೆಂದರೆ ಯಾವಾ ಗಲೂ ಸಾತ್ತ್ವಿಕ, ವರ್ಣಸಾಂಕರ್ಯವಾಗದ, ಶುದ್ಧ ತಳಿಯ ಇಡಲಿಯೇ. ನಿಮಗೆ ಕಡಲೇಬೇಳೆ, ಹಸಿಮೆಣಸಿನಕಾಯಿ, ಹಸಿಶುಂಠಿಗಳ ಮೋಹವಿದ್ದರೆ ಅವುಗಳನ್ನು ಸೇರಿಸಿ ರುಬ್ಬಿ ಚಟ್ನಿ ಮಾಡಿಸಿಕೊಂಡು ಅದರೊಂದಿಗೆ ಇಡಲಿ

ಯನ್ನು ತಿನ್ನಿರಿ. ಇಡಲಿಯ ಜಾತಿಯನ್ನು ಮಾತ್ರ ಭ್ರಷ್ಟಗೊಳಿಸಬೇಡಿರಿ.

"ಇಟಲಿಗೆ ರಾಜಧಾನಿ ಯಾವುದು ?" ಅಂತ ಕೇಳಿದ ಭೂಗೋಲ ಮಾಸ್ತರಿಗೆ ಶಿಷ್ಯೋತ್ತಮನು "ಇಡ್ಲಿಗೆ ರಾಜಧಾನಿ ಚಟ್ನಿ" ಅಂತ ಉತ್ತರ ಕೊಟ್ಟನೆಂಬುದಾಗಿ ಒಂದು ಹಳೇ ಜೋಕು ಇದೆ. ಕೆಲವರು ಇಡಲಿಯನ್ನು ಹಸಿ ಅಥವಾ ಚಟ್ನಿಯೊಡನೆ ತಿನ್ನುವುದು ನಿಜ. ಹಾಗೆಯೆ ಅದನ್ನು ಮಜ್ಜಿಗೆ ಹುಳಿ ಉರುಫ್ ಮೋರ್‌ಕೊಳಂಬುವಿನೊಡನೆಯೂ ತಿನ್ನುವುದುಂಟು. ಆದರೆ ಇವೆಲ್ಲ ಗೌಣಮಾರ್ಗಗಳು. ಇಡಲಿಗೆ ಅದ್ವಿತೀಯವಾದ ಸಂಗಾತಿಯೆಂದರೆ ಸಾಂಬಾರೇ ಎಂಬುದು ಎಂದೋ ರಸಿಕರು ಸಿದ್ಧಾಂತಿಸಿದ ಮಾತು. ಇಡಲಿಯನ್ನು ಚಟ್ನಿಯೊಡನೆ ತಿನ್ನುವುದೆಂದರೆ ದೋಸೆಯನ್ನು ಸಾಂಬಾರದೊಡನೆ ತಿನ್ನುವಷ್ಟೇ ವಿಪರೀತ ವೃತ್ತಿಯೆಂದು ಲಾಂಗೂಲಾಚಾರ್ಯರ ಮತ.

—ಮತ್ತು ಸಾಂಬಾರು ಕೂಡ ಈರುಳ್ಳಿಯದೇ ಆಗಬೇಕೆಂದು ಹೇಳುತ್ತಿರುವುದಕ್ಕೆ ಸನಾತನಿಗಳ ಕ್ಷಮೆ ಕೇಳುತ್ತೇನೆ. ಆದರೆ ಇಡಲಿಗೆ ಸರಿಹೊಂದುವ ಸಾಂಬಾರಿಗೆ ಈರುಳ್ಳಿ ಹೊರತು ಶಾಕಾಂತರ ಇಲ್ಲೆಂಬುದು ಅನುಭವಸಿದ್ಧವಾದ ಮಾತು. ನಾನು ಈ ವಿಷಯದಲ್ಲಿ ನಿರುಪಾಯ. ಅದೂ ದೊಡ್ಡ ದೊಡ್ಡ ಈರುಳ್ಳಿಗಳನ್ನು ಹೋಳು ಮಾಡಿ ಹಾಕಿ ತಯಾರಿಸುವುದು ಶಿಷ್ಟಸಮ್ಮತ ಸಾಂಬಾರಲ್ಲ. ಅತಿ ಚಿಕ್ಕ ಗಾತ್ರದ, ಸ್ವಲ್ಪ ದೀರ್ಘ ಗೋಲಾಕೃತಿಯ, ಕೆಂಚು ಬಣ್ಣದ ಸಾಂಬಾರ್ ನೀರುಳ್ಳಿಗಳನ್ನು ಮೇಲಿನ ಒಣ ಸಿಪ್ಪೆ ಮಾತ್ರ ಪ್ರತ್ಯೇಕಿಸಿ ಇಡಿಯಾಗಿ ಹಾಕಿ ಪಾಕ ಮಾಡಿದ ಸಾಂಬಾರೇ ಶಾಸ್ತ್ರೋಕ್ತವಾದದ್ದು. ಸಾಂಬಾರು ಮುದ್ದೆಯಾಗಿರಬಾರದು ; ಸಾರಿಗಿಂತ ಸ್ವಲ್ಪ ದಪ್ಪವಾಗಿರಬೇಕಷ್ಟೇ.

ಕೊನೆಯದಾದರೂ ಕಡಿಮೆಯಲ್ಲದ್ದು ಇಡಲಿಯನ್ನು ಹೇಗೆ ತಿನ್ನಬೇಕು ಅನ್ನುವ ಪ್ರಶ್ನೆ ; ಇದರಲ್ಲಿ ಹೇಗೆ ಬಡಿಸಬೇಕು ಅನ್ನುವುದೂ ಸೇರಿದೆ. ಆವಡಿಯಲ್ಲಿ ಬಾಳೆ ಎಲೆ ತುಂಡುಗಳಲ್ಲಿ ಇಡಲಿ ಸಾಂಬಾರು ಬಡಿಸಿದರೆಂದು ಪ್ರಕಟವಾಗಿತ್ತು. ಬಾಳೆ ಎಲೆಯೇನು, ಮುತ್ತುಗದ ಪತ್ರಾವಳಿಯೇನು—ತೊಳೆಯುವ ಕೆಲಸ ಉಳಿಸುವ ಉಪಾಯವಾದೀತು ಹೊರತು—ಅದು ಯೋಗ್ಯವೂ ಅಲ್ಲ, ಕಾರ್ಯಕ್ಷಮವೂ ಅಲ್ಲ. ಇಡಲಿಯನ್ನು, ಅದೂ ಸಾಂಬಾರಯುಕ್ತವಾಗಿದ್ದರೆ ಬಡಿಸಬೇಕಾದ್ದು ಪ್ಲೇಟುಗಳಲ್ಲೇ ಎಂಬುದು ಸ್ವಯಂವೇದ್ಯ.

ಐದಿಂಚು ವ್ಯಾಸವುಳ್ಳ, ಇನ್ನು ಉಗಿ ಹೊಮ್ಮುತ್ತಿರುವ ಇಡಲಿಯನ್ನು ಹನ್ನೊಂದಿಂಚು ವ್ಯಾಸವುಳ್ಳ ಸ್ಟೀಲಿನ ಪ್ಲೇಟಿನ ಕೇಂದ್ರ ಸ್ಥಾನದಲ್ಲಿರಿಸಬೇಕು. ಅದರ ಮೇಲೆ ಬಿಸಿ ಬಿಸಿ ಸಾಂಬಾರನ್ನು ಇಡಲಿಯ ಮೇಲಿನ ನಾಲ್ಕರಲ್ಲೊಂದಂಶ ಮಾತ್ರ ದೃಗ್ಗೋಚರವಾಗುವಷ್ಟು ಹೊಯ್ಯಬೇಕು. ಈ ಸದ್ವೀಪ ಸಮುದ್ರವನ್ನು ಭಕ್ಷಕನ ಮುಂದೆ ಇರಿಸತಕ್ಕದ್ದು ಮತ್ತು ಅದರ ಮೇಲೆ ಎರಡು ಚಹಾ ಚಮಚದಷ್ಟು ಗಮಗಮಿಸುವ ಕರಗಿದತುಪ್ಪವನ್ನು (ಹೆರೆತುಪ್ಪ ಕೂಡದು!) ಹೊಯ್ಯತಕ್ಕದ್ದು (ಇಡ್ಲಿ-ಬೆಣ್ಣೆ ರೋಗಿಗಳಿಗೇ ಸೈ). ಮೇಲೊಂದು ಸ್ವಚ್ಛ ಚಮಚೆಯನ್ನು ಒದಗಿಸಿಬಿಟ್ಟರೆ ಬಡಿಸುವವನ ಪಾತ್ರ ಮುಗಿಯಿತು.

ಇನ್ನುಳಿದದ್ದು ತಿನ್ನುವವನ ಪಾತ್ರ. ಅವನು ಚಮಚೆಯಿಂದ ಇಡ್ಲಿಯನ್ನು ತುಣುಕು ತುಣುಕಾಗಿ ಕತ್ತರಿಸಬೇಕು. ಆ ಹೋಳುಗಳು ಸಾಂಬಾರನ್ನು ಹೀರಿಕೊಳ್ಳುವಷ್ಟು ಚಿಕ್ಕವಾಗಿರಬೇಕು, ಆದರೆ ಪುಡಿಪುಡಿಯಾಗಿ ಸಾಂಬಾರಿನೊಡನೆ ಮುದ್ದೆಯಾಗುವಷ್ಟು ಸಣ್ಣವಾಗಿರತಕ್ಕದ್ದಲ್ಲ. ಅನ್ನವನ್ನು ಹುಳಿಯಲ್ಲಿ ಕಲಸುವ ಹಾಗೆ ಇಡಲಿಯನ್ನು ಸಾಂಬಾರಿನಲ್ಲಿ ಕಲಸಿ ಬಕಬಕ ತಿನ್ನುವವನಷ್ಟು ಕಲಾಭಿರುಚಿಹೀನ ಬೇರೊಬ್ಬ ಇರಲಾರ. ಇಡಲಿ ಮತ್ತು ಸಾಂಬಾರಿನ ಪಾಕ, ಹದ ಸರಿಯಾಗಿದ್ದರೆ ತುಣುಕುಗಳು ಸಾಂಬಾರನ್ನೆಲ್ಲ ಹೀರಿಕೊಂಡು ತಮ್ಮ ತುಣುಕುತನವನ್ನು ಕಳೆದುಕೊಳ್ಳದೆ ಅತ್ಯಂತ ಮೋಹಕರೂಪವನ್ನು ತಾಳುತ್ತವೆ, ಕಣ್ಣು ಮೂಗುಗಳೆರಡಕ್ಕೂ ಆಪ್ಯಾಯಮಾನವಾಗಿರುತ್ತವೆ.

ಮುಂದಿನ ಕೆಲಸವನ್ನು ವಿವರಿಸುವ ಅಗತ್ಯವುಂಟೆ? ಆಹುತಿಗಳು ಮುಗಿದ ಮೇಲೆ ಚಹಾದಿಂದ ಮುಕ್ತಾಯಗೊಳಿಸುವುದಕ್ಕಿಂತಲೂ ಕಾಫಿಯಿಂದ ಬ್ರಹ್ಮಾರ್ಪಣ ಮಾಡುವುದು ಶ್ರೇಷ್ಠವೆಂಬುದು ಲಾಂಗೂಲ ಮತ. ಆದರೆ ಇದು ಅಭಿರುಚಿಯ ಪ್ರಶ್ನೆ. ಒತ್ತಾಯವಿಲ್ಲ.

## ನಮ್ಮ ರಾವಣನನ್ನು ಕಾಪಾಡಿ!

ಒಂದು ಧರ್ಮದ ಪುರಾಣ ಪುರುಷರ ವಿಷಯದಲ್ಲಿ ಒಳ್ಳೇ ಅಥವಾ ಕೆಟ್ಟ ಮಾತಾಡುವ ಅಧಿಕಾರ ಇನ್ನೊಂದು ಧರ್ಮದವರಿಗಿರಬೇಕೆ? ಇರಬಾರದು ಎಂದು ನಾವೆಲ್ಲ ಒಪ್ಪುತ್ತೇವೆ. ಕೃಷ್ಣ, ಕ್ರಿಸ್ತ, ಮಹಮ್ಮದರೇ ಮೊದಲಾದ

ಧರ್ಮೀಯ ಗೌರವಾಸ್ಪದ ವ್ಯಕ್ತಿಗಳಿಗೆ ಮಾತ್ರ ಇದು ಅನ್ವಯಿಸುತ್ತದೆ ಎಂದು ನಾವು ಭಾವಿಸುತ್ತೇವೆ. ಆದರೆ ಪರಧರ್ಮದ ಕಥೆಗಳಲ್ಲಿ ಬರುವ ದುರ್ಜನರನ್ನು–ಉದಾಹರಣೆಗೆ ಕ್ರೈಸ್ತರ ಮತ್ತು ಮುಸ್ಲಿಮರ ಸೈತಾನನನ್ನು –ಹಿಂದುಗಳು ಬೈಯುವುದು ಸರಿಯಾದೀತೆ? ದುಷ್ಟರನ್ನು ಯಾರು ಬೇಕಾದರೂ ಬಯ್ಯಬಹುದೆಂದು ಹೊರ ತೋರಿಕೆಗೆ ಅನಿಸಬಹುದು. ಆದರೆ ಸರಿಯೇ ಎಂಬ ಬಗ್ಗೆ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಬಂದ ಒಂದು ಪ್ರಶ್ನೆಯಿಂದ ಸಂಶಯ ವುಂಟಾಗಿದೆ.

ಚಂದಾಪುರವೆಂಬ ಗ್ರಾಮದಲ್ಲಿ ಬೌದ್ಧರು ರಾವಣನ ಮೂರ್ತಿಯನ್ನು ಮೆರವಣಿಗೆ ಮಾಡಿ ಸುಟ್ಟರು. ಇದನ್ನು ಪ್ರತಿಬಂಧಿಸಲಾಗುವುದೇ ಎಂದು ವಿಧಾನ ಸಭೆಯಲ್ಲಿ ಪ್ರಶ್ನೆ ಬಂತು. ಅನೇಕ ವರ್ಷಗಳಿಂದ ನವ ಬೌದ್ಧರು ಇಲ್ಲಿ ರಾವಣನನ್ನು ಸುಡುತ್ತಲೇ ಇದ್ದಾರೆ. ಆದ್ದರಿಂದ ಆ ಮಾಮೂಲನ್ನು ನಿಲ್ಲಿಸುವ ಇರಾದೆ ಸರಕಾರಕ್ಕಿಲ್ಲ ಎಂದು ಉತ್ತರ ಬಂತು. ಬೌದ್ಧ ಧರ್ಮ ಸ್ವೀಕರಿಸಿದ ಈ ಹರಿಜನರು ಹೊಸ ಧರ್ಮದಾನಿಯನ್ನೇನೋ ಕಂಡುಹಿಡಿದರು. ಆದರೆ ಹೊಸ ಸೈತಾನನನ್ನು ಕಂಡುಹಿಡಿಯಲು ಅವರಿಗೆ ಸಾಧ್ಯವಾಗಲಿಲ್ಲ. ಬೌದ್ಧ ಧರ್ಮದಲ್ಲಿ ಕೂಡ ಮಾರ ಮೊದಲಾದ ಸೈತಾನರಿದ್ದಾರೆ. ಆದರೆ ಅವರೆಲ್ಲ ಬುದ್ಧನ ತಪೋಭಂಗ ಮಾಡಲು ಬಂದ ದೆವ್ವಗಳೇ ಹೊರತು ರಕ್ತ ಮಾಂಸಯುಕ್ತರಾದ ಅಥೆಂಟಿಕ್ ದುರ್ಜನರಾಗಿರಲಿಲ್ಲ. ಅವರನ್ನು ಸುಟ್ಟು ಹಾಕಬೇಕು ಎನಿಸುವಷ್ಟು ದುಷ್ಟರಾಗಿರಲಿಲ್ಲ–ಈ ದುರ್ದೇವತೆಗಳು. ಅವರಲ್ಲಿ ಯಾರೂ ಇನ್ನೊಬ್ಬನ ಹೆಂಡತಿಯನ್ನು ಅಪಹರಿಸಿಕೊಂಡು ಹೋಗಿ ಸೆರೆ ಯಲ್ಲಿಡುವಷ್ಟು ಮುಂದುವರಿದ ದುಷ್ಟರಲ್ಲ. ಆದ್ದರಿಂದ ರಾವಣನನ್ನು ಸುಡುವು ದೊಂದೇ ಅವರಿಗೆ ಉಳಿದ ಉಪಾಯವಾಗಿತ್ತು.

ಹೀಗೆ ನಮ್ಮೆದುರು ಒಂದು ವಿರೋಧಾಭಾಸಿಕ ಪರಿಸ್ಥಿತಿ ಎದ್ದು ನಿಲ್ಲುತ್ತದೆ. ಬೌದ್ಧರು ರಾಮನನ್ನು ಅಂಗೀಕರಿಸಲಾರರು. ನವಬೌದ್ಧರಂತೂ ಆರರೇ ಆರರು, ಆತ ಶೂದ್ರ ತಪಸ್ವಿಯನ್ನು ಸಂಹಾರ ಮಾಡಿದವನು. ಶಂಬೂಕ ನೇನಾದರೂ ಶೂದ್ರನ ಬದಲು ಅಂತ್ಯಜನಾಗಿದ್ದರೆ ರಾಮ ಏನು ಮಾಡು ತ್ತಿದ್ದನೋ ಶ್ರೀರಾಮನೇ ಬಲ್ಲ. ಅಂತೂ ರಾಮ ಏನೂ ಪ್ರಯೋಜನವಿಲ್ಲ. ನವಬೌದ್ಧರೇ ಏಕೆ, ನವಹಿಂದುಗಳು ಕೂಡ ಅವನನ್ನು ಪೂಜಿಸಲಾರರು.

ಆದರೆ ರಾವಣನ ಮಟ್ಟಿಗೆ ಯಾರದೂ ಆಕ್ಷೇಪವಿಲ್ಲ. ಅವನ ವಿರುದ್ಧ ಇದ್ದ ಆರೋಪಗಳಲ್ಲಿ ಬ್ರಾಹ್ಮಣರನ್ನು ಪೀಡಿಸುವುದೂ ಒಂದಾಗಿತ್ತು. ಹಾಗೆ ಕೇಳಿದರೆ ರಾವಣ ವಿಚಿತ್ರಪುರುಷ. ಆ ಆಸಾಮಿಯೂ ಬ್ರಾಹ್ಮಣ ಜನ್ಮದಲ್ಲೇ ಹುಟ್ಟಿದ್ದನಂತೆ. ಆದರೂ ಬ್ರಾಹ್ಮಣರನ್ನು ಪೀಡಿಸುವುದನ್ನು ತನ್ನ ಜೀವನದ ಧ್ಯೇಯವಾಗಿ ಮಾಡಿಕೊಂಡಿದ್ದ. ಆದ್ದರಿಂದಲೇ ದ್ರಾವಿಡ ಕಳಗದವರು ಅವನನ್ನು ತಮ್ಮ ಹೀರೋ ಆಗಿ ಮಾಡಿಕೊಂಡರು. ಆದರೆ ಮಹಾರಾಷ್ಟ್ರದ ನವಬೌದ್ಧರಿಗೆ ರಾವಣ ಕಳೆದುಕೊಳ್ಳಲಾರದಷ್ಟು ಅಮೂಲ್ಯ ದುಷ್ಟನಾಗಿದ್ದ. ಅವರು ವರ್ಷ ವರ್ಷವೂ ಅವನ ಬೆಚ್ಚು ತಯಾರಿಸಿ ಸುಡುತ್ತಲೇ ಇದ್ದಾರೆ. ಹಿಂದು ಬೌದ್ಧರಲ್ಲಿ ಇದೊಂದು ಭಾವೈಕ್ಯದ ಸಂಗತಿ ಇದೇ ಅನ್ನಿ.

ನಿಜಕ್ಕೂ ರಾವಣ ಅಷ್ಟು ಮಟ್ಟಿಗೆ ಕೆಟ್ಟವನಾಗಿದ್ದನೇ? ಪುರಾತನ ಕಾಲದಿಂದಲೂ ರಾವಣ ನಿಜವಾಗಿ ಅಷ್ಟೆಲ್ಲಾ ರಾವಣನಾಗಿರಲಿಲ್ಲ ಎಂದು ನಂಬಿದವರಿದ್ದಾರೆ. ಜೈನರ "ಪವುಮಚರಿಯು"ದ ರಾವಣ ನಿಜವಾಗಿ ಒಳ್ಳೆಯವನಾಗಿದ್ದ. ಆಸಾಮಿಗೆ ಅವರಿವರ ರಾಜ್ಯದ ಮೇಲೆ ದಾಳಿ ಮಾಡಿ ತನ್ನ ಹೆಗಲ ತೀಟೆ ತೀರಿಸಿಕೊಳ್ಳುವ ಹವ್ಯಾಸವೇನೋ ಇತ್ತು. ಆದರೆ ರಾಜರನ್ನು ಸೋಲಿಸಿದ ಮೇಲೆ ಅವರಿಗೇ ಅವರ ರಾಜ್ಯಗಳನ್ನು ಕೊಟ್ಟು ಮುಂದೆ ಹೋಗುತ್ತಿದ್ದ. ಒಬ್ಬ ರಾಜನ ಹೆಂಡತಿಯಂತೂ ರಾವಣನಿಗೆ ಎಷ್ಟು ಮೋಹಿತಳಾಗಿದ್ದಳೆಂದರೆ ಗುಟ್ಟಾಗಿ ಸಂದೇಶ ಕಳಿಸಿ ತನ್ನನ್ನು ವರಿಸುವುದಾದರೆ ತನ್ನ ಗಂಡನ ಕೋಟೆಯ ಬಾಗಿಲನ್ನು ರಾತ್ರಿ ತೆರೆದಿರಿಸುವ ಹಂಚಿಕೆ ಮಾಡುವುದಾಗಿ ತಿಳಿಸಿದಳು. ರಾವಣ ಒಪ್ಪಿದಂತೆ ತೋರಿಸಿಕೊಂಡು ಮೊದಲು ಕೋಟೆಯೊಳಗೆ ಹೊಕ್ಕು ರಾಜನನ್ನು ಸೋಲಿಸಿದ. ಆಮೇಲೆ ಎಂದಿನಂತೆ ರಾಜ್ಯವನ್ನು ಅವನಿಗೇ ಬಿಟ್ಟು ಅವನ ಹೆಂಡತಿಯನ್ನು ಕರೆದು ಅವಳಿಗೆ ಹದಿಬದೆಯ ಧರ್ಮವನ್ನು ಉಪದೇಶಿಸಿ ಹೊರಟುಹೋದ. ಇಂಥಾ ರಾವಣನಿಗೆ ಮುಪ್ಪಿನಲ್ಲಿ ಮಾತ್ರ ದುರ್ಬುದ್ಧಿ ಬಂದು ಸೀತೆಯನ್ನು ಅಪಹರಿಸಿದ್ದೇ ಅವನಿಗೆ ಮುಳುವಾಯಿತು. ಸರಿಯೇ ಅನ್ನಿ, ಪರರ ಹೆಂಡಂದಿರನ್ನಪಹರಿಸುವುದರಲ್ಲಿ ಅವನು ಅಮೇಚೂರ್ ಆಗಿದ್ದ. ಅಮೇಚೂರ್ ನಾಟಕಗಳ ಹಾಗೆ ಅದೂ ಯದ್ವಾತದ್ವಾ ಆಗಿಬಿಟ್ಟಿತು.

ಕುವೆಂಪು "ರಾಮಾಯಣ ದರ್ಶನಂ"ದಲ್ಲಿಯೂ ರಾವಣನನ್ನು ಅವರು

ಲೀನಿಯಂಟಾಗಿಯೇ ನಡೆಸಿಕೊಂಡಿದ್ದಾರೆ. ಹಾಗೆ ನೋಡಿದರೆ ಕುವೆಂಪು ಶ್ರೀರಾಮನನ್ನೂ ತುಂಬಾ ರಿಯಾಯತಿಯಿಂದ ನಡೆಸಿಕೊಂಡಿದ್ದಾರೆ. ಅವನು ಶೂದ್ರ ತಪಸ್ವಿಯನ್ನು ಕೊಲ್ಲುವಷ್ಟು ಜಾತೀಯವಾದಿಯಾಗಿರಲಿಲ್ಲ. ದೌರ್ಜನ್ಯ ವಿದ್ದದ್ದು ನಿಜವಾಗಿ ಶಂಬೂಕನಲ್ಲಿಯೂ ಅಲ್ಲ, ರಾಮನಲ್ಲಿಯೂ ಅಲ್ಲ. ವಸಿಷ್ಠನೇ ನಿಜವಾಗಿ ಖಳನಾಯಕ. ಶೂದ್ರನು ತಪಸ್ಸು ಮಾಡುವುದು ವಸಿಷ್ಠ ನಿಗೆ ಏನೂ ಹಿಡಿಸಲಿಲ್ಲ. (ಶೂದ್ರರೂ ತಪಸ್ಸು ಮಾಡಲಾರಂಭಿಸಿದರೆ ಬ್ರಾಹ್ಮಣ ರಿಗೆ ಭೂರಿಭೋಜನ ಮಾಡಿಸಲು ಬೆಳೆ ಬೆಳೆಸುವವರು ಯಾರು?) ಶಂಬೂಕ ನನ್ನು ಕೊಲ್ಲಲು ವಸಿಷ್ಠ ಬೇಕಾದಷ್ಟು ಚಿತಾವಣೆ ಕೊಡುತ್ತಾನೆ. ಆದರೆ ರಾಮ ಕೇಳುವುದಿಲ್ಲ. ವಸಿಷ್ಠನಿಗೇ ಉಪದೇಶಕೊಡುತ್ತಾನೆ. ಕಾಲ ಕೆಟ್ಟು ಹೋಗಿತ್ತು; ರಾಜನೇ ಪುರೋಹಿತನಿಗೆ ಸನ್ಮಾರ್ಗ ಬೋಧಿಸತೊಡಗಿದ್ದ. ಆದರೆ ಈ ನೌಕರಿ ಬಿಟ್ಟರೆ ವಿಶ್ವಾಮಿತ್ರ ಆ ಸ್ಥಾನವನ್ನು ಆಕ್ರಮಿಸಿಬಿಡ ಬಹುದು ಎಂಬ ಭಯಕ್ಕೆ ವಸಿಷ್ಠ ಬಾಯಿ ಮುಚ್ಚಿಕೊಂಡ ಅನ್ನಿ.

ಇದೆಲ್ಲ ಏನನ್ನು ತೋರಿಸುತ್ತದೆ? ರಾಮನೇ ದುರ್ಜನನೋ ರಾವಣನೋ ಅಥವಾ ವಸಿಷ್ಠನೇ ನಿಜವಾಗಿ ಎಲ್ಲ ಅನ್ಯಾಯಗಳ ಮೂಲಪುರುಷನೋ ಎಂದು ನಾವು ಹಿಂದುಗಳೇ ಇನ್ನೂ ನಿರ್ಧರಿಸಿಲ್ಲ. ಅಂದಮೇಲೆ ನಮ್ಮ ರಾವಣನನ್ನು ಅವನು ದುಷ್ಟನಿರಲಿ ಶಿಷ್ಟನಿರಲಿ—ಮೆರವಣಿಗೆ ಮಾಡಿ ಸುಡುವುದಕ್ಕೆ ಬೌದ್ಧರಿ ಗೇಕೆ ಅವಕಾಶಕೊಡಬೇಕು? ನಮ್ಮ ಹೆಂಡಂದಿರನ್ನು ನಾವು ಸಿಟ್ಟುಬಂದಾಗ ಹಾದರಗಿತ್ತಿ, ಕುಲಕಂಟಕಿ, ಹಲ್ಕಾ, ಮನೆಮುರುಕಿ ಇತ್ಯಾದಿಯಾಗಿ ಬೈಯು ತ್ತಿರಬಹುದು. ನಾವು ಸಂದರ್ಭಾನುಸಾರ ಅವಳನ್ನು ಒದೆಯಬಹುದು, ಕೊಲ್ಲಲೂ ಬಹುದು ಅನ್ನಿ. ಆದರೆ ನೆರೆಮನೆಯವರಿಗೆ ಇದೇ ಸ್ವಾತಂತ್ರ್ಯ ಕೊಡಲು ಸಾಧ್ಯವೇ? ಅದು ನಮ್ಮ ಪವಿತ್ರ ಹಕ್ಕು. ನಮ್ಮ ದುಷ್ಟ ರಾವಣ ನನ್ನು ಇತರರೂ ದುಷ್ಟನೆಂದು ಸ್ವೀಕರಿಸುತ್ತಾರೆ ಎಂದು ಸಂಭ್ರಮಪಡುವುದು ಪ್ರಥಮ ತರಗತಿಯ ಹೆಡ್ಡತನ. ಇಂದು ನಮ್ಮ ಧರ್ಮದ ದುಷ್ಟರನ್ನು ಮೂರ್ತಿಮಾಡಿ ಸುಡಲು ಬಿಟ್ಟರೆ ನಾಳೆ ನಮ್ಮ ರಾಮನನ್ನು ಕೃಷ್ಣನನ್ನು ಸುಡುವುದಕ್ಕೂ ಅವರು ಧೈರ್ಯ ಮಾಡಿಯಾರು. ನಮ್ಮ ದೇವದೈತ್ಯರ ಮೇಲೆ ಸಂಪೂರ್ಣ ಹಕ್ಕು ನಮಗೇ ಇರಬೇಕು. ಹಿಂದುಗಳೇ ಎದ್ದೇಳಿ! ನಮ್ಮ ರಾವಣರ ಮೇಲೆ ಪರಧರ್ಮದವರು ಕೈ ಅಥವಾ ಕೊಳ್ಳಿಯೆತ್ತು

ವ್ರದನ್ನು ಮಿಕಿ ಮಿಕಿ ನೋಡುತ್ತ ಕುಳಿತಿರುವಷ್ಟು ಹೇಡಿಗಳಾಗಬೇಡಿ. ಅವರಿಗೆ ಬೇಕೇ ಆದರೆ ತಮ್ಮದೇ ದೈತ್ಯರನ್ನು ತಯಾರು ಮಾಡಿಕೊಳ್ಳಲಿ. (೧೯೭೨)

## ನನ್ನ ಆಧ್ಯಾತ್ಮಿಕ ಅಲರ್ಜಿ

ನಾನು ಅಲರ್ಜಿ ರೋಗಿ, ನನಗೆ ಹುಲ್ಲಿನ ಪರಾಗ, ಕಾಂಗ್ರೆಸ್ ಹುಲ್ಲಿನ ಸಂಸರ್ಗ, ಹಳೇ ಕಂಬಳಿಯ ಧೂಳು ಮೊದಲಾದ ಕೆಲ ಪದಾರ್ಥಗಳ ಸ್ಪರ್ಶ ದಿಂದ ಅಲರ್ಜಿ ಪ್ರತಿಕ್ರಿಯೆ ಉಂಟಾಗುವುದುಂಟು. ಆದರೆ ನನ್ನನ್ನು ಪೀಡಿ ಸುವ ಅಲರ್ಜೆನ್ನುಗಳಲ್ಲಿ ಅಧ್ಯಾತ್ಮವೂ ಸೇರಿದೆ ಎಂದು ಕೇಳಿ ನಿಮಗೆ ಆಶ್ಚರ್ಯ ವಾಗಬಹುದು. ಮತ್ತು ಅದು ಉಳಿದೆಲ್ಲ ಅಲರ್ಜೆನ್ನುಗಳಿಗಿಂತ ಕೆಟ್ಟ ಪ್ರತಿ ಕ್ರಿಯೆಯನ್ನು ಮಾಡುತ್ತದೆ—ಎಂದು ಕೇಳಿ ನಿಮಗೆ ಇನ್ನೂ ಆಶ್ಚರ್ಯವಾಗ ಬಹುದು. ಅಧ್ಯಾತ್ಮದ ಪುಸ್ತಕಗಳ ಸಾಮೀಪ್ಯದಲ್ಲಿ ನನಗೆ ಸೌಮ್ಯ ವಿಕಾರ ವಾಗುತ್ತದೆ ಮತ್ತು ಆಧ್ಯಾತ್ಮಿ ಮನುಷ್ಯರ ದರ್ಶನದಿಂದಲೇ ನನಗೆ ಶಾಕ್ ಪ್ರತಿಕ್ರಿಯೆ ಉಂಟಾಗುತ್ತದೆ.

ಇದು ನಿಜವಾಗಿಯೂ ಕೆಟ್ಟದು—ಅಂದರೆ ನನಗೆ ಕೆಟ್ಟದು. ಅಧ್ಯಾತ್ಮ ನಮ್ಮ ದೇಶದ ಸ್ಪೆಶಾಲಿಟಿ ಅಂತ ಜಗತ್ಪ್ರಸಿದ್ಧವಾಗಿದೆ ಪುಸ್ತಕದ ಅಂಗಡಿಗಳಲ್ಲಿ ಕೇಳಿದರೆ ಪತ್ತೇದಾರಿ ಕಥೆಗಳು, ಸೆಕ್ಸ್ ಪುಸ್ತಕಗಳು ಇವುಗಳನಂತರ ಮಾರಾಟ ದಲ್ಲಿ ಅಧ್ಯಾತ್ಮದ್ದೇ ನಂಬರು ಅಂತ ತಿಳಿದುಬರುತ್ತದೆ. ಅಧ್ಯಾತ್ಮದ ಬಗ್ಗೆ ಅಲರ್ಜಿ ಇರುವ ಮನುಷ್ಯನಲ್ಲಿ ಏನೋ ಅನ್-ಇಂಡಿಯನ್ ಇರಬೇಕು ಎಂಬುದಾಗಿ ಸಂಶಯ ಬರುತ್ತದೆ. ಯಾವುದಾದರೊಂದು ದಿನ ಅನ್-ಇಂಡಿ ಯನ್ ಚಟುವಟಿಕೆಗಳ ಸಮಿತಿಯ ಕೈಯಲ್ಲಿ ನಾನು ಸಿಕ್ಕಿ ಫಜೀತಿಬೀಳ ಬಹುದೆಂಬ ಭಯ ನನ್ನ ನಿದ್ರೆಯನ್ನು ಕೆಡಿಸುತ್ತಿದೆ. "ಅಧ್ಯಾತ್ಮವಿದ್ಯಾ ವಿದ್ಯಾನಾಂ" ಅಂತ ಹಿಂದಿನವರು ಹೇಳಿದ್ದಾರೆ. "ಯತಂತೋಽಪ್ಯಕೃತಾ ತ್ಮಾನಃ ನೈನಂ ಪಶ್ಯಂತ್ಯಚೇತಸಃ" ಅಂದರೆ ಆತ್ಮಶೋಧ ಮಾಡಿಕೊಳ್ಳದವರು ಅವನನ್ನು ನೋಡುವುದಿಲ್ಲ ಅಂತ ಭಗವದ್ಗೀತೆ ಹೆದರಿಸುತ್ತದೆ. ಅಂಥವರಿಗೆ "ಅಚೇತಸ್ಸ"ಗಳೆಂದು ಮುದ್ರೆ ಒತ್ತುತ್ತದೆ.

"ಎಲವೊ ಮೂಢ! ಯಾವ ವಿದ್ಯೆಯನ್ನು ಇಂದಿನ ವಿಜ್ಞಾನಯುಗದಲ್ಲಿ

ಪಾಶ್ಚಾತ್ಯರು ಕೂಡ ಗೌರವಿಸತೊಡಗಿದ್ದಾರೋ ಅಂಥಾ ಅಧ್ಯಾತ್ಮದ ಬಗ್ಗೆ ನಿನಗೆ ಅಲರ್ಜಿಯೆ ? ಹಾ ಧಿಕ್ ಧಿಕ್” ಎಂದೊಬ್ಬರು ನನಗೆ ಛೀ ಹಾಕಿದರು ಮೊನ್ನೆ. ಕಳ್ಳ ಪೇಟಿಯಲ್ಲಿ ಸಾಕಷ್ಟು ಹಣ ಮಾಡಿಕೊಂಡು, ಈಗವರು ಬಿಜಿನೆಸ್ಸಿನಿಂದ ರಿಟೈರಾಗಿ, ಹುಲಿಚರ್ಮದ ಮೇಲೆ, ಹಂಸತೂಲಿಕೆಗಳಿಂದ ಮಾಡಿದ ಮೆತ್ತೆಗೊರಗಿ ಅಧ್ಯಾತ್ಮದ ಕಳೆಯನ್ನು ಮುಖದಿಂದ ಹೊಮ್ಮಿಸುತ್ತಾರೆ. ಇದು ಅಧ್ಯಾತ್ಮದ ತೇಜಸ್ಸು ಎಂದು ಜನ ಹೇಳುತ್ತಾರೆ; ತುಪ್ಪ, ಜೇನುತುಪ್ಪಗಳ ಹಿತಮಿತವಾದ ಭುಕ್ತಿಯಿಂದ ಬಂದ ವರ್ಚಸ್ಸು ಎಂದು ನನಗೆ ತೋರುವುದಕ್ಕೆ ನನ್ನ ದೃಷ್ಟಿದೋಷ ಕಾರಣವೆಂಬಲ್ಲಿ ಸಂಶಯವಿಲ್ಲ.

ನಮ್ಮೀ ಆಧ್ಯಾತ್ಮಿಗಳು ಹೇಳುವುದು ಸುಳ್ಳಲ್ಲ. ನಮ್ಮ ಅಧ್ಯಾತ್ಮ ನಮ್ಮ ದೇಶವನ್ನು ದಾಟಿ ಅಮೆರಿಕದಲ್ಲಿ ಕೂಡ ತನ್ನ ಜಯಭೇರಿಯನ್ನು ಬಾರಿಸುತ್ತಿದೆ. ಶುದ್ಧ ನಯ ಕ್ಷೌರದಿಂದ ಹಿಡಿದು ಪೂರ್ಣ ಗಡ್ಡದವರ ವರೆಗಿನ ನಾನಾ ತರಹದ ಕ್ಷೌರದ ಹಂತಗಳಲ್ಲಿರುವ ಯೋಗಿಗಳು, ಸಂನ್ಯಾಸಿಗಳು, ಮಹರ್ಷಿಗಳು ಕೂಡ ನಮ್ಮ ದೇಶದಿಂದ ಶ್ರೀಮಂತ ಪಾಶ್ಚಾತ್ಯದೇಶಗಳಿಗೆ ಮತ್ತು ಅಲ್ಲಿಂದ ಇಲ್ಲಿಗೆ ಹಾರುತ್ತಾರೆ. ಅಮೆರಿಕನ್ನರು ತಮ್ಮ ಅಮೂಲ್ಯ ಡಾಲರುಗಳನ್ನು, ಇಂಗ್ಲಿಷರು ತಮ್ಮ ಪೌಂಡುಗಳನ್ನು, ಜರ್ಮನ್ನರು ತಮ್ಮ ಮಾರ್ಕುಗಳನ್ನು ಅಧ್ಯಾತ್ಮಕ್ಕಾಗಿ ಖರ್ಚುಮಾಡುವುದು ಒಳ್ಳೇ ಬಂಡವಾಳ ಹೂಡಿಕೆ ಎಂದು ತಿಳಿಯುತ್ತಾರೆ; ಮತ್ತು ಆ ಡಾಲರು ಇತ್ಯಾದಿ ತಮ್ಮ ಆಧ್ಯಾತ್ಮಕ್ಕೆ ತಕ್ಕ ಮೌಲ್ಯ ನೀಡಿಕೆಯೆಂದು ನಮ್ಮ ಆಧ್ಯಾತ್ಮಿಗಳು ಭಾವಿಸುತ್ತಾರೆ. ಪಶ್ಚಿಮದ ದೇಶಗಳಲ್ಲಿ ಅಧ್ಯಾತ್ಮಕ್ಕೆ ಗಿರಾಕಿಗಳಿರುವುದನ್ನು ಜಾಹೀರಾತು ಮಾಡಿ ಅಧ್ಯಾತ್ಮಿಗಳು ನಮ್ಮ ದೇಶದಲ್ಲಿಯೂ ತಮ್ಮ ಕೂಟಕ್ಕೆ ಹೆಚ್ಚು ಜನರನ್ನು ಆಕರ್ಷಿಸುತ್ತಿರುವಂತೆ ಕಾಣುತ್ತದೆ. ಮಾರ್ಲಿನ್ ಮನ್ರೋಗೆ ಆಧ್ಯಾತ್ಮಿಕ ಸಲಹೆಗಾರರಾಗಿದ್ದ ಒಬ್ಬ ಯೋಗಿಗಳು ನನಗೆ ಸಿಕ್ಕಿದ್ದರು. ಅದನ್ನು ಸಾಬೀತು ಮಾಡುವುದಕ್ಕೆ ಅವರು ಅವಳೊಡನೆ ತೆಗೆಸಿಕೊಂಡ ತಮ್ಮ ಫೋಟೋ ತೋರಿಸಿದರು. (ಇವರು ಭಾರತಕ್ಕೆ ಒಂದು ಸಂಕ್ಷಿಪ್ತ ವಿಜಿಟ್ ಸಲುವಾಗಿ ಬಂದಿದ್ದಾಗ ಪಾಪ, ಆ ಲೋಕಸುಂದರಿ ನಟಿ ಗುಳಿಗೆ ನುಂಗಿ ಆತ್ಮಹತ್ಯೆ ಮಾಡಿಕೊಂಡಳಂತೆ !) ಮಾರ್ಲಿನ್‌ಮನ್ರೋ ಅಧ್ಯಾತ್ಮಕ್ಕೆ ಬಿದ್ದ ಮೇಲೆ ನಮ್ಮ ಇಂಡಿಯನ್ ಸ್ಟಾರುಗಳ ಕಣ್ಣುಗಳು ಅರಳಿದ್ದರಲ್ಲಿ ಏನಾಶ್ಚರ್ಯ?

ಅಧ್ಯಾತ್ಮದ ಬಗ್ಗೆ ನನ್ನ ಅಲರ್ಜಿಯನ್ನು ಗೆಲ್ಲುವುದಕ್ಕೆ ನಾನು ಯತ್ನಿಸಿಲ್ಲ ಅಂತ ತಿಳಿದುಕೊಳ್ಳಬೇಡಿ. ನಾನು ಆ ಬಗ್ಗೆ ಕನಿಷ್ಠ ಪಕ್ಷ ಮೂರು ಭಾಷೆಗಳಲ್ಲಿ ಪುಸ್ತಕಗಳನ್ನೋದಿದ್ದೇನೆ. ಅನೇಕ ಅಧ್ಯಾತ್ಮಿಗಳನ್ನು ಕೇಳಿದ್ದೇನೆ ಮತ್ತು ನೋಡಿದ್ದೇನೆ. ಪುಸ್ತಕಗಳನ್ನು ಓದಿದಾಗ ನಾನೂ ಅಧ್ಯಾತ್ಮಿಯಾದೇನೆಂಬ ಆಶೆ ಹುಟ್ಟಿತ್ತು. ಅಧ್ಯಾತ್ಮಿಗಳನ್ನು ಕೇಳಿದಾಗ ಮತ್ತಷ್ಟು ಆಶೆ ಹೆಚ್ಚಿತು. ಅಲರ್ಜಿ ಪ್ರಾರಂಭವಾದದ್ದು ಅಧ್ಯಾತ್ಮಿಗಳನ್ನು ನೋಡಿದಾಗ.

"ಅಧ್ಯಾತ್ಮವೆಂದರೇನು?" ಎಂದು ಒಂದು ಸಲ ನಾನು ಒಬ್ಬ ಪಳಗಿದ ಅಧ್ಯಾತ್ಮಿಯನ್ನು ಕೇಳಿದೆ. ಅವರು ಬಿಂದುವಿನಲ್ಲಿ ಸಿಂಧುವನ್ನು ತುಂಬುವುದರಲ್ಲಿ ಪ್ರವೀಣರೆಂದು ಹೆಸರಾಗಿದ್ದರು.

"ಒಂದೇ ಮಾತಿನಲ್ಲಿ ಹೇಳುವುದಾದರೆ ದೇಹಾತ್ಮಭಾವವನ್ನು ಗೆಲ್ಲುವುದೇ ಅಧ್ಯಾತ್ಮ" ಎಂದು ಅವರು ಹೇಳಿದರು. ಈ ಗುಳಿಗೆ ಸಣ್ಣದಾದರೂ ನನ್ನ ಗಂಟಲಿನ ಸೂಜಿ ನಳಿಗೆಯಲ್ಲಿ ಇಳಿಯಲಿಲ್ಲೆಂದು ಮನಗಂಡು ಅವರು ವಿವರಿಸಿದರು. "ದೇಹ ಬೇರೆ, ಆತ್ಮ ಬೇರೆ; ನಾನು ಆತ್ಮವೇ ಹೊರತು ದೇಹವಲ್ಲ ಎಂಬ ತಿಳಿವಳಿಕೆ ಬರುವುದಕ್ಕೆ ಅಧ್ಯಾತ್ಮ ಎನ್ನುತ್ತೇವೆ. ಅಂಥಾ ಅರಿವಿನ ಸಲುವಾಗಿ ಯತ್ನಿಸುವವನು, ಆ ಅರಿವು ಬಂದವನು ಅಧ್ಯಾತ್ಮಿಯಾಗುತ್ತಾನೆ. ಅವನಿಗೆ ಕರ್ಮಗಳು ತಗಲುವುದಿಲ್ಲ, ಪಾಪ ಪುಣ್ಯವಿಲ್ಲ, ಭಯವಿಲ್ಲ, ಚಿಂತೆಯಿಲ್ಲ, ದುಃಖವಿಲ್ಲ. ಯಾಕೆಂದರೆ ಸುಖ ದುಃಖ, ಪಾಪಪುಣ್ಯ, ಕರ್ಮಾಕರ್ಮ, ಭಯಕ್ರೋಧಾದಿ ವಿಕಾರಗಳು ದೇಹಕ್ಕೆ ಹೊರತು ಆತ್ಮಕ್ಕೆ, ಅಂದರೆ ತನಗೆ ಸಂಬಂಧಿಸಿದವಲ್ಲ ಎಂದು ಅವನು ತಿಳಿಯುತ್ತಾನೆ."

ಇದಾದನಂತರ ನಾನು ಅಧ್ಯಾತ್ಮದ ಬಗ್ಗೆ ಅವರೊಡನೆ ಸುದೀರ್ಘ ಚರ್ಚೆ ನಡೆಸಿದೆ. ಅಧ್ಯಾತ್ಮಿಗಳೆನಿಸುವ ಅನೇಕರ ಕೃತಿ ಮತ್ತು ಕೃತ್ಯಗಳ ಬಗ್ಗೆಯೂ ಮಾತಾಡಿದೆ. ಈ ಮಾತುಕತೆಯ ನಂತರವೇ ನನಗೆ ಸೀರಿಯಸ್ಸಾಗಿ ಅಧ್ಯಾತ್ಮ ಅಲರ್ಜಿ ಆದದ್ದು.

ಹೀಗಾದದ್ದು ನಿಜವಾಗಿಯೂ ವಿಷಾದಕರ. ಅಧ್ಯಾತ್ಮಿಯಾಗಬೇಕೆಂದು ನನಗೆ ಎಷ್ಟು ಹಂಬಲ ಇದೆ ಅಂತೀರಾ! ಅದರಲ್ಲಿ ಏನೆಲ್ಲ ಅನುಕೂಲ ಇದೆ ಅಂತೀರಾ!

ಅಧ್ಯಾತ್ಮಿಯಾಗುವುದರಲ್ಲಿರುವ ಎಲ್ಲಕ್ಕೂ ದೊಡ್ಡ ಅನುಕೂಲವೆಂದರೆ

ನೀವು ನಿಮ್ಮ ಪಾಪಗಳನ್ನು ಸುಲಭವಾಗಿ ಕ್ಷಮಿಸಿಕೊಳ್ಳಬಹುದು; ಪರರ ಸಂಕಟಗಳನ್ನು ಸಲೀಸಾಗಿ ಸಹಿಸಿಕೊಳ್ಳಬಹುದು. ನೀವು ಉಂಡೂ ಉಪವಾಸಿಯಾಗಿರಬಹುದು, ಬಳಸಿಯೂ ಬ್ರಹ್ಮಚಾರಿಯಾಗಿರಬಹುದು.

ಅಧ್ಯಾತ್ಮಿಯಾದವನು ಪ್ರಪಂಚದ ಕರ್ಮಗಳಿಂದ ದೂರ ಉಳಿಯಬೇಕಾಗುತ್ತದೆಂದು ಬಹಳ ಜನ ಭ್ರಾಂತಿಯಲ್ಲಿದ್ದಾರೆ. ಅವರು ವ್ರತ ನಿಯಮಗಳನ್ನಾಚರಿಸಬೇಕು, ತಪಸ್ಸನ್ನು ತಪಿಸಬೇಕು ಇತ್ಯಾದಿ ತಿಳಿವಳಿಕೆಗಳೂ ಇವೆ. ಇವೆಲ್ಲ ಶುದ್ಧ ಅಪದ್ಧಗಳು. ನಿಮಗೆ ಒಳ್ಳೇ ಸಮೀಚೀನ ಭೋಜನ ಬೇಕೆನಿಸುತ್ತದೆ ಅಂತ ತಿಳಕೊಳ್ಳಿ. ನೀವು ಅಧ್ಯಾತ್ಮಿಯಾಗಿದ್ದರೆ ನೀವು ನಿಮ್ಮ ಜೀರ್ಣಶಕ್ತಿ ಎಷ್ಟನ್ನು ತಡೆದುಕೊಳ್ಳಬಲ್ಲದೋ ಅಷ್ಟನ್ನು ಹೊಡೆಯಲು ಯಾವ ಅಡ್ಡಿಯೂ ಇಲ್ಲ. ನೀವು ಉಣ್ಣುವಾಗ ಹತ್ತಿರದಲ್ಲೇ ಅನ್ನವಿಲ್ಲದೆ ಸೊರಗುತ್ತಿರುವವನು ಇದ್ದಾನೆಂದುಕೊಳ್ಳಿ. ನೀವು ಅಧ್ಯಾತ್ಮಿಯಾಗಿದ್ದರೆ ಅವನ ಬಗ್ಗೆ ನೀವು ವಿಚಲಿತರಾಗುವುದಿಲ್ಲ. ಯಾಕೆಂದರೆ ನೀವು ಉಣ್ಣುತ್ತಿದ್ದರೂ ನಿಜವಾಗಿ ನೀವು ಉಂಡಿಲ್ಲವೆಂದು ನಿಮಗೆ ಗೊತ್ತಿದೆ; ಆತ್ಮಕ್ಕೆ ಹಸಿವೂ ಇಲ್ಲ, ನೀರಡಿಕೆಯಂತೂ ಇಲ್ಲ, ರುಚಿ ಅರುಚಿಗಳೂ ಇಲ್ಲ. ನಿಜವಾಗಿ ದೇಹ ಮಾತ್ರ ಉಣ್ಣುತ್ತಿದೆ. ನಿಮ್ಮನ್ನು ದೈನ್ಯದಿಂದ ನೋಡುವ ಆ ಉಪವಾಸಿಯಾದರೂ ಅಷ್ಟೇ. ಹಸಿವು ಅವನ ಶರೀರಕ್ಕೆ ಆಗುತ್ತಿದೆ ಹೊರತು ಆತ್ಮಕ್ಕಲ್ಲ. ಆತ್ಮಕ್ಕೆ ಏನಾದರೂ ಆದರೆ ಮಾತ್ರ ನೀವು ಚಿಂತಿಸಬೇಕಾದೀತು. ಎಲ್ಲಿಯ ವರೆಗೆ ಜಿಲೇಬಿ ತಿನ್ನುವವರು ನೀವಲ್ಲವೆಂದೂ ಉಪವಾಸವಿರುವವನು ಅವನಲ್ಲವೆಂದೂ ಇಬ್ಬರ ಆತ್ಮಗಳೂ ನಿತ್ಯೋಪವಾಸಿಗಳೆಂದೂ ನಿಮಗೆ ಖಾತ್ರಿಯಿದೆಯೋ ಅಲ್ಲಿಯ ವರೆಗೆ ನೀವು ನಿರ್ಭಯರು.

ಅನ್ನವಿಲ್ಲದೆ ಕ್ಲೇಶಪಡುವ ಆ ಬಡಪಾಯಿಯ ಬಗ್ಗೆ ನಿಮಗೆ ಕೆಡುಕೆನಿಸದೆ ಇಲ್ಲ. ಆದರೆ ನೀವೇನು ಮಾಡಬಲ್ಲಿರಿ? ಆ ಮನುಷ್ಯ ಅಧ್ಯಾತ್ಮಿಯಲ್ಲ. ಅಧ್ಯಾತ್ಮಿಯಾಗಿದ್ದರೆ ಅವನು ಹೀಗೆ ಕ್ಲೇಶಪಡುತ್ತಿರಲಿಲ್ಲ. ಆತ್ಮದ ಸಚ್ಚಿದಾನಂದ ಸ್ವರೂಪವನ್ನು ಕುರಿತು ಹೋಟೆಲ್ ಟೇಬಲ್ಲಿನ ಬಳಿ ಭಾಷಣ ಪ್ರಾರಂಭಿಸಿದ್ದರೆ ಯಾರಾದರೂ ಅವನಿಗೆ ಜಿಲೇಬಿ ಸಹಿತ ಊಟಕೊಡಿಸಲೂ ಬಹುದಿತ್ತು. ಆದರೆ ಅಧ್ಯಾತ್ಮದ ವ್ಯಾವಹಾರಿಕ ಪ್ರಯೋಜನ ಅವನಿಗೆ ಗೊತ್ತಿಲ್ಲ. ನಿಜಕ್ಕೂ ವಿಷಾದಕರ.

ಒಂದು ವೇಳೆ ಆ ಬಡಪಾಯಿ ಹಸಿವು ತಾಳಲಾರದೆ ನಿಮ್ಮ ಊಟವನ್ನು ಕಸಿದುಕೊಳ್ಳಲು ಬರುತ್ತಾನೆಂದಿಟ್ಟುಕೊಳ್ಳಿ. ಹೊಡೆಯುವವರು ನೀವಲ್ಲವೆಂದೂ ಹೊಡೆಸಿಕೊಂಡವನು ಅವನಲ್ಲವೆಂದೂ ಪೂರ್ಣ ಪರಿಜ್ಞಾನದಿಂದಲೇ ನೀವು ಆವನನ್ನು ಹೊಡೆಯುತ್ತೀರಿ. ಅಥವಾ ಅಷ್ಟು ತ್ರಾಣ ನಿಮ್ಮ ಶರೀರಕ್ಕೆ ಇಲ್ಲದಿದ್ದರೆ ಹೋಟೆಲ್ ಕಾವಲುಗಾರನನ್ನು ಕರೆದು ಆವನನ್ನು ಒದ್ದು ಹೊರಗೆ ಹಾಕಿಸುತ್ತೀರಿ. ನಿಮಗೆ ಅಧ್ಯಾತ್ಮ ಸರಿಯಾಗಿ ಜೀರ್ಣವಾಗಿದ್ದರೆ ನಿಮಗೆ ಏನೂ ಕೆಡುಕೆನಿಸುವುದಿಲ್ಲ.

ಸಂಶಯಾಸ್ಪದ ರೀತಿಯಲ್ಲಿ ಹಣ ಕೂಡಿಸಿ, ಆಮೇಲೆ ಅಧ್ಯಾತ್ಮಿಯಾದವರ ಬಗ್ಗೆ ಹೇಳಿದೆನಲ್ಲ. ಅವರ ಹತ್ತಿರ ನನಗೊಮ್ಮೆ ಮಾತಾಡುವ ಸಂದರ್ಭ ಬಂದಿತ್ತು. ಅವರನ್ನು ಅವರ ಹಣದ ಸಂದಿಗ್ಧತೆಯ ಬಗ್ಗೆ ಪ್ರಶ್ನಿಸಿ ಅದು ಅಧ್ಯಾತ್ಮದೊಡನೆ ಹೇಗೆ ಸರಿಹೊಂದುತ್ತದೆ ಎಂದು ನನ್ನ ಅಜ್ಞಾನ ಪ್ರದರ್ಶಿಸಿದೆ. ಅದು ಲೋಭಮೋಹಾದಿ ಶರೀರ ಧರ್ಮಗಳ ಫಲ. ಅದು ತಮಗೆ ಸಂಬಂಧವಿಲ್ಲ ಎಂದು ಉತ್ತರ ಬಂತು. ಆದರೆ ಶರೀರ ಧರ್ಮದ ಆ ಫಲಗಳನ್ನೆಲ್ಲ ತ್ಯಾಗ ಮಾಡಿದ ಹೊರತು ಅವರು ನಿಜವಾದ ಅಧ್ಯಾತ್ಮಿ ಹೇಗಾಗಬಲ್ಲರು ಎಂದು ನಾನು ಪುನಃ ಸಂಶಯ ತೋರಿಸಿದೆ. "ಯಾವುದನ್ನು ನಾನು ಗಳಿಸಲಿಲ್ಲವೋ ಆದನ್ನು ತ್ಯಾಗಮಾಡುವ ಪ್ರಶ್ನೆ ಎಲ್ಲಿ ಹುಟ್ಟುತ್ತದೆ?" ಎಂದು ಅವರು ಮರುಸವಾಲು ಹಾಕಿದರು. ಎಲ್ಲಿ ಹುಟ್ಟುತ್ತದೆಂದು ಹೇಳಲು ನನಗೂ ತಿಳಿಯಲಿಲ್ಲ.

ಇಷ್ಟು ಅನುಕೂಲವಾದ ಅಧ್ಯಾತ್ಮ ನನಗೆ ಅಲರ್ಜಿ ಉಂಟುಮಾಡುತ್ತದೆ ಅಂದರೆ ನನ್ನಂಥ ದುರ್ದೈವಿ ಯಾರು—ನೀವೇ ಹೇಳಿ. (೧೯೭೪)

## ಸಕ್ಕರೆ ಗೀತ

ಸಿಹಿ ವಸ್ತುಗಳಿಂದ ಕಹಿ ವಾತಾವರಣವುಂಟಾಗುವುದು ಅಸಂಬದ್ಧವಾಗಿ ತೋರಿದರೂ ಅಸಂಬದ್ಧಗಳ ಕಂತೆಯಾದ ಈ ಪ್ರಪಂಚದಲ್ಲಿ ಅದು ನಿತ್ಯ ಘಟನೆಯೇ. ಎಷ್ಟು ಸವಿತುಟಿಯ ಬಾಲೆಯರು ಕಟುತರ ಜಗಳಗಳನ್ನೆಬ್ಬಿಸಿಲ್ಲ? ಎಷ್ಟು ಜನರು ಸವಿನಾಲಿಗೆಗೆ ಮರುಳಾಗಿ ಕಹಿಫಲಗಳನ್ನು ಉಂಡಿಲ್ಲ?

ಆದ್ದರಿಂದ ಸಿಹಿ ಮಳಲಾದ ಸಕ್ಕರೆಯ (ಅಥವಾ ಅದರ ಅಭಾವದ) ದೆಸೆಯಿಂದ ದೇಶದಲ್ಲಿ ಕಹಿಕಹಿ ವಾದಗಳೇಳುವುದು ಅನಿಷ್ಟನಾದರೂ ಅಸ್ವಾಭಾವಿಕವಲ್ಲ. ಅಳಿಯ ದೇವರು ಮನೆಗೆ ಚಿತ್ತೈಸಿದಾಗ ಹೊತ್ತಲ್ಲದ ಹೊತ್ತಿನಲ್ಲಿ ಹೊರಗೆ ಕೂರುವ ಮಗಳ ಹಾಗೆ ಸಕ್ಕರೆ ಪೇಟೆಯಿಂದ ಮಾಯವಾಗಿಬಿಟ್ಟಿದೆ. ಇದಕ್ಕೆ ಮಾನ್ಯ ಮಂತ್ರಿ ರಫಿ ಅಹಮದರು ವರ್ತಕರನ್ನೂ ವರ್ತಕರು ಸಾಗಾಟ ಮಾಡದ ರೈಲುಗಳನ್ನೂ ಕಹಿಕಹಿಯಾಗಿ ದೂರಿದ್ದಾರೆ. ಇಷ್ಟೆಲ್ಲ ಕಹಿಯ ನಡುವೆ ಸಕ್ಕರೆ ಯಾವುದಾದರೂ ಚಮತ್ಕಾರದಿಂದ ಪ್ರತ್ಯಕ್ಷವಾಗಿಯೇ ಬಿಟ್ಟರೆ ಅದೂ ಕಹಿಯಾಗಿಯೇ ರುಚಿಸಬಹುದೇ ಎಂದು ಸಂಶಯ ಬರುತ್ತಿದೆ.

ಆದರೆ ಲಾಂಗೂಲಾಚಾರ್ಯರ ಮಟ್ಟಿಗೆ ಇದೊಂದು ಸುದೈವದ ಅವಘಡವೇ ಆಗಿದೆ. ತಿಂಗಳಿನ ಅವಸಾನವನ್ನು ಚಾತಕದಂತೆ ಎದುರು ನೋಡುತ್ತಿರುವಾಗ ಮತ್ತು ಆ ಅವಸಾನ ಬೇಕೆಂದೇ ವಿಲಂಬ ಮಾಡುತ್ತಿರುವಾಗ, ಜೇಬು "ವಿಜಯ ವಿಠ್ಠಲನ ಗುಡಿ ಭಣಗುಡುವ ತೆರದಲ್ಲಿ"ರುವಾಗ, ಮನೆಯಲ್ಲಿ ಅರ್ಧ ಮಣ ಸಕ್ಕರೆಗೆ ಇಂಡೆಂಟ್ ಆಗಿರುವಾಗ, ಆಚಾರ್ಯರು ಪೇಟೆಯ ದಿಕ್ಕಿಗೆ ಮುಖಮಾಡಲಿಕ್ಕೂ ಅಂಜುತ್ತಿರುವಾಗ "ಸಕ್ಕರೆ ಇಲ್ಲ" ಎಂಬ ಸುದ್ದಿಯನ್ನು ಓದಿ, ಅವರಿಗೆ ವಾರ ಭವಿಷ್ಯದಲ್ಲಿ "ಆಕಸ್ಮಿಕ ಧನಲಾಭ" ಎಂದು ಬರೆದದ್ದು ಕೊನೆಗೊಮ್ಮೆ ನಿಜವಾದಂತೆ ಆನಂದವಾಯಿತು. ಆಚಾರ್ಯಾಣಿಯವರಿಗೆ ಆಚಾರ್ಯರು ಈ ಸುದ್ದಿಯನ್ನು, ಸಾಧ್ಯವಿದ್ದಷ್ಟು ಅಳುಮೋರೆ ಮಾಡಿಕೊಂಡು, ತಲುಪಿಸಿದರು. ಒಂದು ಕ್ಷಣ ಅವರು ಇವರನ್ನು ಇವರೇ ಈ ಸುದ್ದಿ ಅಥವಾ ಶರ್ಕರಾಭಾವವನ್ನು ಸೃಷ್ಟಿಸಿರಬಹುದೇ ಎಂಬ ಸಂಶಯದಿಂದ ನೋಡಿದರು. ಆದರೆ ಮುಖದ ನಿರ್ವಿಣ್ಣ ಕಳೆಯನ್ನು ಕಂಡು ಸುದ್ದಿ ಸತ್ಯವೆಂದು ಮನಗಂಡರು.

ಆಗ ಆಚಾರ್ಯರ ಆನಂದೋತ್ಸಾಹವು ಈ ಕೆಳಗಿನಂತೆ ಕವಿತಾರೂಪವಾಗಿ ಹೊರ ಹೊಮ್ಮಿತು :

ಸಕ್ಕರೇ !
ನಿನ್ನ ಮೇಲೆ ನನಗದೆಷ್ಟು
ಅಕ್ಕರೇ !

ಗೊತ್ತೆ ನಿನಗೆ ಸಕ್ಕರೇ,
ಓ ಸಕ್ಕರೇ !
ಉದರಿಯಿಂದ ಸಿಕ್ಕರೆ
ಅಥವ ಕೈಗಡವು ದೊರೆವ
ಲಕ್ಕ'ರೇ*
ನನ್ನ ಮೆಚ್ಚಿ ನಕ್ಕರೆ,
ನಿನ್ನ ತಂದು ಚೊಕ್ಕ'ರೇ†
ಹಬ್ಬ ಮಾಳ್ಪೆನೆಂದಿದ್ದರೇ,
ಪೇಟೆಗೆಂದೆದ್ದರೇ,
ಎಲಗೆ ಸಕ್ಕರೇ !
ಅಕ್ಕಟ, ಎಂಥ ದುಕ್ಕ ರೇ !
ಎಷ್ಟು ರೊಕ್ಕ'ರೇ‡
ಕೊಡುವೆನೆಂದರೂನು ಸಿಕ್ಕದೇ
ಯಾವ ಮೂಲೆ ಹೊಕ್ಕಿದೆ,
ಸವಿಯ ಸಕ್ಕರೇ !
ಹಬ್ಬಕಾಯ್ತು ನಮಗೆ ಬರೀ
ಚಟ್ನಿ ಭಕ್ಕರೆ ?

ಇಷ್ಟು ಕವನಿಸಿದಮೇಲೆ ಲಾಂಗೂಲಾಚಾರ್ಯರ ಹತ್ತಿಕ್ಕಿದ ಕಮ್ಯೂನಿಜಂ ಒಮ್ಮೆಲೇ ಪ್ರಾಸಬದ್ಧವಾಗಿ ಹೊರಬಿದ್ದು ಕವಿತೆಯನ್ನು ಹೀಗೆ ಪೂರ್ತಿಗೊಳಿಸಿತು :

ಅಲಲಲಲಲ ಠಕ್ಕರೇ
ಬಂಡ್ವಾಳಶಾಹಿ ಸೊಕ್ಕರೇ !
(ಧ್ಯಾನವಾಳ್ಪ ಕೊಕ್ಕರೇ !)
ಜನತೆಯೆದ್ದು ನಿತ್ತರೇ
ನಿಮ್ಮ ತಿಕ್ಕಿ ಮುಕ್ಕರೇ ?
ಕೈಗೆ ಮಾತ್ರ ಸಿಕ್ಕರೇ,

---

* ಲಕ್ಕ'ರೇ = ಲಕ್ಕಾದರೂ, ಸುದೈವವಾದರೂ
† ಚೊಕ್ಕ'ರೇ = ಚೊಕ್ಕವಾಗಿಯಾದರೂ
‡ ರೊಕ್ಕ'ರೇ = ರೊಕ್ಕವಾದರೂ

ಆಗ ನೀವು ತಿಂದುದೆಲ್ಲ ಕಕ್ಕಿರೇ?
ಸೇತುಗಳಿಗೆ ಧಿಕ್ಕು ರೇ!
ನಮ್ಮ ಜನ್ಮಸಿದ್ಧ ಹಕ್ಕು ರೇ! (೧೯೫೪)

# ಗೊಣಗಿ ಗೊಣಗಿ ಕ್ರಾಂತಿ ತಪ್ಪಿಸಿರಿ

ಮನುಷ್ಯರನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದೆಂದು ನನ್ನ ಅಭಿಪ್ರಾಯ: ಗೊಣಗುಡುಕರು ಮತ್ತು ಕೊಲೆಗಡುಕರು. ನೀವು ಗೊಣಗುಡುಕರಾಗಿರದಿದ್ದರೆ ಬಹುಶಃ ಕೊಲೆಗಡುಕರ ವರ್ಗಕ್ಕೆ ಸೇರುತ್ತೀರಿ. ನಾನು ಮೊದಲನೇ ವರ್ಗಕ್ಕೆ ಸೇರಿದವನು. ಅಂದರೆ ಬಹುಸಂಖ್ಯಾವರ್ಗದವನು.

ನಾನು ಬೆಳಗ್ಗೆ ಗೊಣಗುತ್ತೇನೆ. ಮಧ್ಯಾಹ್ನ ಗೊಣಗುತ್ತೇನೆ. ಸಾಯಂಕಾಲ ಗೊಣಗುತ್ತೇನೆ. ರಾತ್ರಿ ಗೊಣಗುತ್ತೇನೆ. ಹೆಂಡತಿಯ ಮೇಲೆ ಗೊಣಗುತ್ತೇನೆ. ಆಫೀಸಿನ ಮೇಲೆ ಗೊಣಗುತ್ತೇನೆ. ಸರಕಾರದ ಮೇಲೆ ಗೊಣಗುತ್ತೇನೆ. ನಾನು ಬದುಕಿನುದ್ದಕ್ಕೂ ಗೊಣಗಿದ್ದೇನೆ. ದೇಶವನ್ನೆಲ್ಲ ಗೊಣಗುತ್ತ ಸುತ್ತಿದ್ದೇನೆ.

ನಾನು ಗೊಣಗುತ್ತಲೇ ಏಳುತ್ತೇನೆ. ಬೆಳಗಿನ ಸಕ್ಕರೆ ನಿದ್ದೆಯ ನಡುವೆ ಯಾವುದೋ ಕಾನನ್ ಡಾಯಲ್ ಪತ್ತೇದಾರಿ ಕಾದಂಬರಿಯ ಘೋರ ಸನ್ನಿವೇಶವನ್ನು ಸರಿಗಟ್ಟಬಹುದಾದ ಘಟನೆಗಳುಳ್ಳ ಕನಸು ಸುರುಳಿ ಬಿಚ್ಚತೊಡಗಿರುತ್ತದೆ. ಅದು ಅತ್ಯಂತ ಸ್ವಾರಸ್ಯಕರವಾದ ನಿಟ್ಟನ್ನು ತಲುಪಿ, ಮರದ ಕಾಲಿನ ಮನುಷ್ಯ ನನ್ನ ಕಿಡಿಕಿಯೊಳಗೆ ಕೈಹಾಕಿ, ನನ್ನ ಕೊರಳನ್ನು ತನ್ನ ಎಲುಬುಕೈಗಳಿಂದ ಹಿಸುಕತೊಡಗಿದ್ದಾನಷ್ಟೇ. ನಾನು ಪಾರಾಗಿ ಬದುಕುವೆನೋ ಅಥವಾ ಉಸಿರುಗಟ್ಟಿ ಸಾಯುವೆನೋ ಎಂಬ ಕುತೂಹಲಜನಕವಾದ ಸಂಧಿಯಲ್ಲಿ ಕನಸು ಇರುವಾಗ "ಕಾಫಿ ಆಗಿದೆ, ಏನು ಈವೊತ್ತು ಏಳೋದಿಲ್ಲವೆ?" ಎಂದು ನನ್ನನ್ನು ಅಲುಗಿಸಿ ಎಬ್ಬಿಸಿಬಿಡುತ್ತಾಳೆ, ನನ್ನ ಹೆಂಡತಿ. ನಾನು ಕಣ್ಣು ತೆರೆದು ಮರದ ಕಾಲಿನವನನ್ನು ಕಾಣದೆ ಒಳ್ಳೇ ಮಜಾ ಕನಸುಗಳನ್ನು ಭಂಗಮಾಡುವುದರಲ್ಲೇ ಹೆಂಗಸರಿಗೆ ತಾಮಸ ಸಂತೋಷ ಸಿಗುತ್ತದೇನೋ ಎಂದು ಗೊಣಗುತ್ತ ಏಳುತ್ತೇನೆ. ಬಚ್ಚಲಿಗೆ ಹೋಗಿ ಬಿಸಿನೀರು ಸಾಕಷ್ಟು ಕಾದಿಲ್ಲವೆಂದೋ ಅತಿಯಾಗಿ ಕಾದಿದೆಯೆಂದೋ ನನ್ನ

ಟೂತ್ ಬ್ರಶ್ ನಿನ್ನೆ ಇಟ್ಟಲ್ಲಿ ಇಲ್ಲವೆಂದೋ ಗೊಣಗುತ್ತೇನೆ. ಅಡಿಗೇ ಮನೆಗೆ ಹೋಗಿ ಕಾಫಿಗೆ ಸಕ್ಕರಿ ಹೆಚ್ಚಾಯಿತೆಂದೂ ಹೀಗೆ ಮಾಡುತ್ತ ಒಂದು ದಿನ ನನಗೆ ಮಧುಮೇಹ ರೋಗ ಬರುವ ಹಾಗೆ ಮಾಡದೆ ಅವಳಿಗೆ ಸಮಾಧಾನ ವಿಲ್ಲೆಂದೂ ಗೊಣಗುತ್ತೇನೆ. ಹೊರಗೆ ಬಂದು ರೇಡಿಯೊ ತಿರುಗಿಸಿ ಇವರಿಗೆ ವೆಂಕಟೇಶ ಸುಪ್ರಭಾತ ಸ್ತೋತ್ರ ಹೊರತು ಮತ್ತಾವ ಸ್ತೋತ್ರವೂ ಯಾಕೆ ಸಿಗುವುದಿಲ್ಲೆಂದು ಗೊಣಗುತ್ತೇನೆ. ಸ್ನಾನಮಾಡಿ ತಲೆ ಒರಸಿಕೊಳ್ಳುವಾಗ ಟವೆಲ್ ಹಿಸಿದು ಈಗಿನ ಟವೆಲ್ಲುಗಳೇ ಹೀಗೆ, ಎಲ್ಲಾ ಜವಳಿಗಿರಣಿಗಳೂ ಠಕ್ಕರ ಕೂಟಗಳಾಗಿವೆ ಎಂದು ಗೊಣಗುತ್ತೇನೆ. ಊಟ ಮುಗಿಸಿ ಗೊಣಗುತ್ತ ಬಸ್ಸಿಗೆ ಕಾಯುತ್ತೇನೆ. ಬಸ್ಸಿನಲ್ಲಿ ರಷ್ ಇದ್ದರೆ ಸಿಟಿ ಸರ್ವಿಸುಗಳನ್ನು ಏಕೆ ಹೆಚ್ಚಿಸಬಾರದೆಂದೂ ಗೊಣಗುತ್ತೇನೆ. ಜನರು ತೀರ ಕಡಿಮೆ ಇದ್ದರೆ ಇನ್ನು ಈ ಕಥಕ್ಕಳಿ ನಾಟ್ಯವಾಡುವ ಬಸ್ಸಿನಲ್ಲಿ ಮೈನುಗ್ಗು ಮಾಡಿಕೊಂಡು ಹೋಗ ಬೇಕು ಎಂದೂ ಗೊಣಗುತ್ತೇನೆ. ಮೈಸೂರು ಸರ್ಕಾರ ಬಸ್ಸುಗಳಲ್ಲಿ ಹೆಂಗ ಸರಿಗೆ ಬೇರೆ ಗಂಡಸರಿಗೆ ಬೇರೆ ಸೀಟುಗಳನ್ನು ಮಾಡಿ ತನ್ನ ಹಿಂದುಳಿತನವನ್ನು ಪ್ರದರ್ಶಿಸುತ್ತಿದೆ ಎಂದು ಗೊಣಗುತ್ತೇನೆ. ಆಫೀಸಿನಲ್ಲಿ ಏನೇನು ಗೊಣಗು ತ್ತೇನೆ ಎಂದು ಇಲ್ಲಿ ಹೇಳುವುದು ತೀರ ಅಪಾಯಕರವಾಗಿರುವುದರಿಂದ ಅದನ್ನು ಸ್ವಲ್ಪ ನಿಮ್ಮ ಕಲ್ಪನಾಶಕ್ತಿಗೆ ಬಿಡುತ್ತೇನೆ.

ಪೇಟೆಗೆ ಹೋದರೆ ಸಾಮಾನುಗಳೆಲ್ಲ ಆಕಾಶತುಟ್ಟಿಯಾಗಿರುವುದಕ್ಕಾಗಿ ಕೇಂದ್ರ ಸರಕಾರದ ಖೋತಾ ಬಜೆಟ್ ವಿರುದ್ಧ ಗೊಣಗುಟ್ಟುತ್ತ ವ್ಯಾಪಾರ ಮಾಡುತ್ತೇನೆ. ಡಾಕ್ಟರರ ಕಡೆ ಹೋಗಿ ನನ್ನ ಆರೋಗ್ಯ ಮೊದಲಿನಂತಿಲ್ಲ ವೆಂದು ಗೊಣಗುತ್ತೇನೆ. ಮನೆಗೆ ಹೋಗಿ ಈಚೆಗೆ ನನಗೆ ಏನು ಕರ್ಮವೋ ನಿದ್ದೆ ಬಹಳ ಹೆಚ್ಚಾಗಿದೆಯೆಂದು ಒಂದು ರಾತ್ರಿ, ನಿದ್ದೆಯೇ ಬರುತ್ತಿಲ್ಲವೆಂದು ಇನ್ನೊಂದು ರಾತ್ರಿ ಗೊಣಗುತ್ತೇನೆ.

ನಾನು ಎಂದು ಗೊಣಗುವುದಕ್ಕೆ ಪ್ರಾರಂಭಿಸಿದೆ ಎಂದು ನನಗೆ ಗೊತ್ತಿಲ್ಲ. ನನಗೆ ನೆನಪಿರುವಷ್ಟು ಹಿಂದಿನಿಂದಲೂ ನಾನು ಗೊಣುತ್ತಲೇ ಇದ್ದೇನೆ ಎಂದು ನನಗೆ ನೆನಪಿದೆ. ನಾನು ಹುಟ್ಟಿದ ಕೂಡಲೆ ಚಿಟ್ಟನೆ ಚೀರಲಿಲ್ಲವೆಂದೂ ಗೊರಗೊರ ಎಂದೇನೋ ಸಪ್ಪಳ ಮಾತ್ರ ಮಾಡಿದೆನೆಂದೂ ನನ್ನ ತಾಯಿ ಹೇಳುತ್ತಿದ್ದರು. ಅವರಿಗೆ ಸರಿಯಾಗಿ ಕೇಳಿರಲಿಕ್ಕಿಲ್ಲವೆಂದೂ ನಾನು ಗೊಣ

ಗೊಣ ಎಂದು ಹೇಳುತ್ತ ಹುಟ್ಟಿರಬೇಕೆಂದೂ ನನ್ನ ಹೆಂಡತಿ ಹೇಳುವುದರಲ್ಲಿ ಸತ್ಯವಿರಬೇಕೆನಿಸುತ್ತದೆ. ಹೀಗೆ ನಾನು ಹುಟ್ಟಾ ಗೊಣಗುಡಕನೆಂದೂ ಹೇಳಿಕೊಳ್ಳಬಲ್ಲೆ.

ನೀವು ಯುದ್ಧಕಾಲದ ಇದ್ದಲಿ ಗ್ಯಾಸಿನ ಬಸ್ಸುಗಳನ್ನು ನೋಡಿದ್ದಿರಾ? ಚಳಿಗಾಲದ ಬೆಳಿಗ್ಗೆ ಎದ್ದು ಕಂಡಕ್ಟರನೋ ಇನ್ನಾರೋ ಅದರ ಹ್ಯಾಂಡಲ್ ಅರ್ಧ ಗಂಟೇ ವರೆಗೆ ತಿರುಗಿಸಿ ಆಮೇಲೆ ಅದರ ಮೂಗಿಗೆ ಅಂಕುಶ ಹಾಕಿ ತಿರುವಿದಾಗ ಶಬ್ದಮಾಡಿ ಹೇಗೋ ಏನೋ ಅದು ಸ್ಟಾರ್ಟ್ ಆಗುವುದನ್ನು ನಾನು ಮೂಕ ವಿಸ್ಮಯದಿಂದ ನೋಡುತ್ತ ನಿಲ್ಲುತ್ತಿದ್ದೆ. ಅದನ್ನು ಹೊರಡಿಸಿದಮೇಲೆ ಅದು ಗೊರಗೊರ ಎಂದು ಗೊಣಗುತ್ತಲೇ ಸಾಗುತ್ತಿತ್ತು. ಅದು ಸಪ್ಪಳ ಮಾಡುವುದನ್ನು ನೋಡಿದರೆ ಅದೆಂದೂ ತನ್ನ ಗುರಿಯನ್ನು ಸೇರಲಾರದೆಂದೇ ಅನಿಸುತ್ತಿತ್ತು. ಆದರೆ ಅದು ಗುರಿಯನ್ನು ಸ್ವಲ್ಪ ತಡವೋ ಮುಂಚೆಯೋ ತಲುಪಿಯೇ ತಲುಪುತ್ತಿತ್ತು. ನನ್ನನ್ನು ಈ ಚಳಿಗಾಲದಲ್ಲಿ ಇಷ್ಟು ಬೆಳಗ್ಗೆ ನೀವು ಹೊರಡಿಸುವುದು ಶುದ್ಧ ಅನ್ಯಾಯ ಎಂಬುದಾಗಿ ಗೊಣಗಲು ಪ್ರಾರಂಭಿಸಿದ್ದು, ಕೊನೆಗೆ ನೀವು ಅದನ್ನು ನಿಲ್ಲಿಸುವ ವರೆಗೂ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಲೇ ಇದ್ದರೂ ಅದು ತನ್ನ ಕರ್ತವ್ಯವನ್ನು ಪಾಲಿಸುತ್ತಲೇ ಇತ್ತು. ನನಗೆ ಯಾವಾಗಲೂ ಈ ಕೋಲ್‌ಗ್ಯಾಸ್ ಬಸ್ಸಿನ ಸಂಗಡ ಒಂದು ತರಹದ ಭಾಯೀಭಾಯಿತನ ಅನಿಸುತ್ತಿತ್ತು.

ಗೊಣಗುಡುಕರ ಸಂಘವೊಂದನ್ನು ಏಕೆ ಪ್ರಾರಂಭಿಸಬಾರದು ಎಂದು ನಾನೊಮ್ಮೆ ಯೋಚಿಸಿ ಅದನ್ನು ಸ್ಥಾಪಿಸಿದರೆ ನಮ್ಮ ಆಫೀಸಿನಲ್ಲಿ, ನನ್ನ ಸ್ನೇಹಿತರಲ್ಲಿ ಎಷ್ಟು ಜನ ಸದಸ್ಯರು ದೊರೆಯಬಹುದು ಎಂದು ಮಾನಸಿಕ ಗಣಿತ ಮಾಡಿದೆ. ನನಗೆ ಗೊತ್ತಿದ್ದವರೆಲ್ಲರೂ ಹೆಚ್ಚು ಕಡಿಮೆ ಗೊಣಗುಡುಕರ ಬಳಗಕ್ಕೆ ಸೇರಿದವರು ಎಂದು ತೀರ್ಮಾನಕ್ಕೆ ಬರಬೇಕಾಯಿತು. ನಾನು ಸ್ವಲ್ಪ ಎಕ್ಸ್‌ಟ್ರೀಂ ಕೇಸ್ ಆಗಿರಬಹುದಾದರೂ ಯುನಿಕ್ ಕೇಸ್ ಅಲ್ಲ ಎಂಬ ಮನವರಿಕೆಯಿಂದ ನನಗೆ ತುಸು ನಿರಾಶೆಯಾದರೂ ಸ್ವಲ್ಪ ಹಾಯೆನಿಸಿತೆಂದೂ ಹೇಳಲೇಬೇಕು.

ಗೊಣಗುಡುವುದು ಒಂದು ಉದ್ಯೋಗವೋ ಅಥವಾ ಮನೋರಂಜನೆಯೋ ಎಂಬುದನ್ನು ನಾನು ನಿರ್ಧರಿಸಲಾರದವನಾಗಿದ್ದೇನೆ. ಗೊಣಗುಡುವುದಕ್ಕೆ

ಏನಾದರೊಂದು ಅವಕಾಶ ಸಿಕ್ಕಿದೊಡನೆ ನನ್ನ ಮಿತ್ರರ ಕಣ್ಣುಗಳಲ್ಲಿ ಸುಳಿಯುವ ಆನಂದದ ಛಾಯೆಯನ್ನು ನೋಡಿದಾಗ ಅದು ಮನೋರಂಜನೆಯೇ ಎಂದು ನನಗೆ ಅನಿಸುತ್ತದೆ. ಏಕೆಂದರೆ ಕಲಾತ್ಮಕ ಅನುಭೂತಿಯ ಕಾಲದಲ್ಲಿ ಮಾತ್ರ ಕಾಣಿಸುವ ಲೋಕೋತ್ತರ ನಿರ್ಮಮ ಆನಂದದ ಛಾಯೆ ಅದು.

ಕಲಾತ್ಮಕ ಆನಂದದ ಒಂದು ಗುಣವೆಂದರೆ ಎಷ್ಟು ಸಲ ಅದನ್ನು ಅನುಭವಿಸಿದರೂ ಬೇಸರ ಬರುವುದಿಲ್ಲ. ಅದರ ರುಚಿ ಇನ್ನಷ್ಟು ಹೆಚ್ಚುತ್ತದೆ. ನಾವು ಗೊಣಗುಡುಕರ ಬಳಗದವರು ಇಂಥ ಆನಂದವನ್ನೇ ಅನುಭವಿಸುತ್ತೇವೆ. ಆ ಆನಂದ ಎಲ್ಲಿಯಾದರೂ ಏನಾದರೂ ತಪ್ಪು ಕಾಣಿಸಿದೊಡನೆ ಪುಟಿದೆದ್ದು, ವಾಲ್ಮೀಕಿಯ ಶೋಕವೇ ಶ್ಲೋಕವಾಗಿ ಹೊರಹೊಮ್ಮಿದ ಹಾಗೆ, ಶಬ್ದಗಳಲ್ಲಿ ಹೊರಸೂಸತೊಡಗುತ್ತದೆ. ಒಂದು ಸುತ್ತು ಗೊಣಗಾಟವನ್ನು ಮುಗಿಸಿದ ಮೇಲೆ ನಮಗೆ ಯಾವುದೋ ಒಂದು ಕವಿತೆಯನ್ನು ಬರೆದು ಮುಗಿಸಿದ ಆನಂದವಾಗುತ್ತದೆ.

ಸುದೈವದಿಂದ ನಮ್ಮ ದೇಶದಲ್ಲಿ ಗೊಣಗುವುದಕ್ಕೆ ತಕ್ಕ ಅವಕಾಶಗಳಿಗೆ ಏನೂ ಕೊರತೆಯಿಲ್ಲ. ಸಾಮಾನ್ಯ ವಿಷಯಗಳ ಮೇಲೆ ಗೊಣಗುವ ಅಲ್ಪತೃಪ್ತರಿಗೆ ಸಾಲುವಂಥ ಮುನಸಿಪಾಲಿಟೀ ಕೃಪಾಪೋಷಿತ ಸೊಳ್ಳೆಗಳು ಮತ್ತು ನೊಣಗಳು, ಕಸದ ರಾಶಿಗಳು, ಕ್ರೂರನ ಕಣ್ಣುಗಳ ಹಾಗೆ ನಿರ್ಜಲವಾದ ನಲ್ಲಿಗಳು, ಶುಕ್ಲ ಪಕ್ಷದಲ್ಲಿ ಉರಿದು ಕೃಷ್ಣಪಕ್ಷದಲ್ಲಿ ಸತ್ಯಾಗ್ರಹ ಮಾಡುವ ಬೀದಿ ದೀಪಗಳು ಇದ್ದೇ ಇವೆ. ನೀವು ಸ್ವಲ್ಪ ನೈತಿಕ ಒಲವಿನವರಾಗಿದ್ದರೆ ಹೆಣ್ಣು ಕಂಡು ಸಿಳ್ಳುಹಾಕುವ ಈಗಿನ ತರುಣರ ಪಾತಕ ವೃತ್ತಿ, ಮುಚ್ಚುವುದಕ್ಕಿಂತಲೂ ಬಿಚ್ಚಿಡುವ ಉದ್ದೇಶದಿಂದ ಹೊಲಿದ ಈಗಿನ ಹೆಣ್ಣುಗಳ ಬಟ್ಟೆಗಳು, ಈಗಿನ ಸಿನೇಮಗಳ ಕಾಮಪ್ರಚೋದಕತೆ ಮೊದಲಾದ ನೀತಿಗೇಡುಗಳ ಉದಾಹರಣೆಗಳು ಧಾರಾಳವಾಗಿವೆ. ನೀವು ಸಾರ್ವಜನಿಕ ಎಚ್ಚರವುಳ್ಳವರಾಗಿದ್ದರೆ ಭ್ರಷ್ಟಾಚಾರ, ಕರ್ತವ್ಯಲೋಪ, ಸ್ವಜನಾನುಗ್ರಹ ಇತ್ಯಾದಿ ಸಹಸ್ರಾರು ಸಂಗತಿಗಳು ನಿಮ್ಮ ಗೊಣಗಾಟಕ್ಕೆ ಆಹಾರವಾಗಬಲ್ಲವು. ರಾಜಕೀಯ ವಿಚಾರದವರಿಗೆ ಇಂಡಿಕೇಟು–ಸಿಂಡಿಕೇಟು, ಜಾತೀಯತೆ, ಪ್ರಾಂತೀಯತೆಗಳು ಹೆಜ್ಜೆಹೆಜ್ಜೆಗೂ ಸಹಾಯಕ್ಕೆ ಬರುತ್ತವೆ. ಸುಧಾರಣಾವಾದಿಗಳಿಗೆ ವರದಕ್ಷಿಣೆ ಇದೆ. ಸಾಹಿತ್ಯಪ್ರಿಯರಿಗೆ ಈಗಿನ ಕವಿಗಳ ನಿರರ್ಥಕ ಕವಿತೆಗಳು, ಕಾದಂಬರಿ

ಕಾರರ ನೀರಸ ರಚನೆಗಳು ಇವೆ. ಹಿಂದುಗಳು ಹಿಂದುಗಳ ಅನೈಕ್ಯದ ಬಗ್ಗೆ ಗೊಣಗಬಹುದು. ಮುಸ್ಲಿಮರು ಹಿಂದುಗಳ ದಬ್ಬಾಳಿಕೆಯನ್ನು ಟೀಕಿಸ ಬಹುದು. ಕನ್ನಡಿಗರೂ ಮರಾಠಿಗರೂ ಗಡಿಗಳ ಬಗ್ಗೆ ಗೊಣಗುಡಬಹುದು.

ಮತ್ತು ಗೊಣಗುಡುವುದಕ್ಕೆ ತಕ್ಕ ವಸ್ತುಗಳ ಅಭಾವವಾಗದ ಹಾಗೆ ನಾವು ನೋಡಿಕೊಳ್ಳುತ್ತೇವೆ. ನೀವು ರಸ್ತೆಯಲ್ಲಿ ಹೋಗುತ್ತಿದ್ದೀರಿ. ನಡುವೆ ಒಂದು ಕತ್ತೆ ಸತ್ತು ಬಿದ್ದಿದೆ. ಕರವಸ್ತ್ರವನ್ನು ಮೂಗಿಗೆ ಒತ್ತಿ ಕತ್ತೆಗೆ ಸ್ವಲ್ಪ ದೂರದಲ್ಲಿ ಪ್ರದಕ್ಷಿಣೆ ಹಾಕಿ ಮುಂದೆ ಸಾಗುತ್ತೀರಿ. ನೀವು ಹತ್ತಿರವೇ ಇದ್ದ ಟೆಲಿಫೋನಿಗೆ ಹೋಗಿ ಮುನಸಿಪಾಲಿಟಿಯವರಿಗೆ ಕತ್ತೆಯ ಶೋಚನೀಯ ನಿಧನದ ವರದಿಯನ್ನು ಕೊಡುವ ತೊಂದರೆ ತೆಗೆದುಕೊಳ್ಳುವುದಿಲ್ಲ. ಟೆಲಿ ಫೋನಿಗೆ ೩೦ ಪೈಸಾ ಖರ್ಚುಮಾಡಲಾರದಷ್ಟು ಜಿಪುಣರು ನೀವಲ್ಲ, ನನಗೆ ಗೊತ್ತು. ಆದರೆ ಈ ಸತ್ತ ಕತ್ತೆಯಲ್ಲಿ ನಿಮಗೀಗ ಒಂದು ವೆಸ್ಟೆಡ್ ಇಂಟ ರೆಸ್ಟ್ ಅಥವಾ ನಿಹಿತ ಸ್ವಾರ್ಥ ಉತ್ಪನ್ನವಾಗಿದೆ. ಮುನಿಸಿಪಾಲಿಟಿಗೆ ನೀವು ವರದಿ ಮಾಡಿದರೆ ಮತ್ತು ಅವರೆಲ್ಲಾದರೂ ಅಪ್ಪಿತಪ್ಪಿ ಕತ್ತೆಯನ್ನು ರಸ್ತೆಯ ಮಧ್ಯದಿಂದ ಎತ್ತಿಹಾಕಿಬಿಟ್ಟರೆ, ನಿಮಗೂ ನನಗೂ ಗೊಣಗುಟ್ಟುವುದಕ್ಕಿರುವ ಒಂದು ನವೀನ ವಿಷಯ ಹೊರಟುಹೋಗುವುದಲ್ಲವೆ?

ಗೊಣಗುಟ್ಟುವುದರಲ್ಲಿ ಅನೇಕ ಗುಣಗಳಿವೆ. ಒಂದು ದೊಡ್ಡ ಅನುಕೂಲ ವೆಂದರೆ ಅದು ಯಾವುದೊಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಗತ್ಯ ವಾದ ಶ್ರಮವನ್ನು ತಪ್ಪಿಸುತ್ತದೆ. ನಿಮ್ಮ ನೆರೆಮನೆಯಾತ ಕಳ್ಳಪೇಟೆ ಯನ್ನೊ ಲಂಚಗುಳಿತನವನ್ನೊ ಗುಪ್ತ ಕರನಿರಾಕರಣೆಯನ್ನೊ ಮಾಡುತ್ತಾ ನೆಂದುಕೊಳ್ಳಿ. ಅವನ ಬಗ್ಗೆ ನೀವು ತಕ್ಕವರಿಗೆ ಮಾಹಿತಿ ಕೊಡುವ ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ. ಅವನು ಅನಾಚಾರ ಮಾಡುತ್ತಾನೆ. ಅದು ದೇಶಕ್ಕೆ ಹಾನಿಕರ ಹೌದು. ನೀವು ನಾಲ್ಕು ಜನರ ಮುಂದೆ, ಅವನ ಹಿಂದೆ, ನಾಲ್ಕು ಮಾತು ಗೊಣಗುತ್ತೀರಿ. ಅವನ ಕೃತ್ಯಗಳಲ್ಲಿ ನಿಮ್ಮ ಸಹಾನುಭೂತಿ ಇಲ್ಲ ವೆಂದು ನಿಮಗೂ ಇತರರಿಗೂ ಸ್ಪಷ್ಟಮಾಡುತ್ತೀರಿ. ನಿಮ್ಮ ಕರ್ತವ್ಯ ಮುಗಿ ಯಿತು. ನಿಮ್ಮ ಆತ್ಮಸಾಕ್ಷಿ ಸ್ವಚ್ಛವಾಯಿತು.

ಗೊಣಗುವುದು ಶಾಂತಿಗೆ ಅತ್ಯಂತ ಪೋಷಕವಾದದ್ದು ಎಂದು ನಾನು ಮನಗಂಡಿದ್ದೇನೆ. ನಾನು ದಿನದ ಗೊಣಗಾಟವನ್ನು ಸರಿಯಾಗಿ ಪೂರೈಸಿದ್ದರೆ

ನನಗೆ ಮನಶ್ಶಾಂತಿ ಇರುತ್ತದೆ. ರಾತ್ರಿ ಮನೆಗೆ ಹೋಗಿ ನಾನು ಮಕ್ಕಳನ್ನು ಲಾಲಿಸುತ್ತೇನೆ. ಯಾವುದಾದರೊಂದು ದಿನ ಗೊಣಗುವುದಕ್ಕೆ ಏನೂ ವಸ್ತು ಸಿಕ್ಕದೆಯೋ ಮತ್ತಾವಕಾರಣದಿಂದಲೋ ಗೊಣಗಾಟ ಮಾಡದಿದ್ದರೆ ಮನೆಗೆ ಹೋಗಿ ಹೆಂಡತಿಯ ಮೇಲೆ ಎಗರಾಡುತ್ತೇನೆ, ಮಕ್ಕಳನ್ನು ಹೊಡೆಯುತ್ತೇನೆ, ಆಮೇಲೆ ಊಟಮಾಡದೆ ಮಲಗುತ್ತೇನೆ, ನಿದ್ದೆ ಬಾರದೆ ಹೊರಳಾಡುತ್ತೇನೆ.

ಗೊಣಗುಡುಕರಲ್ಲದವರನ್ನೆಲ್ಲ ಕೊಲೆಗಡುಕರ ವರ್ಗಕ್ಕೆ ನಾನು ಸೇರಿಸುತ್ತೇನೆ. ಗೊಣಗಾಡುವ ಅಭ್ಯಾಸವಿಲ್ಲದ ನನ್ನ ಮಿತ್ರನೊಬ್ಬನಿಗೆ ಹುಚ್ಚು ಹಿಡಿಯಿತು. ಅದಕ್ಕಿಂತಲೂ ಭಯಂಕರವಾದ ಒಂದು ಘಟನೆಯನ್ನು ನಾನು ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದಾಗ ಕಂಡೆ. ಒಬ್ಬಾನೊಬ್ಬ ಗಿರಾಕಿ ಮಿತಭಾಷಿಯೂ ಪರನಿಂದೆ ಮೊದಲಾದ ಗೊಣಗಾಟಗಳಲ್ಲಿ ಕೈ ಮಿಲಾಯಿಸದವನೂ ಆಗಿದ್ದ. ಒಂದು ಸಲ ಯಾರ ತಪ್ಪಿನಿಂದಲೋ ಏನೋ ಆತ ತಣ್ಣೀರಿನ ನಲ್ಲಿಯನ್ನು ತಿರುಗಿಸಿದಾಗ ಅದರಲ್ಲಿ ಬಿಸಿನೀರು ಬಂತು. ಆತ ಕೂಡಲೆ ಕೆಂಪೇರಿ ಕೈಗೆ ಸಿಕ್ಕಿದ್ದನ್ನೇನೋ ತೆಗೆದುಕೊಂಡು ಆ ನಲ್ಲಿಯನ್ನು ಕುಟ್ಟಿದ. ಅದರ ಟ್ಯಾಪ್ ಮುರಿದುಹೋಯಿತು. ಸುಡು ನೀರು ಬಸಿದು ಅವನ ಕಾಲು ಸುಟ್ಟುಹೋಗಿ ಅವನನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು. ಆತ ಗೊಣಗಾಡುವವನಾಗಿದ್ದರೆ ಅವನು ಈ ರೀತಿ ತನ್ನ ಕರ್ತವ್ಯಪಾಲನೆ ಮಾಡುತ್ತಿರಲಿಲ್ಲ. ಜಗತ್ತಿನಲ್ಲಿರುವ ಆತ್ಮಹಂತಕರು, ಕೊಲೆಗಡುಕರು, ಕ್ರಾಂತಿಕಾರರು ಇವರೆಲ್ಲರೂ ಗೊಣಗುಟ್ಟ ಲಾರದವರಾಗಿದ್ದರೆಂದು ನನ್ನ ಖಚಿತ ನಂಬಿಕೆ.

ಕಾರಣ ಸ್ಪಷ್ಟವೇ ಆಗಿದೆ. ನೀವು ಗೊಣಗುಟ್ಟದೆ ಹೋದರೆ ನಿಮಗೆ ಅಸಮಾಧಾನ ತಂದ ವಿಷಯವನ್ನು ಸರಿಪಡಿಸುವ ಬುದ್ಧಿಗೇಡಿ ಹವ್ಯಾಸಕ್ಕಿಳಿಯುತ್ತೀರಿ. ಒಂದನ್ನು ಸರಿಪಡಿಸುವುದಕ್ಕೆ ಹೋದಾಗ ಅದರ ಕೆಳಗೆ ಇನ್ನೊಂದು ಅಸಮಾಧಾನಕರ ಸಂಗತಿ ಕಾಣಿಸುತ್ತದೆ. ಅದರ ಕೆಳಗೆ ಮತ್ತೊಂದು. ಕೊನೆಗೆ ಇದನ್ನೆಲ್ಲ ದುರಸ್ತಿ ಮಾಡಲು ನಿಮ್ಮ ಜೀವಮಾನವೇ ಸಾಲದೆನ್ನಿಸುತ್ತದೆ. ನೀವು ಇಡೀ ಅಸಮಾಧಾನಕರ ವಿಷಯವನ್ನೇ ಕಿತ್ತುಹಾಕುವುದಕ್ಕೆ ಯತ್ನಿಸುತ್ತೀರಿ. ಇದು ನಿಮ್ಮನ್ನು ಕೊಲೆಗಡುಕ ಅಥವಾ ಕ್ರಾಂತಿಕಾರಿಯಾಗಿ ಮಾಡುತ್ತದೆ. ಲೆನಿನ್ ಎಂದೂ ಗೊಣಗುತ್ತಿದ್ದಿಲ್ಲವೆಂದು ನನಗೆ ಖಚಿತವಾಗಿದೆ. ಮಾವೊ ತ್ಸೆ ತುಂಗ್ ಕೂಡ. ಆತ ಗೊಣಗುಡದೆ ರೈತರ ಸೈನ್ಯ

ಕಟ್ಟಿ ಕ್ರಾಂತಿ ಮಾಡಿದ.

ನಾನು ಶಾಂತಿಪ್ರಿಯ; ಕ್ರಾಂತಿ ವಿರೋಧಿ. ನಾನು ಪ್ರಜಾಸತ್ತಾವಾದಿಯೂ ಹೌದು. ಏಕೆಂದರೆ ಪ್ರಜಾಸತ್ತೆ ಪರಮಾವಧಿ ಗೊಣಗಾಟಕ್ಕೆ ಅವಕಾಶ ಕೊಡುತ್ತದೆ. ನಮ್ಮ ಭಾರತೀಯರ ಮೂಲ ಜಾಯಮಾನ ಪ್ರಜಾಸತ್ತಾತ್ಮಕವಾದದ್ದು. ನಮ್ಮ ರಾಜಕರ್ತರ ಜಾಯಮಾನವೂ ಅದೇ. ಆದ್ದರಿಂದ ನಾವು ಪ್ರತಿಯೊಂದು ಮಟ್ಟದಲ್ಲಿಯೂ ಧಾರಾಳವಾಗಿ ಗೊಣಗುಟ್ಟುವ ವೇದಿಕೆಗಳನ್ನು ಸ್ಥಾಪಿಸಿದ್ದೇವೆ. ನಾವು ಮುನಿಸಿಪಾಲಿಟಿಗಳಲ್ಲಿ ಗೊಣಗುತ್ತೇವೆ, ವಿಧಾನ ಸಭೆಗಳಲ್ಲಿ ಗೊಣಗುತ್ತೇವೆ, ಸಂಸತ್ತಿನಲ್ಲಿ ಗೊಣಗುತ್ತೇವೆ; ಈಗ ಗ್ರಾಮಗಳಿಗೂ ವೇದಿಕೆಯನ್ನು ವಿಸ್ತರಿಸಿ ಗ್ರಾಮಪಂಚಾಯತಿಗಳನ್ನು ಸ್ಥಾಪಿಸಿದ್ದೇವೆ. ನಾವು ಕಾಲಕಾಲಕ್ಕೆ ಗೊಣಗುವ ವ್ಯಾಜುಗಳನ್ನು ಆಡುತ್ತೇವೆ. ಈ ವ್ಯವಸ್ಥೆ ಇರುವಷ್ಟು ಕಾಲ ನಮ್ಮ ದೇಶದಲ್ಲಿ ಯಾವ ಕೆಲಸವೂ ಆಗಲಿಕ್ಕಿಲ್ಲ ಎನ್ನುವ ಸಂಭವ ಇದೆಯಾದರೂ ಕ್ರಾಂತಿ, ರಕ್ತಪಾತ ಆಗುವುದಿಲ್ಲವೆಂಬ ಭರವಸೆಯೂ ಇದೆ. (೧೯೭೦)

## ಇಸು

ಗೋವಿಂದ ಪೈಗಳು ಕನ್ನಡ ಭಾಷೆಯ ಶಬ್ದಸಂಪತ್ತಿಯನ್ನು ಬೆಳಸಿಕೊಳ್ಳುವ ವಿಧಾನಗಳನ್ನು ತಮ್ಮ ಸಮ್ಮೇಲನಾಧ್ಯಕ್ಷ ಭಾಷಣದಲ್ಲಿ ಸೂಚಿಸಿದ್ದಾರೆ. ಅವರು ಕೊಟ್ಟ ಕೆಲ ಉದಾಹರಣೆಗಳು :

ಸವ್ಯಸಾಚಿಸು = ಎರಡೂ ಕೆಯ್ಗಳಿಂದಲೂ ಬಾಣಗಳನ್ನು ಎಸೆ; ಕೆಳಗಿಸು = ಕೆಳಗೆ ಇಳಿಸು, ಇತ್ಯಾದಿ ಇತ್ಯಾದಿ. ತುಂಬ ಉಪಯುಕ್ತ ಸಲಹೆ. ಇದನ್ನು ಅಕ್ಷರಶಃ ಪಾಲಿಸಿದರೆ ಆಗುವ ಅದ್ಭುತ ಪರಿಣಾಮಗಳನ್ನು ಕಂಡು ನನಗೆ ಅತ್ಯಂತ ಕೌತುಕವಾಯಿತು. ನೋಡಿರಿ :

ಗೋವಿಂದ ಪೈಗಳು ಮುಂಬಯಿಗೆ ಹಡಗಿನಲ್ಲಿ ಹೋದರು ಎನ್ನುವುದಕ್ಕೆ ಹಡಗಿಸಿದರು ಎನ್ನಬಹುದು. ನಾನು ಮಂಜೇಶ್ವರಕ್ಕೆ ಅರ್ಧದಾರಿ ಮೋಟಾರಿನಲ್ಲಿ ಹೋಗಿ ಆ ಮೇಲೆ ರೈಲಿನಲ್ಲಿ ಹೋದೆ, ಅನ್ನುವುದಕ್ಕೆ ಅರ್ಧದಾರಿ ಮೋಟರಿಸಿಸಿ (ಮೋಟರಿಸಿ ಅಲ್ಲ, ಹಾಗೆ ಹೇಳಿದರೆ ನಾನೇ ಮೋಟಾರ್

ಹೊಡೆದೆ ಎಂದು ಅರ್ಥವಾದೀತು) ಆ ಮೇಲೆ ರೈಲಿಸಿಸಿದೆ ಎನ್ನಬಹುದು. ಗೋವಿಂದ ಪೈಗಳು ಭಾಷಣಿಸಿದರು, ನಾನು ಲೇಖನಿಸಿದೆ. ಅವರ ಮನೆ ಬಾಗಿಲಿಸಿತ್ತು ಎಂದರೆ ಬಾಗಿಲು ಮುಚ್ಚಿತ್ತು ಎಂದು ನಾವು ಅರ್ಥಮಾಡಿ ಕೊಳ್ಳಬಹುದು. ನಾನು ಮನೆಯಿಂದ ಹೊರಡುವಾಗ ಶ್ರೀಮತಿ ಆಚಾರ್ಯರಿಗೆ ಬಾಗಿಲಿಸಿಕೊಳ್ಳಲು ಹೇಳಿದೆ ಎಂದರೆ ಬಾಗಿಲು ಇಕ್ಕಿಕೊಳ್ಳಲು ಹೇಳಿದೆ. ಆದರೆ ನಿಲ್ಲಿ, ಅದೇ ಶಬ್ದವನ್ನು ತದ್ವಿರುದ್ಧ ಅರ್ಥದಲ್ಲಿಯೂ ಪ್ರಯೋಗಿಸ ಬಹುದು. ನಾನು ಮನೆಗೆ ಹೋಗಿ "ಬಾಗಿಲಿಸೇ" ಎಂದು ಕೂಗಿದರೆ "ಬಾಗಿಲು ತೆರೆ" ಎಂದೇ ಅರ್ಥ. ಅರ್ಥಾತ್ ಬಾಗಿಲು ಹಾಕಿಕೊಂಡಿದ್ದಾಗ "ಬಾಗಿಲಿಸು" ಕ್ರಿಯಾಪದಕ್ಕೆ ತೆರೆ ಎಂದೂ ತೆರೆದುಕೊಂಡಿದ್ದಾಗ್ಗ ಇಕ್ಕಿಕೋ ಎಂದೂ ಅರ್ಥವಾಗುತ್ತದೆ.

ನಾನು "ಕುದುರಿಸಿ"ದರೆ ಆ ಪ್ರಾಣಿಯ ಮೇಲೆ ಸವಾರಿ ಮಾಡಿದಂತೆ; "ಕತ್ತೆಸಿ"ದರೆ ಆ ಪ್ರಾಣಿಯ ಮೇಲೆ ಸವಾರಿ ಮಾಡಿದಂತೆ, ಅಥವಾ ಅದರ ಹಾಗೆ ಹಾಡಿದಂತೆ, ಅಥವಾ ಅದರ ಹಾಗೆ ಬಿದ್ದಂತೆ ಸಂದರ್ಭಾನುಸಾರ ಅರ್ಥವಾಗುವುದು.

ಈ "ಇಸು" ಪ್ರತ್ಯಯದ ಬಲದಿಂದ ನಾವು ಅಸಾಧ್ಯ ಚಮತ್ಕಾರ ಗಳನ್ನು ಮಾಡಬಹುದು. ಉದಾಹರಣೆಗಾಗಿ "ಹುಬ್ಬಳ್ಳಿ ಮುಂಬೈಸಿತು" ಅಂದರೆ ಇಲ್ಲಿ ಅಲ್ಲಿಯ ಹಾಗೆ ಜನದಟ್ಟಣೆಯಾಯಿತು. ಅಲ್ಲಿಯಂತೆ ಇಲ್ಲಿಯೂ ಕಾಲ್ದಾರಿಗಳ ಮೇಲೆ ಜನ ಸಂಸಾರ ಮಾಡುತ್ತಾರೆ ಎಂದಾದೀತು. ಒಂದೇ ಶಬ್ದದಿಂದ ಇಷ್ಟು ಅರ್ಥವನ್ನು ಕಪಾಳಕ್ಕೆ ಹೊಡೆದ ಹಾಗೆ ಅಭಿ ವ್ಯಂಜಿಸಲು ಬೇರೇನು ಉಪಾಯವಿದೆ ? "ಜನರು ಹೊರಗೆ ಏಕಾದಶಿಸುತ್ತಿರು ವಾಗ ಒಳಗೆ ಅಧಿಕಾರಿಗಳು ದ್ವಾದಶಿಸುತ್ತಿದ್ದಾರೆ (ಅಥವಾ ಅದಕ್ಕಿಂತಲೂ ಅರ್ಥಪೂರ್ಣವಾಗಿರಬೇಕಾದರೆ "ದಶಮಿಸುತ್ತಿದ್ದಾರೆ") ಎಂದು ಹೇಳಿದರೆ ನಿಮ್ಮ ಮನಸ್ಸಿನಲ್ಲಿದ್ದದ್ದನ್ನು ಎಲ್ಲಕ್ಕೂ ಚೆನ್ನಾಗಿ ಪ್ರದರ್ಶಿಸಿದಂತಾಗುವುದು. ಮಂದಿಯ ಕೆಲಸದಲ್ಲಿ "ಮೂಗಿಸು"ವವನು ಅಧಿಕ ಪ್ರಸಂಗಿ, ಮಂದಿಯ ಕಷ್ಟ ದಲ್ಲಿ "ಕಾಲಿಸು"ವವನಿಗೆ ಅದರಿಂದ ಹೊರಬರಲಾಗುವುದಿಲ್ಲ.

ಹಸಿವಾಗಿದ್ದರೆ ನೀವು ಊಟಿಸಿರಿ, ನಾನು ಟಿಫಿನಿಸುತ್ತೇನೆ. ಶ್ರೀಮಂತರು ಸಿಗರೇಟಿಸುವಾಗ ಬಡವರಿಗೆ ಬೀಡಿಸುವ ಸೌಕರ್ಯವಾದರೂ ಬೇಕು.

ಇಸು ಪ್ರತ್ಯಯ ಬಲದಿಂದ ಸೂಕ್ಷ್ಮವಾದ ಅರ್ಥಚ್ಛಾಯೆಗಳನ್ನು ಹೇಗೆ ತರಬಹುದು ನೋಡಿ: ಉಣ್ಣುವುದು ಬೇರೆ ಊಟಿಸುವುದು ಬೇರೆ; ತಿನ್ನುವುದು ಬೇರೆ ತಿಂಡಿಸುವುದು ಬೇರೆ. ಆ ಹುಡುಗಿ ಕಾಲಿಸಿದ್ದೆಲ್ಲ ಕುಣಿತ. ಹೆಂಡತಿ ಕಣ್ಣಿಸಿದೊಡನೆ ಅವನ ಎದೆ ಝಲ್ಲಿಸಿತು.

ಈ ಪ್ರಕಾರ ಶಬ್ದ ಸೃಷ್ಟಿಮಾಡಿದರೆ ಕನ್ನಡ ಗೇಣಿಸುವುದನ್ನು ಬಿಟ್ಟು ಮೈಲಿಸುವುದು. ಮಾತ್ರವಲ್ಲದೆ ಸಮುದ್ರಗಟ್ಟಳೆ ಮಸಿ, ಗಾವುದಗಟ್ಟಳೆ ಕಾಗದ ಉಳಿಯುವುದು ಎಂದು ಬರ್ನಾರ್ಡ್‌ಶಾ ಭಾಷೆಯಲ್ಲಿ ಹೇಳಲಡ್ಡಿಯಿಲ್ಲ. ಆದರೆ ಅದರಿಂದ ಉಳಿಯುವ ಶತಮಾನಗಟ್ಟಳೆ ಸಮಯದಲ್ಲಿ ನಮ್ಮ ಲೇಖಕರು ಇನ್ನಷ್ಟು ಪುಸ್ತಕ ಬರೆದರೇನು ಗತಿ ? (೧೯೫೧)

## ಸವಿಗನಸುಗಳು

ಮೊನ್ನೆ ವೈಜ್ಞಾನಿಕ ಪತ್ರಿಕೆಯೊಂದರಲ್ಲಿ ನಿದ್ದೆಯನ್ನು ಕುರಿತು ಓದುತಿದ್ದೆ. ನಿದ್ರೆಯ ಬಹುಭಾಗ ಸಮಯವನ್ನು ನಾವು ಕನಸು ಕಾಣುವುದರಲ್ಲಿ ಕಳೆಯತ್ತೇವಂತೆ. ಮನುಷ್ಯ ಮಾತ್ರವಲ್ಲ, ಪ್ರಾಣಿಗಳೂ ಗಡದ್ದಾಗಿ ಕನಸು ಕಾಣುತ್ತವಂತೆ. ಆದರೆ ತಂಪು ರಕ್ತದ ಹಾವು, ಕಪ್ಪೆ ಮೊದಲಾದವುಗಳು ಮಾತ್ರ ಕನಸು ಕಾಣುವುದಿಲ್ಲ ಅಂತ ವಿಜ್ಞಾನಿಗಳ ಅಭಿಪ್ರಾಯ. ಬಿಸಿರಕ್ತದ ಪ್ರಾಣಿಗಳಿಗೆ ಕನಸುಗಳು ಬೇಕೇಬೇಕಂತೆ. ಕನಸು ಕಾಣದೆ ನಾವು ನಿದ್ರೆ ಮಾಡಿದರೂ ಸುಖ ಇಲ್ಲಂತೆ. ಎರಡು ಮೂರು ರಾತ್ರಿ ನಾವು ಕನಸುಕಾಣದ ಹಾಗೆ ಯಾರಾದರೂ ತಡೆದರೆ ನಮಗೆ ಹುಚ್ಚೇ ಹಿಡಿಯಬಹುದು.

ನಾವು ಥಂಡಾ ರಕ್ತದ ಪ್ರಾಣಿಯಾಗಿರದಿದ್ದ ಪಕ್ಷದಲ್ಲಿ ಕನಸು ಕಂಡದ್ದಕ್ಕೆ, ಕಾಣುತ್ತಿರುವುದಕ್ಕೆ, ನಾಚಿಕೆ ಪಡಬೇಕಾದ್ದೇನೂ ಇಲ್ಲ ಅಂದ ಹಾಗಾಯಿತು. ಮತ್ತೆ cold blooded ಅಂತ ಅನಿಸಿಕೊಳ್ಳಲಿಕ್ಕೆ ಯಾರಿಗೆ ಇಷ್ಟ ಇದ್ದೀತು, ಹೇಳಿ. ಬಿಸಿ ನೆತ್ತರಿಗೂ ಕನಸು ಕಾಣುವುದಕ್ಕೂ ಸಂಬಂಧ ಇದೆ ಅಂದ ಮೇಲೆ ರಕ್ತ ಬಿಸಿಯಾಗಿದ್ದಷ್ಟೂ ಕನಸುಗಳು ಹೆಚ್ಚಾಗಬೇಕಲ್ಲವೇ ? ಬಿಸಿ ನೆತ್ತರ ತರುಣರು ಅಂತ ಅನಿಸಿಕೊಳ್ಳುವವರಿಗೆ ಕನಸೂ ಹೆಚ್ಚು ಅನ್ನುವುದು ಈ ಎಲ್ಲಾ ಚರ್ಚೆಯ ಫಲಿತಾಂಶವಾಯಿತು. ನಾವು ಬಿಸಿ ನೆತ್ತರಿನವ

ರಾಗಿರುವಾಗ ನಮ್ಮ ಇರುಳು ಕನಸುಗಳು ಜಾಗ ಸಾಲದೆ ತುಳುಕಿ ಹರಿದು ಹಗಲುಗನಸುಗಳಾಗುತ್ತವೆ.

ನಿಮ್ಮ ವಿಚಾರ ಹೇಗೋ ನನಗೆ ಗೊತ್ತಿಲ್ಲ. ನಾನಂತೂ ನನ್ನ ಪ್ರಥಮ ತಾರುಣ್ಯದಲ್ಲಿ ಇರುಳುಗನಸುಗಳಿಗಿಂತ ಹಗಲುಗನಸುಗಳನ್ನೇ ಜಾಸ್ತಿಯಾಗಿ ಕಾಣುತ್ತಿದ್ದೆ. ಮತ್ತು ಇರುಳುಗನಸುಗಳಿಗಿಂತ ಹಗಲುಗನಸುಗಳೇ ಸವಿಯಾಗಿರುತ್ತಿದ್ದವು. ಇರುಳುಗನಸುಗಳು ಹೆಚ್ಚಿನ ಮಟ್ಟಿಗೆ ನಮ್ಮ ವಶದಲ್ಲಿಲ್ಲ. ಹಗಲುಗನಸುಗಳೋ ಪೂರ್ತಿ ನಮ್ಮ ಮನಸ್ಸಿನದೇ ಸೃಷ್ಟಿ. ಆದ್ದರಿಂದ ಅವು ನಮಗೆ ಇಷ್ಟವಾಗುವ ರೀತಿಯಲ್ಲೇ ಹರಿಯುತ್ತವೆ. ವೇದಾಂತಿಗಳು ಬದುಕನ್ನೇ ಒಂದು ಕನಸೆಂದು ಹೇಳುತ್ತಾರೆ. ರಾಬರ್ಟ್ ಬ್ರೌನಿಂಗನ ಪ್ರಕಾರ ನಮ್ಮ ಎಚ್ಚರ ಎಂಬುದೇ ಒಂದು ಹುಚ್ಚು ಕನಸು. ಈ ಕನಸಿನಿಂದ ಪೂರ್ತಿ ಎಚ್ಚತ್ತು ಚಿನ್ಮಯು ಅಂದರೆ ಎಚ್ಚರಿಕೆಯೇ ಆಗಿಬಿಡುವುದೇ ವೇದಾಂತಿಗಳ ಧ್ಯೇಯ. ಬಡಪಾಯಿಗಳು ! ಬದುಕಿನ ಕನಸಿನಿಂದ ಸಂಪೂರ್ಣವಾಗಿ ಎಚ್ಚರಗೊಳ್ಳುವುದು ಅನ್ನೋದೇ ಒಂದು ಕನಸು. ಆದ್ದರಿಂದ ವೇದಾಂತ ಎನ್ನುವುದು ಕನಸಿನೊಳಗಿನ ಕನಸು–ನಾಟಕದೊಳಗಿನ ನಾಟಕ ಇದ್ದ ಹಾಗೆ—ಅನ್ನೋದು ಅವರಿಗೆ ಗೊತ್ತಿಲ್ಲ. ನನಗೆ ಜಗತ್ತಿನಲ್ಲಿರುವ ಎಲ್ಲಾ ಹುಚ್ಚು ಕನಸುಗಳನ್ನು ಕಳಿಸಿರಿ. ಒಂದು ಕನಸು ಒಡೆದರೆ ನಾನು ಇನ್ನೊಂದರೊಳಗೆ ನುಸುಳುತ್ತೇನೆ. ಯಾಕೆಂದರೆ ಹುಚ್ಚು ಕನಸುಗಳೇ ಸವಿಗನಸುಗಳು. ಬದುಕೇ ಹುಚ್ಚು ಕನಸಾಗಿದ್ದರೆ ನಾನು ನೂರು ಬದುಕುಗಳನ್ನು ಅನುಭೋಗಿಸುವುದಕ್ಕೆ ಸಿದ್ಧನಾದೇನು.

ಆಹಾ! ಎಂಥೆಂಥ ಕನಸುಗಳನ್ನು ನಾನು ಸವಿದಿದ್ದೇನೆ ! ತೀರ ಚಿಕ್ಕವನಾಗಿದ್ದಾಗ ನಾನು ಮೋಟರ್ ಡ್ರೈವರನಾಗುವ, ನನ್ನ ಮಾಸ್ತರರ ಕುರ್ಚಿಯ ಮೇಲೆ ಕೂತು ಮಾಸ್ತರರನ್ನು ಬೆಂಚಿನ ಮೇಲೆ ನಿಲ್ಲಿಸುವ, ಗಾಳೀಪಟದ ಬಾಲ ಹಿಡಿದುಕೊಂಡು ಹಾರುವ ಮುಂತಾದ ಕನಸುಗಳನ್ನು ಕಂಡದ್ದು ಇಲ್ಲಿ ಬೇಡ. (ಒಂದು ಕನಸಿನಲ್ಲಂತೂ ನಾನು ನಮ್ಮ ಶಾಲೆ ಸುಟ್ಟು ಹೋಗುವುದನ್ನು ಕಂಡಿದ್ದೆ ಮತ್ತು ನಾವೆಲ್ಲರೂ ಕೈತಟ್ಟುತ್ತಾ ಬೆಂಕಿಯ ಸುತ್ತ ಬೆಚ್ಚಗೆ ಕುಣಿಯುತ್ತಿದ್ದೆವು).

ಇನ್ನೊಂದು ಕನಸಿನಲ್ಲಿ ನಾನು ಗಾದೆಯಲ್ಲಿ ಹೇಳಿದ ಮಂಡಿಗೆಯನ್ನೇ ತಿಂದಿದ್ದೆ. ಅದಕ್ಕೆ ಮೊದಲು ನಾನು ಮಂಡಿಗೆ ತಿಂದೇ ಇದ್ದಿಲ್ಲ. (ಯಾಕೆಂದರೆ

ನಮ್ಮ ಊರಿನಲ್ಲಿ ಮಂಡಿಗೆ ಮನಸ್ಸಿನಲ್ಲಿ ಇತ್ತೇ ಹೊರತು ಊಟದಲ್ಲಿ ಸಿಗೋದು ಅಪರೂಪ.) ನಾನು ಕನಸಿನಲ್ಲಿ ತಿಂದ ಮಂಡಿಗೆ ತುಂಬಾ ರುಚಿಯಾಗಿತ್ತು. ನಿಜವಾಗಿ ಅದು ನನ್ನ ಬಾಯಲ್ಲಿ ಬಹಳ ದಿನ ಎಚ್ಚರದಲ್ಲಿಯೂ ನೀರೂರಿಸುತ್ತ ಇತ್ತು. ಆದರೆ ಕೆಲ ತಿಂಗಳ ನಂತರ ಒಂದು ಮದುವೆಯಲ್ಲಿ ನಿಜವಾದ ಮಂಡಿಗೆ ನನಗೆ ತಿನ್ನಲಿಕ್ಕೆ ಸಿಕ್ಕಿತು. ಅಯ್ಯೋ ದೇವರೆ! ಮಂಡಿಗೆಯೆಂದರೆ ಇದೇನೇ! ಎಂದುಕೊಂಡೆ. ಈ ನನಸಿನ ಮಂಡಿಗೆ ಕನಸಿನ ಮಂಡಿಗೆಯಷ್ಟು ರುಚಿಯಾಗಿರಲಿಲ್ಲ. ಮುಂದಿನ ದಿನಗಳಲ್ಲಿ ಕನಸಿನ ಸುಖಗಳು ನನಸಿನ ಸುಖಗಳಿಗಿಂತ ಸಿಹಿ ಅನ್ನೋ ಅನುಭವ ನನಗೆ ಪುನಃ ಪುನಃ ಆಗಲಿಕ್ಕಿತ್ತು.

ಸ್ವಲ್ಪ ಪ್ರಬುದ್ಧನಾದಾಗ ಸವಿಗನಸುಗಳ ಸ್ವರೂಪ ಸ್ವಲ್ಪ ಬದಲಾಯಿತೇ ಹೊರತು ಕನಸು ಕಾಣುವುದೇನೂ ಬದಲಾಗಲಿಲ್ಲ. ಕೆಲವು ದಿನ ನಾನು ಮಹಾ ಸಂಗೀತಗಾರನಾಗುವ ಕನಸು ಕಾಣುತ್ತಿದ್ದೆ. ಮತ್ತು ದಾರಿಯಲ್ಲಿ, ತೊಡೆಯ ಮೇಲೆ ತಾಳಹಾಕುತ್ತ ಕೈಯನ್ನು ಒಮ್ಮೊಮ್ಮೆ ತಾರಮ್ಮಯ್ಯ ಮಾಡುತ್ತ ನಡೆಯುತ್ತಿದ್ದೆ. ಜನರು ನನ್ನ ನೋಡಿ ನಗತೊಡಗಿದ ಮೇಲೆ ನಾನು ಮಹಾಕವಿಯಾಗುವ ಕನಸುಗಳಲ್ಲಿ ವಿಹಾರ ಮಾಡತೊಡಗಿದೆ. ಮಹಾಕವಿ ಆಗುವುದಕ್ಕೆ ತಾಳ ತಂಬೂರಿ ತಾರಮ್ಮಯ್ಯ ಯಾವುದೂ ಬೇಡವಾದ್ದರಿಂದ ಅದು ತುಲನಾತ್ಮಕವಾಗಿ ಸುರಕ್ಷಿತ ಸವಿಗನಸಾಗಿತ್ತು. ಇದಕ್ಕೆ ಪ್ರಚೋದನೆ ಕೊಟ್ಟದ್ದು ರನ್ನ ಕವಿಯ ಮೇಲೆ ಬಿ. ಎಂ. ಶ್ರೀಕಂಠಯ್ಯನವರು ನಮ್ಮೂರಲ್ಲಿ ಕೊಟ್ಟ ಒಂದು ಭಾಷಣ. ನನಗೆ ಭಾಷಣ ಹೆಚ್ಚೇನೂ ತಿಳಿಯಲಿಲ್ಲ. ಆದರೆ "ಅಸುಹೃತ್ಸೇನೆಗೆ ಸಾಲ್ವನೋರ್ವನೆ ಗಡಂ ರುದ್ರಾವತಾರಂ ಗಡಂ" ಎಂದು ದುರ್ಯೋಧನನ ವಿಷಾದವನ್ನೂ "ನೆಲಕಿರಿವೆನೆಂದು ಬಗೆದಿರೆ? ಚಲಕಿರಿವೆಂ!" ಎಂದು ಅವನ ಪೌರುಷವನ್ನೂ ಬಿ.ಎಂ.ಶ್ರೀಯವರು ಸಾಭಿನಯವಾಗಿ ಅನುವಾದಿಸುತ್ತಿದ್ದುದು ನನ್ನ ಮೇಲೆ ಬಹು ಪ್ರಭಾವ ಬೀರಿತ್ತು. ಈ ಹಗಲುಗನಸುಗಳ ದಿನಗಳಲ್ಲಿ ನಾನು ಅಂ ಇಂ ಉಂ ಗಡಂ ಬಡಂ ಎಂದು ಮುಂತಾಗಿ ಸಪ್ಪಳ ಮಾಡೋ ಎಷ್ಟೋ ಪದ್ಯಗಳನ್ನು ರಚಿಸಿದ್ದು ಉಂಟು. ಕವಿಯಾಗುವ ಕನಸು ನನ್ನನ್ನ ಪೂರ್ತಿ ಬಿಟ್ಟು ಹೋಗಲೇ ಇಲ್ಲ. ಆದರೆ ಗಣಿತ ಪಾಠ ನಡೆಯುತ್ತಿದ್ದಾಗ ಒಂದು ದಿನ ನಾನು ಡೆಸ್ಕಿನ ಒಳಗಿನ ಖಾನೆಯಲ್ಲಿ ಕಣ್ಣಿಟ್ಟು ಏನೋ ಮಾಡುತ್ತಿದ್ದುದು ಮಾಸ್ತರರ ಕಣ್ಣಿಗೆ ಬಿದ್ದು ಅವರು

ಪ್ಲಾಟ್‌ಫಾರ್ಮಿನಿಂದ ಇಳಿದು ಬಂದು ನನ್ನ ಡೆಸ್ಕನ್ನು ಜಡ್ತಿಮಾಡಿ ಪದ್ಯ ಗಳನ್ನು ಜಪ್ತಿ ಮಾಡಿದರು. ಹೆಚ್ಚಿನ ಗಣಿತ ಮಾಸ್ತರರ ಹಾಗೆ ಅವರು ಕವಿತೆಯ ಭಯಂಕರ ದ್ವೇಷಿಗಳಾಗಿದ್ದರು. ಅವರು ನನ್ನನ್ನು ಎಂಥಾ ಲೇವಡಿಗೆ ಒಳಪಡಿಸಿದರೆಂದರೆ, ಕವಿಯಾಗುವ ಬಗ್ಗೆ ನನ್ನ ಹೃದಯದಲ್ಲಿ ಬಹಳ ದಿನ ಒಂದು ಚಳಿ ಸೇರಿಕೊಂಡುಬಿಟ್ಟಿತ್ತು.

ಇಂಥ ಕನಸುಗಳ ಯುಗ ದಾಟಿದನಂತರ ಇನ್ನೊಂದು ಬಗೆಯ ಕನಸು ಗಳ ಯುಗ ಪ್ರಾರಂಭವಾಯಿತು. ಈ ಯುಗ ನಮ್ಮ ಬದುಕಿನಲ್ಲೇ ಅತಿ ತೀವ್ರವಾದ ಆದರೆ ಅರ್ಥವಾಗದ ಅಂತಃಸ್ಪಂದನಗಳಿಂದ ಪ್ರಾರಂಭವಾಗು ತ್ತದೆ. ಜನಜಂಗುಳಿಯ ಮಧ್ಯದಲ್ಲಿಯೇ ನಮಗೆ ಒಂದು ತರದ ಒಂಟಿತನ ಅನಿಸತೊಡಗುತ್ತದೆ. ನಮ್ಮ ಸ್ನೇಹಿತರು, ಬಂಧುಬಳಗದವರು ಯಾರೂ ಆ "ನಿರ್ಬಯಲ"ನ್ನು ತುಂಬಲಾರರು ಅನಿಸುತ್ತದೆ.

ಇದೆಲ್ಲ ಏನು ಅಂತ ನಮ್ಮ ಸ್ವಯತಕ್ಕೆ ಬರುವ ಮೊದಲೇ ನಾವು ಅದರಲ್ಲಿ ಗಂಟಲಮಟ್ಟ ಮುಳುಗಿಬಿಟ್ಟಿರುತ್ತೇವೆ. ಈ ವಿಚಿತ್ರವಾದ ಒಂಟಿತನವನ್ನು ಗುಣಪಡಿಸುವುದಕ್ಕೆ ಪುರುಷಸ್ನೇಹ ಸಾಲದು. ಪ್ರತಿಲಿಂಗದ ಸಹಾಯಬೇಕು. ಬಹುಶಃ ಆಗಲೇ ನಮಗೆ ನಮ್ಮ ವ್ಯಾಕರಣ ಪುಸ್ತಕಗಳಲ್ಲಿ ಬರೆದ ಪುಲ್ಲಿಂಗ ಸ್ತ್ರೀಲಿಂಗಗಳ ನಿಜವಾದ ಪ್ರಜ್ಞೆ ಮೂಡುವುದು ಅನಿಸುತ್ತೆ ನನಗೆ!

ಈ ಒಂಟಿತನದ ಅನುಭವ ಪ್ರಥಮತಃ ನಮಗೆ ಬರುವ ಹೊತ್ತಿಗೆ ಸರಿ ಯಾಗಿ, ನಮ್ಮ ಹೈಸ್ಕೂಲಿನ ಇಂಗ್ಲಿಷ್ ಪಠ್ಯಪುಸ್ತಕದಲ್ಲಿ ಶೆಲ್ಲಿ ಕವಿಯ ಪ್ರಸಿದ್ಧ Love's Philosophy ಪ್ರೇಮತತ್ತ್ವ-ಪದ್ಯವನ್ನು ಕಲಿಸಿದರು. ಅದರಲ್ಲಿ ಕವಿ Nothing in the world is single ಅನ್ನುವ ತತ್ತ್ವಜ್ಞಾನ ವನ್ನು ಸಮರ್ಥಿಸುತ್ತ ಹೇಳುವುದು ಇದು :

ಲೋಕದಲ್ಲಿ ಒಂಟಿಯೆಂಬುದೇ ಇಲ್ಲ
ಯಾವುದೋ ದೈವ ನಿಯಮದಿಂದೆಲ್ಲ
ಕೂಡಿಕೊಳ್ಳುವವು ಒಂದರೊಳಗೊಂದು
ನಾನಾಗಬಾರದೇ ನಿನ್ನಲ್ಲಿ ಒಂದು !

ವ್ಹಾ! ಎಂಥ ದಿವ್ಯ ತತ್ತ್ವಜ್ಞಾನ. ನಮ್ಮೆಲ್ಲರ ಹೃದಯಗಳಲ್ಲಿ ವಿದ್ಯುತ್ಸಂಚಾರವಾಗದಿದ್ದೀತೆ? ಕ್ಲಾಸಿನಲ್ಲಿ ದುರ್ದೈವದಿಂದ ಒಬ್ಬಳೇ ಹುಡುಗಿ.

ಕಾಳಿದಾಸ "ಕುಮಾರ ಸಂಭವ"ದಲ್ಲಿ ಹೇಳುವಹಾಗೆ "ಸಹಸ್ರಮಕ್ಷ್ಣಾಂ ಯುಗಪತ್ ಪಪಾತ"–ಸಾಸಿರೆ ಕಣ್ಣುಗಳೊಮ್ಮೆಲೆ ಬಿದ್ದವು–ಆ ಹುಡುಗಿಯ ಮೇಲೆ. ಅವಳಿಗೆ ಶೆಲ್ಲಿಯ ತತ್ತ್ವಜ್ಞಾನ ಪಟಾಯಿಸಿತೋ ಇಲ್ಲವೋ ನಾ ಕಾಣೆ. ಆದರೆ ಅದು ತಟ್ಟಿತೆಂಬಲ್ಲಿ ಸಂಶಯವಿಲ್ಲ. ಯಾಕೆಂದರೆ ಅವಳು ತತ್‌ಕ್ಷಣ ಕಣ್ಣುಗಳನ್ನು ಕೆಳಗಿಳಿಸಿ ಮುಖ ಕೆಂಪುಮಾಡಿಕೊಂಡಳು.

ಶೆಲ್ಲಿ ನಮ್ಮ ಹಗಲುಗನಸುಗಳನ್ನು ಕೆದರಿಬಿಟ್ಟಿದ್ದ. ಕವಿತೆಗಳನ್ನು ಮೆಚ್ಚ ಲಾಗದವರು ಕೂಡ ಈ ಕವಿತೆಗೆ ಮಾರುಹೋದರು. ಮರುದಿನವೇ ಅದರ ಪ್ರಭಾವ ಪ್ರತ್ಯಕ್ಷವಾಯಿತು—ಬೆಳಿಗ್ಗೆ ನಮ್ಮ ಸಹ ವಿದ್ಯಾರ್ಥಿನಿ ಕ್ಲಾಸಿಗೆ ಬಂದು ಕೂತ ಕೂಡಲೇ. ಸುಮಾರಾಗಿ ತನ್ನ ಪಾಡಿಗೆ ತಾನು ಇರುತ್ತಿದ್ದ ವಿದ್ಯಾರ್ಥಿಯೊಬ್ಬ, ದಿಗ್ಗನೆದ್ದು ಧೀರ ಹೆಜ್ಜೆಗಳಿಂದ ಅವಳ ಮುಂದೆ ಹೋಗಿ ನಿಂತು ಒಂದು ಅರಳಿದ ಗುಲಾಬಿಯನ್ನು ಅವಳ ಡೆಸ್ಕಿನ ಮೇಲಿರಿಸಿ, ಸರ್ರನೆ ರೈಟ್ ಅಬೌಟ್ ಟರ್ನ್ ಮಾಡಿ ತನ್ನ ಸ್ಥಾನಕ್ಕೆ ಬಂದು ಕುಳಿತ. ಪಾಪ! ನಮ್ಮೆಲ್ಲರಿಗಿಂತ ಹೆಚ್ಚಾಗಿ ಅವನು ಕನಸು ಕಂಡಿರಬೇಕು : ಮತ್ತು ಕನಸನ್ನೇ ನನಸೆಂದು ನಂಬಿ ಶೆಲ್ಲಿಯ ಅಭಿಸಂಧಿಯನ್ನು ಹೂವಿನ ಬಾಯಿಂದ ಹೇಳಿಸಿರ ಬೇಕು. ಮುಂದೆ ಎದ್ದ ಗಲಾಟೆ ಹೇಳಲುಂಟೆ? ನಮ್ಮ ಬಡ ಸಹಪಾಠಿ ಹೂವನ್ನು ಕೊಟ್ಟು ಮುಳ್ಳುಗಳನ್ನು ತೆಗೆದುಕೊಂಡ ಹಾಗಾಯಿತು. ಶಾಲೆ ಯಿಂದ ಹೊರಗೆ ಹಾಕಿಸಿಕೊಳ್ಳುವ ವರೆಗೂ ಹೋಗಿ ಹೇಗೊ ಉಳಿದುಕೊಂಡ. ಆ ಕಾಲದಲ್ಲಿ ವಿದ್ಯಾರ್ಥಿ ಸಂಘಟನೆ ಇದ್ದಿಲ್ಲ. ಆದ್ದರಿಂದ ನಮ್ಮ ಸಹಪಾಠಿಯ ಪರವಾಗಿ ಸಂಪುಗಿಂಪು ಹೂಡುವ ಧೈರ್ಯ ನಮಗೆ ಬರಲಿಲ್ಲ. ಆದರೂ ನಮಗೆ ಅವನಲ್ಲಿ ಒಂದು ಬಗೆಯ ಕಳ್ಳ ಸಹಾನುಭೂತಿ ಇತ್ತೆಂದು ಹೇಳದೆ ಇರಲಾರೆ. ಅವನ ಧೈರ್ಯದ ಬಗ್ಗೆ ಒಂದಿಷ್ಟು ಮತ್ಸರವೂ ಆಯಿತು ಅನ್ನಿ.

ಏಕಾಂಗಿತನ ತ್ಯಾಗದ ಹಂಬಲ ದಿನ ದಿನಕ್ಕೆ ತೀವ್ರವಾಗುತ್ತ ಹೋಗುತ್ತದೆ. ಅದರ ಪೂರ್ಣ ರಹಸ್ಯ ಅರ್ಥವಾಗದಿರುವುದರಿಂದಲೇ ಅದು ಹೆಚ್ಚು ಉತ್ಸಾಹ ದಾಯಕವಾಗಿರುತ್ತದೆ. ಈ ದಿನಗಳಲ್ಲಿ ನಾವು ಏನನ್ನು ಬೇಕಾದರೂ ಕಲ್ಪಿಸಿ ಕೊಳ್ಳಲಿಕ್ಕೆ ಸಮರ್ಥರಾಗುತ್ತೇವೆ. ಒಂದು ತರಹದ ಡಾನ್‌ಕ್ವಿಗ್ಸೋಟ್‌ತನ ನಮ್ಮಲ್ಲಿ ಮನೆಮಾಡಿಕೊಳ್ಳುತ್ತದೆ. ಕುವೆಂಪು ಅವರ ಒಂದು ಕಥೆಯಲ್ಲಿ ಒಬ್ಬ ಎಳೆ ತರುಣನಿಗೆ ತನ್ನ ಕಲ್ಪನೆಯ ಕನ್ನಡಕದಲ್ಲಿ ದೂರದಲ್ಲಿದ್ದ ಬೆಸ್ತರವನ ಅಜ್ಜಿ

ಅಷ್ಟಟ ಸುಂದರಿಯಾಗಿ ಕಾಣಿಸುತ್ತಾಳೆ. ಬೆಸ್ತರವನ ಅಜ್ಜಿಯೇ ಯಾಕೆ, ಮರಮಟ್ಟು ಕಲ್ಲುಬಂಡೆಗಳು ಕೂಡ ತರುಣಿಯರಾಗಿ ಕಾಣಿಸುವುದುಂಟು.

ಒಂಟಿತನದಿಂದ ಜೋಡಿತನಕ್ಕೆ ಬದಲಾಯಿಸುವ ಹಂಬಲಕ್ಕೆ ಪಾಶ್ಚಾತ್ಯ ಸಮಾಜದಲ್ಲಿ ಅವಕಾಶವಿದೆ. ಆದರೆ ಭಾರತೀಯ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಅದೆಲ್ಲಿದೆ? ಅವಕಾಶ ಇಲ್ಲದ್ದರಿಂದ ನಾವು ಎಚ್ಚರಗನಸುಗಳ ಪ್ರಪಂಚದಲ್ಲಿ ಆಳಆಳವಾಗಿ ಸೇರಿಕೊಳ್ಳುತ್ತೇವೋ ಏನೋ. ನಾನು ಹೈಸ್ಕೂಲಿನಲ್ಲಿದ್ದಾಗ ರವೀಂದ್ರನಾಥ ಠಾಕೂರರ ಕೀರ್ತಿ ಕೇಳಿ ಅವರ ಕವಿತೆ ಓದಬೇಕಂತಲೇ ಬಂಗಾಲಿ ಕಲಿತೆ. ಅವರ ಒಂದು ಕವಿತೆ "ಆಮಿಜದಿ ಜೀಬಿತೇಥೋ ಕಾಲಿದಾಸೇರ್ ಕಾಲೇ" "ಕಾಳಿದಾಸನ ಕಾಲದಲ್ಲಿ ನಾನು ಬದುಕಿದ್ದಿದ್ದರೆ" ಅಂತ ಪ್ರಾರಂಭವಾಗುತ್ತದೆ. ಆಗ ಬದುಕಿದ್ದಿದ್ದರೆ ಉಜ್ಜಯಿನಿಯ ಪಟ್ಟಣದಲ್ಲಿ ಶಿಪ್ರಾ ನದಿಯ ಸೋಪಾನದಲ್ಲಿ ಪ್ರಿಯಕರಿಯ ಸಂಗಡ ಕುಳಿತು ಕಾಲುಗಳನ್ನು ನೀರಲ್ಲಿ ಇಳಿಬಿಟ್ಟು—ಇತ್ಯಾದಿಯಾಗಿ ಕವಿತೆ ಓಡುತ್ತದೆ. ಒಡನೆಯೆ ನಾನು ಕಾಳಿದಾಸನ ಕಾಲಕ್ಕೆ ಟ್ರಾನ್ಸ್‌ಪೋರ್ಟ್ ಆಗುತ್ತಿದ್ದೆ; ಕಾಳಿದಾಸನೇ ಆಗುತ್ತಿದ್ದೆ. ಆ ಕಾಲದಲ್ಲಿ ಸಿನೆಮಗಳು ಇದ್ದಿಲ್ಲವಾಗಿ ಈಗಿನ ,ತರುಣರ ಹಾಗೆ ಪರಾನುಭವಗಳನ್ನು ಸ್ವಾನುಭವವಾಗಿ ಕಲ್ಪಿಸಿಕೊಳ್ಳುವ vicarious satisfaction ಸ್ವಾಯತ್ತೀಕರಣದ ಸಮಾಧಾನ ಕೂಡ ಇರಲಿಲ್ಲ. ನಮ್ಮ ಉತ್ತೇಜನವೆಲ್ಲ ಕಥೆಗಳಿಂದ ಬರಬೇಕಷ್ಟೇ. ಈ ವಯಸ್ಸಲ್ಲಿ ಕೆಲ ಕಥೆಗಳು ಅತ್ಯಂತ ಅಪಾಯಕರ ಎನ್ನುವಷ್ಟು ಪ್ರಭಾವಿಯಾಗುತ್ತವೆ. ಉದಾಹರಣೆಗೆ ದಿವಂಗತ ಆನಂದರ ಕಥೆಗಳು. ಅವರ "ಹೆಂಡತಿಯ ಕಾಗದ", "ನಾವೂ ಹಾಗೆಯೆ" ಎಂಬ ಕಥೆಗಳು ಮದುವೆ, ಜೋಡಿ ಜೀವನ, ವಿರಹ ಮಿಲನಗಳ ಬಗ್ಗೆ ಉಂಟುಮಾಡುವ ಭಾವನೆಗಳ ಬಂಗಾರದ ಮಂಜಿನ ತೆರೆ ಮದುವೆಯಾದ ಮೇಲೆ ಮಾತ್ರ ಹರಿಯಬೇಕಷ್ಟೇ. ಅವುಗಳನ್ನು ಓದಿದ ಬಿಸಿಯಲ್ಲಿ ಯಾರಾದರೂ ನನಗೆ ಹೆಣ್ಣು ಕೊಡಲು ಬರುತ್ತಿದ್ದರೆ ತತ್‌ಕ್ಷಣ ಒಪ್ಪಿಬಿಡುತ್ತಿದ್ದೆ ಅಂತ ನನಗೆ ಈಗಲೂ ಅನಿಸುತ್ತದೆ, ಪುಣ್ಯಕ್ಕೆ ಯಾರೂ ಮುಂದೆ ಬರಲಿಲ್ಲ!

ನಿಮ್ಮ ಒಂಟಿತನ ಕೊನೆಗೊಮ್ಮೆ ಪರಿಸಮಾಪ್ತಿಯಾಗುವ ವರೆಗೂ ಸುತ್ತಲ ಸಮಾಜ ಆ ಒಂಟಿತನಕ್ಕೆ ತಾತ್ಕಾಲಿಕ ಉಪಶಮನವನ್ನೇನೂ ಕೊಡದೆ, ಹೆಜ್ಜೆ ಹೆಜ್ಜೆಗೆ ಅದರ ಧಗೆಯನ್ನು ಹೆಚ್ಚಿಸುವ ಹಾಗೆ ವರ್ತಿಸುತ್ತದೆ. ಎಲ್ಲ ಮದುವೆ

ಯಾಗದಿದ್ದ ಹುಡುಗಿಯರನ್ನೂ ನಿಮಗೆ ಹೆಂಡಂದಿರನ್ನಾಗಿ ಮಾಡಿ ನಗುತ್ತದೆ. ಈ ಹಿತವಾದ ನೋವನ್ನು ಹೆಚ್ಚಿಸುವುದರಲ್ಲಿ ಗಂಡಸರಿಗಿಂತ ಹೆಂಗಸರಿಗೇ ಹೆಚ್ಚು ಉತ್ಸಾಹ. ನಮ್ಮ ಹಾಗೆಯೇ ಹುಡುಗಿಯರೂ ಕನಸು ಕಾಣುತ್ತಾರೆಯೋ ನನಗೆ ಗೊತ್ತಿಲ್ಲ. ಹೆಂಗಸರಿಗೆ ನಿದ್ದೆ ಹೆಚ್ಚಂತೆ. ಕನಸುಗಳು ಹೆಚ್ಚೋ ಅಲ್ಲವೋ ಅಂತ ನಾನರಿಯೆ. ಇಂದಿನ ಅಂತಾರಾಷ್ಟ್ರೀಯ ಮಹಿಳಾ ವರ್ಷದಲ್ಲಿಯೂ ಹೆಂಗಸರ ಒಂದು ಪ್ರಮುಖ ಧ್ಯೇಯ ಗಂಡನ್ನು ಖೆಡ್ಡಾ ಬೇಟೆಯಾಡುವುದೇ ಆಗಿದೆಯೆಂದು ನನಗೆ ತೋರುತ್ತದೆ. ಒಂದು ಮಾತ್ರ ವಿಶೇಷ—ಅವರು ಬೇಟೆಯ ಹಿಂದೆ ಓಡುವುದಿಲ್ಲ. ಬೇಟೆಯನ್ನೇ ತಮ್ಮ ಹಿಂದೆ ಓಡುವಂತೆ ಮಾಡುತ್ತಾರೆ. ಆದರೆ ಅವರೂ ಕನಸಿನಲ್ಲಿಯೇ ಈ ಬೇಟೆಯಾಡುತ್ತಿದ್ದಾರೆಂದು ನನಗೆ ಸಂಶಯವಿದೆ. ಮತ್ತೆ ಅವರ ಕನಸುಗಳು ನಮ್ಮವುಗಳಿಗಿಂತ ಹೆಚ್ಚು ಬಲವತ್ತಾಗಿರುತ್ತವೆ. ಬಾಣಾಸುರನ ಮಗಳು ಉಷೆಯನ್ನೇ ನೋಡಿ. ಆವಳು ಕನಸಿನಲ್ಲಿ ಒಬ್ಬನನ್ನು ಕಂಡಳು. ತನ್ನ ಸಖಿಗೆ ಅವನ ಕಾಲ್ಪನಿಕ ಚಿತ್ರವನ್ನು ಕೊಟ್ಟು ಜಗತ್ತಿನಲ್ಲೆಲ್ಲ ಹುಡುಕಾಡಿಸಿದಳು. ಕೊನೆಗೆ ಅವಳ ಕನಸಿನ ತರುಣ ಅಸುರರ ವೈರಿ ಕೃಷ್ಣನ ಮೊಮ್ಮಗ ಅಂತ ಗೊತ್ತಾಯಿತು. ಅವಳು ಅಂಜಿದಳೇ? ಗುಟ್ಟಾಗಿ ಶತ್ರುವಿನ ಮೊಮ್ಮಗನನ್ನ ತಂದು ಅಂತಃಪುರದಲ್ಲಿಟ್ಟುಕೊಂಡು ಕನಸಿನಲ್ಲಿ ಕಂಡವನನ್ನ ನನಸಿನಲ್ಲಿ ವಶಪಡಿಸಿಕೊಂಡೇ ಬಿಟ್ಟಳು. ಶತ್ರುವನ್ನು ಪ್ರೀತಿಸಿರಿ ಎಂದು ಯೇಸುಕ್ರಿಸ್ತ ಹೇಳುವುದಕ್ಕೆ ಸಾವಿರ ವರ್ಷಗಳ ಹಿಂದೆಯೇ ಬಾಣಾಸುರನ ಮಗಳು ಶತ್ರುವನ್ನಲ್ಲದಿದ್ದರೂ ಶತ್ರುವಿನ ಮೊಮ್ಮಗನನ್ನು ಪ್ರೀತಿಸಿದ್ದಳು!

ಏಕಾಂಗಿತನವನ್ನು ಕೊನೆಗೊಳಿಸುವ ಈ ಸವಿಗನಸುಗಳ ಒಂದು ವಿಶೇಷ ಅಂದರೆ ಅವು ಪ್ರಾರಂಭದಶೆಯಲ್ಲಂತೂ ಬಹುಮಟ್ಟಿಗೆ impersonal ವ್ಯಕ್ತ್ಯತೀತ ಆಗಿರುವುದು. ನಿಮ್ಮನ್ನ ಒಂಟಿತನದಿಂದ ಬಿಡಿಸುವುದಕ್ಕೆ ಎಂಥವನು ಅಥವಾ ಎಂಥವಳು ಬೇಕು ಅಂತ ಕೇಳಿದರೆ ಪ್ರಾರಂಭದಲ್ಲಿ ಉತ್ತರ ಹೇಳುವುದು ಯಾರಿಗೂ ಕಷ್ಟವೇ ಆದೀತು. ಈ ವ್ಯಕ್ತ್ಯತೀತತ್ವದಿಂದಲೇ ಸವಿಗನಸುಗಳ ಸವಿಯೂ ಕಸುವೂ ಜಾಸ್ತಿಯಾಗುತ್ತದೆಯೋ ಏನೋ. ನಾವು ನಮ್ಮ ಭಾವಿ ಸಂಗಾತಿಯ ಬಗ್ಗೆ ಹೆಚ್ಚು ಖಚಿತ ಚಿತ್ರಣ ಮಾಡಿಕೊಂಡ ಹಾಗೆ ಅವುಗಳ ಅಗಲ ಕಮ್ಮಿಯಾಗುತ್ತದೆ ಆದರೆ ತೀವ್ರತೆ ಹೆಚ್ಚುತ್ತದೆ.

ಒಂಟಿತನ ಕೊನೆಗೊಳಿಸುವ ಹಂಬಲದ ಕನಸುಗಳ ಅತಿ ಉತ್ಕಟವಾದ ಕಾಲ ಸುಮಾರು ೨೩ ವಯಸ್ಸಿನ ವರೆಗಿರುತ್ತದೆ. ನಿಮಗೆ ಒಬ್ಬನನ್ನು ಬ್ರಹ್ಮಚರ್ಯ ದಿಂದ ಹೊರಗೆಳೆಯಬೇಕು ಅಂತಿದ್ದರೆ ಆ ವಯಸ್ಸಿನೊಳಗೆ ಅವನನ್ನ ಹಿಡಿಯಿರಿ. ಪ್ರತಿಯೊಂದು ಮದುವೆಯನ್ನು ನೋಡಿದಾಗಲೂ ಅವನ ಕನಸಿನ ತಳ್ಳಂಕ ಹೆಚ್ಚಾಗಿ, ಪ್ರತಿಯೊಂದು ಮದುವೆಯಾದ ಜೋಡಿ ಒಟ್ಟೊಟ್ಟಾಗಿ ತಿರುಗು ವುದನ್ನು ಕಂಡಾಗ ವಿರಾಡ್ರೂಪ ತಾಳಿರುತ್ತದೆ. ೨೩ರ ನಂತರ ಅವನ ಕಣ್ಣು ಗಳು ಸ್ವಲ್ಪ ನಿಚ್ಚಳವಾಗುತ್ತವೆ. ಅವನ ಬಯಕೆಗಳಿಗೆ ಕೈಕಾಲು ಕಣ್ಣು ಮೂಗು ಮೂಡಿರುತ್ತವೆ. ಮದುವೆಯ ಬಗ್ಗೆ ಒಂದು ಭಯವೂ ಹುಟ್ಟಿರು ತ್ತದೆ. ಆದರೆ ಅವನ ಆತಂಕವೇನೂ ಕಡಿಮೆಯಾಗುವುದಿಲ್ಲ. ಆ ಅವಸ್ಥೆಯಲ್ಲಿ ನೀವು ಏಕಕಾಲದಲ್ಲಿ ಮದುವೆಯಾಗಲಿಕ್ಕೂ ಒಂಟಿಯಾಗಿರಲಿಕ್ಕೂ ಬಯಸು ತ್ತೀರಿ.

ಅಂತೂ ಎಲ್ಲದರ ಹಾಗೆ ಒಂಟಿತನವೂ ಒಂದು ದಿನ ಕೊನೆಗೊಳ್ಳುತ್ತದೆ. ಆದರೂ ಕೆಲ ಕಾಲ ನೀವು ಕನಸಿನ ಲೋಕದಿಂದ ಹೊರಬರುವುದಿಲ್ಲ. ಅದೇ ಮದುವೆಯಾಗಿ ಬಂದ ಜೋಡಿಗಳನ್ನು ನಾನು ನೋಡಿದ್ದೇನೆ. ಅವರು ಕಣ್ಣು ಗಳಿಂದ ಸಂಭಾಷಿಸುವುದನ್ನು ಗುರುತಿಸಿದ್ದೇನೆ. ಆಗ ತಮ್ಮ ಹೊರಗೊಂದು ಪ್ರಪಂಚವಿದೆಯೆನ್ನುವುದರ ಸ್ಮರಣೆಯೇ ಅವರಿಗಿರುವುದಿಲ್ಲ. ಆ ಸ್ಥಿತಿಯಲ್ಲಿ ಅವರಿಗೆ ಬೇರೆ ಪ್ರಪಂಚವೆಲ್ಲ ಆಗಂತುಕ ಪೀಡೆಯ ಹಾಗೆ ಭಾಸವಾಗುತ್ತದೆ. ಅವರು ತಮ್ಮ ಜಂಟಿ ಪ್ರಪಂಚದಲ್ಲಿ ಒಂಟಿಯಾಗಿರಲು ಹಾತೊರೆಯುತ್ತಾರೆ.

ಈ ಹೊಸ ಮದುವೆಯ ಜೋಡಿಗಳನ್ನು ನೋಡಿ ನಾನು ಮೆತ್ತಗೆ ನಿಟ್ಟು ಸಿರು ಬಿಟ್ಟಿದ್ದೇನೆ. ಪಾಪ, ಅವರು ಬೇಗನೆ ಈ ಕನಸಿನ ಸವಿಲೋಕದಿಂದ ನೈಜತೆಯ ಲೋಕಕ್ಕೆ ಬರಬೇಕಲ್ಲ ಅಂತ ಪರಿತಾಪಪಟ್ಟಿದ್ದೇನೆ. ಆ ಪ್ರಪಂಚ ಅವರು ಅದೃಷ್ಟಶಾಲಿಗಳಾಗಿದ್ದರೆ ಸಪ್ಪಗಾಗಿರುತ್ತದೆ ; ದುರದೃಷ್ಟವಂತ ರಾಗಿದ್ದರೆ ಕಟುವಾಗಿರುತ್ತದೆ. ಹಳೆಯ ಸವಿಯಂತೂ ಉಳಿಯುವುದಿಲ್ಲ ಎಂದು ನನಗೆ ಗೊತ್ತು. ಆದರೆ ಆ ಕನಸಿನ ಅಮಲು ಇರುವಷ್ಟು ಕಾಲ ಅವರ ಕಣ್ಣುಗಳು ಪ್ರಪಂಚದ ಅತಿ ಸುಂದರ ಪದಾರ್ಥಗಳೆಂದೂ ನನಗೆ ಭಾಸವಾಗಿದೆ.

ಮದುವೆಯ ಕಟು ಅನುಭವ ಬಂದ ಸಿನಿಕನೊಬ್ಬ ಮದುವೆಯನ್ನು ಮುತ್ತಿಗೆ

ಬಿದ್ದ ಕೋಟೆಗೆ ಹೋಲಿಸಿದ್ದಾನೆ. ಅದರ ಒಳಗಿದ್ದವರೆಲ್ಲ ಹೊರಗೆ ಬರಲಿಕ್ಕೆ ತವಕಿಸುತ್ತಾರೆ: ಹೊರಗಿದ್ದವರೆಲ್ಲ ಒಳಗೆ ಬರಲಿಕ್ಕೆ ಹಾತೊರೆಯುತ್ತಾರೆ. ಶೇಕ್ಸ್‌ಪಿಯರ್ ಒಂದು ಕಡೆ ಎಷ್ಟು ಮುಂದೆ ಹೋಗಿದ್ದಾನೆ ಎಂದರೆ ಅವನು good hanging prevents a bad marriage ಅನ್ನುತ್ತಾನೆ. ಸಕಾಲದಲ್ಲಿ ಗಲ್ಲಾದರೆ ಅನಿಷ್ಟ ಮದುವೆ ತಪ್ಪುತ್ತದೆಯಂತೆ.

ಐವತ್ತು ದಾಟಿದ ನಂತರ ನಾನು ಸಿಂಹಾವಲೋಕನಕ್ರಮದಿಂದ ಆ ಕನಸು, ಈ ನನಸು, ಅದರ ಹೊನ್ನು, ಇದರ ಮಣ್ಣು ಇವನ್ನೆಲ್ಲ ವಿಂಗಡಿಸಿ ಇದೆಲ್ಲ ಏನು ಎಂಬ ಪ್ರಶ್ನೆ ಕೇಳಿಕೊಂಡಿದ್ದೇನೆ. ಮತ್ತು ಎಷ್ಟೇ ಯೋಚಿಸಿದರೂ ಅನಾದಿಯಲ್ಲಿ ಬಲ್ಲವರು ಕಂಡಲ್ಲಿಗೇ ಬರುತ್ತೇನೆ. ಇದೆಲ್ಲ ಸೃಷ್ಟಿಯ ಮಾಯೆ. ಅದಕ್ಕೇ ವಾಲ್ಟರ್ ಡಿಲಾಮೇರ್ ಹೇಳುತ್ತಾನೆ: "ನಾವು ಪುರುಷರು ಬಹಳ ಹಳಬರು ನಮ್ಮ ಕನಸೆಲ್ಲ ನಂದನವನದ ಮಬ್ಬಿನಲ್ಲಿ ಆದಿಮಾನವ ಸಾಕಿದ ಗಿಳಿಗಳು ಹೇಳಿದ ಕಥೆಗಳು" ಅಂತ. ಹೌದು, ಆದಿಮಾನವಿಯ ಗಿಳಿಗಳ ಕಥೆಯೇ ಸೈ. ಆದರೆ ಈ ಸವಿಗನಸುಗಳನ್ನು ಕಂಡದ್ದಕ್ಕಾಗಿ ನಾನು ಎಂದೂ ಪಶ್ಚಾತ್ತಾಪಪಡುವುದಿಲ್ಲ. ದೇವತೆಗಳ ಕನಸುಗಳ ಹಾಗೆ ಅವು ಅನ್ವಯ ಸತ್ಯ ಕನಸುಗಳಾಗಿರಲಿಕ್ಕಿಲ್ಲ, ಅವು ಮುರುಕು ಧರ್ಮಶಾಲೆಯಲ್ಲಿ ತಿರುಕ ಕಂಡ ಕನಸುಗಳೇ ಆಗಿರಬಹುದು. ಆದರೆ ಕನಸುಗಳಾದರೇನು? ಕನಸುಗಳೂ ಅವು ನಡೆಯುವಷ್ಟು ಕಾಲ ನನಸುಗಳೇ ಅಲ್ಲವೇ? ಕೊನೆಗೆ ಲೆಕ್ಕ ಹಾಕಿದರೆ ಸವಿಗನಸುಗಳ ಬಿಂದುಗಳೇ ಅಲ್ಲವೇ ನಮ್ಮ ಬದುಕಿನ ನಾಲಗೆಯಲ್ಲಿ ಉಳಿಯುವಂಥವು. (೧೯೭೫)

## ಸ್ಪೈಟಿ-ಸ್ಟಿಕ್ಕುಗಳು

ಅಮೇರಿಕದವರು ಕಳೆದ ವರ್ಷ ೩೦೦೦ ಮೈಲುದ್ದ, ೪೦ ಫೂಟು ಅಗಲ, ಮತ್ತು ೩ ಫೂಟು ಆಳವಾದ ನದಿಯನ್ನು ತುಂಬಲು ಸಾಲುವಷ್ಟು ಹಾಲು ಉತ್ಪಾದಿಸಿದರಂತೆ. ಈ ಅಮೇರಿಕನ್ನರು ಯಾವಾಗಲೂ ತುಸು ಹುಡುಗಾಟಿಕೆಯ ಜನವಾಗಿ ಕಾಣಿಸುತ್ತಾರೆ. ಅವರು ಒಂದು ಹೋಳಿಯನ್ನು ೩೦೦೦ ಮೈಲು ಉದ್ದವಾಗಿ ಮಾಡುತ್ತಾರೆ; ಅಷ್ಟರಲ್ಲಿ ಬೇಸರ ಬಂದು

ಆದರ ಅಗಲವನ್ನು ೪೦ ಫೂಟು ಮತ್ತು ಆಳವನ್ನು ಬರೇ ೩ ಫೂಟು ಮಾಡಿ ಕೈಬಿಡುತ್ತಾರೆ. ಇಂಥ ನಿರಾಳ (ನಿರ್ + ಆಳ) ಹೊಳೆ ಈಸಲಿಕ್ಕೂ ಸಾಲದು, ಮುಳುಗಲಿಕ್ಕೂ ಸಾಲದು. ನಮ್ಮ ಭಾರತೀಯರ ಕೈಲಿ ಇಷ್ಟು ಹಾಲು ಸಿಕ್ಕಿದ್ದರೆ, ನಾವು ಖಂಡಿತವಾಗಿ ಅದರಿಂದ ೪೦ ಫೂಟು ಉದ್ದ, ೩ ಫೂಟು ಅಗಲ ಮತ್ತು ೩೦೦೦ ಮೈಲು ಆಳವಾದ ಒಂದು ಹೊಳೆಯನ್ನು (ಅಥವಾ ತೀರ್ಥವನ್ನು ಅನ್ನಿ ಬೇಕಾದರೆ) ಉಂಟುಮಾಡುತ್ತೇವೆ. ಅವರು ದೀರ್ಘ ವಾಗಿದ್ದರೂ ನಿರಾಳ-ಶ್ಯಾಲೋ, ತೆಟ್ಟೆ; ನಾವೋ ಪಾತಾಳ ಸ್ಪರ್ಶಿ, ಆಳ.

ಇಂಥ ಹಾಲಿನ ಹೊಳೆ ಮಾಡಿದ್ದರಿಂದ ಅಮೆರಿಕನ್ನರಿಗೆ ಹಸಿ ಯುದ್ಧ (ಕೋಲ್ಡ್ ವಾರ್)ದಲ್ಲಿಯೂ ತೊಂದರೆಯೇ. ರಶಿಯನ್ ಗೋಬೆಲ್ಸರು ಈ ಸುದ್ದಿಗೆ ಹೀಗೆ ಹಣೆಬರಹ ಕೊಡಬಹುದು "ಅಮೆರಿಕದ ಹಾಲಿನ ಹೊಳೆ ಶುದ್ಧ ಪೊಳ್ಳು." ಅದರ ಉದ್ದವೂ ಅಮೆರಿಕನ್ನರನ್ನು ಅಪಪ್ರಚಾರದಿಂದ ಕಾಪಾಡಲಾರದು. "ಅಮೆರಿಕನ್ ಹಾಲಿನ ಹೊಳೆ ಯೂರೋಪನ್ನು ಮುಟ್ಟ ಲಾರದು" ಎಂದು ರಶಿಯನ್ನರು ಸಾರುವರು. ಪಶ್ಚಿಮ ಯೂರೋಪಿನಲ್ಲಿ ಹಲವರಿಗೆ ಈಗಾಗಲೇ ಹೀಗನಿಸುತ್ತಿರುವುದರಿಂದ ಈ ರಶಿಯನ್ ಪ್ರಚಾರ ಅವರ ಮೇಲೆ ಪರಿಣಾಮ ಮಾಡದೆ ಬಿಡದು. ಹೀಗಿರುವುದರಿಂದ ಇನ್ನು ಮೇಲಾದರೂ ಅಮೆರಿಕನ್ನರು ತಮ್ಮ ಹಾಲಿನ ಹೊಳೆಯನ್ನು ಇಪ್ಪತ್ತೇ ಫೂಟು ಅಗಲವಾದರೂ ಚಿಂತೆಯಿಲ್ಲ, ಅಟ್ಲಾಂಟಿಕ್ ದಾಟಿ ಸಮಗ್ರ ಯೂರೋಪನ್ನು ಮುಟ್ಟುವಂತೆ ಮಾಡುವರೆಂದು ಹಾರೈಸಲಾಗಿದೆ. ಇನ್ನು ಭಾರತಕ್ಕೆ ಇಷ್ಟೆಲ್ಲಾ ಹಾಲು ಹಿಂಡುವ ಸಂದರ್ಭ ಬಂದರೆ ನಾವೇನು ಮಾಡುವೆವು ಗೊತ್ತೆ? ನಾವು ೧೫ ಫೂಟು ಉದ್ದ, ೩ ಫೂಟು ಅಗಲ ಮತ್ತು ೮೦೦೦ ಮೈಲು ಆಳವಾದ ಒಂದು ಪಾತಾಳ ಗಂಗೆಯನ್ನು ತೋಡುವೆವು. ಅದರಿಂದ ನಾವು ಒಂದು ವೇಳೆ ಅದರಲ್ಲಿ ಬಿದ್ದು ಮುಳುಗಿದರೆ ಅಮೆರಿಕದಲ್ಲಿ ಮೇಲೇಳ ಬಲ್ಲೆವು. ಅಮೆರಿಕನ್ ಕ್ರಮವನ್ನು ಅನುಸರಿಸಿದರೆ ಅಷ್ಟೇ ಹಾಲಿನಿಂದ ಭಾರತವನ್ನು ಮುಟ್ಟಬೇಕಾದರೆ ಅದಕ್ಕಿಂತ ಒಂದೂವರೆ ಪಟ್ಟಾದರೂ ಹಾಲು ಬೇಕಾದೀತು. ಯಾಕೆಂದರೆ, ಭೂಮಿಯ ವ್ಯಾಸಕ್ಕಿಂತ ಅದರ ಪರಿಘ ೩ತ್ತಿ ಪಟ್ಟು ಹೆಚ್ಚಿಗೆ ಇದೆ. ಆದ್ದರಿಂದಲೇ ಭಾರತೀಯರು ಉದ್ದ ಅಥವಾ ಅಗಲವಾಗಿರುವುದಕ್ಕಿಂತ ಆಳವಾಗಿರುವುದೇ ಹೆಚ್ಚು ಸುಲಭ

ವೆಂದು ಮೊದಲಿನಿಂದಲೂ ಹೇಳುತ್ತ ಬಂದಿದ್ದಾರೆ.

ಅಮೆರಿಕನ್ ಸಂಖ್ಯಾವಿದರ ಮಾದರಿಯನ್ನು ಅನುಸರಿಸಿ ಅಮೆರಿಕನ್ ರಿಟರ್ನ್ಡ್ ಭಾರತೀಯ ಸಂಖ್ಯಾವಿದರು ಇಂಥಾ ಕೆಲ ಅಂಕೆ ಸಂಖ್ಯೆಗಳನ್ನು ಭಾರತದಲ್ಲಿಯೂ ಕಲೆಹಾಕುತ್ತಿದ್ದಾರಂತೆ. ಒಬ್ಬ ಸಂಖ್ಯಾವಿದರ ಸಂಶೋಧನೆಯ ಫಲವಾಗಿ, ೧೯೫೧ರಲ್ಲಿ ನಮ್ಮ ಮುಂದಾಳುಗಳು ಮಾಡಿದ ಭಾಷಣಗಳ ಪೂರ್ಣ ವರದಿಗಳನ್ನು ಮುದ್ರಿಸಿದ ಕಾಗದಗಳನ್ನು ೬ ಮೈಲುದ್ದ ೫ ಮೈಲಗಲದ ಸ್ಥಳದಲ್ಲಿ ಬಿಡಿಸಿ ಒಂದರ ಮೇಲೊಂದನ್ನು ಇಡುತ್ತ ಹೋದರೆ, ಅದು ೨೯,೦೦೨ ಫೂಟು, ಅಂದರೆ ಎವರೆಸ್ಟ್ ಶಿಖರದಷ್ಟು ಎತ್ತರದ ರಾಶಿಯಾಗಬಹುದೆಂದು ನಿರ್ಧರಿಸಿದ್ದಾರೆ. ಇದಕ್ಕಿಂತ ಕಡಿಮೆ ಅಗಲವಾದ ತಳದಲ್ಲಿ ಈ ಭಾಷಣಗಳನ್ನು ಒಂದರ ಮೇಲೊಂದರಂತೆ ಪೇರಿದರೆ, ಕೇವಲ ೨ ಲಕ್ಷ ೨೪ಸಾವಿರ ಮೈಲು ದೂರವಿರುವ ಚಂದ್ರಲೋಕವನ್ನು ಮುಟ್ಟಬಹುದಂತೆ; ಆದರೆ ಅಷ್ಟು ಇಕ್ಕಟ್ಟಾದ ತಳದ ಮೇಲೆ ಅಷ್ಟು ಎತ್ತರವಾದ ರಾಶಿಯನ್ನು ನಿಲ್ಲಿಸಿದರೆ ಅದು ಕುಸಿದು ಬೀಳುವುದೆಂದು ಎಂಜಿನಿಯರರು ಅಭಿಪ್ರಾಯಪಟ್ಟಿರುವುದರಿಂದ ಆ ಯೋಜನೆಯನ್ನು ವಿಷಾದದಿಂದ ಬಿಟ್ಟು ಕೊಡಲಾಗಿದೆ.

ಚಿತ್ರವತ್ತಾಗಿ ಅಂಕೆ ಸಂಖ್ಯೆಗಳನ್ನು ಪ್ರತಿಪಾದಿಸುವುದು ತುಂಬಾ ಕೌತುಕದ ಕೆಲಸ. ೧೯೪೩ರ ಬಂಗಾಲ ಬರಗಾಲದಲ್ಲಿ ಸತ್ತವರ ಹೆಣಗಳನ್ನೆಲ್ಲ ಒಂದರ ತಲೆಗೆ ಒಂದರ ಕಾಲು ಹಚ್ಚಿ ಉದ್ದಕ್ಕೆ ಮಲಗಿಸಿದ್ದರೆ ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ (ದೂರ ೨೦೦೦ ಮೈಲು) ಹೆಣಪಂಕ್ತಿ ರಚಿಸಬಹುದಾಗಿತ್ತೆಂದು ಲೆಕ್ಕ ಹಾಕಲಾಗಿತ್ತು. ಆಗ ನಮ್ಮನ್ನಾಳುತ್ತಿದ್ದ ಬ್ರಿಟಿಶರು ಯುದ್ಧದಲ್ಲಿ ಮಗ್ನರಾಗಿದ್ದುದರಿಂದ ಈ ವಿನೋದಪೂರ್ಣವಾದ ಮನೋರಂಜನೆಗೆ ಅವರಿಗೆ ಪುರಸೊತ್ತಿದ್ದಿಲ್ಲ. ಭಾರತೀಯರೆಲ್ಲ ಒಗ್ಗಟ್ಟಾಗಿ ಅರಬೀಸಮುದ್ರದಲ್ಲಿ ಉಗುಳಿದರೆ ಉಕ್ಕುವ ಸಮುದ್ರದ ನೀರು ಇಂಗ್ಲೆಂಡನ್ನೇ ಮುಳುಗಿಸಿಬಿಡಬಹುದೆಂದು ಹಿಂದೊಮ್ಮೆ ಒಬ್ಬ ಪ್ರಸಿದ್ಧ ಪುರುಷರು ಹೇಳಿದ್ದರು. ೩೩ ಕೋಟಿ (ಆಗಿನ ಅಂಕೆ) ಭಾರತೀಯರನ್ನು ಸಾಲಾಗಿ ನಿಲ್ಲಿಸುವಷ್ಟು ಅರಬೀಸಮುದ್ರದ ನಮ್ಮ ಕರಾವಳಿ ಉದ್ದವಿಲ್ಲದ್ದರಿಂದ ಅವರ ಯೋಜನೆಯನ್ನು ಕೃತಿಗಿಳಿಸಲಾಗಲಿಲ್ಲ. ಒಂದು ವೇಳೆ ಇಳಿಸಿದ್ದರೂ ಅದು

"ಹರಾಕಿರಿ"ಯಾಗುತ್ತಿತ್ತು. ಏಕೆಂದರೆ ದಂಡೆಯ ಮೇಲೆ ನಿಂತ ಭಾರತೀಯರು ಪಶ್ಚಿಮ ಘಟ್ಟದ ಕಡೆ ಓಡಿ ತಲೆ ತಪ್ಪಿಸಿಕೊಳ್ಳುವ ಮೊದಲೇ ಮುಳುಗಿ ಹೋಗಬಹುದಿತ್ತು. ಭಾರತೀಯರು ಪ್ರತಿ ವರ್ಷ ಸುರಿಸುತ್ತಿರುವ ಕಣ್ಣೀರು ಎಷ್ಟುದ್ದ ಎಷ್ಟಗಲ ಎಷ್ಟಾಳದ ಹೊಳೆ ತುಂಬಲು ಸಾಲಬಹುದೆಂದು ಯಾರಾದರೂ ಲೆಕ್ಕ ಹಾಕಿದ್ದಾರೋ ಇಲ್ಲವೋ ಗೊತ್ತಿಲ್ಲ.

ಭೂಮಿಯಲ್ಲಿ ಕೀಟಗಳು ಒಂದನ್ನೊಂದು ತಿನ್ನದೆ ಇರುತ್ತಿದ್ದರೆ ಒಂದು ಶತಮಾನದೊಳಗೆ ಭೂಮಾತೆಯು ಸುತ್ತ ೩೦ ಮೈಲು ದಪ್ಪದ ಕೀಟ ಕವಚವನ್ನು ನಿರ್ಮಿಸಬಹುದೆಂದು ಪ್ರಾಣಿಶಾಸ್ತ್ರಗಳು ಆಶ್ವಾಸನ ಕೊಟ್ಟಿದ್ದಾರೆ. ಈಗ ಜನಸಂಖ್ಯಾ ಶಾಸ್ತ್ರಜ್ಞರು, ಮನುಷ್ಯ ಪ್ರಾಣಿಗಳು, ಈಗಿನ ರೀತಿಯಲ್ಲೇ ಸಂತಾನವೃದ್ಧಿ ಮಾಡಿಕೊಂಡರೆ ಇನ್ನು ನೂರು ವರ್ಷಕ್ಕೆ ಭೂಮಿಯ ಮೇಲೆ ಸೂಜಿ ಹಾಕಲು ಕೂಡ ಎಡೆಯಿಲ್ಲದ ಹಾಗೆ ಜನರು ತುಂಬಿಹೋಗುವರೆಂದು ಹೇಳುತ್ತಿದ್ದಾರೆ. ಇಷ್ಟು ಒತ್ತೊತ್ತಾಗಿ ನಾವೆಲ್ಲ ನಿಂತಿರುವಾಗ ಒಬ್ಬರ ಮೈ ಒಬ್ಬರಿಗೆ ಕಾಣಿಸುವುದೇ ಸಾಧ್ಯವಿಲ್ಲವಾದ್ದರಿಂದ ನಮಗೆ ಬಟ್ಟೆಯಾಗಲಿ ಅದನ್ನು ಹೊಲಿಯುವುದಕ್ಕೆ ಸೂಜಿಯಾಗಲಿ ಬೇಕಾಗಲಿಕ್ಕಿಲ್ಲವೆಂಬುದೊಂದು ಸಮಾಧಾನದ ಸಂಗತಿ.

ವಿಶ್ವದಲ್ಲಿ ಒಟ್ಟು ಎಷ್ಟು ಪರಮಾಣುಗಳಿವೆ ಅನ್ನುವುದನ್ನು ಲೆಕ್ಕಹಾಕುವ ಕೆಲಸವನ್ನು ಭೌತಶಾಸ್ತ್ರಗಳು ಮಾಡಿದ್ದಾರೆ. ವಿಶ್ವದಲ್ಲಿ ಒಟ್ಟು ಎಷ್ಟು ನಕ್ಷತ್ರಗಳಿವೆಯೆಂದೂ ಅವರು ನಿಮಗೆ ಹೇಳುತ್ತಾರೆ. ಈ ಅಂಕೆಗಳು ಎಷ್ಟುದ್ದವಾಗಿವೆಯೆಂದರೆ ಪರಮಾಣುಗಳ ಸಂಖ್ಯೆಗೂ ನಕ್ಷತ್ರಗಳ ಸಂಖ್ಯೆಗೂ ಏನೂ ವ್ಯತ್ಯಾಸವಿದ್ದ ಹಾಗೆ ನನಗೆ ಕಾಣುವುದಿಲ್ಲ. ಇಂಥಾ ಲೆಕ್ಕವೆಲ್ಲ ನನ್ನ ಶಕ್ತಿಗೆ ಮೀರಿದ್ದು ಅಂತ ನಿಶ್ಚಯ ಮಾಡಿಕೊಂಡು ನಾನು ಅದಕ್ಕಿಂತ ಕಡಿಮೆ ಕಷ್ಟದ ಲೆಕ್ಕವನ್ನು ಪ್ರಾರಂಭಿಸಿದ್ದೇನೆ. ಅದೆಂದರೆ, ನಾನು ಹುಟ್ಟಿದಂದಿನಿಂದ ಈವರೆಗೆ ಊಟಮಾಡಿದ ಅಕ್ಕಿಯ ಕಾಳುಗಳನ್ನು ಒಂದರ ಮುಂದೆ ಒಂದರಂತೆ ಪೋಣಿಸಿದ್ದರೆ ಅದರಿಂದ ಎಷ್ಟುದ್ದದ ಹಾರವಾಗಬಹುದಿತ್ತು ? ಆದರೆ ಒಂದು ಕಿಲೋವಿನಲ್ಲಿ ಸರಾಸರಿ ಎಷ್ಟು ಕಾಳು ಅಕ್ಕಿ ಇದೆ ಅಂತ ಲೆಕ್ಕ ಮಾಡುವುದೇ ನನ್ನಿಂದಾಗಿಲ್ಲ. ಪ್ರತಿ ಸಲವೂ ನೂರು ದಾಟುತ್ತಲೇ ಎಲ್ಲಾದರೂ ಲೆಕ್ಕ ತಪ್ಪಿಹೋಗುತ್ತದೆ. (೧೯೫೨)

# ನಾಸಿಕಾವಿಲಾಸಂ

ಇಟಲಿಯ ೬೯ ವಯಸ್ಸಿನ ಆಲ್‌ಫ್ರೆಡೋ ಜಿಯೋವನಾರ್ಡಿ ಯೂರೋಪಿನ "ಮೂಗರಸ ೧೯೭೦" ಎಂಬ ಬಿರುದು ಪಡೆದಿದ್ದಾನೆ. ಅವನ ಮೂಗು ೫.೬ ಸೆಂಟಿಮೀಟರ್ ಉದ್ದವಾಗಿದೆಯಂತೆ. ಆದರೆ ಯೂರೋಪಿನ ಅತಿ ಉದ್ದ ಮೂಗಿನವ ಎಂಬ ಅವನ ಬಿರುದನ್ನು ಅದೇ ದೇಶದ ೭೫ ವರ್ಷದ ಅಂಗೋಲೋ ಲೋಮನ್ನೈಲೋ ಕೆಲವೇ ದಿವಸಗಳಲ್ಲಿ ಕಸಿದುಕೊಂಡಿದ್ದಾನೆ. ಅವನ ಮೂಗು ೬ ಸೆಂಟಿಮೀಟರ್ ಉದ್ದವಾಗಿದೆಯಂತೆ. ಯೂರೋಪಿನ ಬೇರಾವ ದೇಶದಿಂದಾದರೂ ಈ ಮೂಗರಸನನ್ನು ಸೆಣಸುವ ಮೂಗುಗಳನ್ನು ಯಾರಾದರೂ ಈ ಸ್ಪರ್ಧೆಯಲ್ಲಿ ತುರುಕುವರೋ ಎಂದು ನಾನು ನಿರೀಕ್ಷಿಸುತ್ತಿದ್ದೇನೆ. ಮೂಗರಸ ಪದವಿಗಾಗಿ ಅಂತಾರಾಷ್ಟ್ರೀಯ ಸ್ಪರ್ಧೆಯುಂಟಾದರೆ ಬೇರೆ ದೇಶಗಳಿಂದಲೂ ಉದ್ದ ಮೂಗುಗಳು ಪ್ರವೇಶಿಸಬಹುದು. ದೀರ್ಘತಮ ಮೀಸೆಯ ದಾಖಲೆ ಭಾರತದಲ್ಲೇ ಆಗಿದೆ. ದೀರ್ಘತಮ ಮೂಗಿನ ದಾಖಲೆಯೂ ಇಲ್ಲೇ ಇದ್ದರೆ ನಾನು ಆಶ್ಚರ್ಯಪಡುವುದಿಲ್ಲ. ಇತರರ ವಿಚಾರಗಳಲ್ಲಿ ಮೂಗು ಹಾಕುವ ಅಭ್ಯಾಸ ನಮಗೆ ಇತರ ದೇಶಗಳ ಜನರಿಗಿಂತ ಹೆಚ್ಚಿಗೆ ಇದೆಯಾದ್ದರಿಂದ ನಮ್ಮ ಮೂಗುಗಳು ಉದ್ದವಾಗಿರಬೇಕೆಂದು ನನ್ನ ಹೇಳಿಕೆಯಲ್ಲ. ನಮ್ಮ ದೇಶದ ಪಾರ್ಸಿಜನರು ತಮ್ಮ ಮೂಗುಗಳಿಗಾಗಿ ಪ್ರಸಿದ್ಧರಾಗಿದ್ದಾರೆ. ಮೂಗುಗಳನ್ನು ಅಳೆಯುವುದಾದರೆ ಅವರಲ್ಲಿ ಯಾರಾದರೊಬ್ಬನಿಗೆ "ಜಗನ್ನಾಸಿಕ" ಅಥವಾ "ನಾಕೇ-ಜಹಾನ್" ಬಿರುದು ಬರುವುದು ಖಂಡಿತ.

ಮೂಗಿನ ಮಹಿಮೆ ಅಸಾಧಾರಣವಾದದ್ದು. ಅದು ಗಾಳಿಯನ್ನು ಒಳಗೆ ಸೆಳೆದುಕೊಳ್ಳುವ ಜೋಡು ನಳಿಗೆ ಮಾತ್ರವಲ್ಲ. ಅದು ಇತಿಹಾಸವನ್ನು ಬರೆದಿದೆ, ಅಳಿಸಿದೆ. ಇಜಿಪ್ತಿನ ರಾಣಿ ಕ್ಲಿಯೊಪಾತ್ರಳ ಮೂಗು ಸ್ವಲ್ಪ ಉದ್ದ ಅಥವಾ ಗಿಡ್ಡಾಗಿದ್ದರೆ ಜಗತ್ತಿನ ಇತಿಹಾಸವೇ ಬದಲಾಗುತ್ತಿತ್ತೆಂದು ಇತಿಹಾಸಜ್ಞರು ಹೇಳುತ್ತಾರೆ. ಅವಳ ಮೂಗಿಗೆ ಮರುಳಾಗಿ ಇಬ್ಬರು ರೋಮನ್ ಲೋಕವೀರರು ರೋಮನ್ ಸಾಮ್ರಾಜ್ಯದ ವಿಸ್ತರಣೆಗೂ ಪತನಕ್ಕೂ ಕಾರಣರಾದರು. ರಾಮರಾವಣರ ಯುದ್ಧಕ್ಕೆ ಶೂರ್ಪನಖಿಯ ಮೂಗೇ ಕಾರಣವಾಯಿತೆಂದು ರಾಮಾಯಣ ಹೇಳುತ್ತದೆ. ಅವಳು ರಾಮನನ್ನು ಮದುವೆಯಾಗಬೇಕೆಂದಾಗ ರಾಮನಿಗೆ ಅವಳ ಮೂಗು ಅಗತ್ಯಕ್ಕಿಂತ ಉದ್ದವಾಗಿ

ಕಂಡಿತು. ಅದನ್ನು ಸ್ವಲ್ಪ ಪ್ರೂನ್ ಮಾಡಿದರೆ ಚೆನ್ನಾಗಿ ಕಾಣಬಹುದೆಂದು ಲಕ್ಷ್ಮಣನಿಗೆ ಆ ಕೆಲಸ ಒಪ್ಪಿಸಿದ. ಲಕ್ಷ್ಮಣನದು ಅದೇ ಪ್ರಥಮ ಪ್ಲಾಸ್ಟಿಕ್ ಸರ್ಜರಿ ಕೇಸು. ಆಪರೇಶನ್ ಮುಗಿದ ಮೇಲೆ ಶೂರ್ಪನಖಿಯ ಮುಖ ಶ್ರೀರಾಮನಿಗೆ ಏನೇನೂ ಪಸಂದ್ ಬೀಳಲಿಲ್ಲ. "ನೀನು ಅವಳ ಮೂಗನ್ನು ನನ್ನ ಹೇಳಿಕೆ ಮೀರಿ ಕತ್ತರಿಸಿದ್ದರಿಂದ ನೀನೇ ಅವಳನ್ನು ಮಾಡಿಕೊ" ಎಂದು ಲಕ್ಷ್ಮಣನಿಗೆ ಹೇಳಿದ. ಆದರೆ ಲಕ್ಷ್ಮಣ ಆಕಸ್ಮಾತ್ತಾಗಿ ಒದಗಿದ ಅಪಘಾತ ಗಳಿಗೆ ಸರ್ಜನ್ನರು ಜವಾಬ್ದಾರರಲ್ಲ ಎಂದೂ ಸರ್ಜನರು ತಮ್ಮ ಪೇಶಂಟು ಗಳನ್ನು ಮದುವೆಯಾಗುವುದು ವೈದ್ಯಧರ್ಮದ ನಿಯಮಗಳಿಗೆ ವಿರುದ್ಧ ವೆಂದೂ ಸಾಧಿಸಿದ. ಬಡ ಶೂರ್ಪನಖಿ ಮೂಗಿನ ದೊಡ್ಡ ಅಂಶವನ್ನು ಕಳೆದು ಕೊಂಡು ರಾವಣನಿಗೆ ದೂರುಕೊಟ್ಟಳು. ಮುಂದಾದ ಅನಾಹುತ ಎಲ್ಲರಿಗೂ ಗೊತ್ತಿದೆ.

ಕುಂಭಕರ್ಣನ ವಂಶಜರಲ್ಲಿ ಯಾರಾದರೂ ಇಂದು ಉಳಿದಿದ್ದರೆ ಮೂಗಿನ ಗಾತ್ರದ ಸ್ಪರ್ಧೆಯಲ್ಲಿ ಅವರನ್ನು ಮೀರಿಸುವುದು ಯಾರಿಗೂ ಸಾಧ್ಯವಾಗು ತ್ತಿರಲಿಲ್ಲ. ಅವನು ಗೊರಕೆ ಹೊಡೆಯುತ್ತಿದ್ದಾಗ ಹತ್ತಿರಹೋದ ಹನುಮಂತ ಅವನ ಮೂಗಿನ ಹೊರಳೆಯೊಳಗೆ ಸೆಳೆಯಲ್ಪಟ್ಟು ಶ್ವಾಸಕೋಶದೊಳಗೆ ಹೋದ. ಪರಿಣಾಮವಾಗಿ ಕುಂಭಕರ್ಣ ನಿದ್ರೆಯಲ್ಲೇ ಶೀನಿದ. ಹನುಮಂತ ಶೀನಿನೊಂದಿಗೆ ಹೊರಗೆ ಸಿಡಿದು ಕೆಲ ಗಾವುದ ದೂರ ಹೋಗಿ ಬಿದ್ದ. ಮರ ದಿಂದ ಕೆಳಗೆ ಹಾರುವ ಅನುಭವ ಚೆನ್ನಾಗಿದ್ದುದರಿಂದ ಅವನು ಕೈಕಾಲು ಮುರಿದುಕೊಳ್ಳಲಿಲ್ಲ. ಕುಂಭಕರ್ಣನ ಮೂಗಿನ ಗಾತ್ರ ಅಂಥದು !

ಹಿಟ್ಲರ್ ಯುದ್ಧ ಮೂಗಿನ ದೆಸೆಯಿಂದಲೇ ಆಯಿತೆಂದು ನಿಮಗೆ ಗೊತ್ತಿ ರಲಿಕ್ಕಿಲ್ಲ. ಆರ್ಯರು ಜಗತ್ತನ್ನಾಳಲು ನಿರ್ಮಿಸಲ್ಪಟ್ಟರು—ಎಂಬುದು ಅವನ ಮೊದಲ ತತ್ತ್ವ. ಜರ್ಮನ್ನರು ಅಚ್ಚ ಆರ್ಯರು ಎಂಬುದು ಎರಡನೆಯದು. ಆದರೆ ಆರ್ಯರನ್ನು ಗುರುತಿಸುವುದಕ್ಕೆ ಏನು ಆಧಾರ? ಮೂಗೇ ಆಧಾರ ಎಂದ ಹಿಟ್ಲರ್. ತುದಿಯಲ್ಲಿ ತುಸು ಒಳಬಾಗಿರುವ ಗಿಳಿಮೂಗಿನವರೇ ಅಚ್ಚ ಒರಿಜಿನಲ್ ಆರ್ಯರು. ಹೀಗೆ ಮೂಗಿನಿಂದ ಆರ್ಯರನ್ನು ಗುರುತಿಸಿ ಸಲಕ್ಷಣ ಮೂಗಿಲ್ಲದ ಯಹೂದ್ಯರ ವಧೆಗೆ ಆತ ಅಪ್ಪಣೆ ಹೊರಡಿಸಿದ. ತಪ್ಪು ಆಕಾರದ ಮೂಗುಳ್ಳವರು ತಮ್ಮ ಮೂಗುಗಳ ತಪ್ಪಿಗಾಗಿ ತಮ್ಮ ತಲೆಗಳನ್ನು ಕಳೆದು

ಕೊಳ್ಳಲು ಸಿದ್ಧರಿಲ್ಲದ್ದರಿಂದ ಯುದ್ಧವಾಯಿತು.

ನಮ್ಮ ಪೂರ್ವಜರಿಗೆ ಮೂಗಿನ ಹಿರಿಮೆ ಗೊತ್ತಿತ್ತು. ನಮ್ಮ ಭಾಷೆ ಮೂಗಿನಿಂದ ಓತಪ್ರೋತವಾಗಿದೆ. ಮೂಗು ತುರಿಸುವುದು—ಅಂದರೆ ಜಗಳ ತೆಗೆಯುವುದು ; ಮೂಗು ಮುರಿಯುವುದು—ಅಂದರೆ ತುಚ್ಛವಾಗಿ ಕಾಣು ವುದು ; ಮೂಗು ಕೊಯ್ಯುವುದು—ಅಂದರೆ ಅವಮಾನ ಮಾಡುವುದು ; ಮೂಗು ನೆಲಕ್ಕೆ ತಿಕ್ಕುವುದು—ಅಂದರೆ ಸೋಲೊಪ್ಪಿಕೊಳ್ಳುವುದು ; ಮೂಗೇ ರಿಸುವುದು—ಅಂದರೆ ನೀನೇನು ಮಹಾ ಎನ್ನುವುದು ; ಮೂಗರಳಿಸುವುದು— ಅಂದರೆ ಆಸೆಪಡುವುದು ; ಮೂಗು ಹಿಡಿಯುವುದು—ಅಂದರೆ ನಿರುಪಾಯ ನಾಗಿ ಮಾಡುವುದು—ಒಂದೇ ಎರಡೇ ?

ಮೂಗಿನ ಸಾಮುದ್ರಿಕ ಶಾಸ್ತ್ರವೂ ಒಂದು ನಮ್ಮಲ್ಲಿದೆ. ದೊಡ್ಡ ಮೂಗುಳ್ಳ ವರು ಅಧಿಕಾರ ನಡೆಸುವವರು ; ಮೇಲೆ ಬಾಗಿದ ಮೂಗುಳ್ಳವರು ದುರಭಿ ಮಾನಿಗಳು ಇತ್ಯಾದಿ. ಆದರೆ ಒರಿಜಿನಲ್ ಆರ್ಯರೆಂದು ಹೇಳಿಕೊಳ್ಳುವ ನಾವು ಹಿಟ್ಲರನಂತೆ ಗಿಳಿಮೂಗಿನ ಭಕ್ತರಲ್ಲ. ನಮ್ಮ ಆದರ್ಶ ಮೂಗು ಸಂಪಿಗೆ ಮೊಗ್ಗೆಯ ಆಕಾರದ್ದು—ಅದರೊಳಗಿರುವಂಥಾದ್ದು ಆ ಹೂವಿನ ಪರಿಮಳ ವುಳ್ಳದಲ್ಲದಿದ್ದರೂ !

ಇಂಥಾ ಸಂಪಿಗೆ ಮೂಗುಳ್ಳವಳು ತನ್ನ ಮೂಗಿಗೆ ಸರಿಹೋಗುವ "ವಾಸನೆಯಿಂದ" ವ್ಯಭಿಚಾರ ಮಾಡಿದ್ದಾದರೆ ಅವಳ ಮೂಗನ್ನು ಕತ್ತರಿಸಿ ಹಾಕುವ ಶಿಕ್ಷೆಯನ್ನು ನಮ್ಮ ಪೂರ್ವಜರು ಕೊಡುತ್ತಿದ್ದರು. ಪುನಃ ಅವಳಿಗೆ ಹೊಸ ಮೂಗನ್ನು ತಯಾರಿಸಿಕೊಡುವ ಎಕ್ಸ್‌ಪರ್ಟ್ ಸರ್ಜನ್ನರೂ ನಮ್ಮ ದೇಶದಲ್ಲಿದ್ದರು. (ಇವರೇ ಇಂದಿನ ಪ್ಲಾಸ್ಟಿಕ್ ಸರ್ಜರಿಯ ಪಿತಾಮಹರು) ಆದರೆ ಮೂಗನ್ನು ಕಳೆದುಕೊಳ್ಳುತ್ತಿದ್ದವರು ಇಂಥವರು ಮಾತ್ರವಲ್ಲ. ಹಿಂದಿನ ಕಾಲದಲ್ಲಿ ಜೂಜು ಅಥವಾ ಪಂದ್ಯಗಳಲ್ಲಿ ಹೆಂಡಂದಿರನ್ನು ಪಣ ವಾಗಿಡುತ್ತಿದ್ದಂತೆ ಸ್ವಂತ ಮೂಗುಗಳನ್ನೂ ಪಣವಾಗಿಡುತ್ತಿದ್ದರು. ಆದ್ದ ರಿಂದಲೇ "ಆ ನೆರೆಮನೇ ಹುಡುಗಿ ಆಚೇ ಮನೆ ಹುಡುಗನೊಡನೆ ಮೂರು ದಿನದೊಳಗೆ ಓಡಿಹೋಗದಿದ್ದರೆ ನನ್ನ ಮೂಗು ಕೊಯ್ದು ನಿನಗೆ ಕೊಡು ತ್ತೇನೆ !" ಎಂದು ಪಂಥ ಕಟ್ಟುವವರಿದ್ದಾರೆ. ಇಂಥಾ ಪಂಥಗಳಲ್ಲಿ ನೂರೊಂದು ಮೂಗುಗಳನ್ನು ಗೆದ್ದವನೊಬ್ಬನ ಕಥೆಯನ್ನು ನನ್ನಜ್ಜಿ ಹೇಳುತ್ತಿದ್ದರು. ಅವನು

ಅವುಗಳನ್ನೆಲ್ಲಾ ಒಂದು ಭರಣಿಯಲ್ಲಿ ಉಪ್ಪಿನಲ್ಲಿ ಹಾಕಿಟ್ಟಿದ್ದನಂತೆ.

ಆದರೆ ನಮ್ಮ ದೇಶದಲ್ಲಿ ಮೂಗಿನ ಗಾತ್ರಗಳ ಮೇಲೆ ಸ್ಪರ್ಧೆ ನಡೆಯುತ್ತಿತ್ತೆ? ನಮ್ಮ ದೇಶದಲ್ಲಿ ಇಲ್ಲದ್ದು ಮತ್ತೆಲ್ಲಿಯೂ ಇರಲು ಸಾಧ್ಯವೇ ಇಲ್ಲ. ಇಂಥಾ ಮೂಗಿನ ಸ್ಪರ್ಧೆಯಲ್ಲಿ ಎಲ್ಲರನ್ನೂ ಸೋಲಿಸುವುದಕ್ಕಾಗಿ ಗಣಪತಿ ತನ್ನ ಮೂಗನ್ನು ಎಳೆದೆಳೆದು ಬೆಳಸಿಕೊಂಡದ್ದರಿಂದ ಅದು ಸೊಂಡಲಿನಂತಾಯಿತೆಂದು ನನ್ನ ಸಂಶೋಧನೆಗಳಿಂದ ತಿಳಿದುಬಂದಿದೆ. ಅದರಿಂದ ಅವನ ಮುಖಕ್ಕೆ ಶೋಭೆ ಬಾರದಿದ್ದರೂ ಮೂಗಿನ ಸ್ಪರ್ಧೆಯಲ್ಲಿ ಅವನ ಮೂಗೇ ಮೇಲಾಯಿತು. (೧೯೭೧)

## ಆಸ್ಪತ್ರೆಯಲ್ಲಿ ಆಚಾರ್ಯರು

ಲಾಂಗೂಲಾಚಾರ್ಯರು ಎಂದೂ ಆಸ್ಪತ್ರೆಯ ಬಾಗಿಲು ದಾಟಿದವರಲ್ಲ. ಅವರ ಪಾಲಿಗೆ ಆಸ್ಪತ್ರೆ ಭೂತಲ ನರಕವಾಗಿತ್ತು. ಮುಖ್ಯ ಸರ್ಜನ್ನರೇ ಯಮರಾಯನ ಅವತಾರ; ಇತರ ಡಾಕ್ಟರರು ಯಮಭಟರು. ಅವರು ನಿಮ್ಮ ನೋವಾದ ಕಾಲನ್ನು ಕತ್ತರಿಸಿ ನಿಮ್ಮನ್ನು ಶನ್ಯೈಶ್ವರನ ತಮ್ಮನನ್ನಾಗಿ ಮಾಡುತ್ತಾರೆ. ನಿಮ್ಮ ನುಲಿಯುವ ಹೊಟ್ಟೆಯನ್ನು ಸಿಗಿದು ನಿಮ್ಮನ್ನು ಹಿರಣ್ಯಕಶಿಪುವನ್ನಾಗಿ ಮಾಡುತ್ತಾರೆ. ಯಮಲೋಕದಲ್ಲಿ ಪಾಪಿಗಳು ಹೇಗೆ ಯಮಭಟರ ಕೈಲಿ ಸಾಯುವುದಿಲ್ಲವೋ ಹಾಗೆ ಆಸ್ಪತ್ರೆಯಲ್ಲಿ ನೀವು ಸಹಸಾ ಡಾಕ್ಟರು ನರ್ಸುಗಳ ಕೈಲಿ ಸಾಯುವುದಿಲ್ಲ. ವಸ್ತುತಃ ಅವರು ನಿಮ್ಮ ಜೀವವನ್ನು ಉಳಿಸಿ, ಅನಂತರ ಅದು ಉಳಿದದ್ದಕ್ಕಾಗಿ ಜೀವಮಾನವೆಲ್ಲ ನೀವು ಪಶ್ಚಾತ್ತಾಪಪಡುವಂತೆ ಮಾಡುತ್ತಾರೆ. ಯಾಕೆಂದರೆ ನಿಮಗೆ ಸಾಯದೆ ಉಳಿಯಲು ಬೇಕಾದಷ್ಟು ಹೊರತು ಉಳಿದ ಎಲ್ಲಾ ಅಂಗಾಂಗಳನ್ನು ಅವರು ಸವರಿ ಹಾಕಿಬಿಡುತ್ತಾರೆ. ನೀವು ಸಾಯದೆ ಇದ್ದರೂ ಮುಂದೆ ಬದುಕುವುದು ಹೇಗೆಂದು ಆ ಮೇಲೆ ದಿಕ್ಕಾಣದವರಾಗುತ್ತೀರಿ. ಯಮಲೋಕದಲ್ಲಿ (ನೀವು ಅಲ್ಲಿಗೆ ಹೋಗುವುದಕ್ಕೆ ಈ ಲೋಕದಲ್ಲಿ ಅರ್ಹತೆ ಪಡೆದಿದ್ದರೆ) ನಿಮಗೆ ಯಾತನಾ ಶರೀರವನ್ನು ಕೊಡುತ್ತಾರಂತೆ. ಆ ಶರೀರದಲ್ಲಿ ನೀವು ಇದ್ದಾಗ, ನಿಮ್ಮನ್ನು ಕಡಿದರೂ ಸಿಗಿದರೂ ಹುರಿದರೂ ತರಿದರೂ

ನೀವು ಸಾಯುವುದಿಲ್ಲ. ಆಸ್ಪತ್ರೆಯಲ್ಲಿಯೂ ಹಾಗೆಯೇ. ನಿಮ್ಮ ಭೌತಿಕ ಶರೀರ ವನ್ನೇ ·ಮಾರ್ಫಿಯಾ ಅನಾಸ್ಥೀಶಿಯಗಳಿಂದ ಯಾತನಾ ಶರೀರವನ್ನಾಗಿ ಮಾರ್ಪಡಿಸುತ್ತಾರೆ. ನಿಮಗೆ ಸ್ಮೃತಿ ಬಂದೊಡನೆ ನಿಮ್ಮ ಪ್ರೀತಿಯ ಯಾವು ದಾದರೊಂದು ಅಂಗ ಮಾಯವಾಗಿರುತ್ತದೆ.

ಆಸ್ಪತ್ರೆಯ ಬಗ್ಗೆ ಲಾಂಗೂಲಾಚಾರ್ಯರ ಕಲ್ಪನೆ ಇದ್ದದ್ದು ಹೀಗೆ— ಈಚೆಗೆ ಒಂದಾನೊಂದು ದಿನ ತಾವೇ ಆಸ್ಪತ್ರೆಯನ್ನು ಸೇರುವ ವರೆಗೆ.

ಮತ್ತು ಹೊಕ್ಕೊಡನೆ ಅವರು ಕಂಡ ಚಿತ್ರ ಅವರ ಕಲ್ಪನಾನರಕಕ್ಕೆ ಬಹಳ ಸಮೀಪವಾಗಿಯೇ ಇತ್ತು. ಒಳಗೆ ಹೋಗುತ್ತಿರುವಾಗಲೇ ಗಾಡಿ ಮಂಚವೊಂದು ಎದುರಾಯಿತು. ಅದರ ಮೇಲೆ ನಿರ್ವಿಣ್ಣನಾಗಿ ಮಲಗಿದ್ದವ ನನ್ನು ಶಸ್ತ್ರಕ್ರಿಯೆಯ ಕೋಣೆಗೆ ಎಳೆದೊಯ್ಯುತ್ತಿದ್ದಾರೆಂದು ತಿಳಿಯಿತು. ಅವನಿಗೆ ಮುಸುಕು ಹಾಕಿದ ಕೆಂಪು ಬಣ್ಣದ ರಗ್ಗು ಹಠಾತ್ತಾಗಿ ಮಾರಮ್ಮನ ಗುಡಿಯ ಮುಂದೆ ಹರಕೆಗೆ ನಿಂತಿದ್ದ, ಕಿಸುಗಾರ, ಕೆಂಪುದಾಸಾಳ ಹೂಗಳ ಮಾಲೆಗಳಿಂದ ಅಲಂಕೃತವಾದ ಕುರಿಯ ನೆನಪನ್ನು ಆಚಾರ್ಯರಿಗೆ ತಂದು ಕೊಟ್ಟಿತು. ಭೇದ ಇಷ್ಟೇ. ತಲೆಯಿಂದ ಬೇರ್ಪಡಿಸಲ್ಪಟ್ಟ ತನ್ನ ಕಬಂಧ ವನ್ನು ಪ್ರತ್ಯಕ್ಷವಾಗಿ ನೋಡುವ ದುರ್ದೈವ ಆ ಕುರಿಯ ಪಾಲಿಗಿಲ್ಲ; ಈ ಬಡಪಾಯಿಗೆ ಹಾಗಲ್ಲ, ಎಂದುಕೊಂಡರು ಲಾಂಗೂಲಾಚಾರ್ಯರು. ನಾಲ್ಕೂ ಸುತ್ತಲೂ ರಕ್ತಕಂಬಲಾವಚ್ಛಿನ್ನರಾದ ರೋಗಿಗಳು ಕಿರಿಚುವ ಸ್ಪ್ರಿಂಗ್ ಮಂಚಗಳ ಮೇಲೆ ಸಾಲು ಸಾಲಾಗಿ ಮಲಗಿದ್ದಾರೆ. ಅವರು ಕಿರಿಚುತ್ತಿರುವ ವಿಚಿತ್ರ ಸ್ವರವೈವಿಧ್ಯಗಳು ನಮ್ಮ ಸಿನೆಮಾ ಹಿನ್ನೆಲೆ ಸಂಗೀತವಾದ್ಯ ವೈಚಿತ್ರ್ಯ ವನ್ನು ಕೂಡ ನಾಚಿಸುವಂತೆಇತ್ತು.

ಲಾಂಗೂಲಾಚಾರ್ಯರು ಆಸ್ಪತ್ರೆಯಲ್ಲಿದ್ದ ಏಳು ವಾರ ಕಾಲ ಮನುಷ್ಯ ಸ್ವಭಾವದಲ್ಲಿ ದುರ್ಲಭ ಪಾಠವಾಗಿತ್ತು. ಭಜನೆಯ ಮಂಡಲಿಯಲ್ಲಿ ಸೇರಿ ಕೊಂಡರೆ ನೀವೆಷ್ಟೇ ಲಜ್ಜಾಶೀಲರಾಗಿದ್ದರೂ "ರಘು ಪತಿ ರಾಘವ ರಾಜಾ ರಾಮ್" ಎಂದು ಚಪ್ಪಾಳೆ ತಟ್ಟಿ ಗಟ್ಟಿಯಾಗಿ ಹಾಡತೊಡಗುವುದಿಲ್ಲವೆ? ಆಸ್ಪತ್ರೆಯ ಯಾತನಾ ಬಾಂಧವ್ಯದಲ್ಲಿಯೂ ನೀವು ರವಷ್ಟು ನಾಚಿಕೆಯಿಲ್ಲದೆ ಸುಶ್ರಾವ್ಯವಾಗಿ ಅಲ್ಲದಿದ್ದರೂ ಶ್ರಾವ್ಯವಾಗಿ ನರಳುವಿರಿ. ಈ ನರಳಾಟ ನಿಮಗೆ ಅನಿರ್ವಚನೀಯವಾದ ಸಮಾಧಾನವನ್ನು ಕೊಡುತ್ತದೆ. "ನಾನು ಒಬ್ಬೊಂಟಿ

ಗನಲ್ಲ, ರೋಗದ ಹೊಲದಲ್ಲಿ ನೋವಿನ ಕುಯ್ಲು ಕೊಯ್ಯುವ ಬಾಂಧವರು ಸುತ್ತಲೂ ಇದ್ದಾರೆ” ಎಂಬ ಸಹಾನುಭವ ಸುಖವನ್ನು ನೀವು ಅನುಭವಿಸುತ್ತೀರಿ. ನಿಮ್ಮ ನೋವು ನಿಮ್ಮನ್ನು ಮೊದಲಿನಷ್ಟು ತೀವ್ರವಾಗಿ ಪೀಡಿಸುವುದಿಲ್ಲ. ಅದು ಹೆಚ್ಚು ಸಹ್ಯವಾಗಿ ಕಾಣಿಸುತ್ತದೆ. ಆದರೂ ನೀವು ಮೊದಲಿಗಿಂತಲೂ ಸಕರುಣವಾಗಿ ನರಳುವಿರಿ. ನಿಮಗೆ ನೋವು ತಡೆಯಲಾರದೆ ಅಲ್ಲ, ನೆರೆಯ ಮಂಚದವನಿಗೆ ನಾನೂ ನಿನ್ನ ಬಾಂಧವನಾಗಿ ಇದ್ದೇನೆ ಎಂಬ ನೆನಪು ಕೊಡುವುದಕ್ಕಾಗಿ—ಕಾಡುದಾರಿಯಲ್ಲಿ ನಡೆಯುವವರು “ಕೋSSS” ಎಂದು ಕೂಗುವಂತೆ ; ಅದೇ ಪ್ರದೇಶದಲ್ಲಿ ಕೂಗಳತೆಯೊಳಗೆ ಏಕಾಂಗಿಯಾಗಿ ದಾರಿಸಾಗುವ ಇನ್ನೊಬ್ಬ ದಾರಿಗನಿಗೆ ಧೈರ್ಯ ಕೊಡುವುದಕ್ಕಾಗಿ. ಇಲ್ಲಿ, ಈ ಮಂಚಗಳ ಮೇಲೆ ನಿರ್ವಿಣ್ಣರಾಗಿ, ಎಷ್ಟೋ ವೇಳೆ ಮಂಚದ ಕಾಲಿಗೋ ಕಂಬಕ್ಕೋ ಬಿಗಿಯಲ್ಪಟ್ಟ ಕಾಲುಳ್ಳವರಾಗಿ, ಬಿದ್ದಿರುವ ನಿಮಗೆ ಅಸಾಧಾರಣ ಅಧಿಕಾರಶಕ್ತಿಯ ಕೆಚ್ಚು ಬರುತ್ತದೆ. ನೀವು ವಾರ್ಡ್ ಡಾಕ್ಟರರೊಡನೆ ನಿರ್ಭಯವಾಗಿ ಜಗಳಾಡುತ್ತೀರಿ ; ಅಲ್ಲಿನ ಭಂಗಿಗಳನ್ನು ನಿಮ್ಮ ಮನೆಗೆಲಸದವನಿಗಿಂತಲೂ ಸದರವಾಗಿ ಬಯ್ಯುತ್ತೀರಿ ; ಅಲ್ಲಿನ ನರ್ಸುಗಳನ್ನು ಕೆಣಕಿ ಆಜ್ಞಾಪಿಸುತ್ತೀರಿ—ಮತ್ತು ಎಲ್ಲವನ್ನೂ ದಕ್ಕಿಸಿಕೊಳ್ಳುತ್ತೀರಿ. ನೋವಿನ ಸಂಘಶಕ್ತಿಯದು ; ನಿತ್ರಾಣದ ಬಲವದು ; ಯಾತನೆಯ ಅಧಿಕಾರಸಂಪತ್ತು ಅದು.

ಈ ಯಾತನಾಲೋಕದ ಚಿತ್ರದ ಅಸಹ್ಯತೆಯನ್ನು ಕಡಿಮೆ ಮಾಡುವ ವಸ್ತುಗಳೆಂದರೆ ಆಸ್ಪತ್ರೆಯ ದಾದಿಯರು ಅಥವಾ ನರ್ಸಮ್ಮಗಳು. ಮಂಚಗಳ ನಡುವಣ ದಾರಿಯಲ್ಲಿ ಅವರು ತಮ್ಮ ಧೀರಗತಿಯಿಂದ ಸಾಗುತ್ತಿರುವಾಗ ಯಮುನಾ ಪ್ರವಾಹದಲ್ಲಿಯ ಹಂಸಗಳಂತೆ ಕಾಣುತ್ತಾರೆ. ಅವರ ಬಿಳಿ ಉಡುಗೆ, ಅವರ ತುರುಬಿಗೆ ತೊಡಕಿಸಿದ ಸೇವಾಧರ್ಮದ ಬಿಳಿ ಕುಲಾವಿ ಎಲ್ಲವೂ ಆಸ್ಪತ್ರೆಯ ಆವರಣಕ್ಕೊಂದು ಉಲ್ಲಾಸವನ್ನು ತರುತ್ತವೆ. ಅವರು ಥರ್ಮಾಮೀಟರನ್ನು ನಿಮ್ಮ ಕಂಕುಳಿಗೆ ಸಿಕ್ಕಿಸುವಾಗ ನಿಮ್ಮ ಜ್ವರವೂ ತಂಪಾಗಿ ಕಾಣಿಸುತ್ತದೆ. ಅವರು ನಿಮ್ಮ ಮುಂಗೈಯ ನಾಡಿ ಹಿಡಿದು ರಿಸ್ಟ್ ವಾಚ್ ದಿಟ್ಟಿಸುತ್ತಿರುವಾಗ ಗಡಿಯಾರದ ಮುಳ್ಳು ಕೆಲಕ್ಷಣ ತಡೆಯಬಾರದೆ ಅನಿಸುತ್ತದೆ. ಅವರು ಪುಟ್ಟ ಗ್ಲಾಸುಗಳಲ್ಲಿ ಕೊಡುವ ಔಷಧಿಯಲ್ಲಿ ಏನೋ

ಕಟುಮಾಧುರ್ಯ ಅನಿಸುತ್ತದೆ. ರಾತ್ರಿ ಮಲಗುವ ಮುಂಚೆ ಬ್ರೊಮೈಡ್ ಬದಲು ಅವರು ಬರೇ ನೀರು ಕೊಟ್ಟರೂ ನಿಮಗೆ ನಿದ್ದೆ ಹತ್ತಬಹುದೇನೋ.

ಸರ್ಜನ್ನರು ನಿಮ್ಮ ನೋವಿನ ಕರುಳನ್ನು ಲೀಲಾಜಾಲವಾಗಿ ಕತ್ತರಿಸಬಹುದು. ಡಾಕ್ಟರರು ನಿಮ್ಮ ಬೆನ್ನಿಗೆ, ಎದೆಗೆ, ಪಕ್ಕೆಗಳಿಗೆ ಚುಮ್ಮಿನ್ನಿಸುವ ತಮ್ಮ ಸ್ಟೆತೊಸ್ಕೋಪು ಹಚ್ಚಿ ರೋಗ ನಿದಾನ ಮಾಡಿ ಅನುಪಾನ ಪತ್ರ ಬರೆದುಕೊಡಬಹುದು. ಆದರೆ ಆಸ್ಪತ್ರೆಯನ್ನು ಅನಮಾನುಷದಿಂದ ಮಾನುಷವಾಗಿ ಮಾರ್ಪಡಿಸುವವಳೆಂದರೆ ದಾದಿಯೇ. ಹುಟ್ಟು ಸಾವುಗಳ ವೈಪರೀತ್ಯಗಳನ್ನು ಅರಿತೂ ಅವಳು ನಿರುದಾಸೀನಳಾಗಿ ನಿಮ್ಮನ್ನು ನಗುನಗುತ್ತ ಆರೈಸುತ್ತಾಳೆ. ಲಾಂಗೂಲಾಚಾರ್ಯರು ಸಾಯಲೇಬೇಕಾದರೆ ಮನೆಯಲ್ಲಲ್ಲ, ಆಸ್ಪತ್ರೆಯಲ್ಲಿ ಸಾಯಬೇಕೆನ್ನುತ್ತಾರೆ. (೧೯೫೪)

## ನಿಕ್ಸನ್ನರೊಡನೆ ನಾನು

ಅಧ್ಯಕ್ಷ ನಿಕ್ಸನ್ನರ ಶ್ವೇತಭವನದ ಖಾಸಗಿ ಕೋಣೆಯಲ್ಲಿ ನಡೆದ ನನ್ನ ಅಭೂತಪೂರ್ವ ಸಂದರ್ಶನವನ್ನು ನಾನು ಹೇಗೆ ಸಂಪಾದಿಸಿದೆನೆಂಬುದು ರಹಸ್ಯವಾಗಿರಬೇಕೆಂದು ರಿಚರ್ಡ್ ನಿಕ್ಸನ್ನರು ಅಪೇಕ್ಷಿಸಿರುವುದರಿಂದ ಅದನ್ನು ಓದುಗರಿಗೆ ತಿಳಿಸುವುದು ಸಾಧ್ಯವಿಲ್ಲವೆಂಬುದಕ್ಕೆ ವಿಷಾದಿಸುತ್ತೇನೆ. ಅಧ್ಯಕ್ಷರು ನನ್ನ ಕೈಕುಲುಕಿ ತಮ್ಮ ಹೊಸ ತ್ರಿಕೋಣಾಕಾರದ ಮೇಜಿನ ಬಳಿ ನನ್ನನ್ನು ಕುಳ್ಳಿರಿಸಿದರು. ನಾನು ನೇರವಾಗಿ ಪ್ರಶ್ನೆಗಳನ್ನೇ ಪ್ರಾರಂಭಿಸಿದೆ.

ನಾನು : ಸ್ವಾಮಿ, ಪಂಡಿತ ಮಿಸ್ಟರ್ ರಿಚರ್ಡ್ ನಿಕ್ಸನ್ನರೇ—

ನಿಕ್ಸನ್ : (ನಡುವೆಯೇ ಬಾಯಿ ಹಾಕಿ) ನನ್ನನ್ನ ಸ್ವಾಮಿ, ಪಂಡಿತ, ಮಿಸ್ಟರ್ ಏನೂ ಮಾಡಬೇಡ. ನಾವು ಅಮೆರಿಕನ್ನರು ಬಿರುದುಬಾವಲಿಗಳನ್ನು ಧರಿಸುವುದಿಲ್ಲ. ನಾವು ಪ್ರಜಾಸತ್ತಾವಾದಿಗಳು. ನನ್ನನ್ನು ಬರೇ ನಿಕ್ ಅಂತ ಕರಿ. ನಾನೂ ನಿನ್ನನ್ನು ಲ್ಯಾಂಗ್ ಅಂತ ಕರೀತೇನೆ.

ನಾನು : ನಮ್ಮ ಸಂಸ್ಕೃತಿ ಬೇರೆ. ನಾವು ಅಧಿಕಾರದಲ್ಲಿದ್ದವರನ್ನು ಗೌರವಿಸುತ್ತೇವೆ. ನಾಳೆ ನೀವು ಚುನಾವಣೆಯಲ್ಲಿ ಸೋತರೆ ನಿಕ್ ಅಂತ ಯಾಕೆ, ಏ ನಿಕ್ಯಾ ಅಂತ ಕರೀಲಿಕ್ಕೂ ನಾನು ಸಿದ್ಧನಾಗಬಹುದು.

ನಿಕ್ಸನ್ : ನಿನ್ನಿಷ್ಟ. ಈಗ ನಿನ್ನ ಪ್ರಶ್ನೆಗಳನ್ನು ಪ್ರಾರಂಭಿಸು.

ನಾನು : ಮಿಸ್ಟರ್ ನಿಕ್ಸನ್, ಈ ಮೇಜು ತ್ರಿಕೋಣವಾಗಿರುವುದೇಕೆ ಮತ್ತು ತ್ರಿಕೋಣದ ಒಂದು ಭುಜ ಇನ್ನೆರಡಕ್ಕಿಂತ ಉದ್ದವಾಗಿರುವುದೇಕೆ ?

ನಿಕ್ಸನ್ : ಇಂದು ಜಗತ್ತಿನಲ್ಲಿ ಮೂರೇ ಪ್ರಮುಖ ರಾಜ್ಯಗಳಿವೆ ಎಂದು ಸದಾ ಗಮನದಲ್ಲಿರುವಂತೆ ಈ ಮೇಜನ್ನು ಹೊಸದಾಗಿ ಮಾಡಿಸಿದ್ದೇನೆ. ಅಮೆರಿಕ, ರಶಿಯಾ, ಚೀನ ಇವು ಮೂರೇ ಆ ರಾಜ್ಯಗಳು. ಅಮೆರಿಕ ಎಲ್ಲಕ್ಕೂ ಪ್ರಬಲವಾದದ್ದು. ಆದ್ದರಿಂದ ಆ ಭುಜವನ್ನು ಉದ್ದವಾಗಿರಿಸಲಾಗಿದೆ. ನಾನು ಅಧಿಕಾರದಲ್ಲಿರುವ ವರೆಗೆ ಅದು ಹಾಗೇ ಉಳಿಯುವುದು.

ನಾನು : ಅದು ಅಂದರೆ ಮೇಜೊ ಅಮೆರಿಕದ ಪ್ರಾಬಲ್ಯವೋ ?

ನಿಕ್ಸನ್ : ದೇವರ ದಯೆಯಿಂದ ಎರಡೂ. ಹಾಗೆಯೇ ದೇವರ ದಯೆಯಿಂದ ನಾಲ್ಕನೇ ಭುಜ ಉಂಟಾಗದಂತೆಯೂ ನಾನು ನೋಡಿಕೊಳ್ಳುತ್ತೇನೆ. ಇದನ್ನು ನಿನ್ನ ಇಂದಿರಾಗೆ ಹೇಳು.

ನಾನು : ಭಾರತ ರತ್ನ ಇಂದಿರಾ ಗಾಂಧಿಯವರು ನನಗೆ ಸಂದರ್ಶನ ಕೊಡುವುದಿಲ್ಲ. ನೀವು ಸಂದೇಶ ಕಳಿಸುವುದೇ ಇದ್ದರೆ ನಿಮ್ಮ "ಟೈಮ್ಸ್" ಅಥವಾ "ನ್ಯೂಸ್‌ವೀಕ್" ಸುದ್ದಿಗಾರರನ್ನೇ ನೀವು ಹಿಡಿಯಬೇಕಷ್ಟೇ. ಆದರೆ ನನಗೆ ಆಶ್ಚರ್ಯವೆನಿಸುವುದೆಂದರೆ ಅಮೆರಿಕದ ವಿದೇಶನೀತಿ ಏನು ಎಂಬುದು.

ನಿಕ್ಸನ್ : ಬಹಳ ಸರಳ. ಜಗತ್ತಿನಲ್ಲೆಲ್ಲ ಸ್ವಾತಂತ್ರ್ಯವನ್ನು ರಕ್ಷಿಸುವುದು ನಮ್ಮ ನೀತಿ. ಸ್ವಾತಂತ್ರ್ಯಕ್ಕೆ ಅಪಾಯ ಕಂಡಲ್ಲೆಲ್ಲಾ ನಾವು ಸಹಾಯಕ್ಕೆ ಧಾವಿಸುತ್ತೇವೆ.

ನಾನು : ಸ್ವಾತಂತ್ರ್ಯವೆಂದರೇನು ?—ನಿಮ್ಮ ಪ್ರಕಾರ ?

ನಿಕ್ಸನ್ : ಸ್ವಾತಂತ್ರ್ಯ ಎಂದರೆ ಸ್ವಾತಂತ್ರ್ಯ. ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ವ್ಯಾಪಾರ ಸ್ವಾತಂತ್ರ್ಯ ಸುಖ ಪಡುವ ಸ್ವಾತಂತ್ರ್ಯ, ಒಂದು ಮಾತಿನಲ್ಲಿ ಸ್ವತಂತ್ರವಾಗಿರುವ ಸ್ವಾತಂತ್ರ್ಯ !

ನಾನು : ಮಿಸ್ಟರ್ ಪ್ರೆಸಿಡೆಂಟ್, ಈ ಸ್ವಾತಂತ್ರ್ಯಕ್ಕೆ ಯಾವ ರಾಜಕೀಯ ಪದ್ಧತಿ ಶ್ರೇಷ್ಠವೆಂದು ನೀವೆನ್ನುತ್ತೀರಿ ?

ನಿಕ್ಸನ್ : ಸ್ವಾಭಾವಿಕವಾಗಿ ಪ್ರಜಾಪ್ರಭುತ್ವದ ಪದ್ಧತಿ. ಜಗತ್ತಿನಲ್ಲೆಲ್ಲಾ

ಅದಕ್ಕೆ ನಾವು ಬೆಂಬಲ ಕೊಡುತ್ತೇವೆ.

ನಾನು : ಆದರೆ ಜಗತ್ತಿನಲ್ಲೆಲ್ಲ ಅಮೆರಿಕ ಪ್ರಜಾಪ್ರಭುತ್ವದ ವಿರೋಧಿಗಳಾದ ಸರ್ವಾಧಿಕಾರಿಗಳಿಗೆ, ನಿರಂಕುಶ ರಾಜರಿಗೆ ಸಹಾಯ ಮಾಡುತ್ತಿರುವಂತೆ ನಮಗೆ ಕಾಣಿಸುತ್ತಿದೆಯಲ್ಲ. ಉದಾಹರಣೆಗೆ ನಿಮ್ಮ ಹಿತ್ತಲ ಕಡೆಗೇ ಇರುವ ದಕ್ಷಿಣ ಅಮೆರಿಕದಲ್ಲಿ ಎಲ್ಲಾ ಕಡೆ ಮಿಲಿಟರಿ ಮತ್ತು ನಾಗರಿಕ ಸರ್ವಾಧಿಕಾರಿಗಳೇ ಇದ್ದಾರಲ್ಲವೆ ?

ನಿಕ್ಸನ್ : ಇದು ಸರಿಯಲ್ಲ. ನಾವು ಕ್ಯೂಬಾ ಮೊದಲಾದ ಕಡೆ ಇರುವ ಸರ್ವಾಧಿಕಾರಿಗಳನ್ನು ವಿರೋಧಿಸುತ್ತ ಇದ್ದೇವೆ.

ನಾನು : ಆದರೆ ಅವರು ಕಮ್ಯೂನಿಸ್ಟರಾಗಿರುವುದರಿಂದ ನಿಮ್ಮ ವಿರೋಧ ಅಲ್ಲವೆ ?

ನಿಕ್ಸನ್ : ಹೌದು. ಕಮ್ಯುನಿಸ್ಟರನ್ನು ನಾವು ಜಗತ್ತಿನಲ್ಲೆಲ್ಲ ವಿರೋಧಿಸುತ್ತೇವೆ. ನಮ್ಮ ಹಿತ್ತಿಲಲ್ಲಿ ನಾವು ಕಮ್ಯುನಿಸ್ಟರನ್ನು ಬಯಸುವುದಿಲ್ಲ. ಕಮ್ಯುನಿಜಂ ಎಂದರೆ ಸ್ವಾತಂತ್ರ್ಯದ್ರೋಹ ; ಪ್ರಜಾಸತ್ತಾದ್ರೋಹ.

ನಾನು : ಆದರೆ ಮಿ. ಪ್ರೆಸಿಡೆಂಟ್, ಪ್ರಜಾಪ್ರಭುತ್ವವನ್ನು ನಿಮ್ಮ ಕಮ್ಯುನಿಸ್ಟೇತರ ಸರ್ವಾಧಿಕಾರಿಗಳು ಕಮ್ಯೂನಿಸ್ಟರಿಗಿಂತಲೂ ನಿರ್ದಯವಾಗಿ ಹತ್ತಿಕ್ಕುತ್ತಿರುವುದಿಲ್ಲವೆ ?

ನಿಕ್ಸನ್ : ಆದರೆ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕಾಗಿ ಒಮ್ಮೊಮ್ಮೆ ಪ್ರಜಾಪ್ರಭುತ್ವವನ್ನು ತುಳಿಯಬೇಕಾಗುತ್ತದೆ, ಮಿ. ಲ್ಯಾಂಗ್ ! ನಮ್ಮ ದಕ್ಷಿಣ ಅಮೆರಿಕದ ನೀತಿಗೆ ಎರಡು ಕಾರಣಗಳಿವೆ. ಮೊದಲನೆಯದು, ಈ ಜನಕ್ಕೆ ಅನಿರ್ಬಂಧ ಪ್ರಜಾಸತ್ತೆಯನ್ನು ಕೊಟ್ಟರೆ ಅವರು ಚುನಾವಣೆಯಿಂದ ಕಮ್ಯೂನಿಸ್ಟರನ್ನೇ ಅಧಿಕಾರಕ್ಕೆ ತರುವ ಭಯವಿದೆ—ಇಂಥವರಿಗೆ ಪ್ರಜಾಸತ್ತೆ ಏಕೆ, ಸ್ವಾತಂತ್ರ್ಯ ಏಕೆ ? ಮತ್ತೆ—

ನಾನು : ಕ್ಷಮಿಸಿರಿ, ಮಿ. ಪ್ರೆಸಿಡೆಂಟ್ ! ಆದರೆ ಪ್ರಜೆಗಳಿಗೆ ಕಮ್ಯುನಿಜಂ ಬೇಕಾಗಿದ್ದರೆ ಅದಕ್ಕೆ ಪ್ರಜಾಪ್ರಭುತ್ವದ ಅಧ್ವರ್ಯುವಾದ ಅಮೆರಿಕ ಏಕೆ ಆತಂಕ ಮಾಡಬೇಕು ?

ನಿಕ್ಸನ್ : ನಮ್ಮ ಹಿತ್ತಲಲ್ಲಿ ಪ್ರಜಾಪ್ರಭುತ್ವದಿಂದಲೇ ಇರಲಿ, ಸರ್ವಾಧಿಕಾರದಿಂದಲೇ ಇರಲಿ, ಕಮ್ಯುನಿಜಂ, ಅಥವಾ ಆದರದೇ ಇನ್ನೊಂದು ಅವ

ತಾರವಾದ ಸೋಶಲಿಜಂ ಬರುವುದು ನಮಗೆ ಇಷ್ಟವಿಲ್ಲ.

ನಾನು : ಯಾಕೆಂದು ನನಗೆ ತಿಳಿಯುವುದಿಲ್ಲವಲ್ಲ.

ನಿಕ್ಸನ್ : ನಾವು ಜಗತ್ತಿನ ಶ್ರೇಷ್ಠತಮ ಮತ್ತು ಬಲಿಷ್ಠತಮ ಪ್ರಜಾಸತ್ತೆಯೆಂದು ನೀನೂ ನಿನ್ನ ಇಂದಿರಾನೂ ಸರಿಯಾಗಿ ತಿಳಿದುಕೊಳ್ಳಬೇಕು. ನಾವು ನಮ್ಮ ಹಿತ್ತಲಲ್ಲಿರುವ ಈ ದೇಶಗಳಲ್ಲಿ ಗಿಡಗಳನ್ನು ನೆಟ್ಟಿದ್ದೇವೆ.

ನಾನು : ಎಂಥಾ ಗಿಡಗಳು ?

ನಿಕ್ಸನ್ : ಹಣದ ಗಿಡಗಳು. ವ್ಯಾಪಾರ ಸ್ವಾತಂತ್ರ್ಯ ನಮ್ಮ ಪ್ರಜಾಪ್ರಭುತ್ವದ ಮೂಲಭೂತ ಸ್ವಾತಂತ್ರ್ಯ. ಲಾಭ ಗಳಿಸುವ ಸ್ವಾತಂತ್ರ್ಯ ಈ ಮೂಲಭೂತ ಸ್ವಾತಂತ್ರ್ಯದ ಫಲವೂ ಬೀಜವೂ ಆಗಿದೆ. ದಕ್ಷಿಣ ಅಮೆರಿಕದಲ್ಲಿ ನಮ್ಮ ಬಂಡವಾಳಗಾರರು ವ್ಯಾಪಾರ ಸ್ವಾತಂತ್ರ್ಯ ತತ್ತ್ವದ ಪ್ರಕಾರ ಕೋಟಿಗಟ್ಟಲೆ ಡಾಲರ್ ಬಂಡವಾಳ ಹಾಕಿದ್ದಾರೆ. ಅಲ್ಲಿ ತಲೆತಿರುಕ ಪ್ರಜಾಪ್ರಭುತ್ವವಾದಿಗಳು ಅಧಿಕಾರಕ್ಕೆ ಬಂದರೆ ನಮ್ಮ ಬಂಡವಾಳಗಾರರ ಮೇಲೆ ಸಾಯುಬಡಿಯುವಷ್ಟು ಕಂದಾಯ ಹಾಕಿ ನಮ್ಮ ಲಾಭ ಸ್ವಾತಂತ್ರ್ಯವನ್ನು ನಾಶ ಮಾಡುತ್ತಾರೆ. ಸೋಷಲಿಸ್ಟರೂ ಕಮ್ಯೂನಿಸ್ಟರೂ ಬಂದರೆ ನಮ್ಮ ಬಂಡವಾಳವನ್ನೇ ರಾಷ್ಟ್ರೀಕರಿಸಿಬಿಡುತ್ತಾರೆ.

ನಾನು : ಆದರೆ ಅದು ಅವರ ದೇಶದಲ್ಲಿ ಅವರ ಜನ್ಮಸಿದ್ಧ ಹಕ್ಕು ಅಲ್ಲವೆ?

ನಿಕ್ಸನ್ : ನಾವು ಹಾಗೆಣಿಸುವುದಿಲ್ಲ. ಎಲ್ಲ ರಾಷ್ಟ್ರೀಯ ಜನ್ಮಸಿದ್ಧ ಹಕ್ಕುಗಳೂ ಪ್ರಜಾಪ್ರಭುತ್ವಕ್ಕೆ, ಸ್ವಾತಂತ್ರ್ಯಕ್ಕೆ ಅವಿರುದ್ಧವಾಗಿರಬೇಕು. ಅಮೆರಿಕವು ಜಗತ್ತಿನ ಅತಿ ಪ್ರಬಲ ಪ್ರಜಾಪ್ರಭುತ್ವವಾಗಿರುವುದರಿಂದ ಅದರ ಹಿತಕ್ಕೆ ವಿರುದ್ಧವಾದದ್ದು ಯಾವುದೂ ಪ್ರಜಾಪ್ರಭುತ್ವವಾಗಲಾರದು. ತಿಳಿಯಿತೆ ?

ನಾನು : ಸ್ವಲ್ಪ ಸ್ವಲ್ಪ. ಏಶಿಯದಲ್ಲಿ ನಿಮ್ಮ ಧೋರಣೆಗಳಲ್ಲಿಯೂ ಇದೇ ಮಾತು ಕೆಲಸ ಮಾಡುತ್ತಿದೆಯೇನೋ ಎನಿಸುತ್ತದೆ. ಜಗತ್ತಿನಲ್ಲಿ ಎಲ್ಲಿ ಹೋದರೂ ನಿಮಗೆ ಜನಬೆಂಬಲವಿಲ್ಲದ ಪ್ರತಿಗಾಮಿ ಶಕ್ತಿಗಳ ಸ್ನೇಹವೇ ಹೇಗೆ ಸಿಗುತ್ತದೆ ? ಪ್ರಗತಿಪರ, ಜನಪ್ರಿಯ ವ್ಯಕ್ತಿ-ಶಕ್ತಿಗಳನ್ನು ನೀವು ಯಾಕೆ ಪ್ರೋತ್ಸಾಹಿಸುವುದಿಲ್ಲ? ಯಾಕೆ ಅವರ ಬೆಂಬಲ ನಿಮಗೆ ಸಿಗುವುದಿಲ್ಲ ? ಎಂದು ನನಗೆ ತಿಳಿಯದಾಗಿದೆ. ಉದಾಹರಣೆಗೆ ದಕ್ಷಿಣ ಕೊರಿಯ, ದಕ್ಷಿಣ

ವಿಯತ್ನಾಮುಗಳಲ್ಲಿ ಜನಬೆಂಬಲವಿಲ್ಲದ ಗುಂಪುಗಳನ್ನೇ ನೀವು ಅಧಿಕಾರಕ್ಕೇರಿಸಿದಿರಿ. ಅಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳೇ ಇದ್ದಿಲ್ಲವೆ? ಅವರನ್ನು ನೀವು ಎತ್ತಿಕಟ್ಟಿದ್ದರೆ ಪ್ರಜಾಸತ್ತೆಗೆ ಪ್ರೋತ್ಸಾಹವೇ ಅಲ್ಲದೆ ಯುದ್ಧದಲ್ಲಿ ಇದಕ್ಕಿಂತ ಹೆಚ್ಚು ಸಫಲತೆಯೂ ಬರುತ್ತಿದ್ದಿಲ್ಲವೆ?

ನಿಕ್ಸನ್: ವಿಯತ್ನಾಮಿನಲ್ಲಿ ನಡೆಯುತ್ತಿರುವುದಕ್ಕೆ ನನ್ನ ಹಿಂದಿದ್ದ ಅಧ್ಯಕ್ಷರುಗಳ ನೀತಿ ಬಹಳ ಮಟ್ಟಿಗೆ ಕಾರಣವೆಂದು ನಿನಗೆ ನೆನಪು ಮಾಡಿಕೊಡುತ್ತೇನೆ. ಆದರೆ ಆ ನೀತಿಯನ್ನು ನಾನು ವಿರೋಧಿಸುತ್ತೇನೆಂದಲ್ಲ. ನಾವು ಪರದೇಶದವರಾಗಿ ಎಷ್ಟು ಸಾಧ್ಯವೋ ಯಾವುದು ಸಾಧ್ಯವೋ ಅದನ್ನೇ ಮಾಡಬೇಕಷ್ಟೆ. ಜನಬೆಂಬಲವಿಲ್ಲದವರಿಗೇ ನಾವು ಏಕೆ ಬೆಂಬಲ ಕೊಡುತ್ತೇವೆ? ಜನಬೆಂಬಲವುಳ್ಳವರು ನಮಗೆ ಏಕೆ ಬೆಂಬಲ ಕೊಡುವುದಿಲ್ಲ? ಎಂದು ಕೇಳುವ ನಿನಗೆ ರಾಜಕಾರಣದ ಎ. ಬಿ. ಸಿ. ಕೂಡ ಗೊತ್ತಿಲ್ಲ ಎನ್ನಬೇಕಾಗುತ್ತದೆ. ಜನಬೆಂಬಲವುಳ್ಳ ನಾಯಕರು ನಮ್ಮ ಬೆಂಬಲವನ್ನು ಅಷ್ಟಾಗಿ ಬಯಸುವುದಿಲ್ಲ. ಜಗತ್ತಿನ ಅತಿ ಪ್ರಬಲ ಪ್ರಜಾಸತ್ತಾತ್ಮಕ ದೇಶದ ಹಿತಕ್ಕಿಂತ ತಮ್ಮ ಬೆಂಬಲಿಗರ ಅಭಿಪ್ರಾಯ, ತಮ್ಮ ಜನರ ಹಿತ ಅವರಿಗೆ ಮಹತ್ತ್ವದ್ದಾಗುತ್ತದೆ. ವಿಯತ್ನಾಮಿನಲ್ಲಿ ಜನಬೆಂಬಲವುಳ್ಳವರನ್ನು ನಾವು ಎತ್ತಿ ಕಟ್ಟಿದ್ದರೆ ಅರಣ್ಯಗಳನ್ನು ಸುಡುವ ನಪಾಲ್ಂ ಬಾಂಬುಗಳನ್ನು ಹಾಕುವುದಕ್ಕೆ ಅವರು ಒಪ್ಪುತ್ತಿದ್ದರೇ? ತಮ್ಮ ನಾಡನ್ನು ಸುಡುಗಾಡು ಮಾಡುವುದಕ್ಕಿಂತ ಕಮ್ಯುನಿಸ್ಟರ ಸಂಗಡ ರಾಜಿ ಮಾಡಿಕೊಳ್ಳುವುದು ವಾಸಿ ಎಂದು ಅವರು ಎಣಿಸಬಹುದಾಗಿತ್ತು. ಇದು ಜಗತ್ತಿಗೆ ಹಿತವಲ್ಲ. ಒಂದು ವೇಳೆ ಅವರು ಕಮ್ಯುನಿಸ್ಟ ದಂಗೆಗಾರರನ್ನು ಸೋಲಿಸಿದ್ದರೆ ಎಲ್ಲಾ ಕೀರ್ತಿಯನ್ನೂ ತಾವೇ ಇಟ್ಟುಕೊಳ್ಳಬಹುದಾಗಿತ್ತು. ಆಗ ಅಮೆರಿಕದ ಸಹಾಯದ ಅಗತ್ಯವೇ ಅವರಿಗೆ ಉಳಿಯುತ್ತಿರಲಿಲ್ಲ. ಇದೂ ಜಗತ್ತಿಗೆ ಒಳ್ಳೆಯದಲ್ಲ. ಜಗತ್ತಿನ ಅತಿ ಪ್ರಬಲ ಪ್ರಜಾಸತ್ತೆಯೆನಿಸುವ ಅಮೆರಿಕಕ್ಕೆ ಎಲ್ಲಾ ಉಪದ್ರವ ಸ್ಥಾನಗಳಲ್ಲಿ ತಕ್ಕ ಮನ್ನಣೆ, ಪ್ರಭಾವ ಸಿಗಲೇಬೇಕು.

ನಾನು: ಮಿಸ್ಟರ್ ಪ್ರೆಸಿಡೆಂಟ್, ನಾನೀಗ ಒಂದು ವೈಯಕ್ತಿಕ ಪ್ರಶ್ನೆ ಕೇಳಬೇಕೆಂದಿದ್ದೇನೆ. ನೀವು ಇಂಡಿಯಾಕ್ಕೆ ಬಂದಾಗ ಅಲ್ಲಿನ ಸರಕಾರ ನಿಮಗೆ ತಕ್ಕ ಮರ್ಯಾದೆ ಕೊಡಲಿಲ್ಲ ಎಂಬುದಕ್ಕಾಗಿ ನೀವು ಇಂಡಿಯಾ ವಿರೋಧಿ

ಯಾಗಿದ್ದೀರಂತೆ; ಪಾಕಿಸ್ತಾನದವರು ನಿಮ್ಮ ದಾರಿಯಲ್ಲಿ ರತ್ನಗಂಬಳಿ ಹಾಸಿದ್ದರಿಂದ ನೀವು ಅವರ ಪಕ್ಷಪಾತಿಗಳಾಗಿದ್ದೀರಂತೆ. ಇದು ನಿಜವೇ ?

ನಿಕ್ಸನ್ : ಶುದ್ಧ ತಪ್ಪು. ನಾವು ಅಮೆರಿಕನ್ನರು ನೀವು ಏಶಿಯಾಟಿಕ್ಸರ ಹಾಗೆ ಮಾನ ಮರ್ಯಾದೆಗಳಿಗೆ ಮಹತ್ತ್ವ ಕೊಡುವುದಿಲ್ಲ. ಆದರ ಮಾಡಿದರೆ ನಮಗೂ ಸಂತೋಷವಾಗುತ್ತದೆ. ಆದರೆ ನಮಗೆ ಲಾಭವಾಗುವುದಾದರೆ ಮಾತ್ರ. ಆದರ ಮಾಡಿದವರೆಂದು ನಾವೇನೂ ರಿಯಾಯಿತಿ ಕೊಡುವುದಿಲ್ಲ. ಲಾಭವಿಲ್ಲದ ಜಗಳಗಳನ್ನೂ ನಾವು ಮುಂದುವರಿಸುವುದಿಲ್ಲ. ವಿಯತ್ನಾಂ ಯುದ್ಧವನ್ನೇ ನೋಡು. ಅದರಿಂದ ಲಾಭವಿಲ್ಲ ಎಂದು ಖಾತ್ರಿಯಾದ ಕೂಡಲೇ ನಾವು ಹಿಂದೆಗೆಯಲು ಯತ್ನಿಸುತ್ತಿದ್ದೇವೆ. ಅದಿರಲಿ. ಇಂಡಿಯದ ಮೇಲೆ ನನಗೇನೂ ಖಾಸಗಿ ದ್ವೇಷವಿಲ್ಲವೆಂದು ನಿನಗೆ ಭರವಸೆ ಕೊಡುತ್ತೇನೆ.

ನಾನು : ಆದರೆ ಡ್ಯುಲೇಸರ ಕಾಲದಿಂದಲೂ ಅಮೆರಿಕದ ಭಾರತವಿರೋಧ ನೀತಿಗೆ ನೀವೇ ಮೂಲಪುರುಷ ಅನ್ನುತ್ತಾರಲ್ಲ ?

ನಿಕ್ಸನ್ : ಇರಬಹುದು. ಭಾರತಕ್ಕೆ ಪ್ರತಿಯಾಗಿ ಏಶಿಯದಲ್ಲಿ ಒಂದು ವಿರುದ್ಧಶಕ್ತಿ ಬೇಕೆಂದು ನನಗೆ ಖಾತ್ರಿಯಾಯಿತು.

ನಾನು : ಭಾರತ ಪ್ರಜಾಪ್ರಭುತ್ವವಾಗಿದೆ. ನೀವಿಲ್ಲಿ ಬಂದಾಗ ಅದು ಭದ್ರ ಪ್ರಜಾಸತ್ತೆಯಾಗಿತ್ತು. ಪಾಕಿಸ್ತಾನ ಆಗಲೆ ತತ್ತರಿಸುವ ಪ್ರಜಾಸತ್ತೆಯಾಗಿತ್ತು. ಮುಂದೆ ಅದು ಮಿಲಿಟರಿ ಸರ್ವಾಧಿಕಾರವಾಗಿ ಪರಿಣಮಿಸಿತು. ಆದರೂ ನೀವು ಪಾಕಿಸ್ತಾನಕ್ಕೆ ಬೆಂಬಲ ಕೊಟ್ಟಿರಿ.

ನಿಕ್ಸನ್ : ನಾನು ನಿನಗೆ ಮೊದಲೇ ಹೇಳಿದ್ದೇನೆ. ನಮಗೆ ಯಾರು ಬೆಂಬಲ ಕೊಡುತ್ತಾರೋ ಅವರು ಪ್ರಜಾಪ್ರಭುತ್ವವಾದಿಗಳು, ನಮ್ಮನ್ನು ಹಚ್ಚಿಕೊಳ್ಳದವರು ಸ್ವಾತಂತ್ರ್ಯ ವಿರೋಧಿಗಳು. ಇದು ಅಮೆರಿಕದ ದೃಢ ಅಭಿಪ್ರಾಯ. ಇದು ಮೂಲಸಿದ್ಧಾಂತದ ವಿಷಯ. ಇಲ್ಲಿ ಚರ್ಚೆಗೆ ಎಡೆಯೇ ಇಲ್ಲ.

ನಾನು : ಹಾಗಾದರೆ ನಮಗೇಕೆ ನೀವು ಆರ್ಥಿಕ ಸಹಾಯ ಮಾಡಿದಿರಿ ?

ನಿಕ್ಸನ್ : ನಿನಗೆ ಸತ್ಯ ಹೇಳಬೇಕಾದರೆ ಹೇಳುತ್ತೇನೆ. ಒಂದು, ನಮ್ಮಲ್ಲಿ ಧಾರಾಳವಾಗಿ ಧಾನ್ಯ ಬಿದ್ದಿರುತ್ತದೆ. ಅದನ್ನು ಸಾಗಹಾಕಬೇಕಾಗಿತ್ತು. ಎರಡನೆಯದು, ನಿಮಗೆ ನಮ್ಮ ಮುಂದೆ ಭಿಕ್ಷೆಗೆ ಬರುವ ಅಭ್ಯಾಸ ಖಾಯಂ ಆಗಿ ಬಿದ್ದರೆ ಯಾವಾಗಲೂ ನಮಗೆ ಕೃತಜ್ಞರಾಗಿರುತ್ತೀರಿ. ನಮ್ಮನ್ನು ಮೀರಿ

ಹೋಗಲಿಕ್ಕಿಲ್ಲ ಎಂದೆಣಿಸಿದೆವು.

ನಾನು: ನೀವು ತಪ್ಪು ಮಾಡಿದಿರಿ. ನಮ್ಮ ಪರಂಪರೆಯಲ್ಲಿ ಕೊಡುವವನೇ ತೆಗೆದುಕೊಳ್ಳುವವನಿಗೆ ಋಣಿಯಾಗಿರಬೇಕೆಂದು ನಡೆದುಬಂದಿದೆ.

ನಿಕ್ಸನ್: ನೀವು ನಡೆದುಕೊಂಡ ರೀತಿ ನೋಡಿದರೆ ಹಾಗೆ ತೋರುತ್ತದೆ.

ನಾನು: ಆದರೂ ಪೂರ್ವ ಬಂಗಾಲದಲ್ಲಿ ಸಾವಿರಗಟ್ಟಲೆ, ಲಕ್ಷಗಟ್ಟಲೆ ಜನರನ್ನು, ಮಕ್ಕಳನ್ನು, ಹೆಂಗಸರನ್ನು ಕೊಲೆ ಮಾಡಲಾಗುತ್ತಿದೆಯೆಂದು ನಿಮಗೆ ನಿಮ್ಮ ಸಿ.ಐ.ಎ.ಯವರಾದರೂ ವರದಿ ಮಾಡಲಿಲ್ಲವೇ ? ಹೀಗಿದ್ದೂ ನೀವು ಪಾಕಿಸ್ತಾನಕ್ಕೆ ಇನ್ನೂ ಶಸ್ತ್ರಾಸ್ತ್ರ ಕೊಟ್ಟದ್ದು ಅಮಾನುಷವಲ್ಲವೆ ?

ನಿಕ್ಸನ್: ಯು ಸೀ, ಅಂತಾರಾಷ್ಟ್ರೀಯ ಆಟದಲ್ಲಿ ಜನರ ಸಾವು ನೋವಿನಿಂದ ಅಂಜಿಕೊಳ್ಳುವವರಿಗೆ ಸೋಲು ಕಟ್ಟಿಟ್ಟದ್ದು. ಹೇಳಿಕೇಳಿ ಪಾಕಿಸ್ತಾನದವರು ತಮ್ಮ ಜನರನ್ನು ಕೊಲ್ಲುತ್ತಿದ್ದರು. ಅಲ್ಲದೆ ನಿಮ್ಮ ಉಪಖಂಡದಲ್ಲಿ ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿದೆ. ಕೆಲ ಲಕ್ಷ ಜನ ಕಡಿಮೆಯಾಗಿದ್ದರೆ ಏನೂ ಅಂತರವಾಗುತ್ತಿರಲಿಲ್ಲ. ಮಿತ್ರರನ್ನು ಉಳಿಸಿಕೊಳ್ಳಬೇಕಾದರೆ ಅವರ ಪಾಪಗಳತ್ತ ನಾವು ಕಣ್ಣು ಮುಚ್ಚಿಕೊಳ್ಳಬೇಕಾಗುತ್ತದೆ. ನಾವು ಅವರಿಗೆ ಸಹಾಯ ಮಾಡಿರದಿದ್ದರೆ ಅವರು ಚೀನದ ಹತ್ತಿರ ಹೋಗುತ್ತಿದ್ದರು. ಆಗ ಭಾರತ ಉಪಖಂಡದಲ್ಲಿ ನಮಗೆ ಕಾಲಿಡಲು ನೆಲೆ ಉಳಿಯುತ್ತಿರಲಿಲ್ಲ. ಬಂಗಾಲಿಗಳನ್ನು ಬಲಿಗೊಟ್ಟಾದರೂ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕೆಂದು ನಾವು ನಿರ್ಧರಿಸಿದೆವು.

ನಾನು: ಪಾಕಿಸ್ತಾನವೇ ನಮ್ಮ ಮೇಲೆ ಯುದ್ಧ ಸಾರಿದರೂ ನಾವೇ ಆಕ್ರಮಣಕಾರರೆಂದು ನೀವು ಹೇಗೆ ಹೇಳಿದಿರಿ ? ನಿಮ್ಮ ಸಿ.ಐ.ಎ. ಏನು ವರದಿ ಮಾಡಿತ್ತು ? ದಿಲ್ಲಿಯಲ್ಲಿರುವ ನಿಮ್ಮ ರಾಯಭಾರಿ ಕೀಟಿಂಗರು ಏನು ವರದಿ ಮಾಡಿದ್ದರು ?

ನಿಕ್ಸನ್: ಸಿ. ಐ. ಎ. ನನಗೇನು ಬೇಕೋ ಅದನ್ನೇ ವರದಿ ಮಾಡುತ್ತದೆ. ಕೀಟಿಂಗ್ ರಾಯಭಾರಿ ಮಾಡಬೇಕಾದ ಕೆಲಸವನ್ನೇ ಮಾಡಿದ. ರಾಯಭಾರಿಗಳನ್ನು ಕಳಿಸುವಾಗ ನಾವು ಆಯಾ ದೇಶದ ಮೇಲೆ ಮೆಚ್ಚಿಕೆ ಇರುವವರನ್ನೇ ಕಳಿಸುತ್ತೇವೆ. ಅದು ವ್ಯವಹಾರ. ನಾವು ನಮ್ಮ ನಿರ್ಣಯಗಳನ್ನು ರಾಯಭಾರಿ ವರದಿಗಳ ಆಧಾರದಿಂದ ಮಾಡುವುದಿಲ್ಲ. ರಾಯಭಾರಿ

ಗಳು ತಾವಿರುವ ದೇಶದಲ್ಲಿ ನಮ್ಮ ಹಿತಕ್ಕಾಗಿ ಸುಳ್ಳು ಹೇಳುವುದಕ್ಕೆ ಇರುತ್ತಾರೆಂದು ನಿನಗೆ ಗೊತ್ತಿಲ್ಲವೆ? ನಾವು ಯಾರನ್ನಾದರೂ ಕೊಲ್ಲುವುದಕ್ಕೆ ನಿರ್ಧರಿಸಿದ್ದರೆ ಅವರಿಗೆ ನಾವು ಅತ್ಯಂತ ಹಿತೈಷಿಗಳು ಎಂದು ಭ್ರಾಂತಿ ಹುಟ್ಟಿಸಲು ರಾಯಭಾರಿಗಳನ್ನು ಇಡಲಾಗುತ್ತದೆ. ರಾಯಭಾರಿಗಳಿಗೆ ನಾವು ಸತ್ಯವನ್ನು ತಿಳಿಸುವುದೂ ಇಲ್ಲ. ಎಲ್ಲಾ ರಾಯಭಾರಿಗಳು ಸಂಕೋಚವಿಲ್ಲದೆ ಸುಳ್ಳು ಹೇಳುವಷ್ಟು ಪ್ರವೀಣರಾಗಿರುವುದಿಲ್ಲ.

ನಾನು: ಮಿಸ್ಟರ್ ಪ್ರೆಸಿಡೆಂಟ್, ಆದರೂ ಭಾರತದ ಮೇಲೆ ನಿಮ್ಮ ಅತಿಯಾದ ರೋಷದ ಅರ್ಥ ನನಗಾಗಲಿಲ್ಲ

ನಿಕ್ಸನ್: ನಿನಗೆ ಅರ್ಥವಾಗದ್ದು ಇನ್ನೂ ಬಹಳ ಇದೆ. ನೋಡು, ಚೀನದ ಸಂಗಡ ಇದ್ದ ನಮ್ಮ ಇಪ್ಪತ್ತೆರಡು ವರ್ಷಗಳ ಜಗಳವನ್ನು ಮರ್ಯಾದೆಯಾಗಿ ರಾಜಿ ಮಾಡುವುದಕ್ಕೆ ಪಾಕಿಸ್ತಾನ ಸಹಾಯ ಮಾಡುತ್ತಿದ್ದಾಗಲೇ ನೀವು ಈ ಹೊಸ ರಗಳೆಯನ್ನು ಎತ್ತಿದಿರಿ. ನನಗೆ ಸಿಟ್ಟು ಬರಬಾರದೇಕೆ?

ನಾನು: ಆದರೆ ಚೀನ ಸ್ವತಂತ್ರಜಗತ್ತಿಗೆ ಅತಿ ದೊಡ್ಡ ಗಂಡಾಂತರವೆಂದು ಹೇಳುತ್ತಿದ್ದವರು ನೀವು. ಚೀನದೊಡನೆ ರಾಜಿಯಾಗಿರಿ ಎಂದು ನಾವು ಹೇಳಿದಾಗ ನೀವು ನಮ್ಮನ್ನು ಕಮ್ಯುನಿಸ್ಟರ ಕೈವಾರಿಗಳೆಂದು ಹೇಳಿ ಪಾಕಿಸ್ತಾನವನ್ನು ನಮಗೆ ಎದುರಾಗಿ ಎಬ್ಬಿಸಿ ನಿಲ್ಲಿಸಿದಿರಿ. ಈಗ ಅದೇ ಚೀನದ ಸಂಗಡ ನೀವು ರಾಜಿ ಮಾಡಿಕೊಳ್ಳಬೇಕೆಂದಿರುವಾಗ ನಾವು ಅಡ್ಡ ಬಂದೆವೆಂದು ಸುಳ್ಳೇ ಸಿಟ್ಟಾಗುತ್ತೀರಿ.

ನಿಕ್ಸನ್: ನೀನು ತಿದ್ದಲಾರದ ಮೂರ್ಖನಾಗಿದ್ದಿ. ಪ್ರಬಲರಿಗೆ ಕೆಲವು ಹೆಚ್ಚಿನ ಜವಾಬ್ದಾರಿಗಳೂ ಹಕ್ಕುಗಳೂ ಇವೆಯೆಂದು ನಿನಗೆ ಅರ್ಥವಾಗುವುದಿಲ್ಲ. ಕಡಿಮೆಯವರು ಅವರಲ್ಲಿ ತಪ್ಪು ಹುಡುಕಿದರೆ ಫಲವಿಲ್ಲವೆಂದು ನಿನಗೆ ತಿಳಿಯುವುದಿಲ್ಲ. ದೊಡ್ಡವರಿಗೆ ದೊಡ್ಡ ತಪ್ಪುಗಳನ್ನು ಮಾಡುವ ಹಕ್ಕು ಉಂಟೆಂದೂ ನಿನಗೆ ತಿಳಿಯುವುದಿಲ್ಲ. ಹಣವೂ ಆಯುಧಗಳೂ ಯಾವ ವಾದಕ್ಕಿಂತಲೂ ಶ್ರೇಷ್ಠವಾದ ತರ್ಕವೆಂದೂ ನಿನಗೆ ತಿಳಿಯುವುದಿಲ್ಲ. ನಿನ್ನ ಇಂದಿರಾಗೂ ಇದು ತಿಳಿಯುವುದಿಲ್ಲ. ಆದರೆ ಇದು ನಿಮಗಿಂತ ರಶಿಯದ ಕೊಸೈಜಿನ್ನನಿಗೂ ಚೀನದ ಮಾವೊಗೂ ಹೆಚ್ಚು ಚೆನ್ನಾಗಿ ಅರ್ಥವಾಗುತ್ತದೆಂದು ನಾನು ಆಶಿಸುತ್ತೇನೆ. ನಿನ್ನಂಥ ಮಡ್ಡಿಯ ಹತ್ತಿರ ಮಾತಾಡಲು

ನನಗಿನ್ನು ಪುರಸೊತ್ತಿಲ್ಲ. ಗುಡ್‌ನೈಟ್ !

ಇಷ್ಟು ಹೇಳಿ ನಿಕ್ಸನ್ನರು ನನಗೆ ಬಾಗಿಲು ತೋರಿಸಿದರು. (೧೯೭೨)

## ಗಾಂಧೀಜಿ ಬದುಕಿದ್ದಾರೆ!

೧೯೪೮ ಜನವರಿ ೩೦ರಂದು ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರು ಸತ್ತರು ಎಂಬುದಾಗಿ ಜಗತ್ತು ನಂಬುತ್ತದೆ. ಅಂದು ದಿಲ್ಲಿಯ ಬಿರ್ಲಾಭವನದ ಪ್ರಾಂಗಣದಲ್ಲಿ ನಾಥುರಾಮ ಗೋಡಸೆ ಎನ್ನುವ ಮಹಾರಾಷ್ಟ್ರೀಯ ಹಿಂದೂ ಉಗ್ರಪಂಥೀಯನು ಅವರ ಎದೆಗೆ ಗುಂಡು ಹಾಕಿ ಅವರನ್ನು ಹತ್ಯೆ ಮಾಡಿದನು ಎಂದೂ ನಾವು ಕೇಳುತ್ತೇವೆ. ಮರುದಿನ ಸಂಜೆ ದಿಲ್ಲಿಯಲ್ಲಿ ಅವರ ಕಳೇವರವನ್ನು ರಾಜಘಾಟ ಎಂಬ ಪ್ರದೇಶದಲ್ಲಿ ಅಗ್ನಿಗೆ ಆಹುತಿ ಮಾಡಿದರು ಇತ್ಯಾದಿಯಾಗಿಯೂ ಹೇಳಲಾಗುತ್ತದೆ. ಮತ್ತು ಜಿ. ಡಿ. ಖೋಸಲಾ ಎಂಬ ನ್ಯಾಯಾಧೀಶರ ಮುಂದೆ ಗಾಂಧೀವಧೆಯ ಪಿತೂರಿಯಲ್ಲಿ ಸೇರಿದವರು ಎನ್ನಲಾದ ಜನರ ವಿಚಾರಣೆ ನಡೆದು ಗೋಡಸೆ ಮತ್ತು ಆಪಟೆ ಎಂಬಿಬ್ಬರಿಗೆ ಗಲ್ಲಿನ ಶಿಕ್ಷೆಯೂ ಆಯಿತು.

ನಾನು ಮಹಾತ್ಮಾ ಗಾಂಧಿಯವರ ಭಕ್ತ. ನಾನು ಖಾದಿ ಧರಿಸುವುದಿಲ್ಲ. ಎಂದೂ ನೂಲು ತೆಗೆಯಲಿಲ್ಲ. ಸತ್ಯ ಹೇಳಿಲ್ಲ. ಇದಾವುದೂ ನನ್ನನ್ನು ಗಾಂಧೀಭಕ್ತತ್ವದಿಂದ ಚ್ಯುತ ಮಾಡಲಾರವು. ಭಕ್ತರು ತಮ್ಮ ಭಕ್ತಿಪಾತ್ರರ ಉಪದೇಶಗಳನ್ನು ಅನುಸರಿಸಬೇಕೆಂಬ ನಿಯಮವಿದ್ದಿದ್ದರೆ ರಾಮ, ಕೃಷ್ಣ, ಬುದ್ಧ, ಕ್ರಿಸ್ತ, ಬಸವ ಇವರು ಯಾರಿಗೂ ಇಂದು ಯಾರೂ ಭಕ್ತರಾಗಿರಲು ಸಾಧ್ಯವಿದ್ದಿಲ್ಲ.

ಗಾಂಧೀಭಕ್ತರಲ್ಲಿ ಅಗ್ರಗಣ್ಯನಾದ ನಾನು ಮಹಾತ್ಮಾ ಗಾಂಧಿಯವರು ೧೯೪೮ ಜನವರಿ ೩೦ರಂದು ಸಂಜೆ ಕೊಲ್ಲಲ್ಪಡಲಿಲ್ಲ ಮತ್ತು ಅವರು ಇಂದಿಗೂ ಜೀವಂತವಿದ್ದಾರೆ ಎಂದು ಖಚಿತವಾಗಿ ನಂಬುತ್ತೇನೆ

ನನ್ನ ಈ ನಂಬಿಕೆಗೆ ಸಾಕಷ್ಟು ಆಧಾರಗಳಿವೆ. ಮಹಾತ್ಮಾ ಗಾಂಧಿಯವರು ಅವತಾರಪುರುಷರಾಗಿದ್ದರು. ಅವರು ಯಾವಾಗಲೂ ತಮಗೆ ನೂರಿಪ್ಪತ್ತೈದು ವರ್ಷ ಬದುಕುವ ಇಚ್ಛೆ ಇದೆಯೆಂದು ಹೇಳುತ್ತಿದ್ದರು. ನೂರಿಪ್ಪತ್ತೈದು

ವರ್ಷ ಬದುಕಬೇಕೆಂದು ಬಯಸಿದ ಮಹಾತ್ಮಾ ಗಾಂಧಿಯವರನ್ನು ಎಂಥ ಗುಂಡು ಕೂಡ ಕೊಲ್ಲುವುದು ಸಾಧ್ಯವಿರಲಿಲ್ಲ.

ಮಹಾತ್ಮಾ ಗಾಂಧಿಯವರನ್ನು ಕೊಲ್ಲುವ ಒಂದು ಒಳಸಂಚು ನಡೆಯುತ್ತಿದೆಯೆಂದು ಮುಂಬಯಿಯ ಪ್ರೊಫೆಸರ್ ಜೈನರೆಂಬುವರು ಮುರಾರಜಿ ದೇಸಾಯಿಯವರಿಗೆ ಮೊದಲೇ ತಿಳಿಸಿದ್ದಾಗಿ ಹೇಳಿದ್ದಾರೆ. ಮುರಾರಜಿಯವರು ಕೇಂದ್ರದಲ್ಲಿ ಗೃಹಮಂತ್ರಿಗಳಾಗಿದ್ದ ಮತ್ತು ಮಹಾತ್ಮಾ ಗಾಂಧಿಯವರ ಭಕ್ತರಾಗಿದ್ದ ಸರದಾರ ವಲ್ಲಭಭಾಯಿ ಪಟೇಲರಿಗೆ ಅದನ್ನು ತಿಳಿಸಿರಲೇಬೇಕು. ಸರದಾರ ಪಟೇಲರಿಗೆ ಮಹಾತ್ಮಾ ಗಾಂಧಿಯವರ ವಿರುದ್ಧ ನಡೆದ ಒಳಸಂಚನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲವೆನ್ನುವುದು ವಿಶ್ವಾಸಾರ್ಹವಲ್ಲ. ಅವರು ಮಹಾತ್ಮರ ಕೊಲೆಯಾಗಲು ಬೇಕೆಂದೇ ಬಿಟ್ಟರೆಂದು ನಂಬುವುದಂತೂ ಸಾಧ್ಯವೇ ಇಲ್ಲ.

ಜನವರಿ ೩೦ರಂದು ಸಂಜೆ ಪ್ರಾರ್ಥನಾ ಸಭೆಗೆ ಮಹಾತ್ಮರು ಸ್ವಲ್ಪ ತಡವಾಗಿ ಹೊರಟರೆಂದು ತಿಳಿದುಬರುತ್ತದೆ. ಎಂದೂ ಯಾವ ಕೆಲಸವನ್ನೂ ತಡವಾಗಿ ಮಾಡದ ಮಹಾತ್ಮರು ಪವಿತ್ರವಾದ ಪ್ರಾರ್ಥನೆಗೆ ತಡಮಾಡಿ ಹೊರಟರೆಂದು ನಾನು ಒಪ್ಪಲಾರೆ.

ಈ ಮತ್ತು ಇನ್ನೂ ಅನೇಕ ಕಾರಣಗಳಿಂದ ಮಹಾತ್ಮಾ ಗಾಂಧಿಯವರ ಕೊಲೆ ಆಗಿರಲಾರದೆಂಬ ದೃಢವಾದ ವಿಶ್ವಾಸ ನನಗೆ ಉಂಟಾಗಿದೆ.

ಆದರೆ ೧೯೪೮ರ ಜನವರಿ ೩೦ರಂದು ಬಿರ್ಲಾಭವನದ ಪ್ರಾಂಗಣದಲ್ಲಿ ನಾಥೂರಾಮಗೋಡಸೆಯ ಗುಂಡಿಗೆ ಗಾಂಧೀಜಿ ಬಲಿಯಾದದ್ದನ್ನು ಸಾವಿರಾರು ಜನರು ಕಂಡಿದ್ದಾರೆ. ಮರುದಿನ ಮಧ್ಯಾಹ್ನದ ವರೆಗೆ ಅವರ ಶವವನ್ನು ಸಾರ್ವಜನಿಕರ ದರ್ಶನಕ್ಕೆ ತೆರೆದಿಡಲಾಗಿತ್ತು. ಅದೇ ಸಂಜೆ ಅವರನ್ನು ರಾಜಘಾಟಿನಲ್ಲಿ ಸುಟ್ಟದ್ದನ್ನು ಲಕ್ಷಾಂತರ ಜನರು ನೋಡಿದರು. ಅವರ ಶಿಷ್ಯರಾದ ಅನೇಕ ನಾಯಕರು ಅವರ ಮರಣಕ್ಕೆ ಸಾಕ್ಷಿಯಾಗಿದ್ದಾರೆ. ಇದಕ್ಕೆಲ್ಲ ಏನು ಪರಿಹಾರ ಹೇಳುತ್ತೀರಿ ಲಾಂಗೂಲಾಚಾರ್ಯರೇ? ಎಂದು ನೀವು ಕೇಳುತ್ತೀರಿ.

ನನಗೆ ಗೊತ್ತು. ಅಲ್ಲೇ ಇರುವುದು ರಹಸ್ಯ. ನಾನು ಹೇಳುತ್ತೇನೆ. ಆ ದಿವಸ ಕೊಲೆಯಾದವರು ಮಹಾತ್ಮಾ ಗಾಂಧಿಯವರಲ್ಲ. ಅವರಂತೆಯೇ ಕಾಣುವ ಬೇರೊಬ್ಬ ಮುದುಕರು.

ನನ್ನ ಈ ಊಹೆಗೆ ಬೆಂಬಲವಾಗಿ ನಾನು ಮಹಾತ್ಮಾ ಕೊಲೆ ಮೊಕದ್ದಮೆಯ ವಿಚಾರಣೆ ಮಾಡಿದ ಜಿ. ಡಿ. ಖೋಸಲಾ ಅವರು ಬರೆದ ಲೇಖನದ ಒಂದು ವಾಕ್ಯವನ್ನು ಉದಾಹರಿಸುತ್ತೇನೆ. ೧೯೪೮ ಜನವರಿ ೩೦ರ ಅಂದರೆ ಗಾಂಧೀವಧೆಯಾಯಿತೆಂದು ಹೇಳಲಾದ ದಿನ ಮುಂಜಾನೆ ೧೧ಕ್ಕೆ ತಾವು ನಿರಾಶ್ರಿತ ಪುನರ್ವಸತಿಯ ಸಂಬಂಧದಲ್ಲಿ ಮಹಾತ್ಮರ ಸಲಹೆ ಕೇಳಲು ಅವರನ್ನು ಬಿರ್ಲಾಭವನದಲ್ಲಿ ಕಂಡದ್ದಾಗಿ ಖೋಸಲಾ ಹೇಳುತ್ತಾರೆ. ಮಹಾತ್ಮರು "ತೆಳ್ಳಗಾಗಿದ್ದರು ಆದರೆ ಸೊರಗಿರಲಿಲ್ಲ" ಎಂದು ಖೋಸಲಾ ಬರೆಯುತ್ತಾರೆ."* ಮಹಾತ್ಮಾ ಗಾಂಧಿಯವರು ಅದೇ ಕೆಲ ದಿನಗಳ ಹಿಂದೆ ದೀರ್ಘ ಉಪವಾಸ ಮಾಡಿದ್ದರೆಂದು ಇಲ್ಲಿ ನಾವು ನೆನೆಯಬೇಕಾಗಿದೆ. ಮಹಾತ್ಮರು ತೆಳ್ಳಗಾಗಿದ್ದರು ಎನ್ನುವ ಖೋಸಲಾ ಮಾತಿಗೆ ಹೆಚ್ಚಿನ ಮಹತ್ತ್ವ ಕೊಡಬೇಕಾಗಿಲ್ಲ. ಮಹಾತ್ಮರು ಎಂದೂ ದಪ್ಪನಾಗಿರಲೇ ಇಲ್ಲ. "ಸೊರಗಿರಲಿಲ್ಲ" ಎನ್ನುವುದು ಇಲ್ಲಿ ಮಹತ್ತ್ವದ್ದು. ಅಷ್ಟು ದಿನದ ಉಪವಾಸದ ನಂತರವೂ ಅವರು ಸೊರಗಿರಲಿಲ್ಲವೆ? ಆದ್ದರಿಂದ ಖೋಸಲಾ ಅವರು ಆ ದಿನ ಮುಂಜಾನೆ ಕಂಡ ವ್ಯಕ್ತಿ ನಿಜವಾದ ಮಹಾತ್ಮರಾಗಿರಲಿಲ್ಲ. ಯಾರೋ "ಡಬಲ್" ವ್ಯಕ್ತಿಯನ್ನು ಅಲ್ಲಿ ತಂದು ಕೂರಿಸಲಾಗಿತ್ತು. ನಾಥೂರಾಮ ಗೋಡಸೆ, ಅವನನ್ನೇ ಪಾಪ ಕೊಲೆ ಮಾಡಿದನೆಂದು ನನಗೆ ಖಂಡಿತವಾಗಿದೆ.

ಮಹಾತ್ಮಾ ಗಾಂಧಿಯವರ ಕೊಲೆಯ ಸಂಬಂಧದಲ್ಲಿ ಭಾರಿ ಒಳಸಂಚೊಂದು ನಡೆದಿರಬೇಕೆಂದು ನನಗೆ ತೋರುತ್ತದೆ. ಈ ಒಳಸಂಚಿನ ಮೂಲಪುರುಷ ನಾಥೂರಾಮ ಗೋಡಸೆಯಾಗಿರಲಿಲ್ಲ. ಆ ಪಿತೂರಿಯಲ್ಲಿ ಅವನು ಒಂದು ಗೊಣಸು ಮಾತ್ರ ಆಗಿದ್ದನು. ಮಹಾತ್ಮಾ ಗಾಂಧಿಯವರ ಕೊಲೆ ಆಯಿತೆಂದು ಜಗತ್ತನ್ನು ನಂಬಿಸುವ ಅಗತ್ಯ ಕೆಲ ಪ್ರಭಾವಶಾಲಿ ವರ್ಗಗಳಿಗೆ ತೀವ್ರವಾಗಿ ಅನಿಸಿತ್ತೆಂದು ನನಗೆ ತೋರುತ್ತದೆ.

ಆ ವರ್ಗಗಳು ಯಾರಿರಬಹುದು? ಇದರ ವಿಷಯದಲ್ಲಿ ಅನೇಕ ಥಿಯರಿಗಳನ್ನು ಕಟ್ಟಬಹುದು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಅಮೆರಿಕದ ಸಿ. ಐ. ಎ.ಯ ಸಹಾಯದಿಂದ ಮಹಾತ್ಮಾ ಗಾಂಧಿಯವರನ್ನು ಕಣ್ಮರೆ ಮಾಡಿಟ್ಟು ಕೊಲೆಯ ನಾಟಕವನ್ನು ಹೂಡಿರಲಿಕ್ಕೆ ಸಾಧ್ಯವಿದೆ. ಮಹಾತ್ಮಾ

* ನೋಡಿ: *The Murder of the Mahatma* by G. D. Khosla

ಗಾಂಧಿಯವರು ಇನ್ನೂ ಕೆಲಕಾಲ ರಾಜಕೀಯ ರಂಗದಲ್ಲಿ ಉಳಿದರೆ ಅವರು ಹಿಂದೂ ಮುಸ್ಲಿಂ ಐಕ್ಯವನ್ನು ಸಾಧಿಸಿಬಿಡಬಹುದು. ಆಮೇಲೆ ತಮಗೆ ಇಲ್ಲಿ ಚುಂಚು ಪ್ರವೇಶ ಮಾಡಲು ಆಸ್ಪದ ಸಿಗಲಾರದೆಂಬ ಭೀತಿ ಅವರಿಗಿದ್ದುದು ಸಹಜವೇ. ಹಿಂದೂ ಮುಸ್ಲಿಂ ಐಕ್ಯವಷ್ಟೇ ಅಲ್ಲ, ಭಾರತ ಪಾಕಿಸ್ತಾನ ಸ್ನೇಹವನ್ನು ಕೂಡ ಅವರು ಸಾಧಿಸಿಬಿಡುವ ಭಯ ಇತ್ತು. ಹಾಗಾದರೆ ಪಾಕಿಸ್ತಾನದ ಜನತೆ ಭಾರತದಲ್ಲಿ ಪುನಃ ಸೇರಿಕೊಳ್ಳಲು ಇಷ್ಟಪಡಬಹುದೆಂದು ಮೇಲೆ ಹೇಳಿದ ಸಾಮ್ರಾಜ್ಯಶಾಹಿಗಳಲ್ಲದೆ ಪಾಕಿಸ್ತಾನದ ಪ್ರತಿಗಾಮಿ ಮುಂದಾಳುಗಳೂ ಗಾಬರಿಬಿದ್ದಿರಬಹುದಾದ್ದರಿಂದ ಈ ಒಳಸಂಚಿಗೆ ಪಾಕಿಸ್ತಾನ ಸೂತ್ರಧಾರನಾಗಿರುವುದು ಅಸಂಭವವಲ್ಲ. ಮಹಾತ್ಮಾ ಗಾಂಧಿಯವರು ಪೂರ್ವಪಾಕಿಸ್ತಾನದ ನೌಖಾಲಿ ಮತ್ತು ತಿಪ್ಪೇರಾ ಜಿಲ್ಲೆಗಳಲ್ಲಿ ಸಂಚರಿಸಿ ಅಲ್ಲಿನ ಹಿಂದೂ ಮುಸ್ಲಿಂ ದ್ವೇಷವನ್ನು ಶಾಂತಗೊಳಿಸಿದ್ದನ್ನು ಪಾಕಿಸ್ತಾನ ನಿರ್ವಿಕಾರವಾಗಿ ನೋಡಿರಲಾರದು. ಮೂರನೆಯದಾಗಿ ಭಾರತದ ನಾಯಕವರ್ಗವೇ ಈ ಭಾರಿ ಕಪಟ ನಾಟಕವನ್ನು ಏರ್ಪಡಿಸಿರಬಹುದಾಗಿದೆ. ಕಾಂಗ್ರೆಸ್ಸನ್ನು ವಿಸರ್ಜಿಸಬೇಕೆಂದು ಗಾಂಧೀಜಿ ಹೇಳತೊಡಗಿದ್ದರು. ನಮ್ಮ ನಾಯಕರನ್ನು ಅವರು ಟೀಕಿಸಲಾರಂಭಿಸಿದ್ದರು. ಇದರಿಂದೆಲ್ಲ ನಮ್ಮ ನಾಯಕರು ಕೆರಳಿದ್ದರೆಂಬುದಕ್ಕೆ ಅನೇಕ ಪ್ರಮಾಣಗಳು ಹುಡುಕಿದರೆ ಸಿಗುತ್ತವೆ. ಒಂದು ವೇಳೆ ಪಾಕಿಸ್ತಾನ ಮತ್ತೆ ಹಿಂದುಸ್ತಾನದಲ್ಲಿ ಸೇರಿದರೆ ಮಹಾತ್ಮಾ ಗಾಂಧಿಯವರು ಜಿನ್ನಾ ಸಾಹೇಬರನ್ನು ಪ್ರಧಾನಮಂತ್ರಿಯಾಗಿಯೂ ಫಜಲುಲ್ ಹಕ್ಕರನ್ನು ಉಪಪ್ರಧಾನಿಯಾಗಿಯೂ ಮಾಡಬಹುದಾಗಿತ್ತು. ಕಮ್ಯುನಿಸ್ಟ್ ಮತ್ತು ಅವರ ಸಹಯಾತ್ರಿಕರೂ ಬಂಡವಾಳಶಾಹಿಗಳೂ ಇಂಥ ಪ್ರಸಂಗವನ್ನು ಸ್ವಾಗತಿಸುವುದು ಸಾಧ್ಯವಿರಲಿಲ್ಲ.

ನನ್ನ ಅಭಿಪ್ರಾಯದಲ್ಲಿ ಮಹಾತ್ಮಾ ಗಾಂಧಿಯವರ ಕೊಲೆ ಆಗಿಲ್ಲ. ಅವರನ್ನು ಎಲ್ಲಿಯೋ ಬಚ್ಚಿಡಲಾಗಿದೆ. ಅವರು ಇನ್ನೂ ಬದುಕಿದ್ದಾರೆ. ನನ್ನ ಒಬ್ಬ ಮಿತ್ರರು ಬದರೀಯಾತ್ರೆಗೆ ಹೋದಾಗ ಅಲ್ಲಿ ಒಂದು ಆಶ್ರಮದಲ್ಲಿ ಮಹಾತ್ಮರನ್ನೇ ಹೋಲುವ ಒಬ್ಬ ಸಾಧು ಇದ್ದುದನ್ನು ಕಂಡದ್ದಾಗಿ ಹೇಳಿದ್ದಾರೆ. ಬಂಗ್ಲಾದೇಶದ ಯುದ್ಧದಲ್ಲಿ ಭಾಗವಹಿಸಿದ ಇನ್ನೊಬ್ಬ ಮಿತ್ರರು ನೌಖಾಲಿ ಬಳಿ ಒಂದೆಡೆ ಮಹಾತ್ಮರಂಥ ವ್ಯಕ್ತಿಯನ್ನು ನೋಡಿದ್ದಾರಂತೆ.

ಅಮೆರಿಕದ ಒಂದು ಅರಣ್ಯದಲ್ಲಿ ಅಂಥವರೊಬ್ಬರನ್ನು ಇನ್ನೊಬ್ಬ ಕಂಡದ್ದಾಗಿ ತಿಳಿಯುತ್ತದೆ.

ಅಂತೂ ಜನವರಿ ३೦, ೧೯४८ರಂದು ಸಂಜೆ ಕೊಲೆಯಾದವರು ಮಹಾತ್ಮರಲ್ಲ. ಈ ರಹಸ್ಯವನ್ನು ಬಯಲಿಗೆಳೆಯಲು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರೊಬ್ಬರನ್ನು ನೇಮಿಸಲು ಪ್ರಯತ್ನಿಸಬೇಕು. ನೇತಾಜಿ ಸುಭಾಷಬೋಸರ ಮರಣದ ವಿಷಯ ಶೋಧಿಸಲು ಒಂದಕ್ಕಿಂತ ಹೆಚ್ಚಿಗೆ ಆಯೋಗಗಳನ್ನು ನೇಮಿಸಿದಹಾಗೆ ಮಹಾತ್ಮರ ಬಗ್ಗೆಯೂ ಆಯೋಗವನ್ನು ನೇಮಿಸಬಾರದೇಕೆ? ಹಾಗೆ ಮಾಡಿದರೆ ನನ್ನ ಹತ್ತಿರ ಇರುವ ಅನೇಕ ಪುರಾವೆಗಳನ್ನು ನಾನು ಆ ನ್ಯಾಯಾಧೀಶರ ಮುಂದೆ ಇರಿಸುತ್ತೇನೆ. ಒಂದು ವೇಳೆ ಅವರು ಗಾಂಧೀಜಿ ಸತ್ತಿದ್ದಾರೆಂದೇ ತೀರ್ಮಾನಿಸಿದರೆ ಅದನ್ನು ಧಿಕ್ಕರಿಸುವ ಮತ್ತು ಇನ್ನೊಂದು ಆಯೋಗಕ್ಕಾಗಿ ಚಳವಳಿ ಪ್ರಾರಂಭಿಸುವ ಹಕ್ಕನ್ನು ಮಾತ್ರ ಕಾದಿರಿಸಿಕೊಂಡಿದ್ದೇನೆ.

ಇದರಿಂದ ಏನು ಪ್ರಯೋಜನ ಎಂದು ನೀವು ಕೇಳಿದರೆ ಸತ್ಯಶೋಧನೆ ಎಂದು ನಾನು ಹೇಳುತ್ತೇನೆ. ಅದೂ ಅಲ್ಲದೆ ನಿವೃತ್ತ ನ್ಯಾಯಾಧೀಶರಿಗೆ ಅವಕಾಶಗಳನ್ನು ಕೊಟ್ಟಂತಾಗುತ್ತದೆ. ನಾಥೂರಾಮ ಗೋಡಸೆ ಮತ್ತು ಆಪಟೆಯನ್ನು ನಿಜವಾಗಿ ಗಲ್ಲಿಗೇರಿಸಿಲ್ಲ. ಜನರನ್ನು ನಂಬಿಸುವುದಕ್ಕೆ ಆ ಸೋಗು ಮಾಡಲಾಯಿತೆಂಬುದನ್ನೂ ನ್ಯಾಯಾಧೀಶರು ಶೋಧಿಸಬೇಕು. ನಮ್ಮ ಚಳವಳಿಗಾರರಿಗೂ ನನಗೂ ಅನೇಕ ವರ್ಷಗಳವರೆಗೆ ಒಂದು ಚಳವಳಿ ವಿಷಯವೂ ಆಗುತ್ತದೆ. (೧೯೭४)

## ನನ್ನ ಆಸ್ತಾ್ಮ ಷಷ್ಟ್ಯಬ್ದಿ

ಈ ವರ್ಷ ನಾನು ನನ್ನ ಆಸ್ತ್ಮಾ ಅಥವಾ ಗೂರಲುಬ್ಬಸದ ಅರ್ಧ ಷಷ್ಟ್ಯಬ್ದಿಯನ್ನು ಆಚರಿಸಲು ನಿರ್ಧರಿಸಿದ್ದೇನೆ. ನನಗೆ ಆಸ್ತ್ಮಾ ಪ್ರಾರಂಭವಾಗಿ ಈ ನವಂಬರಿಗೆ ಸರಿಯಾಗಿ ಮೂವತ್ತು ವರ್ಷಗಳು ತುಂಬುತ್ತಿವೆ. ಈ ಸಂದರ್ಭದಲ್ಲಿ ನಾನು ಈ ಮೂವತ್ತು ವರ್ಷಗಳಲ್ಲಿ ನುಂಗಿದ, ಮೂಸಿದ ಮತ್ತು ಚುಚ್ಚಿಸಿಕೊಂಡ ಹೋಮಿಯೋಪಥಿ, ಅಲ್ಲೋಪಥಿ, ಆಯುರ್‌ಪಥಿ

ಮೊದಲಾದ ಪಥಿಗಳ ಒಟ್ಟು ೩೭ ಬಗೆಯ ಔಷಧಗಳ ಒಂದು ಪ್ರದರ್ಶನವನ್ನು ಏರ್ಪಡಿಸಬೇಕೆಂದಿದ್ದೇನೆ; ಮತ್ತು ಆಸ್ತ್ಮಾಕ್ಕೆ ನಾನು ಪ್ರಯೋಗಿಸಬೇಕಾದ ರಾಮಬಾಣೋಪಾಯಗಳಾವುವೆಂಬ ಬಗ್ಗೆ ನನಗೆ ವಿವಿಧ ಮಿತ್ರರಿಂದ ಬಂದ ಉಪದೇಶಗಳ ಸಂಗ್ರಹವನ್ನು ಪ್ರಕಟಿಸಬೇಕೆಂದಿದ್ದೇನೆ. ಈ ಉಪಾಯಗಳು ದೀರ್ಘ ಶ್ವಾಸ ಬಿಡುವುದರಿಂದ ಬೀಡಿ ಸೇದುವವರೆಗೆ, ಮಂತ್ರ ಹಾಕಿಸಿಕೊಳ್ಳುವುದರಿಂದ ಮೀನು ನುಂಗುವುದರ ವರೆಗೆ ಬಹುಮುಖವಾಗಿವೆ. ಇದೇ ಸಂದರ್ಭದಲ್ಲಿ ನಾನು ಆಸ್ತ್ಮಾಕ್ಕಾಗಿ ಮಧ್ಯರಾತ್ರಿಯಲ್ಲಿ ಕರೆಸಿದ ಒಟ್ಟು ೨೭ ಡಾಕ್ಟರರಿಗೊಂದು ಪಾರ್ಟಿಯನ್ನೂ ಕೊಡಬೇಕೆಂದಿದ್ದೇನೆ.

ನನ್ನ ಯೋಜನೆಯನ್ನು ಕೇಳಿ ನನ್ನ ಹೆಂಡತಿ ಸ್ವಲ್ಪ ಸೆಟೆದುಕೊಂಡಳು. "ನನ್ನನ್ನು ಮದುವೆಯಾಗಿ ಮೂವತ್ತೈದು ವರ್ಷಗಳಾದರೂ ನೀವು ಯಾವ ಸಮಾರಂಭವನ್ನೂ ಮಾಡಲಿಲ್ಲ. ಈಗ ಆಸ್ತ್ಮಾಕ್ಕೆ ಅರ್ಧಷಷ್ಟ್ಯಬ್ದಿ ಮಾಡಬೇಕೆನ್ನುತ್ತೀರಿ! ನನಗಿಂತ ಗೂರಲೇ ಮೇಲಾಗಿ ಹೋಯಿತು ನಿಮಗೆ!" ಎಂದು ದೂರಿಕೊಂಡಳು.

"ಪ್ರಿಯೇ! ಸ್ವಲ್ಪ ನ್ಯಾಯನ್ಯಾಯ ನೋಡು. ನಿನ್ನನ್ನು ಹೊರಗೆ ಹಾಕಲು ನಾನು ಎಂದೂ ಪ್ರಯತ್ನಿಸಿಲ್ಲ. ಆದರೆ ಈ ಆಸ್ತ್ಮಾ ನೋಡು. ನಾನು ಎಂಥೆಂಥ ಪ್ರಯೋಗಗಳನ್ನು ಮಾಡಿದರೂ ನನ್ನನ್ನು ಬಿಡದೆ ಈ ವಯಸ್ಸಿನಲ್ಲಿಯೂ ನನ್ನನ್ನು ಸೇವಿಸುತ್ತಿದ್ದಾಳೆ. ನಿಮ್ಮಿಬ್ಬರಲ್ಲಿ ಯಾರ ಪಾತಿವ್ರತ್ಯ ಹೆಚ್ಚು, ನೀನೇ ಹೇಳು. ಸವತಿ ಮತ್ಸರ ಬೇಡ" ಎಂದು ಸಬೂಬು ಹೇಳಿದೆ. ಇದಕ್ಕೆ ಅವಳ ಹೆಣ್ಣು ಬತ್ತಳಿಕೆಯಲ್ಲಿಯೂ ಯಾವ ಪ್ರತ್ಯಸ್ತ್ರ ಇರಲಿಲ್ಲ.

ಪ್ರಥಮ ಸಲ ನನಗೆ ಆಸ್ತ್ಮಾ ಬಂದದ್ದು ೧೯೪೩ರ ಆಕ್ಟೋಬರ್ ೧೭ರ ರಾತ್ರಿ. ಅಂದಿನಿಂದ ಈ ಒಲಿದು ಬಂದ ನಾರಿ ವರ್ಷಕ್ಕೆ ಎರಡು ಸಲ, ಮೇ-ಜೂನ್ ಮತ್ತು ಆಕ್ಟೋಬರ್-ನವಂಬರಿನಲ್ಲಿ, ತಪ್ಪದೇ ಬಂದು ನನ್ನ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಾ ಇದ್ದಾಳೆ. ಮಳೆ ಬಂದು ಬಿಸಿಲುಕಾದರೆ ಮತ್ತು ಬಿಸಿಲುಕಾದು ಮಳೆ ಬಂದರೆ ಅವಳಿಗೆ ನನ್ನನ್ನು ಸೇರುವ ಹಂಬಲ ತಡೆಯುವುದಾಗುವುದಿಲ್ಲ. ಅವಳು ಬರುವ ದಾರಿಗಳು ಹಲವು. ಅವಳು ಕಸ ಗುಡಿಸುವಾಗಿನ ಧೂಳಿನ ಬೆನ್ನೇರಿ ಬರುತ್ತಾಳೆ. ಹಾಲಿನ ಸಂಗಡ ಬರುತ್ತಾಳೆ, ಬಟಾಟಿ ಪಲ್ಯದಲ್ಲಿ ಹೊಕ್ಕು ಟೊಮ್ಯಾಟೋ ಸಾರಿನಲ್ಲಿ ಈಸುತ್ತ ಬರುತ್ತಾಳೆ.

ಅವಳಿಂದ ತಪ್ಪಿಸಿಕೊಳ್ಳಬೇಕೆಂದು ನಾನು ಇವೆಲ್ಲವನ್ನೂ ವರ್ಜಿಸಿದರೆ ಬೆಳಗಿನ ಜಾವದ ಮಂಜಿನ ಪರದೆಯ ಹಿಂದೆ ಬಂದುಬಿಡುತ್ತಾಳೆ.

ಎಲ್ಲಾ ನಲ್ಲೆಯರ ಹಾಗೆ ನನ್ನ ಆಸ್ತ್ಮಾದೇವಿ ಲಹರಿಯವಳು. ದೀರ್ಘ ಕಾಲದ ಒಡನಾಟದಿಂದ ನಾನು ಅವಳ ಅನೇಕ ಸ್ವಭಾವ ವೈಚಿತ್ರ್ಯಗಳನ್ನು ತಿಳಿದುಕೊಂಡಿದ್ದೇನೆ. ಅವಳ ಬೇಕುಬೇಡಗಳನ್ನು ಅರ್ಥಮಾಡಿಕೊಂಡಿದ್ದೇನೆ. ಉದಾಹರಣೆಗೆ ಮೆಣಸಿನ ಕಾಳೆಂದರೆ ಅವಳಿಗೆ ಭಲೆ ಸಿಟ್ಟು, ಲವಂಗಕ್ಕೆ ಸ್ವಲ್ಪ ಮಣಿಯುತ್ತಾಳೆ. ತಂಪು ಪದಾರ್ಥ ಅವಳನ್ನು ಉದ್ರಿಕ್ತಗೊಳಿಸುತ್ತದೆ ಇತ್ಯಾದಿ. ಆದರೆ ಅವಳ ಚಿತ್ರ ಹೇಳಲುಬಾರದು. ಒಮ್ಮೊಮ್ಮೆ ಒಂದು ಗುಟುಕು ತಣ್ಣೀರು ಕುಡಿದರೆ ಸಾಕು, ಅವಳು ಶೀನುಗಳ ಗರ್ಜನೆಯೊಡನೆ, ಸೋರುವ ಮೂಗಿನ ಪ್ರಳಯಧಾರೆಯೊಡನೆ ಬಂದುಬಿಡುತ್ತಾಳೆ. ಮತ್ತೊಮ್ಮೆ ತಟ್ಟೆ ತಟ್ಟೆ ಐಸ್‌ಕ್ರೀಮ್ ತಿಂದು ನಾಲಗೆ ಚಪಲ ತೀರಿಸಿಕೊಂಡ ಮೇಲೆ ಇಂದು ರಾತ್ರಿ ಹಾಸಿಗೆ ಮೂಸಿದೊಡನೆ ಉಸಿರು ಕಟ್ಟುವ ಹಾಗೆ ಅಪ್ಪಿಕೊಂಡು ಬಿಡುತ್ತಾಳೆ ಎಂದು ನಿರೀಕ್ಷಿಸುತ್ತಿರುವಾಗ ಅವಳ ಸುಳಿವೇ ಇಲ್ಲ. ಎಫಿಡ್ರಿನ್ ನುಂಗಿದರೆ ಒಮ್ಮೆ ಸದ್ದಿಲ್ಲದೆ ಹೊರಟುಹೋಗುತ್ತಾಳೆ; ಇನ್ನೊಮ್ಮೆ ಎದೆಯನ್ನೆಲ್ಲ ಒಣಗಿಸಿ ಉಸಿರನ್ನೇ ಕಸಿದುಕೊಳ್ಳುವಂತೆ ಕತ್ತು ಹಿಸುಕುತ್ತಾಳೆ. ಕೆಲವೊಮ್ಮೆ ಕಿಟಕಿ ತೆರೆದಿಟ್ಟುಕೊಳ್ಳಬೇಡ ಎಂದು ನಾಚುಗುಳಿ ಮೊದಲಗಿತ್ತಿಯಂತೆ ಹಟ ತೊಡುತ್ತಾಳೆ; ಇನ್ನೊಮ್ಮೆ ಮಾನಗೆಟ್ಟವಳ ಹಾಗೆ ಕಿಟಕಿಯನ್ನು ಅಗಲವಾಗಿ ತೆರೆದಿಟ್ಟುಕೊಳ್ಳದಿದ್ದರೆ ನಿನ್ನ ಕತ್ತು ಹಿಸುಕುತ್ತೇನೆನ್ನುತ್ತಾಳೆ.

ಬೆಂಗಳೂರು, ಬೆಳಗಾವಿ ಮೊದಲಾದ ಬಕಾರಾದಿ ಹೆಸರುಗಳುಳ್ಳ ಸ್ಥಳಗಳು ಅವಳ ಪ್ರೇಮವನ್ನು ಉದ್ರೇಕಿಸುತ್ತವೆಂದು ನನಗೆ ಸಂಶಯವಿದೆ. ಬೆಂಗಳೂರಿನಲ್ಲೊಮ್ಮೆ ನನ್ನನ್ನು ಹಿಡಿದುಕೊಂಡವಳು ಮದ್ರಾಸ್ ದಾರಿಯಲ್ಲಿ ಕೋಲಾರ ಹತ್ತಿರವಾದೊಡನೆ ತೊರೆದು ಹೋದಳು. ಬೆಳಗಾವಿಯಲ್ಲೊಮ್ಮೆ ಬಂದ ಡಾಕ್ಟರರನ್ನೆಲ್ಲ ಸೋಲಿಸಿ ನನ್ನನ್ನು ಹುಬ್ಬಳ್ಳಿಗೆ ಓಡಿಸಿದಳು. ಧಾರವಾಡದಲ್ಲಿ ಅವಳು ಯಾಕೆ ನನ್ನ ಸುದ್ದಿಗೆ ಬರುವುದಿಲ್ಲವೆಂದು ನನಗಿನ್ನೂ ಅರ್ಥವಾಗಿಲ್ಲ. ಕಾರವಾರದಲ್ಲಿ ಅವಳೇಕೆ ನನ್ನನ್ನು ತಬ್ಬಿಕೊಳ್ಳುತ್ತಾಳೆಂಬುದು ಇನ್ನೂ ಕಡಿಮೆ ಅರ್ಥವಾಗಿದೆ.

ನಿನ್ನ ಈ ಅನಿಷ್ಟ ಪ್ರಿಯಕರಿಯ ವಿಷಯ ಏನು ಬೋರು ಹೊಡೆಯುತ್ತೀಯಪ್ಪ, ಸಾಕುಮಾಡು, ಅಂತ ನೀವು ಯೋಚಿಸುತ್ತಿದ್ದೀರಿ—ನಾ ಬಲ್ಲೆ. ಆದರೆ ಅದೀಗ ಸ್ವಾರಸ್ಯ. ನಮ್ಮ ಮಕ್ಕಳು ಮೊಮ್ಮಕ್ಕಳ ಲೀಲೆಗಳನ್ನು ಹೇಳಿಕೊಳ್ಳುವ ಹಾಗೆ ನಾವು ನಮ್ಮ ರೋಗಗಳ ಲೀಲೆಗಳನ್ನು ಕೂಡ ಬಾಯಿ ಚಪ್ಪರಿಸಿಕೊಂಡು ಹೇಳಿಕೊಳ್ಳಲು ಕಲಿಯುತ್ತೇವೆ. ಇದಕ್ಕೆ ಇತರರ ಸಹಾನುಭೂತಿಯನ್ನು ಗಳಿಸುವುದೇ ಆಂತರಿಕ ಉದ್ದೇಶವೆಂದು ಹೇಳುವ ಮನೋವಿಜ್ಞಾನಿಗಳ ಮಾತನ್ನು ನಾನು ಒಪ್ಪುವುದಿಲ್ಲ. ಸಹಾನುಭೂತಿಯ ಸಾನ್ನಿಧ್ಯದಲ್ಲಿ ನಾನು ಯಾವಾಗಲೂ ಸಂಕೋಚದಿಂದ ಮುದುಡಿಕೊಳ್ಳುತ್ತೇನೆ. ನನಗೆ ಅಕಸ್ಮಾತ್ತಾಗಿ ಬಂದುಹೋದ ನ್ಯುಮೋನಿಯ, ಟೈಫಾಯ್ಡ್, ಪ್ಲೂರಸಿ ಮೊದಲಾದ ರೋಗಗಳನ್ನು ಕುರಿತು ನಾನು ಹೀಗೆ ವರ್ಣಿಸುವುದಿಲ್ಲ.

ವಿಷಯ ಹಾಗಿಲ್ಲ. ಕ್ರಿಸ್ತದೇವ ನಿಮ್ಮ ಶತ್ರುವನ್ನು ಪ್ರೀತಿಸಿರಿ ಎಂದು ಬೋಧಿಸಿದ್ದಾನೆ. ಇದು ಒಮ್ಮೆಲೇ ಸಾಧಿಸಲು ಕಷ್ಟವೆಂದು ನಾನು ಯಾಕೆ, ಕ್ರಿಸ್ತನೇ ಒಪ್ಪಬಹುದು. ಆದರೆ ನಿಮ್ಮ ದೀರ್ಘ ಶತ್ರುವನ್ನು ನೀವು ಪ್ರೀತಿಸಲು ಕಲಿತೇ ಕಲಿಯುತ್ತೀರಿ. ಒಮ್ಮೆಲೇ ಅವನೇನಾದರೂ ಸತ್ತುಹೋದರೆ ನೀವು ಬಹಳವಾಗಿ ಗಾಬರಿಗೊಳ್ಳುತ್ತೀರಿ. ನಿಮಗೆ ಭಣಭಣ ಎನಿಸತೊಡಗುತ್ತದೆ. ಒಬ್ಬ ಶತ್ರುವಿಗೆ ಬಹಳ ಕಾಲ ಒಗ್ಗಿಕೊಂಡ ಮೇಲೆ ಹೊಸ ಶತ್ರುವಿಗೆ ಒಗ್ಗಿಕೊಳ್ಳುವುದು ತುಂಬಾ ಕಷ್ಟ. ರೋಗಗಳ ವಿಷಯವೂ ಹಾಗೆಯೇ.

ನನ್ನ ಆಸ್ತ್ಮಾ ಅರ್ಧಪಷ್ಟ್ಯಬ್ದಿಯ ವಿಚಾರ ಸುಳಿದದ್ದೇ ಹೀಗೆ. ಕಳೆದ ಇಷ್ಟೆಲ್ಲಾ ವರ್ಷಗಳಿಂದ ವರ್ಷಕ್ಕೆರಡು ಬಾರಿ ಬಂದು ಹೋಗುತ್ತಿದ್ದ ಆಸ್ತ್ಮಾವನ್ನು ಈ ಸಲದ ನಾಡಹಬ್ಬದ ಕಾಲದಲ್ಲಿಯೂ ನಾನು ನಿರೀಕ್ಷಿಸುತ್ತಿದ್ದೆ. ಆದರೆ ಅದು ಬರುವ ಲಕ್ಷಣವೇ ಕಾಣಿಸಲಿಲ್ಲ. ನಮ್ಮ ಜೋಯಿಸರೊಮ್ಮೆ ಹೇಳಿದ್ದರು, ಕೆಲವು ದೀರ್ಘ ರೋಗಗಳು ಮೂವತ್ತು ವರ್ಷಗಳ ನಂತರ ಬಿಟ್ಟುಹೋಗುವುದುಂಟು. ಏಕೆಂದರೆ ಮೂವತ್ತು ವರ್ಷಗಳಲ್ಲಿ ಶನಿ ರಾಶಿಚಕ್ರದಲ್ಲಿ ಒಂದು ಪ್ರದಕ್ಷಿಣೆ ಮುಗಿಸಿರುತ್ತಾನೆ—ಅಂತ. ಅದು ನೆನಪಾಗಿ ಆಸ್ತ್ಮಾ ನನ್ನನ್ನು ತೊರೆದುಹೋಗಿರಬಹುದೇ ಎಂದು ಸಂಶಯವಾಯಿತು. ಈ ಆಸ್ತ್ಮಾ ಸೀಜನ್ನಿಗಾಗಿ ನಾನು ಅಣಿಗೊಳಿಸಿಟ್ಟಿದ್ದ ಜೀಟ್, ಎಫಿಡ್ರಿನ್, ಕಾರ್ಟಿಕೊಸ್ಟಿರಾಯ್ಡ್ ಗುಳಿಗೆಗಳು, ಸ್ವಚ್ಛಗೊಳಿಸಿ ತಯಾರಿಟ್ಟಿದ್ದ ಇನ್‌ಹೇಲರ್, ಹೊಸ

ದಾಗಿ ತಂದಿಟ್ಟಿದ್ದ ಬಿಸಿನೀರ ಚೀಲ, ಆಯುರ್ವೇದದ ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಅಗಸ್ತ್ಯರಸಾಯನ ಇವೆಲ್ಲ ವ್ಯರ್ಥವಾಗುವುವೇ? ಈ ಮೂವತ್ತು ವರ್ಷಗಳಲ್ಲಿ ನಾನು ಆಸ್ತ್ಮಾ ಚಿಕಿತ್ಸೆಗಾಗಿ ಖರ್ಚು ಮಾಡಿದ್ದ ಹಣವನ್ನೆಲ್ಲ ಲೆಕ್ಕ ಮಾಡಿದೆ. ಐದು ಸಾವಿರ ಚಿಲ್ಲರೆ ಆಗಿತ್ತು. ಆ ಮೇಲೆ ಒಮ್ಮಿಂ ದೊಮ್ಮೆಲೆ ನನ್ನ ಹೆಂಡತಿಗೆ ಇದೇ ಅವಧಿಯಲ್ಲಿ ನಾನು ತಂದುಕೊಟ್ಟ ಸೀರೆಗಳ ಬೆಲೆ ಇದಕ್ಕಿಂತ ಸುಮಾರು ಕಡಿಮೆಯಾಗಿದೆ ಎಂಬ ಅರಿವು ಬಂತು. ಇಷ್ಟು ಖರ್ಚುಮಾಡಿ ಅದನ್ನು ಸಾಕಿದ ಮೇಲೆ ಅದು ನನ್ನನ್ನು ಬಿಟ್ಟುಹೋಯಿತೆ? ನಾನು ಈ ಯೋಚನೆಯಿಂದ ಕಣ್ಣೀರು ಸುರಿಸಿದೆ ಎಂದು ಹೇಳಿದರೆ ಸ್ವಲ್ಪ ಅತಿಶಯೋಕ್ತಿಯಾದೀತು. ಆದರೆ ಖಂಡಿತವಾಗಿ ನನಗೆ ಏನನ್ನೋ ಕಳೆದು ಕೊಂಡ ಹಾಗೆ ಅನಿಸಿತು. ನನ್ನ ಮಿತ್ರರೂ ಹಿತೈಷಿಗಳೂ ಆಸ್ತ್ಮಾದ ಗುಣ ಗಳನ್ನು ಬಣ್ಣಿಸಿದ್ದು ನೆನಪಾಯಿತು. ಒಬ್ಬರು ಆಸ್ತ್ಮಾ ಇದ್ದವರಿಗೆ ಆಯುಷ್ಯ ಹೆಚ್ಚು ಅಂದಿದ್ದರು. ಇದು ನನಗಿಂತ ನನ್ನ ವಿಮಾ ತೆಗೆದುಕೊಂಡ ಕಂಪನಿಗೆ ಹೆಚ್ಚು ಸುವಾರ್ತೆಯಾಗಿತ್ತಾದ್ದರಿಂದ ನಾನೇನೂ ಉಬ್ಬಲಿಲ್ಲ. ಆಸ್ತ್ಮಾ ಬಲು ತ್ರಾಸದ ಕಾಯಿಲೆಯೇನೋ ನಿಜ, ಆದರೆ ಆಸ್ತ್ಮಾ ಇದ್ದವರಿಗೆ ಕ್ಷಯರೋಗ ಬರುವುದಿಲ್ಲ ಎಂದು ಇನ್ನೊಬ್ಬರು ಆಶ್ವಾಸನ ನೀಡಿದ್ದುದನ್ನು ನೆನೆದುಕೊಂಡಾಗ ನನಗಿನ್ನು ಕ್ಷಯರೋಗ ಬಂದೀತೆ, ಈ ವಯಸ್ಸಿನಲ್ಲಿ ಈ ಹೊಸ ರೋಗದೊಡನೆ ಒಗತನ ನನಗೆ ಸಾಧ್ಯವಾದೀತೇ ಎಂದು ಯೋಚನೆಗೆ ಬಿದ್ದೆ.

ಮತ್ತೊಂದು ವಿಷಯ ನನ್ನ ವಿಷಾದವನ್ನು ಭಯದ ರೂಪಕ್ಕೆ ತಿರುಗಿ ಸಿತು. ಪ್ರತಿ ಆಸ್ತ್ಮಾಸೀಜನ್ನಿನಲ್ಲಿ ಉಲ್ಬಣಿಸಿದ ಉಬ್ಬಸದಿಂದ ಸಾವಿನ ದವಡೆ ಯನ್ನು ಹೊಕ್ಕಂತಾಗಿ ನನ್ನ ಹೆಂಡತಿಯ ಆರೈಕೆಯಿಂದ ನಾನು ಮರಳಿ ಬರುತ್ತಿದ್ದೆ. ಇಂತಹ ಪ್ರತಿಯೊಂದು ಹೋರಾಟದೊಡನೆ ನನ್ನ ಹೆಂಡತಿಗೆ ನಾನು ಹೆಚ್ಚು ಜೀವದ ಗಂಟೆನಿಸುತ್ತ ಬಂದಿದ್ದೇನೆ. ಆಸ್ತ್ಮಾ ಹೋಗಿಬಿಟ್ಟರೆ ನನ್ನ ಹೆಂಡತಿಯ ದೃಷ್ಟಿಯಲ್ಲಿ ನನ್ನ ಮೌಲ್ಯ ಕಡಿಮೆಯಾದೀತೆ?

ಆದರೆ ಇಲ್ಲ. ನನ್ನ ಶಂಕೆಗಳು ನಿರಾಧಾರವಾಗಿದ್ದವು. ನಿನ್ನೆ ರಾತ್ರಿ ನಾನು ಅಕಸ್ಮಾತ್ತಾಗಿ ಶೀನತೊಡಗಿದೆ. ಬೆಳಗಿನ ಜಾವದಲ್ಲಿ, ಚೌಡಯ್ಯನವರ ಹದಿನೇಳು (ಅಥವಾ ಹತ್ತೊಂಭತ್ತೊ?) ತಂತಿಯ ಪಿಟೀಲಿನ ಮೇಲೆ ಲಘು

ವಾಗಿ ಕವನಾನು ಆಡಿಸಿದಂತೆ ನನ್ನೆದೆಯಿಂದ ನಾದಸಂದೋಹ ಹೊರಹೊಮ್ಮ ಲಾರಂಭಿಸಿತು. ಐದು ಗಂಟೆಗೆ ಒಣ ಕೆಮ್ಮು ಪ್ರಾರಂಭವಾಯಿತು. ನನ್ನ ಹೆಂಡತಿ ಗಡಬಡಿಸಿ ಎದ್ದು ಬಿಸಿಬಿಸಿ ಕಾಫಿಮಾಡಿತಂದಳು. ನನ್ನ ತಿದಿಯೊತ್ತುವ ಎದೆಯನ್ನು ಪೂಸುತ್ತ "ಬಹಳ ತ್ರಾಸಾಗುತ್ತಾ? ಡಾಕ್ಟರರಿಗೆ ಹೇಳಿಕಳಿ ಸಲಾ?" ಎಂದು ಕೇಳಿದಳು.

ನಾನು ಆಸ್ತಾತ್ಮಾ ಅರ್ಧಷಷ್ಟ್ಯಬ್ದಿ ಆಚರಿಸಲು ನಿರ್ಧರಿಸಿದೆ. (೧೯೭೪)

## ಸಾವಿನ ಸಮಸ್ಯೆ: ಮಕ್ಕಳು ಕಂಡಂತೆ

ಮಾಯುವರಿಯದ ಮಗು
ಉಸಿರು ಬಿಡುತದೆ ಲಘು
ಮೈದುಂಬಿ ಜೀವದುಲ್ಲಾಸ
ಅದಕ್ಕೆಲ್ಲಿ ಸಾವಕಾಯಾಸ?

—ವರ್ಡ್ಸ್‌ವರ್ತ್

ಪ್ರತಿಯೊಂದು ಮಗುವೂ ಒಂದು ಬಾಲಾದ್ಭುತವೇ ಎಂದು ತೋರುತ್ತದೆ. ಜಗತ್ತಿನ ಗಾಳಿಗೆ, ಗಂಧಕ್ಕೆ, ನೀರಿಗೆ, ಬೆಳಕಿಗೆ ಇದೇ ತಾನೆ ಮೈದೆರೆದ ಅದಕ್ಕೆ ಎಲ್ಲವೂ ಅದ್ಭುತವಾಗಿ ಕಾಣುವುದೇ ಮಗುವಿನ ಅದ್ಭುತತನಕ್ಕೆ ಕಾರಣವಾಗಿರಬಹುದು. ಪ್ರತಿಯೊಂದು ಹೊಸ ನೋಟ, ಹೊಸ ಧ್ವನಿ, ಹೊಸ ಘಟನೆ ಅದರ ಹೊಚ್ಚ ಹೊಸ ಮನೋಭೂಮಿಯಲ್ಲಿ ಹೊಸ ಮಳೆಗೆ ನೆಲದಿಂದೇಳುವ ನರುಗಂಪಿನಂಥ ಭಾವನೆಗಳನ್ನು ಜಾಗೃತಗೊಳಿಸುತ್ತದೆ. ಆ ಭಾವನೆಗಳನ್ನು ಅದು ತನ್ನದೇ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಎಗ್ಗಿಲ್ಲದೆ ವ್ಯಕ್ತಗೊಳಿಸುತ್ತದೆ ಅಭಿವ್ಯಕ್ತಿಯ ಕಲ್ಪಕತೆಯೋ ಮಕ್ಕಳ ಮಾತುಗಳನ್ನು ಕವಿಯ ಮಾತುಗಳಂತೆ ನಮ್ಮ ಚಿತ್ತದಲ್ಲಿ ನೆಟ್ಟುಬಿಡುತ್ತದೆ. ಮಕ್ಕಳನ್ನು ಸಾಕುವ ಶ್ರಮದಲ್ಲಿ ಅವುಗಳ ಮಾತು ಕೇಳುವುದರಿಂದ ಬರುವ ಆನಂದವೇ ಅರ್ಧಕ್ಕಿಂತ ಹೆಚ್ಚು ಪ್ರತಿಫಲವಾಗಿದೆ.

ಹೊಸದಾಗಿ ಮಾತು ಕಲಿತ ಮಗು ತನ್ನ ಭಾವನೆಗಳನ್ನು ವ್ಯಕ್ತಪಡಿಸು ವುದಕ್ಕೆ ಮಾತುಗಳಿಗಾಗಿ ಎಂದೂ ಚಡಪಡಿಸುವುದಿಲ್ಲ. ನನ್ನ ಮೂರು ವರ್ಷದ ಮೊಮ್ಮಗಳು ಮಾಯಳನ್ನೇ ತೆಗೆದುಕೊಳ್ಳಿ. ಒಂದು ದಿನ ಅವಳು

ಹೊರಗೆ ಆಡುತ್ತಿದ್ದವಳು ಒಳಗೆ ನುಗ್ಗಿ ಬಂದು, ಏನೋ ಕೆಲಸದಲ್ಲಿ ಮಗ್ನಳಾದ ತಾಯಿಯ ಕೊರಳಿಗೆ ಜೋತು ಬಿದ್ದು "ಅಮ್ಮಾ ಏಳು! ನನಗೆ ಕಾಫಿ ಯಡಿಕೆಯಾಗುತ್ತಮ್ಮಾ!" ಎನ್ನುತ್ತಾಳೆ. ನನ್ನ ಮಗಳಿಗೆ ಕ್ಷಣಕಾಲ ಅರ್ಥ ವಾಗದೆ ಅಪ್ರತಿಭಳಾಗುತ್ತಾಳೆ. ಆಮೇಲೆ ಅವಳಿಗೆ ಹೊಳೆಯುತ್ತದೆ. ನೀರಡಿಕೆಯೆಂಬ ಶಬ್ದದ ಸಾಮ್ಯದಿಂದ ಮಾಯಾ 'ಕಾಫಿಯಡಿಕೆ'ಯನ್ನು ಸೃಷ್ಟಿಸಿಕೊಂಡಿದ್ದಾಳೆ ಎಂದು.

ನನಗೆ ಈ ಸಮಾಚಾರ ಮುಟ್ಟಿದಾಗ ನಾನು ನನ್ನ ಮೊಮ್ಮಗಳ ಶಬ್ದ ಸೃಷ್ಟಿ ಶಕ್ತಿಗೆ ಮತ್ಸರಿಸುತ್ತೇನೆ. ಲೇಖಕನೆನಿಸಿಕೊಳ್ಳುವ ನಾನು ಅವಳಂತೆ ಅಚ್ಚುಕಟ್ಟಾದ ಶಬ್ದಗಳನ್ನು ಸೃಷ್ಟಿಸಿಕೊಳ್ಳಲಾರದೆ ಕೋಶ ನಿಘಂಟುಗಳ ಸಂಗಡ ಗುದ್ದಾಡುತ್ತೇನಲ್ಲ. ನನಗೂ ಅವಳ ವಯಸ್ಸಿನಲ್ಲಿ ಹೀಗೆ ಚಟುಕಾಗಿ ಶಬ್ದಗಳನ್ನು ಸೃಷ್ಟಿಸಿಕೊಳ್ಳುವ ಶಕ್ತಿ ಇದ್ದಿರಬಹುದು. ಆಮೇಲೆ ಜೀರ್ಣಿಸಿ ಕೊಳ್ಳಲಾರದ ಸಂಗತಿಗಳನ್ನೂ ಪರರೊಡ್ಡವದ ಮಾತುಗಳನ್ನೂ ತಲೆಯಲ್ಲಿ ತುರುಕಿಸಿಕೊಂಡು ಸ್ವಂತ ಸೃಜನ ಶಕ್ತಿಯನ್ನು ಕಳೆದುಕೊಂಡೆನೋ ಏನೊ.

ಮಕ್ಕಳು ಅಮಾಯಕವಾಗಿರುತ್ತವೆ ನಿಜ; ಆದರೆ ನಿಸ್ವಾರ್ಥಿ ಅಥವಾ ವಿಚಾರಹೀನವಾಗಿರುವುದಿಲ್ಲ. ಅವು ತರ್ಕವನ್ನು ನಮ್ಮಿಂದಲೇ ಕಲಿಯುತ್ತವೆ; ಆದರೆ ತಮ್ಮ ಅಮಾಯಕತೆಯಿಂದ ತರ್ಕವನ್ನು ಪರಮಾವಧಿಗೆ ಒಯ್ದು ಕೆಲ ವೇಳೆ ಹಿರಿಯರಿಗೆ ಪೇಚನ್ನು ತಂದಿಡುತ್ತವೆ. ಒಮ್ಮೆ ನಮ್ಮ ಅಕ್ಕನ ಮನೆ ಯಲ್ಲಿ ಉಪ್ಪಿನಕಾಯಿ ಹಾಕುವ ಎತ್ತುಗಡೆ ನಡೆದಿತ್ತು. ಅಕ್ಕನ ಅತ್ತೆ, ಸೊಸೆಗೆ ಹೇಳಿದರು : "ಇನ್ನೂ ಒಂದು ಕುಪ್ಪಿಯಲ್ಲಿ ಮಾವಿನ ಮಿಡಿ ಹಾಕಿಡು. ಕಮಲಕ್ಕ ಹೇಳಿದ್ದಾರೆ. ಪಾಪ, ಅವರಿಗೆ ಸೂತಕವಂತೆ. ಅವರು ಉಪ್ಪು ಕಳಿಸಿದ್ದಾರೆ."

ಹತ್ತಿರದಲ್ಲೇ ಆಡುತ್ತಿದ್ದ ನನ್ನ ಮೂರು ವರ್ಷದ ಸೊಸೆ ಕೀರಲು ಧ್ವನಿ ಯಲ್ಲಿ ಸವಾಲು ಹಾಕಿದಳು: "ಉಪ್ಪು ಕೊಟ್ಟಿದ್ದಾರೆ, ಮೆಣಸಿನಕಾಯಿ ಕೊಟ್ಟಿದ್ದಾರಾ?" ಕಮಲಕ್ಕ ಪುಣ್ಯಕ್ಕೆ ಅಲ್ಲಿರಲಿಲ್ಲ.

ನಮ್ಮಿಂದಲೇ ಕಲಿತ ಲೆಕ್ಕಾಚಾರವನ್ನು ಮಕ್ಕಳು ನಮ್ಮ ಮೇಲೆಯೇ ತಿರುಗಿಸಿಬಿಡುತ್ತಾರೆ. ನನ್ನ ಒಬ್ಬ ಮೊಮ್ಮಗ, ನಮ್ಮಲ್ಲಿಗೆ ಆಗಾಗ್ಗೆ ಬರುವ ನನ್ನ ಹೆಂಡತಿಯ ಸ್ನೇಹಿತೆಗೆ ಒಮ್ಮೆ ಹೇಳಿದ: "ಮಾಮೀ, ನಮ್ಮಲ್ಲಿಗೆ ಬಂದು

ನೀವು ಕಾಫಿ ಕುಡಿಯುತ್ತೀರಿ. ನಮ್ಮ ಕಾಫಿಪುಡಿ ಸಕ್ಕರೆ ಖರ್ಚಾಗುತ್ತೆ. ನೀವು ನಿಮ್ಮ ಮನೇಲೇ ಯಾಕೆ ಕಾಫಿ ಕುಡಿದು ಬರಲ್ಲ?"

ಅವರು ನಕ್ಕು "ನಾರಾಯಣಾ, ನಾಳೆಯಿಂದ ನಿಮ್ಮನೆಗೆ ಬರೋದೇ ಇಲ್ಲ, ನಿನಗೆ ಖರ್ಚು ಮಾಡಿಸಲ್ಲ, ಆಯಿತೆ?" ಎನ್ನುತ್ತಾರೆ.

ಅವನಿಗೆ ಅವರೆಂದರೆ ಇಷ್ಟ. ಯಾಕೆಂದರೆ ಅವರ ಮನೇಲಿ ಉಯ್ಯಾಲೆ ಇದೆ. ಅವರು ತನ್ನ ಮನೆಗೆ ಬಾರದಿದ್ದರೆ ತಾನೂ ಅವರಲ್ಲಿಗೆ ಹೋಗುವುದು ಸರಿಯಾಗುವುದಿಲ್ಲ ಎಂದು ಅವನಿಗೆ ವ್ಯವಹಾರಜ್ಞಾನ ಇದೆ. ಅವನು ಗಡಿಬಿಡಿಯಿಂದ "ಬನ್ನಿ ಬನ್ನಿ. ಕಾಫಿ ಕುಡಿಯಿರಿ" ಎನ್ನುತ್ತಾನೆ. ಆಮೇಲೆ ಮತ್ತೆ ಲೆಕ್ಕಾಚಾರ ಮೇಲ್ಗೈಯಾಗುತ್ತದೆ. "ನಾನು ಲೆಕ್ಕ ಬರೆದಿಡುತ್ತೇನೆ. ನಾನು ದೊಡ್ಡವನಾಗುವಾಗ ಒಂದು ಸಾವಿರ ಕಪ್ಪಾಗುತ್ತದೆ. ಎಲ್ಲಾ ದುಡ್ಡನ್ನ ಆಗ ಒಮ್ಮೆಲೇ ನನಗೇ ಕೊಡಿ!"

"ಎಲಾ ಮಾರವಾಡಿ!" ಎಂದು ಅವರು ಅವನನ್ನು ತಬ್ಬಿಕೊಳ್ಳುತ್ತಾರೆ.

ಮಕ್ಕಳನ್ನು ನಾವು ಹೆದರಿಸುವಂತೆ ಅವರೂ ನಮ್ಮನ್ನು ಹೆದರಿಸಲು ಪ್ರಯತ್ನಿಸುತ್ತಾರೆ. ನನ್ನ ಮಗಳು ಚಿಕ್ಕವಳಾಗಿದ್ದಾಗ ಒಂದು ದಿನ ಬೀದೀ ಹುಡುಗರಿಂದ ಕಲಿತ ಒಂದು ಅಶ್ಲೀಲ ಮಾತನ್ನು ಪುನರಾವರ್ತಿಸಿದಳು. ಹತ್ತಿರದಲ್ಲೇ ಇದ್ದ ನಾನು ತಟ್ಟನೆ ಒಂದೇಟು ಬಿಟ್ಟೆ. ಅನಿರೀಕ್ಷಿತವೂ ಬಿರುಸೂ ಆಗಿದ್ದ ಪೆಟ್ಟಿಗೆ ಅವಳು ಅಲ್ಲೇ ಮೂತ್ರ ಹೊಯ್ದುಕೊಂಡಳು. ಅವಳ ತಾಯಿ ಅದನ್ನು ಒರೆಸಬೇಕಾಯಿತು. ಕೆಲ ದಿನಗಳ ನಂತರ ಇನ್ನೊಂದು ಸಂದರ್ಭದಲ್ಲಿ ಅವಳ ಮೇಲೆ ನಾನು ಕೈಯೆತ್ತಿದಾಗ ಅವಳು ದೊಡ್ಡ ದೊಡ್ಡ ಕಣ್ಣುಗಳಿಂದ ನನ್ನ ಮುಖ ನೋಡುತ್ತಾ "ಹೊಡೆಯೋದಾದರೆ ನನ್ನ ಎತ್ತಿ ಬಚ್ಚಲಲ್ಲಿ ನಿಲ್ಲಿಸಿ ಹೊಡೆಯಿರಿ. ಇಲ್ಲಿ ಹೊಡೆದು ನಾನು ಉಚ್ಚೆ ಮಾಡಿದರೆ ನಂಗೊತ್ತಿಲ್ಲ!" ಎಂದಳು. ಇಂಥ ಮಾತಿನ ನಂತರ ಹೊಡೆಯಲು ಯಾರಿಗೆ ಕೈ ಎದ್ದೀತು!

ಮಕ್ಕಳ ಕಲ್ಪನೆ ಕೋಡಿಹರಿಯುವಾಗ ಎಲ್ಲಕ್ಕಿಂತ ಸ್ವಾರಸ್ಯವೂ ಮರ್ಮಸ್ಪರ್ಶಿಯೂ ಆದ ಮಾತುಗಳು ಹೊರಡುವುದು ಮೃತ್ಯುವಿನ ಬಗ್ಗೆ. ಸಾವಿನ ಬಗ್ಗೆ ಅವುಗಳಿಗೆ ಕುತೂಹಲ ಬಹಳ. ಹಿರಿಯರ ಮಾತುಗಳಿಂದಲೋ ನೈಸರ್ಗಿಕ ಪ್ರೇರಣೆಯಿಂದಲೋ ಸಾವಿನ ಬಗ್ಗೆ ಒಂದು ಭಯಮಿಶ್ರಿತ ಆಸಕ್ತಿ ಅವುಗಳಲ್ಲಿ

ಹುಟ್ಟಿರುತ್ತದೆ. ಆದರೆ ಪ್ರತ್ಯಕ್ಷ ಮೃತ್ಯುದರ್ಶನವಾಗದಿದ್ದ ಮಕ್ಕಳ ಮೇಲೆ ಸಾವಿನ ಪೂರ್ಣವಾದ ಪ್ರಭಾವ ಆಗದಿರುವುದರಿಂದ ಸಾವಿನ ಅರ್ಥ ಅವು ಗಳಿಗೆ ಅಸ್ಪಷ್ಟವಾಗಿಯೇ ಇರುತ್ತದೆ.

ಮೊನ್ನೆ ಒಂದು ದಿನ ನನ್ನ ಮೊಮ್ಮಗಳು ಛಾಯಾ ಯಾತಕ್ಕೊ ತಾಯಿ ಯನ್ನು ಬಹಳವಾಗಿ ಪೀಡಿಸಿದಳು. ನನ್ನ ಮಗಳು ಕೋಪಗೊಂಡು "ನೀನು ಹೀಗೇ ಮಾಡಿದರೆ ನಾನು ಸತ್ತುಹೋಗುತ್ತೇನೆ" ಎಂದಳು.

ಆಮೇಲೆ ಸಂಭಾಷಣೆ ಸುಮಾರಾಗಿ ಈ ಕೆಳಗಿನಂತೆ ಮುಂದುವರಿಯುತ್ತದೆ:
"ಸತ್ತುಹೋಗು ನನಗೇನು!"—ಛಾಯಾ.

"ಆಮೇಲೆ ನಿನಗೆ ಅಡಿಗೆ ಮಾಡಿ ಯಾರು ಊಟಕ್ಕೆ ಹಾಕುತ್ತಾರೆ?"

"ಯಾಕೆ, ನಾನೇ ಅಡಿಗೆ ಮಾಡಿಕೊಳ್ಳುತ್ತೇನೆ."

"ಏನು ಮಾಡಿಕೊಳ್ಳುತ್ತಿ? ಒಂದು ಕಡ್ಡಿ ಗೀರಲಿಕ್ಕೆ ಹೆದರುತ್ತೀ!"

"ನೀನು ಮೊದಲು ಸತ್ತುಹೋಗಿ ನೋಡು. ನಾ ಅಡಿಗೆ ಮಾಡಿಕೊಳ್ಳು ತ್ತೇನೋ ಇಲ್ಲವೊ ಅಂತ!" ಛಾಯಾಳ ಬ್ಲಫ್.

"ಏನು ನೋಡೋದು! ನೋಡೋಕೆ ನಾ ಎಲ್ಲಿ ಇರುತ್ತೇನೆ!"

"ನೀನು ತಿರುಗಿ ಬಂದು ನೋಡು ಬೇಕಾದರೆ. ನಾನು ಅಡಿಗೇ ಮಾಡಿ ಅಪ್ಪನಿಗೆ ಅಣ್ಣನಿಗೆ ತಂಗಿಗೆ ಎಲ್ಲಾ ಊಟ ಹಾಕುತ್ತೇನೆ."

"ಸತ್ತುಹೋದವರು ತಿರುಗಿ ಬರುತ್ತಾರೆಯೇ, ಹುಚ್ಚಿ? ಸತ್ತವರನ್ನು ಕಟ್ಟಿ ತೆಗೆದುಕೊಂಡು ಹೋಗಿ ಸುಟ್ಟುಹಾಕಿಬಿಡುತ್ತಾರೆ!" ಅವಳ ತಾಯಿ ವಾಸ್ತವದ ಬಿಸಿ ಬೆಳಕನ್ನು ಅವಳ ಮೇಲೆ ಕೊಂಚ ಹಾಯಿಸುತ್ತಾಳೆ.

ಈಗ ಛಾಯಗಳಿಗೆ ನಿಜವಾಗಿ ಗಾಬರಿಯಾಗುತ್ತದೆ. ಅವಳು ಅಳುತ್ತಾ "ಹಾಗಾದರೆ ನೀನು ಸಾಯೋದು ಬೇಡಾ!" ಎಂದು ಹೇಳುತ್ತಾಳೆ.

"ನೀನು ನನ್ನ ಜೀವ ತಿನ್ನುತ್ತೀ. ನಾನು ಸತ್ತೇ ಹೋಗುತ್ತೇನೆ!" ನನ್ನ ಮಗಳು ಬೆದರಿಕೆ ಹಾಕುತ್ತಾಳೆ.

ಛಾಯಳ ಅಳು ಇನ್ನೂ ಜೋರಾಗುತ್ತದೆ. "ಬೇಡಾ, ನೀನು ಸತ್ತು ಹೋಗೋದು ಬೇಡಾss. ನೀನು ಸತ್ತರೆ ನಾನೇನು ಅಡಿಗೆ ಮಾಡು ವವಳಲ್ಲಾss. ಅಪ್ಪನಿಗೆ, ಅಣ್ಣನಿಗೆ, ತಂಗಿಗೆ ನಾನು ಬಡಿಸೋವಳಲ್ಲಾss. ನಂಗೊತ್ತಿಲ್ಲಾss. ಈಂs ಈಂs ಈss."

ಈಚೆಗೆ ನಮ್ಮ ಪರಿಚಿತರೊಬ್ಬರ ಮನೆಯಲ್ಲಿ ಒಂಭತ್ತು ವರ್ಷದ ಹುಡುಗಿಯೊಂದು ಅಕಸ್ಮಾತ್ತಾಗಿ ಸತ್ತಿತು. ಆ ವಿಚಾರ ನಮ್ಮ ಮಗಳಿಗೆ ತಿಳಿಸಿದ್ದೆವು. ಪತ್ರ ಓದಿ ನನ್ನ ಮಗಳು ಅಳಿಯ ಮಾತಾಡಿಕೊಂಡರು. "ಪಾಪ, ಒಬ್ಬಳೇ ಮಗಳು. ಒಳ್ಳೇ ಚಾಲಾಕಾಗಿತ್ತು. ಗಟ್ಟಿಮುಟ್ಟು ಇತ್ತಲ್ಲ. ಏನಾಯಿತೋ ಒಮ್ಮೆಲೇ...." ಇತ್ಯಾದಿ.

ಹತ್ತಿರ ನಿಂತಿದ್ದ ಐದು ವರ್ಷದ ಛಾಯಾ ಪ್ರಶ್ನಿಸಿದಳು :-

"ಅಮ್ಮಾ ಯಾರು ಸತ್ತರು ? ಸುಮಾನೇ ?"

"ಹೌದಮ್ಮಾ."

"ಸುಮಾ ಸತ್ತಳೇ ?" ತಲೆಯ ಮೇಲೆ ಬಂಡೆಗಲ್ಲು ಬಿದ್ದವಳಂತೆ ಛಾಯಾ ಕೇಳಿದಳು, "ಸಣ್ಣವರೂ ಸಾಯುತ್ತಾರಾ ?" ಅವಳ ನಾಲಿಗೆ ಆರಿತ್ತು. ಈ ವರೆಗೆ ಅವಳು ಕೇಳಿದ ಸಾವಿನ ಸುದ್ದಿಗಳೆಲ್ಲ ವಯಸ್ಸಾದವರದ್ದು.

ಈ ಸುದ್ದಿ ಮಗಳ ಮೇಲೆ ಮಾಡಿದ ದಾರುಣ ಪರಿಣಾಮ ಅರ್ಥವಾಗಿ ಅವಳ ತಾಯಿ ಹಿಂದೆಗೆದಳು : "ಇಲ್ಲಮ್ಮಾ, ಸುಮಾಳ ಅಜ್ಜಿ ಸತ್ತಳಂತೆ !"

ಛಾಯಾಗೆ ಸ್ವಲ್ಪ ಧೈರ್ಯ ಬಂದಂತಾಗುತ್ತದೆ. ಆದರೆ ಮೂರು ವರ್ಷದ ಮಾಯಾಗೆ ಸಾವಿನ ಭೀಕರ ರೂಪದ ಕಲ್ಪನೆ ಇನ್ನೂ ಇಲ್ಲ. ಕೆಳಗಿನಂತೆ ಮಗಳು ತಾಯಂದಿರ ಸಂವಾದ ಪ್ರಾರಂಭವಾಗುತ್ತದೆ.

"ಯಾಕಮ್ಮಾ ಸುಮೀ ಅಜ್ಜಿ ಸತ್ತಳು ?"

"ಅವಳು ಮುದುಕಿಯಾಗಿದ್ದಳಲ್ಲ. ಅದಕ್ಕೇ ಸತ್ತಳು."

"ಹೌದೇ ? ಮುದುಕರು ಸಾಯುತ್ತಾರೆಯೇ ?"

"ಹೌದಮ್ಮ, ಮುದುಕರಾಗಿ ಎಲ್ಲರೂ ಕಡೆಗೆ ಸಾಯುತ್ತಾರೆ."

ಮಾಯಾ ಸ್ವಲ್ಪ ಹೊತ್ತು ಆಲೋಚಿಸುತ್ತಾಳೆ.

"ಅಮ್ಮಾ ಎಲ್ಲರೂ ಮುದುಕರಾಗುತ್ತಾರಾ ?"

"ಹೌದಮ್ಮಾ, ಎಲ್ಲರೂ ಮುದುಕರಾಗುತ್ತಾರೆ."

"ಎಲ್ಲರೂ ?"

"ಹೌದಮ್ಮ."

"ಅಪ್ಪನೂ ಮುದುಕರಾಗುತ್ತಾರಾ ?"

"ಹೌದು."

"ಅವರೂ ಸಾಯುತ್ತಾರಾ ?"

"ಹೌದು."

"ನೀನೂ ?"

"ಹೌದು, ನಾನೂ ಮುದುಕಿಯಾಗಿ ಸತ್ತುಹೋಗುತ್ತೇನೆ." ಪಾಟೀ ಸವಾಲಿನಿಂದ ತಪ್ಪಿಸಿಕೊಳ್ಳಲಾರದೆ ಅವಳ ತಾಯಿ ಪ್ರಕೃತಿಯ ಗುಟ್ಟುಗಳನ್ನು ಒಂದೊಂದಾಗಿ ಹೊರಬಿಡುತ್ತಾಳೆ.

"ರಾಜ, ಗಿರಿ, ಛಾಯಾ....ಎಲ್ಲರೂ ಮುದುಕರಾಗುತ್ತಾರಾ ?"

"ಹೌದು."

"ನಾನೂ ?"

ತಾಯಿ ನುಣುಚಿಕೊಳ್ಳಲಾರದೆ ಪ್ರಕೃತಿಯ ಘೋರ ನಿಯಮವನ್ನು ಸ್ವಲ್ಪ ಸೌಮ್ಯಗೊಳಿಸುವ ಪ್ರಯತ್ನದಲ್ಲಿ, "ಹೌದಮ್ಮ, ನೀವೆಲ್ಲರೂ ಮೊದಲು ನನ್ನ ಹಾಗೆ ದೊಡ್ಡವರಾಗುತ್ತೀರಿ. ನಿಮಗೆ ಮದುವೆ ಆಗುತ್ತೆ. ಆಮೇಲೆ ಮುದುಕರಾಗುತ್ತೀರಿ."

"ಆಮೇಲೆ ನಾವೂ ಸತ್ತುಹೋಗುತ್ತೇವಾ ?"

"ಹೌದು."

"ಮುದುಕರಾದ ಮೇಲೆ ಎಲ್ಲರೂ ಸತ್ತುಹೋಗುತ್ತಾರಾ ?"

"ಹೌದಮ್ಮ."

"ತಿರುಗಿ ಬರಲ್ಲವಾ ?"

"ಇಲ್ಲ."

"ಮತ್ತೆ ಈ ಮನೆ, ಈ ವಸ್ತ್ರ, ಈ ಭಾಂಡಿ, ಈ ಕಪಾಟು ಇದನ್ನೆಲ್ಲಾ ಯಾರು ನೋಡಿಕೊಳ್ಳುತ್ತಾರೆ ?" ಛಾಯಾಳ ಹಿರೇತನದ ಚಿಂತೆ.

ಮಾಯಾಗೆ ಅದೊಂದು ಸಮಸ್ಯೆ ಆಗಿ ಕಾಣುವುದೇ ಇಲ್ಲ. ಸತ್ತುಹೋಗಿ ಬಿಡುವುದರ ಕಲ್ಪನೆ ಅವಳ ಗಂಟಲಲ್ಲಿ ಇಳಿದೇ ಇಲ್ಲ. ಹಿರಿಯರ ಕಿರಿಯರ ಸಾವಿನ ಕಾಲಾನುಕ್ರಮವೂ ಅರ್ಥವಾಗುವುದಿಲ್ಲ. ಛಾಯಾಳ ಚಿಂತೆಗೆ ಅವಳು ತನ್ನ ನಿತ್ಯಾನುಭವದಿಂದ ಪರಿಹಾರ ಹೇಳುತ್ತಾಳೆ :

"ಅದಕ್ಕೇನಂತೆ ! ಬಾಗಿಲು ಇಕ್ಕಿಕೊಂಡು ಬೀಗ ಹಾಕಿ ಬೀಗದ ಕೈ ಎದುರು ಮನೆಯ ಲಕ್ಷ್ಮೀ ಕೈಲಿ ಕೊಟ್ಟು ಎಲ್ಲರೂ ಸತ್ತುಹೋಗಿಬಿಡೋದು,

ಅಲ್ವೇನಮ್ಮಾ?”

ಓ! ಸತ್ತುಹೋಗುವುದು ಎಷ್ಟು ಸರಳ, ಮಕ್ಕಳ ಮನಸ್ಸಿಗೆ! (೧೯೭೬)

## ಲಾಂಗೂಲಾಚಾರ್ಯರು ಯಾರು?

ಲಾಂಗೂಲಾಚಾರ್ಯರು ಯಾರು? ಅವರ ಪೂರ್ವಾಪರವೇನು? ಎಂದೊಬ್ಬರು ವಿಚಾರಿಸಿದ್ದಾರೆ. ಋಷಿಮೂಲ, ನದೀಮೂಲ, ಸ್ತ್ರೀಮೂಲ ಮತ್ತು ನಿಮ್ಮ ನೆರೆಮನೆಯ ಸಾಹುಕಾರರ ಸಂಪತ್ತಿನ ಅಥವಾ ನಿಮ್ಮ ಮಾವನು ಕೊಡುವ ವರದಕ್ಷಿಣೆಯ ಮೂಲ ಇವನ್ನು ವಿಚಾರಿಸಬಾರದೆಂಬ ಧರ್ಮಸೂತ್ರ ಅವರಿಗೆ ಗೊತ್ತಿಲ್ಲವೇನೊ! (ಲಾಂಗೂಲಾಚಾರ್ಯರು ಈ ಅಜ್ಞಾತಮೂಲಗಳ ಮೊದಲನೇ ಗಣದಲ್ಲಿ ಬರುತ್ತಾರೆ). ಚಿಂತೆಯಿಲ್ಲ. ಅವರ ಕುತೂಹಲವನ್ನು ಶಾಸ್ತ್ರಸಮ್ಮತವಾದಷ್ಟು ಪರಿಹರಿಸಿ ಉಳಿದುದನ್ನು ಭಾವಿ ಶಂ. ಬಾ. ಜೋಶಿ, ಗೋವಿಂದ ಪೈ, ರಾಜಪುರೋಹಿತಾದಿ ಪ್ರಾಕ್ತನ ವಿದ್ವಾಂಸರ ಪಾಲಿಗೆ ಬಿಡೋಣ. ಈಗಿನ ಕವಿಗಳೂ ಲೇಖಕರೂ ತಮ್ಮ ವಿಷಯವಾಗಿ ಮುದ್ರಿಸಬಹುದಾದುದನ್ನೆಲ್ಲ ಜೀವಂತವಿರುವಾಗಲೇ ಬರೆದು, ಬರೆಸಿ, ಸುದ್ದಿಹರಡಿಸಿ ಪ್ರಕಟಿಸಿಬಿಡುತ್ತಿದ್ದಾರೆ; ಹೀಗಾಗಿ ಪ್ರಾಕ್ತನ ಸಂಶೋಧಕರಿಗೆ ೨೦೦೧ನೇ ಕ್ರಿಸ್ತವರ್ಷದಲ್ಲಿ ಸಂಶೋಧನೆಗೆ ಏನೂ ವಿಷಯ ಉಳಿಯದೆ ಅವರು ಪ್ರಾಗೈತಿಹಾಸಿಕ ಪೆಡಂಭೂತಗಳಂತೆ ಈ ಭೂಮಿಯ ಮೇಲಿಂದ ಅಸ್ತಂಗತರಾಗುವ ಭಯವಿದೆ. ಅದನ್ನು ತಪ್ಪಿಸಲು ಲಾಂಗೂಲಾಚಾರ್ಯರು ನಿರ್ಧರಿಸಿದ್ದಾರೆ. “ಲಾಂಗೂಲಾಚಾರ್ಯರು ಯಾರು? ಅವರ ಲಾಂಗೂಲದ ಅಳತೆಯೇನು? ಅವರು ನರರೇ? ಪಶುವೇ? ಅಥವಾ ನರಪಶುವೇ?” ಇತ್ಯಾದಿ ಪ್ರಶ್ನೆಗಳ ಚರ್ಚೆಗೆ ಸಾಕಷ್ಟು ಅವಕಾಶವಿಟ್ಟು ಹೋಗಬೇಕೆಂದು ಅವರು ಬಯಸುತ್ತಾರೆ.

ಲಾಂಗೂಲಾಚಾರ್ಯರ ಹುಟ್ಟು ಹೆಸರೇನು? ಲಾಂಗೂಲಾಚಾರ್ಯ ಎಂಬ ಬಿರುದನ್ನು ಅವರಿಗೆ ಯಾರು ದಯಪಾಲಿಸಿದರು? ಎಂದು ಕುತೂಹಲ ಪ್ರದರ್ಶಿಸಲಾಗಿದೆ. ಮೊದಲನೆಯದಾಗಿ, ಲಾಂಗೂಲಾಚಾರ್ಯರು ಹುಟ್ಟಲೇ ಇಲ್ಲ; ಆದ್ದರಿಂದ ಅವರಿಗೆ ಹುಟ್ಟು ಹೆಸರೇನು? ಎಂಬ ಪ್ರಶ್ನೆ ಏಳುವುದೇ ಇಲ್ಲ. ಅವರು ಸ್ವಯಂಭು ಲಿಂಗದಂತೆ, ಕಾಲರಾ ಪಿಡುಗಿನಂತೆ ಏಕಾಏಕಿ

ಪ್ರಕಟವಾದರು. ಅವರಿಗೆ ಬಿರುದನ್ನು ಕೊಟ್ಟವರಾರು ? ಬಿರುದನ್ನು ಲಾಂಗೂಲಾಚಾರ್ಯರು ಯಾರಿಂದಲೂ ಬೇಡಿ ತೆಗೆದು ಕೊಂಡಿಲ್ಲ. ಪಂಪನ ಅರಿಕೇಸರಿ ಚಳುಕ್ಯ ನಾರಾಯಣನು ಹೇಗೆ "ಧರಿತ್ರಿಯಂ ಜೀಯೆನೆ ಬೇಡಿ ಕೊಳ್ಳದೆ ವಿರೋಧಿ ನರೇಂದ್ರರನೊತ್ತಿ" ಕಸಿದುಕೊಂಡನೋ ಹಾಗೆ ಲಾಂಗೂಲಾಚಾರ್ಯರೂ ತಮ್ಮ ಬಿರುದನ್ನು ತಾವೇ ಪಡೆದುಕೊಂಡಿದ್ದಾರೆ. ಜಹಾಂಗೀರ, ಷಾಜಹಾನ, ಜಗದೇಕಮಲ್ಲ, ಪರಾಕ್ರಮಕಂಠೀರವ ಇತ್ಯಾದಿ ಬಿರುದುಗಳನ್ನು ಅವರವರು ತಾವೇ ತೆಗೆದುಕೊಂಡರೇ ಹೊರತು ಯಾರೂ ಅವರಿಗೆ ಕೊಡಲಿಲ್ಲ. ಬಿರುದು ಕೊಡಿ ಎಂದು ಕೇಳಿದರೆ "ರಾಜಸಭಾ ಭೂಷಣ", "ರಾಜಸೇವಾಸಕ್ತ", "ರಾಜ ಪಾದಪದ್ಮ ಮಧುಮಾಧುರ್ಯ ಲಂಪಟ" ಇತ್ಯಾದಿ ಬಿರುದುಗಳು ದೊರೆತಾವೇ ಹೊರತು ಸರ್ವೋತ್ತಮವಾದ ಆಚಾರ್ಯಪಟ್ಟ ದೊರಕೀತೆ ?

ಇನ್ನು ಜಗತ್ತಿನ ಎಲ್ಲಾ ಬಿರುದುಗಳನ್ನು ಬಿಟ್ಟು ಲಾಂಗೂಲಾಚಾರ್ಯ ಎಂಬುದನ್ನೇ ಏಕೆ ಆರಿಸಿಕೊಂಡಿರಿ.? ಎಂದು ನೀವು ಕೇಳುತ್ತೀರಿ. ಲಾಂಗೂಲ ವಂತ ಜಾತಿಗಳ ಬಗ್ಗೆ ಆಚಾರ್ಯರಿಗೆ ಇರುವ ಆದರವೊಂದು; ಮತ್ತು ಅವು ಗಳೊಡನೆ ಮನುಷ್ಯ ಜಾತಿ ಪುನಃ ಸಮಾವೇಶ ಹೊಂದಿದರೇನೇ ಅದರ ಉದ್ಧಾರ ವಿದೆಯೆಂಬ ಅಚಲ ವಿಶ್ವಾಸವೊಂದು ಇವೆರಡು ಅವರು ಈ ಬಿರುದು ಸ್ವೀಕರಿ ಸಲು ಕಾರಣ. ನಿಜವಾಗಿ "ಕೌಪೀನವಂತಃಖಲು ಭಾಗ್ಯವಂತಃ" ಎಂಬುದನ್ನು "ಲಾಂಗೂಲವಂತಃ ಬಲು ಭಾಗ್ಯವಂತಃ" ಎಂದು ಬದಲಿಸಬೇಕಾದ ಕಾಲ ಬಂದಿದೆ. ಲಾಂಗೂಲವು ಕೌಪೀನದ ಕೆಲಸವನ್ನಲ್ಲದೆ ಬೇರೆ ಅನೇಕ ಉಪಯುಕ್ತ ಕಾರ್ಯಗಳನ್ನೂ ಮಾಡಬಲ್ಲದು. ಮನುಷ್ಯರು ತಲೆ (ಅರ್ಥಾತ್ ಮುಖ) ಯಿಂದ ಮಾಡುತ್ತಿರುವುದನ್ನು ಲಾಂಗೂಲವಂತರು ಲಾಂಗೂಲದಿಂದ ಮಾಡು ತ್ತಾರೆ. ಶುನಕನ ಸಂತೋಷ, ಮಾರ್ಜಾಲನ ಕ್ರೋಧ, ಮರ್ಕಟನ ಹಾಸ್ಯ, ಆಕಳಕರುವಿನ ಉತ್ಸಾಹ ಇತ್ಯಾದಿಗಳ ಪ್ರದರ್ಶನಕ್ಕೆ ಲಾಂಗೂಲವೇ ಸಾಧನ ವಾಗಿದೆ. ಹನುಮಂತನಂತೂ ಲಾಂಗೂಲದಿಂದ ಒಂದಿಡೀ ಸಿಂಹಾಸನವನ್ನೇ ಮಾಡಿಕೊಂಡು ರಾವಣನನ್ನು ತುಚ್ಛೀಕರಿಸಿದನು. ಯಾವಾಗ ವಾನರನು ಬಾಲ ಕಳೆದುಕೊಂಡು ನರನಾದನೋ ಅಂದಿಗೇ ಅವನಲ್ಲಿ ದುರಾಶೆ, ವಂಚನೆ ಮೊದಲಾದ ದುರ್ಬುದ್ಧಿಗಳು ಹುಟ್ಟಿದವು.

ಲಾಂಗೂಲವಂತ ಬಾಂಧವ್ಯದಲ್ಲಿ ಪ್ರತಿಯೊಂದು ಜಾತಿಗೂ ತನ್ನವೇ ಸದ್ಗುಣಗಳಿದ್ದರೂ ಎರಡು ವಿಶೇಷವಾಗಿ ಆಚಾರ್ಯರಿಗೆ ಅತ್ಯಂತ ಆದರಣೀಯ ವಾಗಿವೆ. ಒಂದು ಗರ್ದಭ ಜಾತಿ, ಇನ್ನೊಂದು ವಾನರ ಜಾತಿ. ಗರ್ದಭನು ಮೃಗಜಾತಿಯಲ್ಲಿಯೇ ಶ್ರೇಷ್ಠ ತತ್ತ್ವಜ್ಞಾನಿ ಮತ್ತು ಋಷಿ. ಅವನ ಕಣ್ಣು ಗಳೇ ದಾರ್ಶನಿಕ ಕಣ್ಣುಗಳು. ಮಳೆಗಾಳಿಯ ಉಗ್ರರವದ ಭೀಕರ ಆವರಣ ದಲ್ಲಿ ಒಂದು ಹಾಳು ಗೋಡೆಯ ಸಮೀಪ ಗರ್ದಭಾಚಾರ್ಯರು ನಿಶ್ಚಲರಾಗಿ ನಿಂತದ್ದನ್ನು ನೀವು ನೋಡಿದ್ದೀರಾ? "ಮಿಥಿಲಾನಗರಿ ಸುಟ್ಟರೆ ನನ್ನದೇನೂ ಸುಡಲಿಲ್ಲ" ಎಂದ ದಾರ್ಶನಿಕ ಜನಕರಾಜನ ಅನಾಸಕ್ತಿ ಪ್ರತಿಯೊಬ್ಬ ಗರ್ದ ಭನ ರೋಮ ರೋಮದಲ್ಲಿ ಜಡಿತವಾದಂತೆ ಕಾಣುವುದಿಲ್ಲವೇ? ಅಫೀಮು, ಭಂಗಿ, ಗಾಂಜಾ, ಧೂಮಪತ್ರಾದಿ ಯಾವ ಪಾರ್ಥಿವ ಸಮಾಧಿ ಪ್ರಚೋದಕ ವಸ್ತುವಿನ ಸಹಾಯವಿಲ್ಲದೆ ಬ್ರಹ್ಮಾನಂದವನ್ನು ಈ ಸುಖ ದುಃಖ ಜಟಿಲ ಸಂಸಾರದಲ್ಲೇ ಅನುಭವಿಸುವ ಗಾರ್ದಭನನ್ನು ಋಷಿಯಲ್ಲವೆಂದು ಯಾರು ಹೇಳಬಲ್ಲರು? ಜಗತ್ತಿನ ಸಮಸ್ತ ಕೊಳೆಯ ಭಾರವನ್ನೂ ಹೊತ್ತು ಅದನ್ನು ಶುದ್ಧೀಕರಿಸಿ ತರುವುದರಲ್ಲಿ ಅವನು ಜಗತ್ತಿನ ಪಾಪದ ಭಾರವನ್ನೆಲ್ಲ ಹೊತ್ತು ಅದನ್ನು ಶುದ್ಧೀಕರಿಸಿದ ಕ್ರಿಸ್ತನ ಅನುಯಾಯಿಯೇ ಸೈ.

ಗರ್ದಭನು ಕರ್ಮವನ್ನು ತುಚ್ಛೀಕರಿಸುವುದಿಲ್ಲವಾದರೂ ಅವನು ಮುಖ್ಯ ವಾಗಿ ಜ್ಞಾನಯೋಗಿ. ಆದರೆ ವಾನರನನ್ನು ಕರ್ಮಯೋಗಿಯೆಂದು ವರ್ಗೀ ಕರಿಸಬಹುದು. ಅವನು ಕ್ಷಣಕಾಲವೂ ಸುಮ್ಮನೆ ಕುಳಿತಿರಲಾರ. ಯಾವಾಗಲೂ ಕರ್ಮನಿರತನಾಗಿಯೇ ಇರಬೇಕು. ಅವನಿಗೆ ಜಗತ್ತಿನ ಸಮಸ್ತ ವಿಷಯ ಗಳಲ್ಲಿಯೂ ಇರುವ ಕುತೂಹಲದ ಪ್ರಮಾಣವನ್ನು ನಮ್ಮ ವಿಜ್ಞಾನಿಗಳ ಕುತೂಹಲದ ಪ್ರಮಾಣದೊಡನೆ ಮಾತ್ರ ಹೋಲಿಸಬಹುದು. ಅವನ ಬುದ್ಧಿ ಪೃಥಕ್ಕರಣಾತ್ಮಕವಾದದ್ದು. ಅವನ ಕೈಯಲ್ಲಿ ಒಂದು ಕನ್ನಡಿಯನ್ನು ಹಾಕಿರಿ. ಅದರ ಫ್ರೇಮು ಕಿತ್ತು, ಕನ್ನಡಿಯನ್ನು ಬೇರ್ಪಡಿಸಿ, ಅದರ ಬೆನ್ನಿಗೆ ಹಚ್ಚಿದ ಪಾದರಸಲೇಪವೇ ಅದರ ಪ್ರತಿಬಿಂಬನ ಶಕ್ತಿಯ ಆಧಾರವೆಂದು ಕ್ಷಣಾರ್ಧದಲ್ಲಿ ಅವನು ಕಂಡುಹಿಡಿಯುತ್ತಾನೆ. ಆದರೆ ಜಗತ್ತಿನಲ್ಲಿ ಸಾಮೂಹಿಕ ಕೊಲೆಯ ಮಹಾ ಸಾಧನವನ್ನು ಸೃಷ್ಟಿಸಿ ಆಮೇಲೆ ವರ್ಷಕ್ಕೊಂದು ಶಾಂತಿ ಬಹು ಮಾನಕ್ಕೆ ಹಣದ ವ್ಯವಸ್ಥೆ ಮಾಡಿದ ಆಲ್ಫ್ರೆಡ್ ನೊಬೆಲ್ಲನಂಥ ವಿಜ್ಞಾನಿ

ಯಲ್ಲ ನಮ್ಮ ವಾನರ. ಅವನು ಕರ್ಮಯೋಗಿಯಾದರೂ ಅದರ ಫಲದಲ್ಲಿ ಅನಾಸಕ್ತ. ಸೀತಾದೇವಿ (ಅಥವಾ ರಾಮದೇವರೋ ?) ಹನುಮಂತನಿಗೊಂದು ಮುತ್ತಿನ ಸರ ಬಹುಮಾನ ಕೊಟ್ಟಾಗ ಅವನು ಅದರ ಒಂದೊಂದೇ ಮುತ್ತನ್ನು ಕಿತ್ತು ಕೆರೆಯಲ್ಲಿ ಹಾಕಿ ಅದರ ಸಪ್ಪಳದಿಂದ ಸಂತುಷ್ಟನಾದನಂತೆ. ಪಾರ್ಥಿವ ಸಂಪತ್ತಿನಲ್ಲಿ ಅವನೆಷ್ಟು ವಿರಕ್ತ ! ಈ ಲಾಂಗೂಲವಂತರ ಸದ್ಗುಣಗಳನ್ನು ಲಾಂಗೂಲಹೀನರು ಅನುಸರಿಸಿದರೆ ಲೋಕಕ್ಕೆ ಎಷ್ಟು ಸುಭಿಕ್ಷೆಯಾದೀತು !

ಅದಕ್ಕೇ ಲಾಂಗೂಲಾಚಾರ್ಯರು ಆ ಬಿರುದನ್ನು ಧರಿಸಿದ್ದಾರೆ. (೧೯೫೨)



## ಪಾಡಿಗಾರು ವೆಂಕಟರಮಣ ಆಚಾರ್ಯ

ಲಾಂಗೂಲಾಚಾರ್ಯ ಎಂಬ ಕಾವ್ಯನಾಮದಿಂದ ಕನ್ನಡಿಗರಿಗೆ ಪರಿಚಿತರಾಗಿರುವ ಪಾ. ವೆಂ. ಆಚಾರ್ಯರು ೧೯೧೫ರಲ್ಲಿ ಉಡುಪಿಯಲ್ಲಿ ಜನಿಸಿದರು. ಹುಟ್ಟಿದ್ದು ವೈದಿಕ ಮನೆತನ, ಸೇರಿದ್ದು ಇಂಗ್ಲಿಷ್ ಶಾಲೆ. ಎಸ್.ಎಸ್.ಎಲ್.ಸಿ. ವರೆವಿಗೆ ಶಾಲಾ ವ್ಯಾಸಂಗ. ಬಡತನದಿಂದಾಗಿ ಉಚ್ಚ ಶಿಕ್ಷಣದ ಪ್ರಯತ್ನ ವಿಫಲ. ಜೀವನ ವಿಶ್ವವಿದ್ಯಾನಿಲಯದಲ್ಲಿ ತರಪೇತಿ, ಬಹುಮುಖ ಸಂವೇದನೆ ಶಾಲಾಮಾಸ್ತರು, ಅಂಗಡಿ ಗುಮಾಸ್ತೆ, ಪ್ರೆಸ್ ಮೇನೇಜರ್, ಹೋಟೆಲ್ ಬಿಲ್ ರೈಟರ್ ಮುಂತಾದ ಉದ್ಯೋಗಗಳು. ೧೯೪೨ರಲ್ಲಿ ಸಂಯುಕ್ತ ಕರ್ನಾಟಕ ಸಂಸ್ಥೆಯಲ್ಲಿ 'ಕರ್ಮವೀರ'ದ ಉಪಸಂಪಾದಕರಾಗಿ ಪತ್ರಿಕಾ ವ್ಯವಸಾಯ ಆರಂಭ. ೧೯೫೬ರಿಂದ 'ಕಸ್ತೂರಿ' ಸಹಸಂಪಾದಕರಾಗಿ ೧೯೭೫ರಲ್ಲಿ ನಿವೃತ್ತಿ.

ಹನ್ನೊಂದನೆಯ ವಯಸ್ಸಿನಿಂದಲೇ ಬರವಣಿಗೆ ಆರಂಭ. ಕವಿತೆ, ಕಥೆ, ರಾಜಕೀಯ ಚರ್ಚೆ, ಹರಟೆ, ಜೀವನ ಚರಿತ್ರೆ, ವಿಡಂಬನ, ಲಘು ವೈಜ್ಞಾನಿಕ ಲೇಖನಗಳು ಮುಂತಾದ ಬಹುಮುಖ ಸಾಹಿತ್ಯಸೃಷ್ಟಿ.

ಲಾಂಗೂಲಾಚಾರ್ಯ ಎಂಬ ಹೆಸರಿನಲ್ಲಿ ಒಂದು ಸಾವಿರಕ್ಕೂ ಮೇಲ್ಪಟ್ಟ ಹರಟೆಗಳನ್ನು 'ಕರ್ಮವೀರ', 'ಕಸ್ತೂರಿ' ಮತ್ತು ಈಚೆಗೆ 'ತುಷಾರ' ಪತ್ರಿಕೆಗಳಲ್ಲಿ ಬರೆದಿದ್ದಾರೆ. ಹಾಸ್ಯ, ವಿಚಾರ, ವಿಡಂಬನ, ಮಾನವೀಯತೆ ಹಾಸುಹೊಕ್ಕಾಗಿರುವ ಇವರ ಲೇಖನಗಳು ವಿಶಿಷ್ಟ ಸಂಪ್ರದಾಯದಲ್ಲಿ ಬೆಳೆದು ವಿಚಾರವಂತರ ಹೃನ್ಮನಗಳನ್ನು ಸೂರೆಗೊಂಡಿವೆ.

ಮುಖಚಿತ್ರ : ವೆಂಕಟೇಶ್

ಡಿ.ವಿ.ಕೆ. ಮೂರ್ತಿ :: ಪ್ರಕಾಶಕರು :: ಮೈಸೂರು-೪